॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀ ಜಗನ್ನಾಥದಾಸವರ್ಯ ವಿರಚಿತ

# ಶ್ರೀಮದ್ಧರಿಕಥಾಮೃತಸಾರ

## ಬಿಂಬಪ್ರತಿಬಿಂಬಸಂಧಿ (ಬಿಂಬೋಪಾಸನಸಂಧಿ)

ಸಂಪುಟ-24

**ಸರ್ವವ್ಯಾಖ್ಯಾನಸಾರಸಂಗ್ರಹ**

ಪ್ರಕಾಶಕರು :

**ಹೆಚ್. ಎಸ್. ಶ್ರೀನಿವಾಸಮೂರ್ತಿ**

ನಂ. 61, 'ಶ್ರೀ ಉರಗಾದ್ರಿ"

5ನೇ ಅಡ್ಡರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು-560 019

ದೂರವಾಣಿ : 602351

**ಶ್ರೀಮದ್ಹರಿಕಥಾಮೃತಸಾರ**
ಸರ್ವವ್ಯಾಖ್ಯಾನಸಾರಸಂಗ್ರಹ
ಬಿಂಬಪ್ರತಿಬಿಂಬಸಂಧಿ (ಬಿಂಬೋಪಾಸನಸಂಧಿ)
ಸಂಪುಟ-24

ಪುಟಗಳ ಸಂಖ್ಯೆ
ಪ್ರಥಮ ಮುದ್ರಣ : 1996
ಪ್ರತಿಗಳ ಸಂಖ್ಯೆ : 1000

**ಬೆಲೆ : 60 ರೂ.ಗಳು**

ಪ್ರತಿಗಳು ದೊರೆಯುವ ಸ್ಥಳ :

1) **ಹೆಚ್. ಎಸ್. ಶ್ರೀನಿವಾಸಮೂರ್ತಿ**
ನಂ. 61, 'ಶ್ರೀ ಉರಗಾದ್ರಿ"
5ನೇ ಅಡ್ಡರಸ್ತೆ, ನರಸಿಂಹರಾಜಾಕಾಲೋನಿ
ಬೆಂಗಳೂರು-560 019
ದೂರವಾಣಿ : 602351

2) **ವೇದಾಂತ ಬುಕ್ ಹೌಸ್**
ಉಮಾ ಚಿತ್ರಮಂದಿರದ ಸಮೀಪ
ಚಾಮರಾಜಪೇಟೆ, ಬೆಂಗಳೂರು-560 018
ದೂರವಾಣಿ : 600480

3) **ನ್ಯೂ ವೇದಾಂತ ಬುಕ್ ಹೌಸ್**
8ನೆಯ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560 003

ಮುದ್ರಕರು :
**ಶ್ರೀರಂಗ ಪ್ರಿಂಟರ್ಸ್ ಅಂಡ್ ಬೈಂಡರ್ಸ್**
ಹನುಮಂತನಗರ, ಬೆಂಗಳೂರು-19
ದೂರವಾಣಿ : 602333

॥ ಶ್ರೀಃ ಹರಿಃ ಓಂ ॥

# ಪ್ರಕಾಶಕರ ನುಡಿ

ಸನ್ಮಾನ್ಯರಾದ ಹರಿದಾಸಸಾಹಿತ್ಯಾಭಿಮಾನಿಗಳಾದ ವಾಚಕರಲ್ಲಿ ಸವಿನಯ ಪೂರ್ವಕ ವಿನಂತಿ.

"ಸರ್ವವ್ಯಾಖ್ಯಾನಸಾರಸಂಗ್ರಹ" ಮಾಲಿಕೆಯಲ್ಲಿ ಶ್ರೀಮದ್ಹರಿಕಥಾಮೃತ ಸಾರದ ಬಿಂಬಪ್ರತಿಬಿಂಬಸಂಧಿ (ಬಿಂಬೋಪಾಸನಸಂಧಿ) ಎಂಬ 24ನೆಯ ಸಂಧಿಯ ಸಂಪುಟವನ್ನು ಸನ್ಮಾನ್ಯ ವಾಚಕ ವೃಂದದವರ ಕೈಯೊಳಗಿಡಲು ಪರಮಸಂತಸದ ಸಂಗತಿ.

ಅನೇಕ ಪ್ರಮೇಯಾರ್ಥಗಳಿಂದ ಮುಕ್ತವಾದ ಪ್ರಸಕ್ತ ಸಂಧಿಗಳ ವಿಷಯ ಗಳನ್ನು ಸುಲಭವಾಗಿ ಎಲ್ಲರಿಗೂ ತಿಳಿಯುವಂತೆ, ನಿರೂಪಿಸಲ್ಪಟ್ಟಿರುವುದು ಈ ಸಂಪುಟದ ವೈಶಿಷ್ಟ್ಯ.

ದಿನಾಂಕ 2-1-1996ರಂದು ಶ್ರೀ ವ್ಯಾಸರಾಜ ಮಠಾಧೀಶರಾದ ಪರಮಪೂಜ್ಯ ಶ್ರೀ 108 ಶ್ರೀ ಶ್ರೀವಿದ್ಯಾಪಯೋನಿಧಿತೀರ್ಥ ಶ್ರೀಪಾದಂಗಳವರು 22ನೆಯ ಸಂಧಿಯಾದ "ಸಕಲದುರಿತನಿವಾರಣ ಸಂಧಿ"ಯನ್ನು ತಮ್ಮ ಅಮೃತಹಸ್ತದಿಂದ ಬಿಡುಗಡೆ ಮಾಡಿದರು.

ಈಗ 23ನೆಯ ಸಂಧಿಯಿಂದ ಆರಂಭಿಸಿ, ಕೊನೆಯ ಸಂಧಿ 33ರವರೆಗೆ ಹನ್ನೊಂದು ಸಂಧಿಗಳ ಮುದ್ರಣಕಾರ್ಯ, ಬೇರೆ ಬೇರೆ ಮುದ್ರಣಾಲಯಗಳಲ್ಲಿ ಏಕಕಾಲದಲ್ಲಿ ಆರಂಭವಾಗಿದೆ–ಎಂಬ ವಿಷಯವನ್ನು ನಿಮಗೆ ತಿಳಿಸಲು, ಪ್ರಕಾಶಕರಿಗೆ ಹರ್ಷವಾಗಿದೆ.

ಈ 11 ಸಂಧಿಗಳ ಪ್ರಕಟಣಾ ಖರ್ಚು – ಸುಮಾರು ಒಂದು ಲಕ್ಷ ರೂ.ಗಳಿಗಿಂತಲೂ ಅಧಿಕವಾಗಬಹುದೆಂದು ಅಂದಾಜಾಗಿದೆ.

ಈ ಭಾರೀ ಮೊತ್ತದ ಹಣವನ್ನು ಸಂಗ್ರಹಿಸಲು, ಪ್ರಕಾಶಕರು ಉದಾರ ಚಿತ್ತವೃತ್ತಿಯುಳ್ಳ ಕೆಲವು ಅಭಿಮಾನಿಗಳಿಗೆ ವಿನಂತಿಪತ್ರ ಬರೆಯುತ್ತಿದ್ದಾರೆ.

ಶ್ರೀ ಹರಿದಾಯು ಗುರುಗಳಿಗೆ ಅತ್ಯಂತ ಪ್ರೀತ್ಯಾಸ್ಪದವಾದ ಜ್ಞಾನಪ್ರಚಾರ ರೂಪವಾದ ಈ ಮಹಾಪುಣ್ಯಕಾರ್ಯದಲ್ಲಿ ನೆರವಾಗಿ, ಈ ಯೋಜನೆಯು ಯಶಸ್ವಿಯಾಗಿ ಪೂರ್ಣಗೊಳ್ಳಲು, ನಿಮ್ಮೆಲ್ಲರ ತುಂಬುಹೃದಯದ ಸಹಕಾರ ವನ್ನು ಕೋರುತ್ತಾ, ಈ ಕೆಳಕಂಡ ಕೆಲವು ರಚನಾತ್ಮಕ ಸಲಹೆಗಳನ್ನು ಆಸ್ತಿಕ ಮಹಾಶಯರ ಮುಂದೆ ಇಡುತ್ತಿದ್ದೇವೆ.

(1) 7 ಸಂಪುಟಗಳ ಹಿಂದಿನ ಯೋಜನೆ ಜಾರಿಯಲ್ಲಿದ್ದಾಗ, ಅಷ್ಟೇ ಸಂಪುಟಗಳನ್ನು ಪಡೆದು, ಕೇವಲ 108 ರೂ.ಗಳನ್ನು ಪಾವತಿ ಮಾಡಿ, ಮುಂದೆ ಯಾವ ಕಂತುಗಳನ್ನೂ ನೀಡದೆ, ತಟಸ್ಥರಾಗಿ, ಕೇವಲ ಉದಾಸೀನ ಮನೋಭಾವ ದಿಂದ ಇರುವ ನಮ್ಮ ಪ್ರಕಾಶನದ ಹಳೆಯ ಸದಸ್ಯರು, ತಾವು ತೆಗೆದುಕೊಂಡಿರುವ ಸಂಧಿಗಳನ್ನು ಬಿಟ್ಟು, ಅಲ್ಲಿಂದ ಮುಂದೆ 33 ಸಂಧಿಗಳವರೆಗೆ ಸಂಧಿಗೆ 25 ರೂ.ಗಳಂತೆ ಲೆಕ್ಕಹಾಕಿಕೊಂಡು, ಆ ಮೊಬಲಗನ್ನು ಒಟ್ಟಿಗೇ ಆಗಲೀ ಅಥವಾ ಕಂತುಗಳಲ್ಲಾಗಲೀ ನೀಡಿದರೆ ಪರಮೋಪಕಾರ ಮಾಡಿದಂತಾಗುವುದು.

ಅವರು ಕೃಪೆಮಾಡಿ ಸಹಕರಿಸುವರೆಂದು ನಂಬಿದ್ದೇವೆ. ಅವರಿಗೆ ಮೇಲಿಂದ ಮೇಲೆ, ಅನೇಕ ವಿನಂತಿಪತ್ರಗಳನ್ನು ವಿನಯವಾಗಿ ಬರೆದರೂ, ಫಲಕಾರಿಯಾಗಿಲ್ಲ. ಈಗಲಾದರೂ, ಈ 11 ಸಂಧಿಗಳ ಒಟ್ಟು ಮುದ್ರಣ ಕಾರ್ಯದಲ್ಲಾದರೂ, ನಮ್ಮ ವಿನಂತಿ. ಅವರ ಹೃದಯವನ್ನು ತಾಕುವುದೆಂದು ನಂಬೋಣವೆ?

(2) ದಿನಾಂಕ 1-1-1992ರಿಂದ ಜಾರಿಗೆ ಬಂದಿರುವ ನೂತನ ಯೋಜನೆ ಪ್ರಕಾರ, ಉಳಿಸಿಕೊಂಡಿರುವ ಬಾಕಿ ಮೊಬಲಗನ್ನು ಸದಸ್ಯರು ನೀಡಿ, ಸಹಕರಿಸಬೇಕಾಗಿ ಮನವಿ.

(3) ಪೂರ್ತಿ ಹಣವನ್ನು ನೀಡಿರುವವರು, ಈ ಪುಣ್ಯಕಾರ್ಯವು ಯಶಸ್ವಿಯಾಗಿ ಪೂರ್ಣಗೊಳ್ಳಲು ಶಕ್ತ್ಯನುಸಾರ ದ್ರವ್ಯಸಹಾಯ ನೀಡಬೇಕೆಂದು ಮನವಿ.

(4) 3000 ರೂ. ಅಥವಾ ಅದಕ್ಕಿಂತ ಹೆಚ್ಚಾದ ಮೊಬಲಗನ್ನು ನೀಡುವ ಮಹನೀಯರ ಭಾವಚಿತ್ರವನ್ನು (ಅಥವಾ ಅವರು ಸೂಚಿಸುವ ಹಿರಿಯರ ಭಾವಚಿತ್ರ) ಬ್ಲಾಕ್ ಮಾಡಿ ಹಾಕಿಸಲಾಗುವುದು. ಅವರ ಸಂಕ್ಷಿಪ್ತ ಜೀವನ ಚರಿತ್ರೆ ಪ್ರಕಟಿಸಲಾಗುವುದು.

(5) ನೂತನ ಯೋಜನೆಗೆ 1000 ರೂ.ಗಳನ್ನು ನೀಡುವ ಹೊಸ ಸದಸ್ಯರನ್ನು ನೋಂದಾಯಿಸಲು ಪ್ರಯತ್ನಿಸಿ, ತದ್ವಾರಾ ಸಹಕರಿಸಬಹುದು. ಅವರಿಗೆ 1 ರಿಂದ 33ರವರೆಗೆ ಎಲ್ಲಾ ಸಂಧಿಗಳನ್ನು ಒದಗಿಸ ಲಾಗುವುದು.

(6) ಕನಿಷ್ಠಪಕ್ಷ 500 ರೂ. ಅಥವಾ 1000 ರೂ.ಗಳಷ್ಟು ನೀಡಿ ಜಾಹೀರಾತನ್ನು ಕೊಡುವುದಾದರೆ, ತದ್ವಾರಾ ಸಹಕಾರ ನೀಡಬಹುದು.

ಪ್ರಸಕ್ತಸಂಧಿಯ ಪ್ರಕಟಣೆಗೆ ಪ್ರತ್ಯಕ್ಷವಾಗಿಯೂ ಮತ್ತು ಪರೋಕ್ಷ ವಾಗಿಯೂ ನಾನಾ ರೀತಿಗಳಲ್ಲಿ ಸಹಾಯ ನೀಡಿರುವ ಮಿತ್ರವರ್ಗ, ಭಕ್ತವರ್ಗ ಮತ್ತು ಬಂಧುಬಾಂಧವ ವರ್ಗದವರಿಗೆಲ್ಲಾ ಪ್ರಕಾಶಕರು ಆಭಾರಿ ಯಾಗಿದ್ದಾರೆ.

ಈ ಹೊತ್ತಿಗೆಯನ್ನು ಡಿ.ಟಿ.ಪಿ. ಮುದ್ರಣಶೈಲಿಯಲ್ಲಿ ಅಂದವಾಗಿ ಮುದ್ರಿಸಿಕೊಟ್ಟ, ಶ್ರೀರಂಗ ಪ್ರಿಂಟರ್ಸ್ ಅಂಡ್ ಬೈಂಡರ್ಸ್‌ನ ಮಾಲೀಕರಾದ ಶ್ರೀ ಬಾಲಕೃಷ್ಣ ಅವರಿಗೂ ಮತ್ತು ಅವರ ಸಹಾಯಕ ಸಿಬ್ಬಂದಿಯವರಿಗೂ ಪ್ರಕಾಶಕರ ಹೃತ್ಪೂರ್ವಕ ವಂದನೆಗಳು.

ನಂದನಕಂದನ ದಯದಿಂದ ಸಕಲ ಭಗವದ್ಭಕ್ತರ ಅಭಿಮಾನ ಏಕರೀತಿಯಾಗಿ ಮುಂದುವರಿದು, ಅವರು ಉಳಿದಿರುವ ಸಂಧಿಗಳ ಪ್ರಕಟಣೆಯ

ಯಶಸ್ಸಿಗೆ ಸರ್ವವಿಧಗಳಲ್ಲೂ ಸಹಕಾರವನ್ನು ನೀಡುತ್ತಿರಲಿ ಎಂದು ಹಾರೈಸುತ್ತಾ, ನಮ್ಮೀ ವಚನಗಳನ್ನು ಮುಕ್ತಾಯಗೊಳಿಸುತ್ತಿದ್ದೇವೆ.

**ಮುಂದಿನ ಪ್ರಕಟಣೆ**

**(1) ಆರೋಹಣ ತಾರತಮ್ಯಸಂಧಿ (2) ಅವರೋಹಣ ತಾರತಮ್ಯಸಂಧಿ ಮತ್ತು (3) ಅನುಕ್ರಮಣಿಕಾತಾರತಮ್ಯಸಂಧಿ. ಈ ಮೂರು ಸಂಧಿಗಳೂ ಒಟ್ಟಿಗೇ ಸೇರಿ ಒಂದು ಸಂಯುಕ್ತ ಸಂಪುಟದ ರೂಪದಲ್ಲಿ ಶೀಘ್ರದಲ್ಲಿಯೇ ಪ್ರಕಟವಾಗಲಿದೆ.**

॥ ಶ್ರೀ ಮಧ್ವೇಶಾರ್ಪಣಮಸ್ತು ॥

ಹರಿದಾಸರ ಪಾದಸೇವಕ

ಬೆಂಗಳೂರು
ಹೆಚ್. ಎಸ್. ಶ್ರೀನಿವಾಸಮೂರ್ತಿ

ದಿನಾಂಕ 1-2-1996
(ಪ್ರಕಾಶಕರು)

॥ ಶ್ರೀ ಹರಿಃ ಓಂ ॥



ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸಮಹಾತ್ಮಾ ಸುದುರ್ಲಭಃ ॥

-ಗೀತಾವಾಕ್ಯ (ಅಧ್ಯಾಯ-7, ಶ್ಲೋಕ-19)


WITH BEST COMPLIMENTS FROM :

## KIRLOSKAR INVESTMENTS AND FINANCE LTD.

REGD. OFFICE :
UNITY BUILDINGS, II FLOOR, C-BLOCK
J.C. ROAD,
BANGALORE-560 002

॥ ಶ್ರೀಃ ಹರಿಃ ಓಂ ॥
॥ ಶ್ರೀ ಗರುಡವಾಹನ ಶ್ರೀಲಕ್ಷ್ಮೀನರಸಿಂಹಾಭಿನ್ನ
ಶ್ರೀ ಜಗನ್ನಾಥವಿಠ್ಠಲಾಯ ನಮಃ ॥

# ಬಿಂಬೋಪಾಸನ ಸಂಧಿ (ಬಿಂಬಪ್ರತಿಬಿಂಬಸಂಧಿ)
## (ಸಂಧಿ-೨೪)

**ಹರಿಕಥಾಮೃತಸಾರ ಗುರುಗಳ ।**
**ಕರುಣದಿಂದಾಪನಿತು ಪೇಳುವೆ ।**
**ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥**

### ಪದ್ಯ-೧

**ಮೂಲ :**

**ಮುಕ್ತ ಬಿಂಬನು ತುರಿಯ ಜೀವ ।**
**ನ್ಮುಕ್ತಬಿಂಬನು ವಿಶ್ವ ಭವ ಸಂ ।**
**ಸಕ್ತ ಬಿಂಬನು ತೈಜಸಾನು ಅಸೃಜ್ಯರಿಗೆ ಪ್ರಾಜ್ಞ ॥**
**ಶಕ್ತನಾದರು ಸರಿಯ ಸರ್ವೋ ।**
**ದ್ರಿಕ್ತ ಮಹಿಮನು ದುಃಖಸುಖಗಳ ।**
**ವ್ಯಕ್ತಮಾಡುತಲಿಪ್ಪ ಕಲ್ಪಾಂತರದಲಿ ಬಪ್ಪರಿಗೆ ॥ ೧ ॥**

**ಅವತರಣಿಕೆ :**

ಜೀವರ ಸ್ವರೂಪಕ್ಕನುಗುಣವಾದ ಅವಸ್ಥಾಚತುಷ್ಟಯಗಳಿಗೆ ವಿದ್ಯಮಾನವಾಗಿರುವ ಬಿಂಬನ ವಿಷಯ ತಿಳಿಸುತ್ತಾರೆ. ॥ ೧ ॥

**ಪ್ರತಿಪದಾರ್ಥ**

**ಅಸೃಜ್ಯರಿಗೆ ಪ್ರಾಜ್ಞ** = ಅಸೃಜ್ಯರಾಶಿಗತಜೀವರುಗಳಿಗೆ ಬಿಂಬನು ಪ್ರಾಜ್ಞನಾಮಕನು. **ತೈಜಸನು ಭವಸಂಸಕ್ತ ಬಿಂಬನು** = ಸೃಷ್ಟಿಗೆ ಬಂದ ಜೀವ ಸಮೂಹಕ್ಕೆ ತೈಜಸರೂಪೀ ಶ್ರೀಪರಮಾತ್ಮನು ಬಿಂಬನೆನಿಸುವನು. **ಜೀವನ್ಮುಕ್ತಬಿಂಬನು** = ವಿಶ್ವನಾಮಕ ಪರಮಾತ್ಮನು ಜೀವನ್ಮುಕ್ತರಿಗೆ ಬಿಂಬನು. **ಮುಕ್ತಬಿಂಬನು ತುರಿಯ** = ಮುಕ್ತಜೀವರಿಗೆ ತುರ್ಯನಾಮಕ ಪರಮಾತ್ಮನು ಬಿಂಬನು. **ಸರ್ವೋದ್ರಿಕ್ತ ಮಹಿಮನು** = ಸರ್ವಶ್ರೇಷ್ಠನಾದ ಅಸದೃಶಮಹಿಮೋಪೇತನಾದ ಬಿಂಬರೂಪೀ ಶ್ರೀಪರಮಾತ್ಮನು. **ಶಕ್ತನಾದರು ಸರಿಯೆ** = ಸರ್ವಶಕ್ತನಾಗಿದ್ದ ಮಾತ್ರಕ್ಕೂ, **ಕಲ್ಪಾಂತರದಲಿ** = ಬ್ರಹ್ಮಪ್ರಳಯಾನಂತರ ಅಸೃಜ್ಯರಾಶಿಯಿಂದ ಸೃಷ್ಟಿಗೆ, **ಬಪ್ಪರಿಗೆ** = ಬರುವ ಜೀವರಿಗೆ, **ದುಃಖ ಸುಖಗಳ** = ತ್ರಿವಿಧಜೀವರಿಗೆ ಸ್ಥೂಲದೇಹಗಳ ದ್ವಾರಾ, ದುಃಖ ಸುಖ ದ್ವಂದ್ವಗಳನ್ನು **ವ್ಯಕ್ತಮಾಡುವಲಿಪ್ಪ** = ತಜ್ಜನ್ಯಫಲಗಳನ್ನು ಭೋಗಕ್ಕೆ ವ್ಯಕ್ತಮಾಡಿಕೊಡುತ್ತಾನೆ. ॥ ೧ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರ ಸ್ವರೂಪ ಅನುಸರಿಸಿದ ಅವಸ್ಥಾಚತುಷ್ಟಯಗಳಿಗೆ ಬಿಂಬ ದಾರೆಂದರೆ–ಅದರನ್ನ ಹೇಳತಾರೆ.

ಅಸೃಜ್ಯಜೀವರಾಶಿಗೆ ಪ್ರಾಜ್ಞ. ಅಸೃಜ್ಯದಶಾ–ಎಂಬುದು ಸರ್ವ ಪ್ರಾಣಿಗಳಿಗೆ ನಿದ್ರಾವಸ್ಥ–ಎಂದರೆ, ಜೀವರ ಸ್ವರೂಪಕ್ಕೆ ನಿದ್ರಾವಸ್ಥ. ಅತ ಏವ, ಈ ಸುಷುಪ್ತ್ಯವಸ್ಥೆಗೆ ಪ್ರಾಜ್ಞನಾಮಕ ಪರಮಾತ್ಮ ಬಿಂಬ. ಸುಷುಪ್ತರಾದ ಅಸೃಜ್ಯಜೀವರಾಶಿಯೊಳಗಿಂದ ಸೃಷ್ಟಿಗೆ ತಂದ ಜೀವರಿಗೆ ವೈಷಮ್ಯ ಐದಿಸೋಣೇ, ತದಾರಭ್ಯ ಜೀವನ್ಮುಕ್ತಾವಸ್ಥಾ ಐದೋ ಪರಿಯಂತ, ಜೀವರ ಸ್ವರೂಪಕ್ಕೆ ಸ್ವಪ್ನಾವಸ್ಥೆ. ಅತ ಏವ, ಪರಿಯಂತ ಭವಸಂಸಕ್ತನಾಗಿ ಇರ್ತಾನೆ. ಭವಸಂಸಕ್ತಾವಸ್ಥಾನೇ ಜೀವನ ಸ್ವರೂಪಕ್ಕೆ ಸ್ವಪ್ನಾವಸ್ಥ. ಏವ, ಈ ಸ್ವಪ್ನಾವಸ್ಥೆಗೆ ತೈಜಸನು ಬಿಂಬ. ತೈಜಸನ ಕಾರ್ಯವೆಂಬುದು ಸ್ವಪ್ನ. ಇದೂ ಎಂಬುದೇ ವರ್ತಮಾನ ಸ್ಥಿತಿಕಾಲವು. ಜೀವನ್ಮುಕ್ತರಿಗೆ ಬಿಂಬನು

ವಿಶ್ವನು. ವಿಶ್ವನು ಜಾಗ್ರದವಸ್ಥಾಪ್ರೇರಕನು. ಆದ್ದರಿಂದ, ಜೀವನ್ಮುಕ್ತಾವಸ್ಥಾ ಜೀವರಿಗೆ ಜಾಗ್ರದವಸ್ಥಾ. ಈ ಅವಸ್ಥಾಭೋಗ ಮಹರಾದಿಲೋಕಗಳಲ್ಲಿ ಮಾಡತಾನೆ. ಈ ಅವಸ್ಥಾಭೋಗ ಎಂಥಾದ್ದೆಂದರೆ, ಲಿಂಗಭಂಗ ಇಲ್ಲ, ಭೂಮಿಯಲ್ಲಿ ಜನನವೂ ಇಲ್ಲ, ಮುಕ್ತಿಗೆ ಸದೃಶವಾದದ್ದು. ಅತಏವ, ಇಂಥಾ ಜಾಗ್ರದವಸ್ಥಾಕ್ಕೆ ವಿಶ್ವ ಬಿಂಬನು. ಅನಂತರ, ಲಿಂಗದೇಹದಿಂದ ಮುಕ್ತನಾಗಿ, ಸ್ವರೂಪಾನಂದವನ್ನು ಭೋಗಮಾಡತಕ್ಕ ಅವಸ್ಥಾಕ್ಕೆ ತುರಿಯನಾಮಕ ವಾಸುದೇವ ಬಿಂಬ. ಲಿಂಗದೇಹತ್ಯಾಗ ಸಾಂಕೇತದಿಂದ ಮರಣಾವಸ್ಥ–ಎಂತ ಕರಸೋದಾಗತದೆ. ಈ ಅವಸ್ಥಾಕ್ಕೆ ವಾಸುದೇವ ಬಿಂಬನಾಗಿದ್ದಾನೆ. ಪ್ರಾಜ್ಞಗೆ ಹೃದಯಾಕಾಶಗತ ತಮೋಗುಣಸ್ಥಾನ. ತೈಜಸಗೆ ಕಂಠಗತ ರಜೋಗುಣ ಸ್ಥಾನ. ವಿಶ್ವಗೆ ನೇತ್ರಗತ ಸತ್ತ್ವಗುಣಸ್ಥಾನ. ತುರ್ಯಗೆ ಶಿರಗತ ದ್ವಾದಶದಳ ಕಮಲಮಧ್ಯದಲ್ಲಿ ಸ್ಥಾನ. ಈ ನೇಮ–ಸ್ವರೂಪ ಬಾಹ್ಯ ಎರಡರಲ್ಲೂ ಒಂದೇ ಪ್ರಕಾರ. ಆಯಾ ಅವಸ್ಥಾಗಳು, ಆಯಾ ಭಗವದ್ರೂಪಗಳು, ಆಯಾ ಕಾರ್ಯಗಳ ನಡಸೋವಾಗತವೆ. ಮರಣಾವಸ್ಥಸಹಿತ ಅವಸ್ಥಾಚತುಷ್ಟಯಗಳೆಂದು ತಿಳಿಯಬೇಕು. ರಾಶಿ ಆರಂಭ ಮಾಡಿ, ಮುಕ್ತಿ ಪರಿಯಂತ, ಇದೇ ನೇಮ. ಸರ್ವಶ್ರೇಷ್ಠನಾದ, ಅಸದೃಶವಾದ ಮಹಿಮೋಪೇತನಾದ ಬಿಂಬರೂಪೀ ಪರಮಾತ್ಮನು, ಜೀವರನ್ನ ಸೃಷ್ಟಿಗೆ ತಾರದೇನೇ ಮುಕ್ತಿ ಕೊಡೋದಕ್ಕೆ ಶಕ್ತನಾದ ಕಾಲಕ್ಕೂ, ತನ್ನ ಸತ್ಯಸಂಕಲ್ಪಾನುಸಾರ, ಬ್ರಹ್ಮಪ್ರಳಯಾನಂತರ, ರಾಶಿಯಿಂದ ಸೃಷ್ಟಿಗೆ ಬರತಕ್ಕವರಿಗೆ ಗುಣ, ವೈಷಮ್ಯ ಐದಿಸಿ, ಸ್ಥೂಲದೇಹಗಳ ಕೊಟ್ಟು, ಅನಾದಿಕರ್ಮವನ್ನನುಸರಿಸಿ, ತ್ರಿವಿಧರಾದ ಸರ್ವಪ್ರಾಣಿಗಳಿಗೆ ದುಃಖ, ಸುಖ, ದ್ವಂದ್ವಗಳ ತಜ್ಜನ್ಯಫಲಗಳ ಭೋಗಕ್ಕೆ ವ್ಯಕ್ತಮಾಡಿಕೊಡತಾ, ಜೀವಾಂತರ್ಗತದಲ್ಲಿ ಬಿಂಬನಾಗಿದ್ದಾನೆ.

**ಪ್ರಮಾಣ :**

> **ಮುಕ್ತಾನಾಂ ಬಿಂಬರೂಪಸ್ತು ತುರ್ಯೋಽವಿಶ್ವೋಽಪರೋಕ್ಷಿತಾಂ ॥**
> **ಸಂಸಾರಿಣಾಂ ತೈಜಸಶ್ಚ ಸೃಜ್ಯಾನಾಂ ಪ್ರಾಜ್ಞ ಉಚ್ಯತೇ ॥**
> **— ಇತಿಸಾರ ಸಂಗ್ರಹೇ ॥ ೧ ॥**

**೨. ಭಾವಪ್ರಕಾಶಿಕೆ :**

ಮುಕ್ತರಾದವರಿಗೆ ತುರ್ಯನಾಮಕ ಪರಮಾತ್ಮನು ಬಿಂಬ ಮೂರ್ತಿಯು. ಲಿಂಗಭಂಗವಾಗದೆ ಅಮುಕ್ತರಾಗಿದ್ದು, ಬಿಂಬಾಪರೋಕ್ಷವಾದವರಿಗೆ ವಿಶ್ವನಾಮಕ ಪರಮಾತ್ಮನು ಬಿಂಬನು. ಸಂಸಾರದಲ್ಲಿರುವವರಿಗೆ, ತೈಜಸರೂಪಿಯಾದ ಪರಮಾತ್ಮನು ಬಿಂಬನು. ಈ ಕಲ್ಪದಲ್ಲಿ ಸೃಷ್ಟಿಗೆ ಬಾರದೇನೇ ಇರುವವರಿಗೆ, ಪ್ರಾಜ್ಞನಾಮಕ ಪರಮಾತ್ಮನು ಬಿಂಬನು. ಬ್ರಹ್ಮಾದಿ ಸಕಲದೇವತೆಗಳಿಗಿಂತಲೂ ಉತ್ತಮನಾದ ಮಹಾಮಹಿಮೆಯುಳ್ಳ ಶ್ರೀಹರಿಯು ಸೃಷ್ಟ್ಯಾದಿಗಳನ್ನು ಮಾಡದೆನೇ, ಅವರವರಿಗೆ ಸ್ವರೂಪಭೂತವಾದ ಸುಖದುಃಖಾದಿಗಳನ್ನು ವ್ಯಕ್ತಿ ಮಾಡಿಸುವ ಯೋಗ್ಯತೆ ಇದ್ದರೂ, ಸತ್ಯಸಂಕಲ್ಪನು, ಅವರವರ ಯೋಗ್ಯತಾನುಸಾರವಾದ ಕರ್ಮಗಳನ್ನು ಅವರಿಂದ ಮಾಡಿಸಿ, ಕಲ್ಪಾಂತದಲ್ಲಿ ಅವರವರ ಕರ್ಮಾನುಸಾರವಾಗಿ, ಸುಖ ದುಃಖ ಮಿಶ್ರವೆಂಬ–ಮೂರುವಿಧ ಫಲವನ್ನು ಮೂರು ವಿಧ ಜೀವರಿಗೆ ಕೊಡಿಸುವನು. ಮುಕ್ತಾನಾಂ ಬಿಂಬರೂಪಸ್ತು ತುರ್ಯೋ ವಿಶ್ವೋ ಪರೋಕ್ಷಿಣಾಂ ॥ ಸಂಸಾರಿಣಾಂ ತೈಜಸಸ್ತು ಸೃಜ್ಯಾನಾಂ ಪ್ರಾಜ್ಞ ಉಚ್ಯತೇ॥ –ಎಂಬ **ಸಾರಸಂಗ್ರಹವಾಕ್ಯವು** ಈ ಪದ್ಯಾರ್ಥವನ್ನು ಹೇಳುವರು. ॥೧॥

**೩. ಭಾವದರ್ಪಣ :**

"ಅನ್ಯನಾಮಕ ಪ್ರಕೃತಿಯೊಳಗಾಚ್ಛನ್ನಪಸ್ತು ತುರ್ಯೋ ವಿಶ್ವೋ ಪರೋಕ್ಷಿಣಾಂ । ಸಂಸಾರಿಣಾಂ ತೈಜಸಸ್ತು ಸೃಜ್ಯಾನಾಂ ಪ್ರಾಜ್ಞ ಉಚ್ಯತೇ"–ಇತಿ **ಸಾರಸಂಗ್ರಹೇ ।**

ಮುಕ್ತ–ಲಿಂಗದೇಹಭಂಗ ಆದವ. ಜೀವನ್ಮುಕ್ತ ಬಿಂಬಾರೋಕ್ಷ ಆದವ. ಭವಸಂಸಕ್ತ ಸಂಸಾರದಲ್ಲದ್ದವ. ಅಸೃಜ್ಯಸೃಷ್ಟಿಗೆ ಬರದೇ ಇದ್ದವ. ಸರ್ವೋದ್ರಿಕ್ತ–ಸರ್ವೋತ್ಕೃಷ್ಟ. ಬಪ್ಪರಿಗೆ–ಬರುವವರಿಗೆ. ॥ ೧ ॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :**

ಶ್ರೀರಸ್ತು । ಹರಿಃ ಓಮ್–"ಯತಸ್ತ್ವ ಭಾಸಃ ತ್ವದೀಯೋಽಹಂ ಸಮಃ"–ಇತಿ ಜ್ಞಾನಸ್ಯ "ಮೋಕ್ಷ ಪ್ರದೇತಿ"–ಮೋಕ್ಷ ಸಾಧನತ್ವೋಕ್ತೇಃ

ತದವಗಮಾರ್ಥಂ ಬಿಂಬಸಂಧಿಃ–ಆರಭ್ಯತೇ–"ಮುಕ್ತ" ಇತಿ । "ಮುಕ್ತಾನಾಂ ಸರ್ವವ್ಯಾಪಾರ ಹೇತುದೇವ ತುರೀಯತಃ । ಮುಕ್ತಾನಾಂ ಪ್ರಾಪ್ಯ ರೂಪೋಸೌ" । ಇತ್ಯುಕ್ತೇಃ । ಸಂಚಿತ ಕರ್ಮಭಿಃ ತದ್ದೇಹೈರಪಿ ಅಬಂಧಕತ್ವಾತ್ ಆರಬ್ಧ ತತ್ಕಾರ್ಯೈರೇವ ಬಂಧಕತ್ವಾತ್ ವಿಶ್ವ ಅಪರೋಕ್ಷೀಣಾಂ ಬಿಂಬಃ । ತೈಜಸಃ ಸ್ಮೃತಿಗಾನಾಂತು ಜ್ಞಾನಿನಾಂ ವಿಶ್ವನಾಮಕಃ ॥ ಅಸ್ಯಜ್ಞಾನಾಂ ಪ್ರಾಜ್ಞನಾಮಾ"–ಇತ್ಯುಕ್ತೇಃ ವಿವೃತಂ ಚ ॥ ತತ್ರ ಕಾರ್ಯಾ ಜನನಂ ನಾಶಕ್ತ್ಯಾ ಕಿಂ ತು ಇಚ್ಛಯೈವ ಇತ್ಯಾಹ– "ಶಕ್ತಃ ಇತಿ । ಬಪ್ಪ–ಬರುವ. ॥ ೧ ॥

## ಕನ್ನಡಾರ್ಥ

"ಜೀವನು ಪರಮಾತ್ಮನ ಬಿಂಬನು"–ಎಂದು ಸೂತ್ರಗಳಲ್ಲಿ ಉಕ್ತವಾಗಿದೆ. ಬಿಂಬರೂಪೀಹರಿಯ ದರ್ಶನ ಮತ್ತು ಅವನ ಸಂಬಂಧ ವಾದ ಜ್ಞಾನ–ಮೋಕ್ಷಕ್ಕೆ ಕಾರಣವೆಂದು ಪುರಾಣಾದಿಗಳಲ್ಲಿ ನಿರೂಪಿತ ವಾಗಿದೆ. ಈ ಕಾರಣದಿಂದ, ಬಿಂಬಜ್ಞಾನವಾಗಲು, **ಬಿಂಬ ಸಂಧಿಯನ್ನು** ಉಪಕ್ರಮಿಸುತ್ತಾರೆ–"ಮುಕ್ತ ಬಿಂಬನು"–ಎಂಬ ಪದ್ಯದಿಂದ.

"ತುರ್ಯನಾಮಕ ಭಗದ್ರೂಪವು ಮುಕ್ತರಿಗೆ ಬಿಂಬವೆನಿಸುವುದು. ಅವರ ಸಕಲವ್ಯಾಪಾರಗಳಿಗೂ ಕಾರಣವಾಗಿರುವುದು. ಮುಕ್ತರು ಆ ತುರ್ಯರೂಪವನ್ನೇ ಹೊಂದಿ ಸುಖಿಸುವರು"–ಎಂಬ ಪ್ರಮಾಣಗಳಿಗನು ಗುಣವಾಗಿ–"ಮುಕ್ತ ಬಿಂಬನು ತುರಿಯ"–ಎಂದಿದ್ದಾರೆ.

ಅಪರೋಕ್ಷಜ್ಞಾನಿಗಳಿಗೆ ವಿಶ್ವನಾಮಕ ಭಗದ್ರೂಪವು ಬಿಂಬವಾಗಿರು ವುದು. ಸಂಚಿತಾಗಾಮಿ ಕರ್ಮಗಳಿದ್ದರೂ, ಅವರಿಗೆ ಆ ದೇಹಗಳಿಂದ ಬಂಧನವಿಲ್ಲ. ಅಪರೋಕ್ಷಜ್ಞಾನದಿಂದ ಸಂಚಿತ ಪೂರ್ವದ ಮತ್ತು ಆಗಾಮಿ–ಉತ್ತರದ ಕರ್ಮಗಳ ನಾಶ. ಈ ಕಾರಣದಿಂದ ಪ್ರಾರಬ್ಧ ಕರ್ಮದಿಂದ ಬರುವ ದೇಹಗಳಿಂದ ಮಾತ್ರ ಅವರಿಗೆ ಬಂಧನವಿರುವದು. ಆರಬ್ಧಕರ್ಮಕ್ಕೂ ಭಗವದನುಗ್ರಹದಿಂದ ಉಪಗಮವಾಗುತ್ತದೆ. ಆದ್ದರಿಂದ, ವಿಶ್ವನಾಮಕನು ಅಪರೋಕ್ಷ ಜ್ಞಾನಿಗಳಿಗೆ ಬಿಂಬನು.

ಸಂಸಾರದಲ್ಲಿ ಇರುವ ಅನಪರೋಕ್ಷಿಗಳಿಗೆ ತೈಜಸನಾಮಕ ಭಗವದ್ರೂಪವು ಬಿಂಬವಾಗಿರುವುದು. ಅವು ಅಸೃಷ್ಟರಿಗೆ-ಸೃಷ್ಟಿಗೆ ಬಾರದೇ ಕಲ್ಪಾಂತರದಲ್ಲಿ ಸೃಷ್ಟಿಯನ್ನು ಹೊಂದುವವರಿಗೆ ಪ್ರಾಜ್ಞನಾಮಕ ಭಗವದ್ರೂಪವು ಬಿಂಬವಾಗಿರುವುದು.

ಅಸೃಷ್ಟಜೀವರಲ್ಲಿ ಪ್ರಾಜ್ಞನಾಮಕ ಬಿಂಬರೂಪಿಯು ಯಾವ ವ್ಯಾಪಾರವನ್ನೂ ಮಾಡಿಸದೇ ಇರುವನು. ಅಸಮರ್ಥತೆಯ ಮೂಲಕ ವಾಗಿರುವುದಿಲ್ಲ. "ಅಸೃಷ್ಟಜೀವರು ನಿದ್ರಾಪರರು. ನಿಷ್ಕ್ರಿಯರಾಗಲೀ"-ಎಂಬ ಅವನ ಇಚ್ಛೆಯೇ ಅದಕ್ಕೆ ಕಾರಣವೆಂದು ತಿಳಿಯಲು-"ಶಕ್ತನಾದರು"-ಎಂದು ಉತ್ತರಾರ್ಧಚರಣಗಳು ಹೊರಟವೆ. ॥ ೧ ॥

## ೫. ಶ್ರೀಗುರುಹೃದಯ ಪ್ರಕಾಶಿಕೆ :

ಈ ಹದಿನೆಂಟನೇ ಸಂಧಿಯಲ್ಲಿ ಮುಕ್ತಾಮುಕ್ತಾದಿ ಬಿಂಬಸ್ವರೂಪ ಕಥನ, ಅನ್ನ ಅನ್ನಾದಿರೂಪಗಳ ಅಧಿಷ್ಠಾನನಾದ ಬಿಂಬ ಶಾಂತಾದಿ ರೂಪಾಧಿಷ್ಠಾನ ಪುರುಷರೂಪತ್ರಯಾಧಿಷ್ಠಾನ, ಸಾಶನಾಶನರೂಪ ಪ್ರಕಾರಂತರ ಕಥನ, ವಿಶ್ವಾದಿ ರೂಪಾಧಿಷ್ಠಾನ, ಮೂಕಬಧಿರಾದಿನಾಮ ಸಮನ್ವಯ, ಭಿನ್ನಾಂಶ ಸ್ವರೂಪಾಂಶಾದ ಕಥನ, ಸಾಂಕೇತಿಕ ಆರೋಪಿತ ರೂಪನಿರೂಪಣ-ಇವೇ ಮೊದಲಾದ ಹರಿಕಥೆ-ಎಂಬ ಮೋಕ್ಷಸಾಧನ ಸಾರವನ್ನು ಗುರುಕಟಾಕ್ಷದಿಂದ ಶಕ್ತಿ ಇದ್ದಷ್ಟು ಹೇಳುವುದನ್ನು ಮುಖ್ಯ ಹರಿಭಕ್ತರು ಕೇಳತಕ್ಕದ್ದು. ॥ ಸಂ । ಸೂ ॥

ಸ್ವರೂಪಸುಖವ್ಯಕ್ತಿ-ಎಂಬ ಮುಕ್ತಿಯನ್ನು ದೇವರು ಕೊಡುವನೆಂದು, ಮೇಲೆ ಹೇಳಿದ ಮುಕ್ತ ಮೊದಲಾದವರ ಬಿಂಬವೆಂಬ ಮುಖ್ಯಾಧಾರ ದೇವರರೂಪವನ್ನು ತಿಳಿಸುತ್ತಾರೆ-ಮುಕ್ತನೆಂದು.

ಮುಕ್ತರೆಂಬ ಸ್ವರೂಪಾನಂದ ಹೊಂದಿದ ಜೀವರಿಗೆ ಬಿಂಬನೆಂಬ ಮುಖ್ಯಾಧಾರ ಉಪಾಸ್ಯನು ಸರ್ವಸಾಕ್ಷಿ ತುರ್ಯನೆಂಬ ದೇವರರೂಪವು. ಜೀವನ್ಮುಕ್ತರೆಂಬ ಶರೀರಾಭಿಮಾನಬಿಟ್ಟ ಜ್ಞಾನಿಗಳಿಗೆ, ಮುಖ್ಯೋಪಾಸ್ಯ ಬಿಂಬವಿಶ್ವನೆಂಬ ಜಾಗ್ರತ್ಪ್ರದ ರೂಪವು. ಭವಸಂಸಕ್ತರೆಂಬ ಅಜ್ಞಜೀವರಿಗೆ

ತೈಜಸನೆಂಬ ಸ್ವಪ್ನಪ್ರದರೂಪವೇ ಮುಖ್ಯೋಪಾಸ್ಯಬಿಂಬವು. ಅಸೃಜ್ಯರೆಂಬ ಮುಂದಿನ ಕಲ್ಪಕ್ಕೆ ಸೃಷ್ಟಿಗೆ ಬರುವ ಜೀವರಿಗೆ ನಿದ್ರಾಪ್ರದ ಪ್ರಾಜ್ಞರೂಪನೇ ಮುಖ್ಯೋಪಾಸ್ಯ ಆಧಾರಬಿಂಬನೆನಿಸುವನು. ಸರ್ವೋತ್ಕೃಷ್ಟಮಹಿಮನಾದಾಗ್ಯೂ, ದೇವರು ಕಲ್ಪಾಂತದಲ್ಲಿ ಸೃಷ್ಟಿಗೆ ಬರುವ ಆ ಅಸೃಜ್ಯ ಜೀವರಿಗೆ, ದುಃಖ ಸುಖಗಳನ್ನು ವ್ಯಕ್ತಿ ಮಾಡದೆ ಇರುವನು–ಸತ್ಯಸಂಕಲ್ಪನಾದ್ದರಿಂದ ॥ ೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಜೀವರಾಶಿಗಳಲ್ಲಿ ೪ ಪ್ರಕಾರ ವಿಂಗಡಣೆ :**

(೧) ಅಸೃಜ್ಯರಾಶಿಗತ ಜೀವರುಗಳು. (೨) ಸೃಷ್ಟಿಗೆ ಬಂದು ಸಂಸಾರದಲ್ಲಿ ಕರ್ಮದಿಂದ ಬಂಧಿತರಾಗಿರುವ ಜೀವರುಗಳು. (ಭವದಶಾ) (೩) ಜೀವನ್ಮುಕ್ತರು ಮತ್ತು (೪) ಮುಕ್ತಜೀವರು.

**೨. ಅಸೃಜ್ಯರಾಶಿಗತ ಜೀವರು**

ಸೃಷ್ಟಿಗೆ ಇನ್ನೂ ಬರದೇ, ಅಸೃಜ್ಯಾವಸ್ಥೆಯಲ್ಲಿರುವ ಜೀವರು ನಿದ್ರಾವಸ್ಥೆಯಲ್ಲಿರುತ್ತಾರೆ. ನಿತ್ಯವೂ, ಅನಾದಿಯೂ ಆದ ಜೀವಸ್ವರೂಪಕ್ಕೆ ಆವರ್ಕವಾಗಿರುವ ಲಿಂಗದೇಹದಿಂದ ಸಂಪರ್ಕವಿರುವುದಿಲ್ಲ. ಅಂತಹ ಅಸೃಜ್ಯರಾಶಿಗತ ಸರ್ವಜೀವರುಗಳಿಗೆ ಪ್ರಾಜ್ಞನಾಮಕ ಶ್ರೀಪರಮಾತ್ಮನು ಬಿಂಬನೆಂದೆನಿಸುವನು.

೩. ಅಸೃಜ್ಯರಾಶಿಗತ ಜೀವರನ್ನು ಶ್ರೀಪರಮಾತ್ಮನು ತನ್ನ ಸಂಕಲ್ಪದಂತೆ, ಲಿಂಗೋಪದಾನದಿಂದ ಸೃಷ್ಟಿಗೆ ತರುವನು. ಗುಣವೈಷಮ್ಯದಿಂದ ಸೃಷ್ಟಿಕ್ರಮ. ಲಿಂಗದೇಹದ ಸಂಬಂಧದಿಂದ ಜೀವರ ಕರ್ಮಾನುಭೋಗ ಆರಂಭವಾಗಿ, ಅವರು ಸಂಸಾರಾವಸ್ಥೆಯಲ್ಲಿರುವರು. ಇಂತಹ ಜೀವರುಗಳನ್ನು ದಾಸರಾಯರು 'ಭವಬದ್ಧರು'–ಎಂದಿದ್ದಾರೆ. ಅಂದರೆ, ಭವ–ಸಂಸಾರದ ಬಂಧನದಲ್ಲಿ ಸಂಸಕ್ತರು, ಸಿಲುಕಿದ ಜೀವರು. ಅಂತಹ ಸಮಸ್ತಜೀವರುಗಳಿಗೆ ತೈಜಸನಾಮಕ ಪರಮಾ... ಬಿಂಬನೆಂದೆನಿಸುವನು. ಸೃಷ್ಟಿ ಆರಂಭದಿಂದ, ಜೀವನ್ಮು...

ಪರ್ಯಂತ, ಜೀವರಸ್ವರೂಪಕ್ಕೆ ಸ್ವಪ್ನಾವಸ್ಥೆಯೋಪಾದಿಯಲ್ಲಿರುವುದು. ಕಂಠಗತ ತೈಜಸನು ಸ್ವಪ್ನಾವಸ್ಥೆಗೆ ಪ್ರೇರಕನು. ಇದರಿಂದ, ಭವಸಂಸಕ್ತರಿಗೆ ತೈಜಸನು ಬಿಂಬನು.

**೪. ಜೀವನ್ಮುಕ್ತಾವಸ್ಥೆ :**

ಸತ್ಸಾಧನೆಗಳನ್ನು ಮಾಡುತ್ತಾ, ಮುಕ್ತಿಯೋಗ್ಯಜೀವರಿಗೆ ಶ್ರೀಹರಿಯ ಪ್ರಸಾದರೂಪವಾದ ಬಿಂಬಾಪರೋಕ್ಷವಾಗುವುದು. ಅಂತಹ ಅಪರೋಕ್ಷ ಜ್ಞಾನಿಗಳಿಗೆ ಸಂಚಿತಕರ್ಮ ಶ್ರೀಶನ ಕೃಪಾಕಟಾಕ್ಷವೀಕ್ಷಣದಿಂದ ನಾಶ. ಆಗಾಮಿಕರ್ಮಲೇಪನವಾಗುವುದಿಲ್ಲ. ಅವಶಿಷ್ಟ ಪ್ರಾರಬ್ಧಕರ್ಮಭೋಗ ಮಾತ್ರ ಅಪರೋಕ್ಷಿಗಳಿಗೆ. ಅದಕ್ಕಿಂತ ಹೆಚ್ಚಿನ ಮಟ್ಟ ಜೀವನ್ಮುಕ್ತ ಸ್ಥಿತಿ. ಜೀವನ್ಮುಕ್ತರು ಮಹರಾದಿಲೋಕಗಳಲ್ಲಿರುವರು. ಅವರಿಗೆ ಪ್ರಾರಬ್ಧಕರ್ಮ ವಿಶೇಷವು ಔಪಚಾರಿಕವಾಗಿ ತಗುಲಿಕೊಂಡಿರುವುದು. ಇಂತಹ ಜೀವನ್ಮುಕ್ತಜೀವರುಗಳಿಗೆ **ವಿಶ್ವನಾಮಕ** ಪರಮಾತ್ಮನು ಬಿಂಬನೆಂದೆನಿಸುವನು. ಸರ್ವಜೀವರ ದಕ್ಷಿಣಾಕ್ಷಿಗತವಿಶ್ವನು ಜಾಗ್ರದಾವಸ್ಥೆಗೆ ಪ್ರೇರಕನು. ಜೀವನ್ಮುಕ್ತರಿಗೆ ಪುನಃ ಲೋಕದಲ್ಲಿ ಜನನ ಮರಣಗಳಿಲ್ಲ. ಸಲಿಂಗಾಗಿರುವರು. ಇದರಿಂದ, ಜಾಗ್ರದಾವಸ್ಥೆಗೆ ಸದೃಶವು

೫. ವಿರಜಾನದಿಯ ಸ್ನಾನದ ದ್ವಾರಾ, ಲಿಂಗಭಂಗವನ್ನು ಹೊಂದಿ, ಪ್ರಾಕೃತಗುಣಜನ್ಯಕರ್ಮಗಳಿಂದ ವಿವರ್ಜಿತರಾಗಿ, ಸ್ವರೂಪದೇಹದಿಂದ ವಿರಾಜಮಾನರಾಗಿರುವ ಜೀವರು **ಮುಕ್ತರು.** ಮುಕ್ತಜೀವರಿಗೆ **ತುರ್ಯನಾಮಕ** ಪರಮಾತ್ಮನು ಬಿಂಬನಾಗಿರುವನು.

**೬. ಶಕ್ತನಾದರು ಸರಿಯೆ :**

ಸರ್ವಶಕ್ತನಾದ ಶ್ರೀಪರಮಾತ್ಮನು ಸೃಷ್ಟಿಗೆ ಜೀವರನ್ನು ತಾರದೇ, ಮೋಕ್ಷವನ್ನು ಕೊಡಲು ಸರ್ವಸಮರ್ಥನು. ಆದರೆ, ಪ್ರಕೃತಿನಿಯಮಕ್ಕೆ ಇದು ವಿರುದ್ಧ. ಅನಾದಿಯಾದ ಕರ್ಮ ಜೀವರ ಬೆನ್ನುಹತ್ತಿರುವುದು. ಅನಾದಿಕರ್ಮದಿಂದ ಸಂಚಿತಾಗಾಮಿಕರ್ಮಗಳ ಅಭಿವ್ಯಕ್ತಿ ಮತ್ತು ಅನುಭೋಗ. ಕರ್ಮವನ್ನು ಭೋಗಿಸಿಯೇ ಸರ್ವಜೀವರು ತೀರಬೇಕು.

ಸತ್ಯಸಂಕಲ್ಪನಾದ, ಸರ್ವಶಕ್ತನಾದ ಸರ್ವೇಶ್ವರನ ನಿಯಮ ಮತ್ತು ಇಚ್ಛಾ. ಅದರಂತೆ, ಕರ್ಮಾನುಭವದ್ವಾರಾ, ಸುಖದುಃಖಗಳನ್ನು ಅಭಿವ್ಯಕ್ತಿ ಮಾಡುತ್ತಲಿರುವನು. ಸತ್ವಗುಣದಿಂದ ಸುಖಾನುಭವ. ರಜೋಗುಣ ದಿಂದ ಸುಖದುಃಖಮಿಶ್ರಾನುಭವ. ತಾಮಸಗುಣದಿಂದ ದುಃಖಾನು ಭೋಗ. ಈ ರೀತಿಯಲ್ಲಿ, ಪ್ರಾಕೃತಗುಣಗಳ ಜನ್ಯಕರ್ಮಫಲಗಳನ್ನು ಜೀವರು ಅನುಭವಿಸಿಯೇ ತೀರಬೇಕು. ನಂತರ, ಲಿಂಗದೇಹಭಂಗದ್ವಾರಾ, ಕರ್ಮವಿಮೋಚನೆಗೈಯುವನು. ಇದರಿಂದ, ಕರ್ಮಾನುಭವ ಅನಿವಾರ್ಯವೆಂದ ಮೇಲೆ, ಶ್ರೀಪರಮಾತ್ಮನ ಪಾತ್ರವೇನು ?–ಎಂಬ ಪ್ರಶ್ನೆ ಉದ್ಭವಿಸುವುದು. ಶ್ರೀಶನ ಪ್ರಸಾದದಿಂದ ಈ ಕರ್ಮಗಳ ಪರಿಣಾಮ ಜೀವರಿಗೆ ಬಹುಮಟ್ಟಿಗೆ ಹ್ರಾಸವಾಗುವುದು. (ಕಡಿಮೆ ಯಾಗುವುದು). ಇದೇ ಶ್ರೀಪರಮಾತ್ಮನ ಪ್ರಸಾದರೂಪವಾದ ಅನುಗ್ರಹ.

**ಬ್ರಹ್ಮಕಲ್ಪಾಂತದಲ್ಲಿ ಬರುವ ಜೀವರಿಗೆ ಈ ರೀತಿಯ ವ್ಯಾಪಾರರೂಪವಾದ ಕ್ರಿಯಾಸರಣಿ.**

| ಕ್ರಮ ಸಂಖ್ಯೆ | ಜೀವರ ವಿಂಗಡಣೆ | ಅವಧಿ | ಬಿಂಬರೂಪ | ಅವಸ್ಥೆ | ಸ್ಥಾನ |
|---|---|---|---|---|---|
| ೧. | ಅಸೃಷ್ಟ್ಯರಾಶಿ | ಸೃಷ್ಟಿಗೆ ಬರುವ ತನಕ | ಪ್ರಾಜ್ಞ | ನಿದ್ರಾವಸ್ಥೆ | ಹೃದಯಗತ |
| ೨. | ಭವಸಂಸಕ್ತರು (ಸಂಸಾರಾವಸ್ಥೆ) | ಸೃಷ್ಟಿಯ ಆರಂಭದಿಂದ ಜೀವನ್ಮುಕ್ತ ಸ್ಥಿತಿ ಪರ್ಯಂತ | ತೈಜಸ | ಸ್ವಪ್ನಾವಸ್ಥೆ | ಕಂಠಗತ |
| ೩. | ಜೀವನ್ಮುಕ್ತರಿಗೆ | ಅಪರೋಕ್ಷಾನಂತರ ಲಿಂಗದೇಹಭಂಗ ಪರ್ಯಂತ | ವಿಶ್ವ | ಜಾಗ್ರದಾವಸ್ಥೆ | ದಕ್ಷಿಣಾಕ್ಷಿಗತ |
| ೪. | ಮುಕ್ತಜೀವರಿಗೆ | ಲಿಂಗದೇಹ ಭಂಗದ್ವಾರಾ ಕರ್ಮವಿಮೋಚನೆಯ ನಂತರ ಶಾಶ್ವತಮುಕ್ತಿ. | ತುರ್ಯ (ವಾಸುದೇವ) | ಸ್ವರೂಪಗತ ಆನಂದದ ಆವಿರ್ಭಾವ ರೂಪವಾದ ಮೋಕ್ಷಾನಂದಾನುಭವ | ಶಿರಗತ ಕರ್ಮಾಂತರ ಮಧ್ಯ |

## ಪದ್ಯ-೨

**ಮೂಲ :-**

**ಅನ್ನನಾಮಕ ಪ್ರಕೃತಿಯೊಳಗ ।**
**ಚ್ಛನ್ನನಾಗಿಹ ಪ್ರಾಜ್ಞನಾಮದಿ ।**
**ಸೂನ್ನೊಡಲ ಮೊದಲಾದವರೊಳನ್ನಾದ ತೈಜಸನು ॥**
**ಅನ್ನದಾಂಬುದನಾಮ ವಿಶ್ವನು ।**
**ಭಿನ್ನನಾಮ ಕ್ರಿಯೆಗಳಿಂದಲಿ ।**
**ತನ್ನೊಳಗೆ ತಾ ರಮಿಪ ಪೂರ್ಣಾನಂದ ಜ್ಞಾನಘನ ॥ ೨ ॥**

**ಅವತರಣಿಕೆ :**

ಜೀವರ ಸಂರಕ್ಷಣಾರ್ಥ, ಅನ್ನೋದಕಾದಿಗಳಲ್ಲಿ ಬಿಂಬರೂಪ ದಿಂದಿದ್ದು, ತದ್ದ್ವಾರಾ ಸಂರಕ್ಷಿಸುತ್ತಾನೆಂದು ತಿಳಿಸುತ್ತಾರೆ. ॥ ೨ ॥

**ಪ್ರತಿಪದಾರ್ಥ:**

**ಪ್ರಕೃತಿಯೊಳಗೆ** = ಜಡಪ್ರಕೃತಿದ್ವಾರಾ ಆಹಾರೋತ್ಪತ್ತಿ. ಅದರಲ್ಲಿ, **ಅನ್ನನಾಮಕ** = ಅನ್ನಶಬ್ದವಾಚ್ಯನಾಗಿ, **ಪ್ರಾಜ್ಞನಾಮದಿ** = ಪ್ರಾಜ್ಞ-ಎಂಬ ಹೆಸರಿನಿಂದ, **ಅಚ್ಛನ್ನನಾಗಿಹ** = ಪರಿಪೂರ್ಣನಾಗಿ ಆಯಾಯಾ ಅನ್ನರೂಪದ ಆಹಾರಾದಿವಸ್ತುಗಳಲ್ಲಿ ಬಿಂಬನಾಗಿದ್ದಾನೆ. **ಸೊನ್ನೊಡಲ** = ಹಿರಣ್ಯಗರ್ಭನಾಮಕರಾದ ಬ್ರಹ್ಮದೇವರು (ಸೊನ್ನ-ಚಿನ್ನ, ಒಡಲ-ಗರ್ಭ), **ಮೊದಲಾದವರೊಳು** = ಮೊದಲಾದ ತತ್ತ್ವದೇವತೆಗಳಲ್ಲಿ, **ತೈಜಸನು** = ತೈಜಸನಾಮಕ ಶ್ರೀಪರಮಾತ್ಮನು, **ಅನ್ನಾದ** = ಅನ್ನೋದಕ ಗಳನ್ನು ಕೊಡಿಸವವನಾಗಿ, **ಅನ್ನದ** = ಅನ್ನಕೊಡತಕ್ಕ ಕ್ರಿಯಾರೂಪವಾದ ಕರ್ಮದಲ್ಲಿ "ಅನ್ನದ'-ಎಂಬ ನಾಮದಿಂದಲೂ, **ಅಂಬುದ** = ಉದಕವನ್ನು ಕೊಡತಕ್ಕ ವ್ಯಾಪಾರದಲ್ಲಿ ಉದಕನಾಮಕನಾಗಿ (ಅಂಬು-ನೀರು, ದ-ಕೊಡುವವನು). **ನಾಮ** = ಈ ಪರಿಯ ನಾನಾ ಹೆಸರುಗಳಿಂದ, ವಿಶ್ವನು

=ವಿಶ್ವನಾಮಕ ಶ್ರೀಪರಮಾತ್ಮನು, **ಭಿನ್ನನಾಮ ಕ್ರಿಯೆಗಳಿಂದಲಿ** = ಬೇರೆ ಬೇರೆ ಹೆಸರುಗಳಿಂದ ಕ್ರಿಯೆಗಳಿಂದ, **ಪೂರ್ಣಾನಂದ ಜ್ಞಾನಘನ** = ಪರಿಪೂರ್ಣವಾದ ಜ್ಞಾನಾನಂದಮಯ ಸ್ವರೂಪನು, **ತನ್ನೊಳಗೆ ತಾ** = ಆಯಾಯಾ ಅಧಿಷ್ಠಾನಗತ ತನ್ನದೇ ಆದ ಭಗವದ್ರೂಪಗಳಲ್ಲಿ ತಾನೇ, **ರಮಿಪ** = ಕ್ರೀಡೆಯಾಡುತ್ತಾನೆ. ಇದರಿಂದ, ಅವನಿಗೆ **ಸ್ವರಮಣ**ನೆಂದು ಹೆಸರು. ॥ ೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸೃಷ್ಟಿಮಾಡಿದ ಜೀವರ ಸಂರಕ್ಷಣಾರ್ಥ, ಅನ್ನೋದಕಗಳಲ್ಲಿ ಬಿಂಬನಾಗಿದ್ದು, ತದ್ದ್ವಾರಾ ರಕ್ಷಿಸತಾನೆ–ಎಂತ ಹೇಳತಾರೆ. ಜೀವರಿಗೆ ಆಧಾರಭೂತವಾದ ಜಡಪ್ರಕೃತಿಸಾಂಕೇತವಾದ ಅನ್ನೋದಕಾದಿಗಳಲ್ಲಿ ಪ್ರಕೃತಿಸಾಂಕೇತರಾದ ರಮಾದೇವೇರ ಅಂತರ್ಗತನಾಗಿ, ತಚ್ಛಬ್ದ ವಾಚ್ಯನಾಗಿ, ಅನ್ನೋದಕನಾಮಕನಾಗಿ, ಪ್ರಾಜ್ಞನಾಮಕ ಪರಮಾತ್ಮ, ನಾನಾವಿಧ ಜೀವರಿಗೆ ಯೋಗ್ಯವಾದ ನಾನಾ ವಿಧ ಅನ್ನದೊಳು, ನಾನಾವಿಧ ಅನ್ನನಾಮದಿಂ ಕರಸತಾ, ಭಿನ್ನವಿಲ್ಲದೆ ಅವಿಯೋಗನಾಗಿ, ಆಯಾ ಅನ್ನಾದಿಗಳಿಗೆ ಬಿಂಬನಾಗಿದ್ದಾನೆ. ಮತ್ತು ಭಿನ್ನಭಿನ್ನರಾದ ನಾನಾ ವಿಧ ಜೀವರ ಸ್ಥೂಲದೇಹಗತರಾದ, ಹಿರಣ್ಯಗರ್ಭನಾದ ಬ್ರಹ್ಮದೇವರು ಮೊದಲಾದ ತತ್ತ್ವದೇವತೆಗಳೊಳಗೆ, ತೈಜಸನಾಮಕ ಪರಮಾತ್ಮ ಇದ್ದವನಾಗಿ, ಆಯಾ ತತ್ತ್ವೇಶರ ದ್ವಾರಾ, ಆಯಾ ದೇಹಾಧಿಷ್ಟಿತರಾದ ಜೀವರ ದ್ವಾರಾ, ಪರಸ್ಪರ ಅನ್ನೋದಕಾದಿಗಳ ಕೊಡತಾ, ಕೊಡಿಸತಾ ಇರೋವನಾಗಿದ್ದಾನೆ. ಅನ್ನ ಕೊಡತಕ್ಕ ಕ್ರಿಯಾರೂಪವಾದ ಕರ್ಮದಲ್ಲಿ **ಅನ್ನದ**–ಎಂಬ ನಾಮದಿಂದಲೂ, ಉದಕಕೊಡತಕ್ಕ ಕ್ರಿಯಾರೂಪವಾದ ಕರ್ಮದಲ್ಲಿ **ಅಂಬುದ**–ಎಂಬ ನಾಮದಿಂದಲೂ, ಇತ್ಯಾದಿ ಅನೇಕನಾಮಗಳಿಂದಲೂ, ವಿಶ್ವನಾಮಕ ಪರಮಾತ್ಮನು ಭಿನ್ನಭಿನ್ನವಾದ ಕ್ರಿಯಾಗಳಿಂದ, ಭಿನ್ನಭಿನ್ನನಾಮದಿಂದ ಕರಸತಾ, ಕ್ರಿಯಾರೂಪದಿಂದ ಪರಸ್ಪರ ಅನ್ನೋದಕಾದಿ

ಗಳ ಅಧಿಷ್ಠಾನಗಳ ದ್ವಾರಾ ಕೊಡಿಸತಾ, ಜೀವರಿಗೆ ಭೋಜನ ಮಾಡಸತಾ, ಅವರ ತೃಪ್ತಿ ಬಡಸಾತಾ, ಸ್ಥೂಲ ದೇಹಗಳ ರಕ್ಷಿಸತಾನೆ. ದೇಹಾಂತರ್ಗತ ತಾನಾದರೋ, ಗಂಭೀರವಾದ ನಿಬಿಡೀಭೂತವಾದ ವ್ಯಾಪ್ತಿಯುಳ್ಳ ಪರಮಾತ್ಮ, ಜೀವರದೇಹದಲ್ಲಿ ಭೋಜನಪದಾರ್ಥಗಳಲ್ಲಿ ತದಾಕಾರ ದಿಂದ ವ್ಯಾಪ್ತವಾದ ರೂಪಗಳಿಂದ ಇದ್ದು, ತನ್ನ ಅತ್ಯಂತ ಪೂರ್ಣಗಳಾದ ಸಂತೋಷವೇನು, ಜ್ಞಾನವೇನು–ಇವುಗಳಿಂದ ತನ್ನ ಸ್ವಾಖ್ಯಗಳ ತಾನು ಭುಂಜಿಸಿ, ಆಯಾ ಅಧಿಷ್ಠಾನಗಳೊಳಗೆ ಇರತಕ್ಕ ತನ್ನ ರೂಪಗಳ ಕೂಡ ತಾನು ರಮಿಸತಾನೆ. ತದನ್ಯಜೀವಭುಕ್ತ ಜಡಭೋಜನದ್ರವ್ಯಗಳ ತಾನು ಭೋಜನ ಮಾಡೋದಿಲ್ಲ. ಈ ಪ್ರಕಾರ ಸರ್ವಕ್ಕೂ ಬಿಂಬನಾಗಿದ್ದಾನೆಂತ ತಾತ್ಪರ್ಯ. ॥ ೨ ॥

**೨. ಭಾವಪ್ರಕಾಶಿಕೆ :**

ಅನ್ನನಾಮಕನಾದ ಶ್ರೀಹರಿಯು ಪ್ರಕೃತಿಯಲ್ಲಿ ಪ್ರಾಜ್ಞನೆಂಬ ಹೆಸರಿನಿಂದ ಇತರರಿಗೆ ಗೋಚರನಾಗದೇ ಮರೆಯಾಗಿರುವನು. ಅನ್ನಾದನೆಂಬ ಹರಿಯು ತೈಜಸನಾಮದಿಂದ ಬ್ರಹ್ಮಾದಿಗಳಲ್ಲಿದ್ದು, ಅನ್ನವನ್ನು ಭುಂಜಿಸುವನು. ಅನ್ನದನೆಂಬ ಶ್ರೀಹರಿಯು ವಿಶ್ವನಾಮಕನಾಗಿ, ಅನೇಕವಾದ ನಾಮ ರೂಪಗಳಿಂದ ಭಿನ್ನಜೀವರಲ್ಲಿದ್ದು, ಅನ್ನಪ್ರದನಾಗಿ, ತನ್ನೊಳಗೆ ತಾನೇ ಆನಂದಪಡುತ್ತಿರುವನು. ॥ ೨ ॥

**೩. ಭಾವದರ್ಪಣ ಟೀಕಾ :**

ಅನ್ನನಾಮಕನಾದಂಥ ಪ್ರಾಜ್ಞ, ಪ್ರಕೃತಿವಾಚ್ಯಳಾದ ಶ್ರೀದೇವಿಯಲ್ಲಿ ಅಡಗಿದ್ದಾನೆಂತಲೂ, ಅನ್ನಾದ–ಅನ್ನನಾಮಕನಾದ ತೈಜಸನು ಬ್ರಹ್ಮ ಮೊದಲಾದ ದೇವತೆಗಳಲ್ಲಿ ಅನ್ನಭಕ್ಷಣ ಮಾಡುತ್ತಾನೆಂತಲೂ, ಅನ್ನದ–ಅನ್ನಕೊಡತಕ್ಕಂಥ ವಿಶ್ವರೂಪೀ ಭಿನ್ನನಾಮಗಳಲ್ಲೂ ಇದ್ದು, ತನ್ನೊಳಗೆ ತಾನೇ ರಮಿಸುವನೆಂದು ಹೇಳುತ್ತಾರೆ–"ಅನ್ನೇತಿ". ॥ ೨ ॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಅನ್ನ" ಇತಿ ॥ ಸರ್ವೋಪಜೀವ್ಯತ್ವಾತ್ ಲಿಂಗೇ ತತ್ವಾತ್ ತೇಷಾಂ ಅನ್ಯಜ್ಞಾನಾಂ ಲಿಂಗಸ್ಯ ಪ್ರಕೃತ್ಯಾತ್ಮ, ಕತ್ವಾತ್, ಜೀವನ್ಮುಕ್ತತ್ವಾತ್ ಸೃತಿ ಗತತ್ವಾಚ್ಚ ಅಜಾದೀನಾಂ ಉಭಯ ಪ್ರತಿವಿವೇತ್ವಾ ॥ "ತನ್ನೊಳಗೆ" ಇತಿ॥ "ಏಕೋಪಿ ನಿರ್ವಿಶೇಷೋಪಿ ಚತುರ್ಧಾ ವ್ಯವಹಾರಭೂತ್"–ಇತ್ಯುಕ್ತೇಃ॥ ಅನೇನ ಪೂರ್ವೋಕ್ತಂ ವಿವೃತ್ತಂ ಭವತಿ ॥ ಸೊನ್ನ–ಸ್ವರ್ಣ. ॥೨॥

ಕನ್ನಡಾರ್ಥ

ಸರ್ವರಿಂದ ಉಪಜೀವಿಸಲ್ಪಡುವರು–ಸರ್ವರು. ಇವನನ್ನು "ಹರಿ" ಎನ್ನುತ್ತಾರೆ. ಅಸ್ಮದ್ಯಜೀವರ ಲಿಂಗವು ಸೂಕ್ಷ್ಮಪ್ರಕೃತಿ ರೂಪವಾದುದರಿಂದ, ಆ ಲಿಂಗದಲ್ಲಿರುವುದರಿಂದಲೂ, "ಅನ್ನ"ವೆಂದು ಕರೆಯುತ್ತಾರೆ. ಅಜ–ಮುಂತಾದವರು ಜೀವನ್ಮುಕ್ತರೂ, ಅಪರೋಕ್ಷಜ್ಞಾನಿಗಳೂ, ಸಂಸಾರದಲ್ಲಿರುವವರೂ, ಆದುದರಿಂದ ತೈಜಸ, ವಿಶ್ವನಾಮಕ ರೂಪಗಳಿಂದ ಅವರಲ್ಲಿ "ಅನ್ನಾದ" "ಅನ್ನದ"–ಎಂಬ ಹೆಸರಿನಿಂದ ವ್ಯಾಪಾರಮಾಡಿಸುತ್ತ ಇರುತ್ತಾನೆ.

ಪರಮಾತ್ಮನು ಒಬ್ಬನೇ ಆಗಿದ್ದರೂ, ತನ್ನ ರೂಪಗಳಿಂದ ಭೇದವಿಲ್ಲದಿದ್ದರೂ, ಅನ್ನ–ಅನ್ನಾದ–ಅನ್ನದ–ಎಂಬ ನಾನಾ ಪ್ರಕಾರವಾದ ನಾಮಗಳಿಂದ ಕರೆಯಿಸಿಕೊಳ್ಳುತ್ತಾನೆ. ಈ ವಿಶೇಷಗಳೇ, ಈ ವ್ಯವಹಾರ ಕಾರಣಗಳು. ಈ ಪದ್ಯವು ಹಿಂದಿನ ಪದ್ಯಾರ್ಥವನ್ನು ವಿವರಿಸುತ್ತದೆ–ಎಂದು ತಿಳಿಯಬೇಕು. ॥ ೨ ॥

೫. ಶ್ರೀಗುರುಹೃದಯ ಪ್ರಕಾಶಿಕೆ :

ಅನ್ನ ಅನ್ನಾದಾದಿ ರೂಪಗಳ ಪ್ರಾಕಾರಾಂತದ ತಿಳಿಸುತ್ತಾರೆ–ಅನ್ನ ಎಂದು. ಉಪಜೀವ್ಯನೆಂಬ ಆಶ್ರಯಾದ್ದರಿಂದ, ಅನ್ನನಾಮಕದ ದೇವರು ಪ್ರಾಜ್ಞನೆಂಬ ಹೆಸರಿನಿಂದ ಗುಣತ್ರಯಾತ್ಮಕ ಮೂಲಪ್ರಕೃತಿಯಲ್ಲಿ ಅಚ್ಛನ್ನ ಎಂದರೆ, ಇತರರಿಗೆ ಕಾಣಿಸದಂತೆ ಮರೆಯಾಗಿರುವನು. ಆ ಪ್ರಕೃತಿ ಗುಣಗಳಿಂದ ಉಪಚಯ (ಅಭಿವೃದ್ಧಿ) ಹೊಂದುವ ಮಹದಾದಿ ತತ್ವಾಭಿಮಾನಿ,

ಸೂಸೂಡಲನೆಂಬ ಬ್ರಹ್ಮಾದಿದೇವತೆಗಳಲ್ಲಿ ಅನ್ನಾದನೆಂದರೆ, ತತ್ತ್ವಗಳಗೆ ಪ್ರಕೃತಿಗುಣ ಸೂಕ್ಷ್ಮಾಂಶದಿಂದ ವೃದ್ಧಿಹೊಂದಿಸುವುದರಿಂದ, ಅನ್ನಭಕ್ಷಕ ನೆಂತ ಹೆಸರುಳ್ಳ ತೈಜಸರೂಪನು ಇರುವನು. ಅದೇ ಬ್ರಹ್ಮಾದಿ ದೇವತೆಗಳಿಗೆ ಆಹುತಿಜನ್ಯಸ್ಥೂಲಾನ್ನರಸ ಭೋಗಕೊಡುವುದರಿಂದ, ಅನ್ನದನೆಂದು ಹೆಸರುಳ್ಳ, ಪದ್ಮನಾಭ ಜಾಗ್ರತ್ತದ ವಿಶ್ವಮೂರ್ತಿ-ಅವರವರ ಬಲಗಣ್ಣಿನಲ್ಲಿರುವನು. ಹೀಗೇ, ಬೇರೆ ಬೇರೆ ಹೆಸರು ವ್ಯಾಪಾರ ಗಳಿಂದ ತನ್ನಲ್ಲಿ ತಾನೇ ವಿಹರಿಸುವನು. ಆದ್ದರಿಂದ, ಪೂರ್ಣಾನಂದಜ್ಞಾನಘನನು. ॥ ೨ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಸರ್ವಜೀವರಾಶಿಗಳ ಸಂರಕ್ಷಕನಾದ ಸರ್ವಸಾರಭೋಕ್ತನಿಗೆ, **ಅನ್ನ-ಅನ್ನದ-ಅನ್ನಾದ**-ಎಂಬ ನಾಮಗಳಿವೆ.

೨. ಸರ್ವಜೀವರೂ ತಮ್ಮ ದೇಹಪೋಷಣೆಗಾಗಿ ಸೇವಿಸುವ ಆಹಾರವಸ್ತುಗಳಲ್ಲಿ (ಭೋಜ್ಯಪದಾರ್ಥ) **ಅನ್ನನಾಮಕ**ವಾಗಿದ್ದು, ಆಹಾರಗತ ರಸವನ್ನು ದೇಹದ ಉಪಚಯಕ್ಕಾಗಿ ವಿಭಾಗಿಸುವನು.

೩. ಶ್ರೀರಮಾದೇವಿಯರು ಸೂಕ್ಷ್ಮಪ್ರಕೃತಿಗೆ ಅಭಿಮಾನಿಗಳು. ಪ್ರಕೃತಿಯಿಂದ ಭೂಮಿಯಲ್ಲಿ ಬೆಳೆಯುವ ಧಾನ್ಯಗಳು ಜೀವರು ಸೇವಿಸುವ ಆಹಾರಕ್ಕೆ (ಅನ್ನ) ಕಾರಣವಾಗಿವೆ. ಇದರಿಂದ, ಮೂಲ ಪ್ರಕೃತಿಗೆ ಅಭಿಮಾನಿಗಳಾದ ಶ್ರೀಲಕ್ಷ್ಮೀದೇವಿಯರಲ್ಲಿ ಪರಿಪೂರ್ಣವಾಗಿ (ಅಚ್ಛಿನ್ನ ವಾಗಿಹ) ಅಂತರ್ಯಾಮಿಯಾಗಿದ್ದು, ತದ್ದ್ವಾರಾ, ಸಮಸ್ತಆಹಾರ ಪದಾರ್ಥಾಂತರ್ಗತನಾಗಿದ್ದು, **ಪ್ರಾಜ್ಞನಾಮಕನಾಗಿ** ಅನ್ನಶಬ್ದ ವಾಚ್ಯ ನಾಗಿದ್ದಾನೆ.

**೪. ಅನ್ನದ ಅಂಬುದ :-**

ಅನ್ನವನ್ನು ಕೊಡುವವನಾದ್ದರಿಂದ **"ಅನ್ನದ"** ನಾಮಕನು. ಅಂಬು-ಅಂದರೆ, ನೀರು, ಉದಕವನ್ನು ಕೊಡುವವನಾದದ್ದರಿಂದ **"ಅಂಬುದನು"**. ಹೀಗೆ ಅನ್ನೋದಕಪ್ರದನಾದ್ದರಿಂದ **ಅನ್ನದಾಂಬುದನು**.

೫. **ತೈಜಸನಾಮಕಪರಮಾತ್ಮನು**, ಅನ್ನದ-ಅಂಬುದ ನಾಮ ವಾಚ್ಯನಾಗಿದ್ದು, ಬ್ರಹ್ಮಾದಿ ಸಕಲತತ್ತ್ವಾಭಿಮಾನಿದೇವತೆಗಳಲ್ಲಿ ವಿದ್ಯಮಾನನಾಗಿದ್ದು, ಸಕಲಜೀವರಿಗೆ ಅವರವರ ಅನ್ನೋದಕಗಳನ್ನು ಒದಗಿಸಿ **ಕೊಡುವನು.**

ಇಲ್ಲಿ **ಸೊನ್ನೊಡಲ**-ಎಂಬ ಪದ ಪ್ರಯೋಗವಿದೆ. ಸೊನ್ನ-ಬಂಗಾರ. ಒಡಲ-ಗರ್ಭ ಅಥವಾ ಉದರ. ಅಂದರೆ, ಹಿರಣ್ಯಗರ್ಭನಾಮಕರಾದ **ಬ್ರಹ್ಮದೇವರೆಂದರ್ಥ.**

೬. **ವಿಶ್ವನಾಮಕ** ಶ್ರೀಪರಮಾತ್ಮನು **ಅನ್ನಾದ** ಅಂದರೆ, ಅನ್ನವನು ಭಕ್ಷಿಸುವವನು-ಎಂದು ವಿಖ್ಯಾತನಾಗಿದ್ದಾನೆ. ಅವನೇ, **ವಿಶ್ವಭುಕ್** ನಾಮಕನು. ಬಿಂಬನಾದ ವಿಶ್ವನಾಮಕನು ಸರ್ವಸಾರಭೋಕ್ತನು. ಸ್ವರಮಣನು. ಆಹಾರವಸ್ತುಗಳಲ್ಲಿ ಅಂತರ್ಗತನಾಗಿ, ರಸಪದ ವಾಚ್ಯನಾಗಿ, ತದಂತರ್ಗತ ಸ್ವಾಖ್ಯರಸವನ್ನು ಸೇವಿಸುವುದರಿಂದ, ಪ್ರತಿಬಿಂಬಭೂತರಾದ ಸಕಲಜೀವರಿಗೆ ತೃಪ್ತಿಯುಂಟಾಗುವುದು.

೭. ಈ ರೀತಿ, ಪ್ರಾಜ್ಞ-ತೈಜಸ-ವಿಶ್ವ-ಎಂಬ ಬೇರೆ ಬೇರೆ ನಾಮಗಳಿಂದ, ತದನುಗುಣವಾದ ಕ್ರಿಯಾವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು. (ಭಿನ್ನನಾಮ ಕ್ರಿಯೆಗಳಿಂದಲಿ) ಪರಿಪೂರ್ಣವಾದ ಜ್ಞಾನಾನಂದ ಸ್ವರೂಪನು. (ಪೂರ್ಣಾನಂದ) ತನ್ನ ಭಗವದ್ರೂಪಗಳಲ್ಲಿಯೇ ತಾನು ಕ್ರೀಡೆಯಾಡಿ, ಸ್ವರಮಣ (ಆಪ್ತತೃಪ್ತ) ನೆನಿಸಿದ್ದಾನೆ. ॥ ೨ ॥

## ಪದ್ಯ–೩

**ಮೂಲ :**

**ಬೂದಿಯೊಳಗಡಗಿಪ್ಪನಳನೋ ।**
**ಪಾದಿ ಚೇತನ ಪ್ರಕೃತಿಯೊಳ ।**
**ನ್ನಾದನನ್ನಾಹ್ವಯದಿ ಕರೆಸುವ ಬ್ರಹ್ಮ ಶಿವರೂಪಿ ॥**
**ಓದನಪ್ರದ ವಿಷ್ಣು ಪರಮಾ ।**
**ಹ್ಲಾದವೀವುತ ತೃಪ್ತಿಪಡಿಸುವ ।**
**ಗಾಧಮಹಿಮನ ಚಿತ್ರಕರ್ಮವನಾವ ಬಣ್ಣಿಸುವ ॥ ೩ ॥**

**ಅವತರಣಿಕೆ :**

ಅಪರಿಮಿತಮಹಿಮಾಸಂಪನ್ನನಾದ ಶ್ರೀಪರಮಾತ್ಮನ ವಿಚಿತ್ರ ವ್ಯಾಪಾರವಿಶೇಷಗಳನ್ನು ಯಾರು ತಿಳಿಯಲಾರರು ಮತ್ತು ವರ್ಣಿಸಲಾರರು–ಎಂದು ತಿಳಿಸುತ್ತಾರೆ. ॥ ೩ ॥

**ಪ್ರತಿಪದಾರ್ಥ :**

**ಚೇತನ** = ಸರ್ವಜೀವರೂ, **ಪ್ರಕೃತಿಯೊಳು** = ಜೀವರ ಜಡ ಪ್ರಕೃತ್ಯಾತ್ಮಕಸ್ಥೂಲದೇಹಗಳು, **ಒಳಗೆ** = ಇವೆರಡರೊಳಗೆ, **ಬೂದಿಯೊಳಗೆ** = ಬೂದಿಯರಾಶಿಯಲ್ಲಿ, **ಅಡಗಿಪ್ಪ** = ಹೊರಗೇ ಕಾಣಿಸದೇ ಒಳಗೇ ಇರುವ, **ಅನಳನೋಪಾದಿ** = ಅಗ್ನಿಯಂತೆ, **ಅನ್ನಾದ**= ಸರ್ವಸಾರಭೋಕ್ತನು. **ಅನ್ನಾಹ್ವಯದಿ**=ಅನ್ನನಾಮಕನಾಗಿ, **ಬ್ರಹ್ಮರೂಪೀ** = ಬ್ರಹ್ಮರೂಪೀ ಶ್ರೀಪರಮಾತ್ಮನು, "ಅನ್ನ" ನಾಮಕನಾಗಿಯೂ, **ಶಿವರೂಪಿ** = ಶಿವರೂಪನಾಗಿದ್ದು, "ಅನ್ನಾದ"–ಎಂಬ ಹೆಸರಿನಿಂದಲಿ, **ವಿಷ್ಣು**=ಸಾಕ್ಷಾತ್ ವಿಷ್ಣುರೂಪೀಪರಮಾತ್ಮನು, **ಓದನಪ್ರದ** = ಅನ್ನಪ್ರದನಾಗಿ, "ಅನ್ನದ"– ಎಂಬ ಹೆಸರಿನಿಂದಲೂ, **ಪರಮ ಆಹ್ಲಾದವೀಯುತ** = ಅತ್ಯಂತ ಸಂತೋಷವನ್ನು ಜೀವರಿಗೆ ಭೋಜನ

ಕ್ರಿಯಾ–ದ್ವಾರಾ ಕೊಡುತ್ತಾ, **ತೃಪ್ತಿಪಡಿಸುವ** = ಅನ್ನೋದಕಗಳ ದ್ವಾರಾ ಹಸಿವು, ನೀರಡಿಕೆಗಳನ್ನು ನಿವಾರಿಸಿ, ಜೀವರಿಗೆ ತೃಪ್ತಿಪಡಿಸುತ್ತಾನೆ. (ತೃಪ್ತಿವಾಚ್ಯನಾಗಿದ್ದಾನೆ). **ಅಗಾಧಮಹಿಮನ** = ಅಪರಿಮಿತಮಹಿಮಾ ಸಂಪನ್ನನಾದ ಶ್ರೀಪರಮಾತ್ಮನ, **ಚಿತ್ರಕರ್ಮವ** = ಆಶ್ಚರ್ಯಕರವಾದ ವ್ಯಾಪಾರವಿಶೇಷಗಳನ್ನು, **ಆವ ಬಣ್ಣಿಸುವ** = ಯಾವನು ತಾನೇ ವರ್ಣಿಸಲು ಸಾಧ್ಯ? ಅಂದರೆ, ರಮಾಬ್ರಹ್ಮಾದಿಗಳೂ ಕೂಡಾ ವರ್ಣಿಸಲಾರರು–ಎಂದು ತಾತ್ಪರ್ಯ. ॥ ೩ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :

ಶ್ರೀಪರಮಾತ್ಮನ ಚಿತ್ರಕರ್ಮವ್ಯಾಪಾರವಾರ್ಯ್ಯರೂ ವರ್ಣಿಸ–ಲಾರರೆಂದು ಹೇಳತಾರೆ.

ಸರ್ವಪ್ರಾಣಿಗಳು, ಜೀವರು ಧರಿಸಿದ ಜಡಪ್ರಕೃತ್ಯಾತ್ಮಕ ಸ್ಥೂಲದೇಹಗಳು–ಈ ಎರಡರ ಒಳಗೆ, ಬೂದಿಯೊಳಗೆ ಹೊರಗೆ ಕಾಣದೇ ಅಡಗಿರ ತಕ್ಕ ಅಗ್ನಿಯೋಪಾದಿಯಲ್ಲಿ ಅಡಗಿದ್ದಾನೆ. ಪಚನಾದಿಗಳಿಂದ ಸಿದ್ಧಮಾಡಿದ ಅನ್ನವನ್ನು ಪಾತ್ರದಲ್ಲಿ ಬಡಿಸಿ, "ಕೃಷ್ಣಾರ್ಪಣ"–ಎಂತ ಕೊಡಲ್ಪಟ್ಟ ಅನ್ನೋದಕದೊಳಗೆ ರುದ್ರರೂಪೀ ಪರಮಾತ್ಮ ಅನ್ನಶಬ್ದದಿಂದಲೂ, ಕೃಷ್ಣಾರ್ಪಣ–ಎಂತ ಕೊಡಲ್ಪಟ್ಟ ಅನ್ನವನ್ನು ಭಕ್ಷಣಮಾಡೋ ಕ್ರಿಯಾರೂಪವಾದ ಕರ್ಮದಲ್ಲಿ ಇದ್ದು, ಬ್ರಹ್ಮರೂಪೀ ಪರಮಾತ್ಮ, ಅನ್ನಾದ–ನಾಮದಿಂದಲೂ ಕರಸತನಾನೆ. ವಿಷ್ಣುರೂಪೀ ಪರಮಾತ್ಮ, ಭೋಜನದ್ರವ್ಯ ಭಕ್ಷಣಮಾಡಿದ್ದು, ಉದರಪ್ರವೇಶಾನಂತರ ತದ್ದ್ವಾರಾ, ಅತ್ಯಂತ ಸಂತೋಷವನ್ನು ಕೊಡತಾ, ಕ್ಷುತ್ತು ನಿವಾರಣಮಾಡಿ, ತೃಪ್ತಿ ಬಡಿಸುವ ವಿಷ್ಣು, ತೃಪ್ತ್ಯಂತರ್ಗತನಾಗಿ ತೃಪ್ತಿಶಬ್ದವಾಚ್ಯನಾಗಿ ಇರೋವನಾಗಿದ್ದಾನೆ. ಆದ್ಯಂತ ರಹಿತನಾದ ಮಹಿಮೋಪೇತನಾದ ಶ್ರೀಪರಮಾತ್ಮನ ಅತ್ಯಂತವಾದ ನಾನಾ ವಿಚಿತ್ರವಾದ ಕರ್ಮಗಳ ದಾರು

ವರ್ಣಿಸ್ಯಾರು ! ಅಂದರೆ, ರಮಾಬ್ರಹ್ಮಾದಿಗಳು ಕೂಡಾ ವರ್ಣಿಸಲಾರ ರೆಂದು ತಾತ್ಪರ್ಯ. ॥ ૩ ॥

**೨. ಭಾವಪ್ರಕಾಶಿಕೆ :**

ಬೂದಿ ಮುಚ್ಚಿದ ಕೆಂಡದಂತೆ, ಶ್ರೀದೇವಿಯಲ್ಲಿ ಅನ್ನನಾಮಕನಾಗಿ ಪರಮಾತ್ಮನು ಅಡಗಿರುವನು. ಅನ್ನಾದನೆಂಬ ಹೆಸರಿನಿಂದ ಬ್ರಹ್ಮದೇವ ರಲ್ಲೂ, ರುದ್ರದೇವರಲ್ಲೂ, ಬ್ರಹ್ಮರೂಪ, ರುದ್ರರೂಪದಿಂದ ಇದ್ದು, ಅನ್ನವನ್ನು ಭುಂಜಿಸುವನು. ವಿಷ್ಣುರೂಪದಿಂದ ಅನ್ನದನೆಂಬ ಹರಿಯು, ಸಕಲರಿಗೂ ಅನ್ನವನ್ನು ಕೊಟ್ಟು, ಪರಮಾಹ್ಲಾದವನ್ನುಂಟುಮಾಡಿ, ಚೆನ್ನಾಗಿ ಎಲ್ಲರನ್ನು ತೃಪ್ತಿಪಡಿಸುವನು. ಇಂತಹ ಅಪಾರಮಹಿಮೆಯುಳ್ಳ ಪರಮಾತ್ಮನ ವಿಚಿತ್ರವಾದ ಕರ್ಮವನ್ನು ಬಣ್ಣಿಸಲು ಯಾರಿಂದ ಸಾಧ್ಯವು? ರಮಾ ಬ್ರಹ್ಮಾದಿಗಳಿಂದಲೂ ತರವಲ್ಲ. ಇನ್ನು ಮಿಕ್ಕವರ ಪಾಡೇನೆಂದು ತಾತ್ಪರ್ಯ. ॥ ૩ ॥

**೩. ಭಾವದರ್ಪಣ ಟೀಕಾ :**

ಅಗ್ನಿಯೋಪಾದಿಯಲ್ಲಿ ಅನ್ನನಾಮಕನು ಲಕ್ಷ್ಮೀದೇವಿಯಲ್ಲಿದ್ದು, "ಅನ್ನ"-ಎಂದು ಕರೆಸುತ್ತ, ಬ್ರಹ್ಮ-ರುದ್ರ-ವಿಷ್ಣು-ಎಂಬ ಪರಮಾತ್ಮನು ಚೇತನರಿಗೆ ಅನ್ನದಿಂದ ತೃಪ್ತಿಪಡಿಸುತ್ತಾ ಸಂತೋಷಕೊಡುವನೆಂದು ಹೇಳುತ್ತಾರೆ-"ಬೂದಿಯೊಳು"-ಎಂದು. ॥ ૩ ॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :**

"ಬೂದಿ"-ಇತಿ ॥ ಅನ್ನಾದಃ ಬ್ರಹ್ಮಣೇ ॥ "ಅತ್ತಿ" -ಇತಿ ಹರೇಃ ಅನ್ನಮ್ ॥ ಬ್ರಹ್ಮೇತಿ ॥ "ಬ್ರಹ್ಮಣಿ ಬ್ರಹ್ಮ ರೂಪಾಸೌ ಶಿವರೂಪೀ ಶಿವೇಸ್ಥಿತಃ" ॥ ಇತ್ಯುಕ್ತೇಶ್ಚ ॥ "ಓದನ"-ಅನ್ನ .. "ವಿಷ್ಣುರೂಪೇಣ ಪಾತಿ"-ಇತ್ಯುಕ್ತೇಶ್ಚ. ॥ ૩ ॥

## ಕನ್ನಡಾರ್ಥ

ಹರಿಯು ಅವ್ಯಕ್ತನಾಗಿರುವ ವಿಷಯವನ್ನು ಸದೃಷ್ಟಾಂತಪೂರ್ವಕ ನಿರೂಪಿಸುತ್ತಾರೆ-"ಬೂದಿ"-ಎಂಬ ಪದ್ಯದಿಂದ.

ಬ್ರಹ್ಮನಲ್ಲಿ "ಅನ್ನಾದ" – ಇರುತ್ತಾನೆ. "ಅತ್ತಿ" – ತಿನ್ನುವನು– ಸಂಹರಿಸುವನು. ಆದುದರಿಂದ, ಹರಿಗೆ "ಅನ್ನ" ವೆಂದು ನಾಮ. ಜೀವನ ಪ್ರಕೃತಿ ಲಕ್ಷ್ಮೀದೇವಿಯಿಂದ ಅನ್ನನಾಮಕನಾಗಿರುವನು. "ಬ್ರಹ್ಮಶಿವರೂಪೀ"–ಎಂದರೆ, ಬ್ರಹ್ಮಶಿವರಿಂದ ಅಭಿನ್ನನೆಂದು ಅರ್ಥ ವಲ್ಲ. "ಬ್ರಹ್ಮನಲ್ಲಿ ಬ್ರಹ್ಮರೂಪದಿಂದಲೂ, ಶಿವನಲ್ಲಿ ಶಿವರೂಪ ದಿಂದಲೂ, ಹರಿಯು ಇರುವನು" – ಎಂದು ವಚನಗಳಿರುವುದರಿಂದ, "ತದಂತರ್ಯಾಮಿ–ತನ್ನಾಮಕ"–ಎಂದು ಅರ್ಥೈಸಬೇಕು. ವಿಷ್ಣು– ರೂಪದಿಂದ ಸಂರಕ್ಷಿಸುವುದರಿಂದ, "ಅನ್ನದ–ಓದನಪ್ರದ"ನೆಂದು ತಿಳಿಯಬೇಕು. ॥೩॥

## ಶ್ರೀಗುರುಹೃದಯಪ್ರಕಾಶಿಕೆ

ಜಡಗತಆಶ್ರಯ–ಆಶ್ರಯೀಭಾವದಿಂದ, ಅನ್ನಾದರೂಪ ಸ್ಮರಣೆ ತಿಳಿಸಿ, ಚೇತನಗತ ಆಶ್ರಯೀ – ಆಶ್ರಯಭಾವದಿಂದ ಅನ್ನಾದ ರೂಪೋಪಾಸನೆಯನ್ನು ತಿಳಿಸುತ್ತಾರೆ – ಬೂದಿ ಎಂದು.

ಬೂದಿಯಲ್ಲಿ ಅಡಗಿರುವ ಅಗ್ನಿಯಂತೆ, ಚೇತನಪ್ರಕೃತಿ–ಎಂಬ ಲಕ್ಷ್ಮಿಯಲ್ಲಿ ಆಶ್ರಯ ಆದ್ದರಿಂದ, ಅನ್ನನಾಮಕನಾಗಿ ಇರುವನು. ಆಶ್ರಿತನಾದ್ದರಿಂದ, ಬ್ರಹ್ಮ ಶಿವರುಗಳಲ್ಲಿ ಬ್ರಹ್ಮಶಿವರೂಪ ನಾಮದಿಂದ ಅನ್ನಾದನೆಂದು ಹೆಸರುಳ್ಳವನಾಗಿರುವನು. ಸ್ಥಿತಿ ಕರ್ತೃ ವಿಷ್ಣುರೂಪದಿಂದ ಅನ್ನಾದನೆಂದು ಹೆಸರುಳ್ಳವನಾಗಿ, ಬ್ರಹ್ಮಾದಿಗಳಿಗೆ ತದ್ಯೋಗ್ಯರಸಗಳಿಂದ ಪರಮಸಂತೋಷಪಡಿಸುತ್ತಾ, ಕೃತಕೃತ್ಯರನ್ನು ಮಾಡುವ ಅಗಾಧ– ಮಹಿಮನಾದ ದೇವರ ಅನ್ನ, ಅನ್ನಾದರೂಪ, ವಿಚಿತ್ರಕ್ರಿಯೆಗಳನ್ನು ವರ್ಣಿಸುವುದಕ್ಕೆ ಶಕ್ತನಾದ್ದಂಥಾವನು ತ್ರಿಕಾಲದಲ್ಲಿಯೂ ಯಾರೂ ಇಲ್ಲ.

**ಅದ್ಯತೇತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತೇ । ಅಹ ಮನ್ನಾದೋಽ ಮನ್ನಾದೋಽಹಮನ್ನಾದಃ ಅಹಮನ್ನಮಹಮನ್ನಮಹಮನ್ನಂ ।**– ಎಂಬ **ತೈತ್ತರೀಯೋಪನಿಷತ್ತು ಉಪಜೀವ್ಯತ್ವಮೇವಾದಯತ್ವಂ**–ಎಂಬ ಭಾಷ್ಯಾರ್ಥ,

**ನ ತೇ ವಿಷ್ಣೋ ರ್ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತ ಮಾಪ**–ಎಂಬ ಶ್ರುತ್ಯರ್ಥವನ್ನು ಸಹಾ ವಿವರಿಸಿರುತ್ತಾರೆ.

**ವಿಶೇಷಾರ್ಥ :**

ಈ ಅನ್ನ, ಅನ್ನದ, ಅನ್ನಾದ–ಎಂಬ ಮೂರು ರೂಪಗಳೇ–ಓಂಕಾರ ಪ್ರತಿಪಾದ್ಯ ಅ, ಉ, ಮ–ಎಂಬ ಮೂರು ಅಕ್ಷರಗಳ ಪ್ರತಿಪಾದ್ಯಮೂರ್ತಿಗಳೆಂದು ಉಪನಿಷದ್ಭಾಷ್ಯದಲ್ಲಿ ವಿವರಿಸಿರುತ್ತಾರೆ.

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಪ್ರಕೃತಿಗತ ಸಮಸ್ತವಸ್ತುಗಳಲ್ಲಿ ಅಂತರ್ಗತನಾಗಿರುವ ಪರಮಾತ್ಮನ ಮಹಿಮೆಯನ್ನು ದೃಷ್ಟಾಂತಪೂರ್ವಕವಾಗಿ ತಿಳಿಸುತ್ತಾರೆ.

ಬೆಂಕಿಯು ಬೂದಿಯ ರಾಶಿಯಲ್ಲಿ ಅಡಗಿರುವುದು. ಬೂದಿಮುಚ್ಚಿದ ಅಗ್ನಿಯಂತೆ, ಭೂರಮಣನಾದ ಶ್ರೀಹರಿಯು ಸರ್ವತ್ರವ್ಯಾಪ್ತನಾಗಿದ್ದಾನೆ. ಜ್ಞಾನಿಗಳ ಧ್ಯಾನಕ್ಕೆ ಮಾತ್ರ ಗೋಚರನಾಗುವನು.

೨. ಸರ್ವಜೀವರಾಶಿಗಳ ಬಿಂಬರೂಪಿಯಾಗಿ ವ್ಯಾಪ್ತನಾಗಿದ್ದರೂ, ಅವ್ಯಕ್ತನು. ಪ್ರಕೃತಿಯ ಸಕಲಜಡವಸ್ತುಗಳ ಕಣಕಣಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ.

೩. ಮೂಲಸೂಕ್ಷ್ಮಪ್ರಕೃತಿಗೆ ಶ್ರೀಲಕ್ಷ್ಮೀದೇವಿಯು ಅಭಿಮಾನಿಗಳು. ತ್ರಿಗುಣಾಭಿಮಾನಿಗಳಾದ ಶ್ರೀಲಕ್ಷ್ಮೀದೇವಿಯರಲ್ಲಿ, "ಅನ್ನ" ನಾಮಕನಾಗಿ, ಶ್ರೀಹರಿಯು ವಿದ್ಯಮಾನನಾಗಿದ್ದಾನೆ.

ಪ್ರಕೃತಿಯಲ್ಲಿ ಸಸ್ಯಜೀವರುಗಳ ದ್ವಾರಾ ಧಾನ್ಯೋತ್ಪತ್ತಿ. ಧಾನ್ಯಗಳ ದ್ವಾರಾ, ಜೀವರಿಗೆ ಆಹಾರೋತ್ಪತ್ತಿ. ಆದರಿಂದ, ಪ್ರಕೃತ್ಯಾಭಿಮಾನಿಗಳಾದ ಶ್ರೀಲಕ್ಷ್ಮೀಯಲ್ಲಿ "ಅನ್ನ"ನಾಮಕನಾಗಿದ್ದು, ಸಸ್ಯಜೀವರಲ್ಲಿದ್ದು, ಸರ್ವಸಾರ ಭೋಕ್ತನಾಗಿ, ಅನ್ನದ್ವಾರಾ ಅವರಿಗೆ ತೃಪ್ತಿಪ್ರದನು.

೪. **"ಅನ್ನಾದ"**–ಎಂದರೆ, ಅನ್ನವನ್ನು ಭಕ್ಷಿಸುವವನು–ಎಂದರ್ಥ. "ಅನ್ನಾದ"ನಾಮಕನಾಗಿ, ಚತುರ್ಮುಖಬ್ರಹ್ಮದೇವರಲ್ಲಿ ಮತ್ತು ರುದ್ರದೇವರಲ್ಲಿ ಅಂತರ್ಯಾಮಿಯಾಗಿದ್ದಾನೆ.

**ಬ್ರಹ್ಮ ಶಿವರೂಪೀ**–ಎಂಬ ಪದಪ್ರಯೋಗದಿಂದ–ಬ್ರಹ್ಮ–ಮತ್ತು ಶಿವನು ಶ್ರೀಹರಿಯ ಸ್ವರೂಪಾತ್ಮಕರೆಂದರ್ಥವಲ್ಲ. ಸೃಷ್ಟಿಗೆ ಅವಾಂತರ ಕರ್ತೃಗಳಾದ ಬ್ರಹ್ಮದೇವರಲ್ಲಿ ಬ್ರಹ್ಮಶಬ್ದವಾಚ್ಯನಾಗಿದ್ದಾನೆ. ಲಯಕರ್ತೃಗಳಾದ ಶ್ರೀರುದ್ರದೇವರಲ್ಲಿ ತತ್‌ಶಬ್ದವಾಚ್ಯನಾಗಿ ಅಂತರ್ಯಾಮಿ ರೂಪದಿಂದ ಇದ್ದಾನೆ. ಅವರಲ್ಲಿದ್ದು, "ಅನ್ನಾದ" ನಾಮಕನಾಗಿ, ಸ್ವಾಖ್ಯರಸ ಸ್ವೀಕಾರ ದ್ವಾರಾ, ಸಮಸ್ತಭೋಜ್ಯವಸ್ತುಗಳನ್ನು ಉಂಡು, ಜೀವರಿಗೆ ಉಣಿಸುವನು.

೫. ಸ್ವಯಂ **ವಿಷ್ಣುರೂಪದಿಂದ**, ಸರ್ವಜೀವರನ್ನು ಸಂರಕ್ಷಣೆ ಮಾಡುತ್ತಾ, **ಅನ್ನದ**–ಅಂದರೆ, ಅವರಿಗೆ ಅನ್ನಪ್ರದನಾಗಿದ್ದಾನೆ. ಇದನ್ನೇ ದಾಸರಾಯರು **ಓದನಪ್ರದ**ನೆಂದಿದ್ದಾರೆ. ಓದನ–ಅಂದರೆ, ಅನ್ನ (ಭೋಜ್ಯ ಪದಾರ್ಥ).

೬. ಇಂತಹ ಅಪರಿಮಿತಮಹಿಮಾಸಂಪನ್ನನಾದ ಅಪ್ರಮೇಯನು ಸರ್ವಜೀವರ ಇಂದ್ರಿಯಗತನಾಗಿದ್ದು, ಭೋಜನರಸವಿಭಾಗಮಾಡಿ, ತದ್ವಾರಾ, ದೇಹೋಪಚಯವನ್ನು ಮಾಡುತ್ತಾ, ಜೀವರಿಗೆ ತೃಪ್ತಿಪ್ರದನಾಗಿರುವನು. ಅಂತಹ ಅಪಾರಮಹಿಮನ ಆತ್ಯಾಶ್ಚರ್ಯವಾದ ವ್ಯಾಪಾರವಿಶೇಷಗಳನ್ನು ವರ್ಣಿಸುವ ಧೀರರ್‍ಯಾರಿವರು? ರಮಾಬ್ರಹ್ಮಾದಿಗಳಿಂದಲೂ ಸಾಧ್ಯವಿಲ್ಲದ ಅರಿಯಲಸಾಧ್ಯಚರಿತನು. ॥ ೩ ॥

## ಪದ್ಯ-೪

**ಮೂಲ :**

**ನಾದ ಭೋಜನ ಶಬ್ದದೊಳು ಬಿಂ ।**
**ದೋದನೋದಕದೊಳಗೆ ಘೋಷನು ।**
**ವಾದದೊಳು ಶಾಂತಾಖ್ಯ ಜಠರಾಗ್ನಿಯೊಳು ಇರುತಿಪ್ಪ ॥**
**ವೈದಿಕಸುಶಬ್ದದೊಳು ಪುತ್ರ ಸ ।**
**ಹೋದರಾನುಗರೊಳತಿಶಾಂತನ ।**
**ಪಾದಕಮಲನವರತ ಚಿಂತಿಸು ಈ ಪರಿಯಲಿಂದ ॥ ೪ ॥**

**ಅವತರಣಿಕೆ :**

ಭೋಜನಾರಭ್ಯ ಭೋಜನಾಂತರ ಪರ್ಯಂತವಾದ ಬಿಂದು ಘೋಷಾದಿಗಳಲ್ಲಿ ವಿದ್ಯಮಾನನಾಗಿರುವ ಭಗವದ್ರೂಪಗಳ-ಅನುಸಂಧಾನ ವಿಚಾರವನ್ನು ತಿಳಿಸುತ್ತಾರೆ. ॥ ೪ ॥

**ಪ್ರತಿಪದಾರ್ಥ :**

**ನಾದ** = ನಾದನಾಮಕನಾದ ಶ್ರೀಪರಮಾತ್ಮನು, **ಭೋಜನ** = ಭೋಜನ ಮಾಡುವ ಕಾಲದಲ್ಲಿ, **ಶಬ್ದದೊಳು** = ವರ್ಣಾತ್ಮಕ ಶಬ್ದಗಳಲ್ಲಿ, **ಓದನ** = ಪ್ರತಿಯೊಂದು ತುತ್ತಿನಲ್ಲಿ, **ಉದಕದೊಳಗೆ** = ಪಾನ ಮಾಡುವ ನೀರಿನಲ್ಲಿ, **ಬಿಂದು** = ಬಿಂದುಶಬ್ದದಿಂದ ವಾಚ್ಯನಾಗಿ ಇದ್ದಾನೆ. **ಅನುವಾದದೊಳು** = ಭೋಜನಸಮಯದಲ್ಲಿ ಭಗವದ್ಗುಣಗಳನ್ನು ಅನುವಾದ ಮಾಡುವ ಕಾಲದಲ್ಲಿ, **ಘೋಷ** = ಘೋಷನಾಮಕನು ಇದ್ದಾನೆ. **ಜಠರಾಗ್ನಿಯೊಳು** = ಭೋಜ್ಯವಸ್ತುಗಳಲ್ಲಿ ಪಚನಮಾಡುವ ಜಠರಾಗ್ನಿಯಲ್ಲಿ, **ಶಾಂತಾಖ್ಯ** = ಶಾಂತಶಬ್ದವಾಚ್ಯನಾಗಿ, ಪ್ರಸಿದ್ಧನಾದ ಶ್ರೀ ಪರಮಾತ್ಮನು ಇದ್ದಾನೆ. **ವೈದಿಕಸುಶಬ್ದದೊಳು** = ವೈದಿಕಸಂಬಂಧವಾದ ಹರಿನಾಮೋಚ್ಚಾರಣರೂಪವಾದ ಮಾತುಗಳಲ್ಲಿ, **ಪುತ್ರ ಸಹೋದರ ಅನುಜರೊಳು** = ಭೋಜನಕಾಲದಲ್ಲಿ ಸಹಪಂಕ್ತಿಯಲ್ಲಿ ಕುಳಿತಿರುವ

ಮಗ, ಅಣ್ಣ ತಮ್ಮಂದಿರೇ, ಮೊದಲಾದ ಬಂಧುಜನಗಳಲ್ಲಿ, **ಅತಿಶಾಂತನ** = ಅತಿ ಶಾಂತನಾಮಕನಾದ ಶ್ರೀಪರಮಾತ್ಮನನ್ನು ಚಿಂತಿಸ ಬೇಕು. **ಈ ಪರಿಯಿಂದಲಿ** = ಈಕ್ರಮದಿಂದ, **ಅನವರತ** = ಸದಾ ಸರ್ವಕಾಲಗಳಲ್ಲಿ, **ಪಾದಕಮಲವ** = ಶ್ರೀಹರಿಯ ಚರಣಾರವಿಂದ ಗಳನ್ನು, **ಚಿಂತಿಸು** = ಧ್ಯಾನಪೂರ್ವಕ ಚಿಂತನಮಾಡುತ್ತಾರೆಂದು ಹೇಳುತ್ತಾರೆ. ॥ ೪ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಭೋಜನಾರಭ್ಯ ಭೋಜನಾಂತವರಿಗೂ, ಅನುಸಂಧಾನವಿಚಾರ ವನ್ನು ಹೇಳತಾರೆ. ನಾದನಾಮದಿಂದ ವಾಚ್ಯನಾದ ಪರಮಾತ್ಮ, ಭೋಜನ ಮಾಡೋಕಾಲದಲ್ಲಿ, ಬೇಕಾದ ಭೋಜನದ್ರವ್ಯಗಳ ಬೇಡತಕ್ಕ ವರ್ಣಾತ್ಮಕಶಬ್ದದಲ್ಲಿ ಇರೋವನಾಗಿದ್ದಾನೆ. ಭೋಜನಮಾಡತಕ್ಕ ಪ್ರತಿಪ್ರತೀ ತುತ್ತುಗಳಲ್ಲಿ, ಕುಡಿಯುವ ಪ್ರತಿಪ್ರತೀ ಗುಟುಕು ಉದಕದಲ್ಲಿ, ಈ ಎರಡರ ಒಳಗೆ ಬಿಂದುನಾಮದಿಂದ ವಾಚ್ಯನಾದ ಪರಮಾತ್ಮ ಇದ್ದಾನೆ. ಘೋಷನಾಮವಾಚ್ಯನಾದ ಪರಮಾತ್ಮ, ಭೋಜನಕಾಲದಲ್ಲಿ ಭಗವದ್ಗುಣಗಳ ಅನುವಾದ ಮಾಡತಕ್ಕ ಮಾತುಗಳಲ್ಲಿ ಇದ್ದಾನೆ. ಶಾಂತನಾಮದಿಂದ ಪ್ರಸಿದ್ಧನಾದ ಪರಮಾತ್ಮ ದೇಹಗತಅನ್ನಾದಿಗಳ ಪಚನಮಾಡತಕ್ಕ ಜಠರಾಗ್ನಿಯೊಳಗೆ ಇದ್ದಾನೆ. ಭೋಜನದ್ರವ್ಯಗಳಿಂದ ಜಠರಾಗ್ನಿಯನ್ನು ಶಾಂತಮಾಡಿ, ಕ್ಷುತ್ತುನಿವಾರಣೆ ಮಾಡತಾನೆ. ಲೋಕವಾರ್ತೆವ್ಯತಿರಿಕ್ತವಾದ ವೈದಿಕಸಂಬಂಧವಾದ ಭಗವದ್ಭಕ್ತರ ಮಹಿಮಾ, ಹಾಂಗೆ, ಹರಿನಾಮೋಚ್ಚಾರಣರೂಪವಾದ ಸಮೀಚೀನವಾದ ಶಬ್ದದೊಳು, ಭೋಜಕಾಲದಲ್ಲಿ ಸಹಪಙ್ಕ್ತಿ, ಭೋಕ್ತೃಗಳಾದ ಮಗ, ತಮ್ಮ-ಮೊದಲಾದ ಇನ್ನೂ ಇವರ ಅನುಸರಿಸಿದ ಅನೇಕ ಮಂದಿಯಲ್ಲಿ, ಅತಿಶಾಂತನಾಮಕ ಪರಮಾತ್ಮನ್ನ ಅನುಸಂಧಾನದಿಂದ ತಿಳಿಯಬೇಕು. ಈ ಕ್ರಮದಿಂದ ಭಗವದ್ರೂಪಗಳ ತಿಳಿದವನಾಗಿ, ನಿರಂತರ

ಭೋಜನಕಾಲದಲ್ಲಿ, ಭಗವದ್ರೂಪಗಳ ಪಾದಕಮಲವನ್ನು ಚಿಂತನ ಮಾಡುತಾ ಇರಬೇಕಂತ ತಾತ್ಪರ್ಯ. ॥ ೪ ॥

**೨. ಭಾವಪ್ರಕಾಶಿಕೆ :**

ಪರಮಾತ್ಮನು ಪ್ರಣವದಲ್ಲಿ, ಅಂದರೆ, "ಓಂ"–ಎಂಬ ಅಕ್ಷರದಲ್ಲಿ ಇರುವ ಅಕಾರ, ಉಕಾರ, ಮಕಾರಗಳಲ್ಲಿ, ನಾದ, ಬಿಂದು, ಘೋಷ ನಾಮಕನಾಗಿರುವುದಲ್ಲದೆ, ಭೋಜನಾದಿಶಬ್ದಗಳಲ್ಲೂ ಇರುವನೆಂದು ಚಿಂತಿಸಬೇಕು. ಭೋಜ್ಯಶಬ್ದದಲ್ಲಿ ನಾದರೂಪಿಯಾದ ಪರಮಾತ್ಮನನ್ನು, ಅನ್ನೋದಕಗಳಲ್ಲಿ ಬಿಂದುನಾಮಕನನ್ನು, ಶಾಸ್ತ್ರಗಳನ್ನು ಅನುವಾದವಲ್ಲಿ ಘೋಷಾನಾಮಕನನ್ನೂ, ಜಠರಾಗ್ನಿಯಲ್ಲಿ ಶಾಂತರೂಪಿಯನ್ನೂ ವೇದಾಧ್ಯಯನಶಬ್ದದೊಳಗೂ, ಮಕ್ಕಳು, ಅಣ್ಣತಮ್ಮಂದಿರು ಮತ್ತು ತಮ್ಮಿಂದ ಜೀವನ ಮಾಡುತ್ತಿರುವವರು–ಇವರುಗಳಲ್ಲೂ ಅತಿಶಾಂತ ರೂಪಿಯಾದ ಪರಮಾತ್ಮನನ್ನು ತಿಳಿದು, ಸರ್ವಕಾಲದಲ್ಲೂ ಈ ಪ್ರಕಾರವಾಗಿ ಅವ ಪಾದಕಮಲವನ್ನು ಚಿಂತಿಸುತ್ತಿರಬೇಕೆಂದು ತಾತ್ಪರ್ಯ. ನಾದಾಭಿಮಾನೀಕ್ರೋಢಸ್ತು ಭೋಜನಸ್ಥರವೇಷುಚ ॥ ಬಿಂದುಮಾನೀ ವಿಷ್ಣುದೇವೋ ಜಲಾನ್ನನಸಘೋತ್ರವೃತ್ರಭುಃ ॥ ಘೋಷಾನುವಾದ ಶಬ್ದೇಷು ಶಾಂತಾಸ್ಯೋಗರರೇಷ್ಠಿತಃ ॥ ಪುತ್ರಮಿತ್ರ ಕಳತ್ರದೌ ವೇದಶಾಸ್ತ್ರೇಷು ಸರ್ವದಾ ॥ ಅತಿ ಶಾಂತಾಖ್ಯ ಕೃಷ್ಣಸ್ಯ ಪಾದಪದ್ಮಂ ನಿಭೋಷಯ–ಎಂಬ **ಪ್ರಮೇಯ ರತ್ನಾಕರದ** ವಚನವು ಮೇಲಿನವಾಕ್ಯಗಳಿಗೆ ಆಧಾರವು. ॥ ೪ ॥

**೩. ಭಾವದರ್ಪಣ ಟೀಕಾ :**

ಪ್ರಣವಸ್ಥ ಅಷ್ಟಾಕ್ಷರನಾಮಕನಾದಂಥ ಶ್ರೀಹರಿಯ ಅಕಾರ–ಉಕಾರ–ಮಕಾರಾಹ್ವಯನಾದಂಥ ಮೂರು ರೂಪ ಹೊರತು, ನಾದ–ಬಿಂದು–ಘೋಷ–ಶಾಂತ–ಅತಿಶಾಂತ–ಎಂಬ ಪಂಚರೂಪಗಳ ಇರತಕ್ಕ ಅಧಿಷ್ಠಾನ ವಿವರಿಸುತ್ತಾರೆ । ನಾ ದೇತಿ ॥

ಉಕ್ತಂಚ – "ನಾದಾಭಿಮಾನೀ ಕ್ರೋಡಸ್ತು ಘೋಷನಸ್ತರವೇಷುಚ। ಬಿಂದುಮಾನೀ ವಿಷ್ಣುದೇವೋ ಜಲಾನ್ನಸ್ಥೋ ತ್ರಿವೃತ್ರಭಾಃ । ಘೋಷಾಸು ವಾದಶಬ್ದೇಷು ಶಾಂತಾಖ್ಯೋ ಜಠರೇಸ್ಥಿತಃ । ಪುತ್ರಮಿತ್ರಕಳತ್ರಾದೌ ವೇದಶಾಸ್ತ್ರೇಷು ಸರ್ವದಾ । ಅತಿಶಾಂತಾಖ್ಯ ಕೃಷ್ಣಸ್ಯ ಪಾದಪದ್ಮನಿ ಬೋಧಯೇತಿ"–**ಪ್ರಮೇಯರತ್ನಾಕರೇ.** ॥ ೪ ॥

**೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :**

"ಅಕಾರಾದ್ಯತಿಶಾಂತಾಂತಃ ಪ್ರಣವೋಷ್ಟಾಕ್ಷರೋ ಮತಃ ॥" ಇತಿ ತಥಾ ಅನ್ಯತ್ರ ಬ್ರಹ್ಮರುದ್ರಾಂತರ್ಗಸ್ಯ ಅಕಾರೋಕಾರ ವಾಚ್ಯತಾಭಿ ಧಾನಾತ್ ಶಿಷ್ಟಾನಾಂ ಸ್ಥಾನಮಾಹ । "ನಾದ"–ಇತಿ ॥ ನಾದಃ ವೇದಃ॥ ತದ್ವಾಚ್ಯತ್ವಾತ್ । ಪೃಥಿವ್ಯಾಪಾರ ಬಹುತ್ವಾತ್ ಆಧಿಕ್ಯಾಭಿಧಾಯ ಬಿಂದುವಾಚ್ಯಃ । ನಾದೇ ಘೋಷೇತಿ ಶ್ರುತೇಃ ಘೋಷಃ ॥ ಶಾಂತಃ ಹರಿಃ ಯಸ್ಮಾದಸ್ತಿ ಅತಃ ಏವ ನ ದಹ್ಯತೇ ಇತಿ ಗಾತ್ರಮ್ ॥ ಅತಿ ಸುಖದತ್ವಾತ್ ತಥೋಕ್ತಃ ॥ ೪ ॥

## ಕನ್ನಡಾರ್ಥ

"ಅಕಾರ, ಉಕಾರ, ಮಕಾರ, ನಾದ, ಘೋಷ, ಬಿಂದು, ಶಾಂತ, ಅತಿಶಾಂತಗಳೆಂದು ಪ್ರಣವ (ಓಂಕಾರದಲ್ಲಿ) ಎಂಟು ಅಕ್ಷರಗಳಿವೆ"– ಎಂದು ನಿರೂಪಿಸಲಾಗಿದೆ.

ಅಕಾರ, ಉಕಾರಗಳಿಂದ ವಾಚ್ಯನು ಬ್ರಹ್ಮಾಂತರ್ಗತನು ಮತ್ತು ರುದ್ರಾಂತರ್ಗತನು. ಮಿಕ್ಕವುಗಳ ಸ್ಥಾನಗಳನ್ನು ನಿರೂಪಿಸುತ್ತಾರೆ– "ನಾದ" ಎಂಬ ಪದ್ಯದಿಂದ. ಶ್ರೀಪರಮಾತ್ಮನು ವೇದವಾಚ್ಯನು. ಆದರಿಂದ, ನಾದನಾಮಕನು. ಜಡ (ಪೃಥ್ವೀ) ಮತ್ತು ಉದಕಗಳಲ್ಲಿ (ಅಪ್) ಬಿಂದುಶಬ್ದವಾಚ್ಯನಾಗಿದ್ದಾನೆ. ವಾದದಲ್ಲಿ ಘೋಷನಾಮಕನು. ಶಾಂತ ಸ್ವಭಾವದವನಾಗಿ ಶಾಂತನಾಮಕನಾಗಿ ಜಠರಾಗ್ನಿಯಲ್ಲಿದ್ದಾನೆ. ಇದರಿಂದ ದೇಹವು ಸುಟ್ಟುಹೋಗುವುದಿಲ್ಲ. ಅತಿ ಸುಖಪ್ರದನಾದ್ದರಿಂದ, ಅತಿಶಾಂತವಾಚ್ಯನು. ॥ ೪ ॥

## ಶ್ರೀಗುರುಹೃದಯಪ್ರಕಾಶಿಕೆ

ಓಂಕಾರ ಶಬ್ದಗತ ಅ, ಉ, ಮ, ನಾದ, ಬಿಂದು, ಘೋಷ, ಶಾಂತ, ಅತಿಶಾಂತಗಳೆಂಬ ಎಂಟು ಅಕ್ಷರಗಳ ಪೈಕಿ, ಕೊನೆ ಐದು ಅಕ್ಷರಾರ್ಥ ಪ್ರಕಾರಾಂತರ ಭೋಜದಲ್ಲಿ ತಿಳಿಸುತ್ತಾರೆ, ನಾದ–ಎಂದು.

ಭೋಜನಶಬ್ದದಲ್ಲಿ ನಾದಶಬ್ದವಾಚ್ಯ ದೇವರು ಇರುವನು. ಓದನ ವೆಂಬ ಅನ್ನದಲ್ಲೂ, ಉದಕದಲ್ಲೂ ಬಿಂದುನಾಮಕರೂಪನು ಇರುವನು. ಘೋಷನಾಮಕನು ಭೋಜನರುಚಿವರ್ಣನೆ–ಎಂಬ ಅನುವಾದದಲ್ಲಿರು ವನು. ಶಾಂತನಾಮಕನು ಜಠರಾಗ್ನಿಯಲ್ಲಿದ್ದು, ಜೀವರುಗಳಿಗೆ ತೃಪ್ತಿಯನ್ನು ಕೊಡುವನು. ವೈದಿಕ ಸುಶಬ್ದರೊಳು–ಅಂದರೆ, ವೇದ ಶಾಸ್ತ್ರಾದಿ ವಿಚಾರದಲ್ಲೂ, ಪುತ್ರ ಸಹೋದರಾನುಗರೊಳು–ಅಂದರೆ, ಮಗ ಸಹೋದರ ಭೃತ್ಯರೇ–ಮೊದಲಾದವರ ತೃಪ್ತಿಯಲ್ಲೂ, ಅತಿಶಾಂತನಾಮಕ ದೇವರ ಪಾದಕಮಲವನ್ನು ಸದಾ ಈ ಮೇಲೆ ಹೇಳಿದ ರೀತಿಯಿಂದ ಸ್ಮರಿಸಬೇಕೆಂದರ್ಥ. ॥ ೪ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. **ಓಂಕಾರವು**–ತ್ರಿವರ್ಣಾತ್ಮಕವಾದದ್ದು. ಅ–ಕಾರ, ಉ–ಕಾರ ಮತ್ತು ಮ–ಕಾರಗಳಿಂದ ಯುಕ್ತವಾದದ್ದು. ಹಾಗೆಯೇ, ನಾದ, ಬಿಂದು, ಘೋಷ, ಶಾಂತ ಮತ್ತು ಅತಿಶಾಂತಿಗಳೆಂಬ ಪಂಚದಳಗಳು. ಒಟ್ಟನಲ್ಲಿ, ಅಷ್ಟಾಕ್ಷರೀಮಂತ್ರ ಪ್ರತಿಪಾದ್ಯನಾಗಿದ್ದಾನೆ–**ಶ್ರೀಮನ್ನಾರಾಯಣನು.**

೨. ಅ–ಕಾರವಾಚ್ಯನಾಗಿ, ಬ್ರಹ್ಮಾಂತರ್ಗತನಾಗಿದ್ದಾನೆ. ಉ–ಕಾರವಾಚ್ಯನಾಗಿ, ರುದ್ರಾಂತರ್ಗತನಾಗಿದ್ದಾನೆ. ಸ್ವಯಂ ವಿಷ್ಣುರೂಪದಿಂದ ಮ–ಕಾರ ವಾಚ್ಯಗಿದ್ದಾನೆ.

ಪೃಥ್ವಿಯಲ್ಲಿ ಬೆಳೆಯತಕ್ಕ (ಭೂಸಂಬಂಧ) ಧಾನ್ಯಾದಿಗಳ ರೂಪದಲ್ಲಿ ಆಹಾರದ ಪ್ರಾಪ್ತಿ. ಇದು ಅನ್ನ (ಓದನ)ವೆನಿಸುವುದು. ಅಪ್‌ತತ್ತ್ವದಲ್ಲಿ ಉದಕರೂಪದಲ್ಲಿದ್ದಾನೆ.

ಅನ್ನೋದಕಗಳಲ್ಲಿ **ನಾದನಾಮಕನಾಗಿ ನಾದಶಬ್ದ ವಾಚ್ಯನಾಗಿದ್ದಾನೆ.** ಭೋಜನಮಾಡುವ ಕಾಲದಲ್ಲಿ ಅನ್ನವನ್ನು ಭುಂಜಿಸುವಾಗ, ನೀರನ್ನು ಕುಡಿಯುವಾಗ, ಉಂಟಾಗುವ ಶಬ್ದದಲ್ಲಿ **ನಾದವಾಚ್ಯನಾಗಿದ್ದಾನೆ.**

೩. ಭೋಜನರುಚಿವರ್ಣನೆ–ಎಂಬ **ಅನುವಾದದಲ್ಲಿ ಘೋಷ** ನಾಮಕನಾಗಿ ತಚ್ಛಬ್ದವಾಚ್ಯನಾಗಿದ್ದಾನೆ.

೪. ಆಹಾರವನ್ನು ಪಚನಮಾಡುವ **ಜಠರಾಗ್ನಿಯಲ್ಲಿ ಶಾಂತಶಬ್ದ** ವಾಚ್ಯನಾಗಿ, ಶಾಂತನಾಮಕನಾಗಿದ್ದಾನೆ. ಇದರಿಂದಲೇ, ಜಠರಗತಅಗ್ನಿ ಇದ್ದರೂ, ಶರೀರವು ಅದರಿಂದ ಸುಡುವುದಿಲ್ಲ. ಆಹಾರವಸ್ತುಗಳು ಮಾತ್ರ ಪಚನವಾಗುವುದಕ್ಕೆ ಹೇತುರೂಪವಿದು.

೫. ವೇದಶಾಸ್ತ್ರದ ವಿಚಾರಗಳು–**ವೈದಿಕ ಸುಶಬ್ದಗಳು.** ಇಂತಹ ವೈದಿಕ ಸುಶಬ್ದಸಮೂಹದಲ್ಲಿ ಮಕ್ಕಳು (ಪುತ್ರ), ಅಣ್ಣತಮ್ಮಂದಿರು (ಸಹೋದರ), ಇದರಿಂದ ಸಹೋದರಿಯರೂ ಗ್ರಾಹ್ಯಸೇವಕರು (ಅನು)ಇತ್ಯಾದಿ ಬಂಧು–ಬಾಂಧವವರ್ಗದಲ್ಲಿ **ಅತಿಶಾಂತನಾಮಕ** ನಾಗಿದ್ದಾನೆ.

೬. ಈ ಕ್ರಮವಾದ ಜ್ಞಾನಾನುಸಂಧಾನದಿಂದ (ಈ ಪರಿಯಲಿಂದ) ಬ್ರಹ್ಮ, ರುದ್ರ, ವಿಷ್ಣು–ತ್ರಿಮೂರ್ತಿಗಳಲ್ಲಿ, ಅಕಾರ–ಉಕಾರ–ಮಕಾರ ವಾಚ್ಯನಾಗಿಯೂ, ಅನ್ನದಲ್ಲಿ ನಾದಶಬ್ದವಾಚ್ಯನಾಗಿಯೂ, ನೀರಿನಲ್ಲಿ ಬಿಂದುಶಬ್ದವಾಚ್ಯನಾಗಿಯೂ, ಅನುವಾದದಲ್ಲಿ ಘೋಷಶಬ್ದವಾಚ್ಯ ನಾಗಿಯೂ, ಜಠರಾಗ್ನಿಯಲ್ಲಿ ಶಾಂತನಾಮಕನಾಗಿಯೂ, ವೈದಿಕ ಸುಶಬ್ದ ಗಳಲ್ಲಿ ಪುತ್ರಾದಿಗಳಲ್ಲಿ ಅತಿಶಾಂತವಾಚ್ಯನಾಗಿಯೂ ಇರುವ ಅಷ್ಟಾಕ್ಷರ ಮಂತ್ರ ಪ್ರತಿಪಾದ್ಯನಾದ ಶ್ರೀಮನ್ನಾರಾಯಣನ ಚರಣಾರವಿಂದಗಳನ್ನು ಮನಸ್ಸಿನಲ್ಲಿ ನಿರಂತರ ನೆನೆಯುತ್ತಾ, ಚಿಂತಿಸುತಿರಬೇಕೆಂದು ತಿಳಿಸುತ್ತಾರೆ. ॥ ೪ ॥

## ಪದ್ಯ-೫

**ಮೂಲ:**

**ವೇದಮಾನಿ ರಮಾನುಪಾಸ್ಯ ಗು ।**
**ಣೋದಧಿ ಗುಣತ್ರಯ ವಿವರ್ಜಿತ ।**
**ಸ್ವೋದರಸ್ಥಿತ ನಿಖಿಳ ಬ್ರಹ್ಮಾಂಡಾದ್ವಿಲಕ್ಷಣನು ॥**
**ಸಾಧುಸಮ್ಮತವೆನಿಸುತಿಹ ನಿಷು ।**
**ಸೀದ ಗಣಪತಿಯೆಂಬ ಶ್ರುತಿ ಪ್ರತಿ ।**
**ಪಾದಿಸುವನನವರತವನ ಗುಣಪ್ರಾಂತಗಾಣದಲೆ ॥ ೫ ॥**

**ಅವತರಣಿಕೆ :**

ಅಪಾರಮಹಿಮಾಸಂಪನ್ನನಾದ ಶ್ರೀಪರಮಾತ್ಮನ ಮಹಿಮಾ-ವಿಶೇಷಗಳನ್ನು ತಿಳಿಸುತ್ತಾರೆ. ॥ ೫ ॥

**ಪ್ರತಿಪದಾರ್ಥ :**

**ವೇದಮಾನಿ** = ಅನಂತವೇದಗಳಿಗೆ ಅಭಿಮಾನಿಯಾದ, **ರಮಾ** = ಶ್ರೀಲಕ್ಷ್ಮೀದೇವಿಯರಿಂದ, **ಅನುಪಾಸ್ಯ** = ಉಪಾಸನಾಕ್ಕೆ ಮೀರಿದ, ಅಂದರೆ, ಅವರಿಗೂ ಸಾಕಲ್ಯೇನ ಗೋಚರಿಸದ, **ಗುಣೋದಧಿ** =ಅನಂತಕಲ್ಯಾಣಗುಣಗಣಸಮುದ್ರನಾದ, **ಗುಣತ್ರಯವಿವರ್ಜಿತ** =ಪ್ರಾಕೃತಗುಣತ್ರಯಗಳಿಂದ ದೂರನಾದ, **ಸ್ವೋದರಸ್ಥಿತ**= ತನ್ನ ಉದರದಲ್ಲಿ ಇಟ್ಟಂಥ (ಸ್ವ-ಉದರ = ಸ್ವೋದರ) **ನಿಖಿಳ**=ಅನಂತಾನಂತ, **ಬ್ರಹ್ಮಾಂಡಾತ್** = ಬ್ರಹ್ಮಾಂಡಗಳಿಗಿಂತ, **ವಿಲಕ್ಷಣನು** = ಅತ್ಯಂತ ಭಿನ್ನನಾದ, **ಸಾಧುಸಮ್ಮತವು** = ಸಜ್ಜನರಾದ ಭಗವದ್ಭಕ್ತರಿಗೆ ಸಮ್ಮತ ನಾದವನೂ, **ನಿಷುಸೀದ ಗಣಪತೇ** = ನಿಷುಸೀದ ಗಣಪತೇ-ಎಂಬ, **ಶ್ರುತಿ** = ಎಂದು ಹೇಳತಕ್ಕ ವೇದವಾಕ್ಯವು, **ಅನವರತ**=ನಿರಂತರದಲ್ಲೂ, **ಅವನ** = ಆ ಪರಮಾತ್ಮನ, **ಗುಣಪ್ರಾಂತ ಕಾಣದಲೆ**=ಗುಣಸಮೂಹಗಳ ಕೊನೆಯನ್ನು ಕಾಣದೇ, **ಪ್ರತಿಪಾದಿಸುವುದು** = ಆದ್ಯಂತರಹಿತನೆಂದು

ಪ್ರತಿಪಾದನೆಮಾಡುತ್ತಿದೆ. (ಶ್ರೀಪರಮಾತ್ಮನು ವೇದಪ್ರತಿಪಾದ್ಯನು; ಆದರೆ ವೇದಾತೀತನು). ॥ ೫ ॥

## ವ್ಯಾಖ್ಯಾನಗಳು

**೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:**

ಶ್ರೀ ಪರಮಾತ್ಮನ ಮಹಿಮಾವನ್ನ ಹೇಳತಾರೆ. ವೇದಮಾನಿಯಾದ ಲಕ್ಷ್ಮೀದೇವಿಯರಿಂದ ಉಪಾಸನಕ್ಕೆ ಮೀರಿದ ಗುಣವುಳ್ಳವ. ಪ್ರಾಕೃತ ಗುಣತ್ರಯಗಳಿಂದ ಶೂನ್ಯನಾದವ, ತನ್ನ ಉದರಸ್ಥಿತವಾದ ಸಮಸ್ತವಾದ, ಅನಂತಾನಂತ ಬ್ರಹ್ಮಾಂಡಗಳಿಗಿಂತ ಭಿನ್ನನಾಗಿ ವಿಲಕ್ಷಣನಾಗಿ ಇರತಕ್ಕವನು, ಸಜ್ಜನರಾದ ಭಗವದ್ಭಕ್ತರಿಗೆ ಸಮ್ಮತನಾದವನು–ಎಂತಲೂ, **ನಿಷುಸೀದ ಗಣಪತೇ**–ಎನತಕ್ಕ ವೇದವಾಕ್ಯ–ನಿರಂತರದಲ್ಲೂ, ಆ ಪರಮಾತ್ಮನ ಗುಣಅಂತ ಕಾಣದೆ, ಆದ್ಯಂತರಹಿತನೆಂದು ಪ್ರತಿಪಾದನಮಾಡತಾ ಅದೆ. ಅನಂತವೇದಗಳಿಂದ ಇಂಥಾ ಸರ್ವೋತ್ತಮನೆಂದೆನಿಸತಾ, ಸರ್ವರಿಗೂ ಬಂಬಾಗಿ ಇದ್ದಾನೆಂತ ತಾತ್ಪರ್ಯ.

**ವಿಶೇಷಾರ್ಥ**–ಬ್ರಹ್ಮಾಂಡ ಎಂದರೆ,

**ಅಚೇತನಾದ್ಯತತ್ತ್ವಂಡಾತ್ ಬ್ರಹ್ಮ ಸಮಜನಿ ಸ್ಫುಟಂ ।**
**ಅತೋ ಬ್ರಹ್ಮಾಂಡಮಿತ್ಯಾಹುಃ ವಿರಾಟ್ ಬ್ರಹ್ಮ ಪ್ರಕಾಶನಾತ್ ॥**
**–ಇತೀ ಭಾಗವತೇ ತೃತೀಯ ಸ್ಕಂಧೇ**

ನಿಷುಸೀದ ಗಣಪತೇ–ಎಂಬ ಶ್ರುತ್ಯರ್ಥವೂ ಬರೆಯಲ್ಪಡುತ್ತದೆ–

**ನಿಷುಸೀದ ಗಣಪತೇ ಗಣೇಷು ತ್ವಾಮಾಹುರ್ವಿಪ್ರತಮಂಕವೀನಾಮ್।**
**ನ ಋತೇ ತ್ವತ್ಕ್ರಿಯತೇ ಕಿಂಚನಾರೇ ಮಹಾಮರ್ಕಂ ಮಘವನ್ ಚಿತ್ರಮರ್ಚ ॥**

**ಇದಕ್ಕೆ ಅರ್ಥ:–**

ಗಣಪತೇ–ನಮ್ಮ ಇಂದ್ರಿಯಗಳಿಗೆ ಸ್ವಾಮಿಯಾದವನೇ, ಗಣೇಷು ಇಂದ್ರಿಯಸಮೂಹಗಳಲ್ಲಿ, ತ್ವಾಂ–ನಿನ್ನನ್ನೇ (ಜ್ಞಾನಿಗಳಾದವರು),

ವಿಪ್ರತಮಂ–ವಿಶೇಷವಾಗಿ, ಚಂದಾಗಿ ಶ್ರೇಷ್ಠನಾದವನು–ಎಂತ, ಆಹು:– ಹೇಳತಾರೆ. ಕವೀನಾಂ–ಜ್ಞಾನಿಗಳಲ್ಲಿ, ನಿಷುಸೀದ–ವ್ಯಾಪಿಸಿಕೊಂಡಿರುವ ಅಥವಾ ಅಂತರ್ಯಾಮಿಯಾಗಿರುವ, ಮಘವನ್–ಐಶ್ವರ್ಯವಂತನೇ, ನ ಋತೇತ್ವತ್–ನಿನ್ನ ಹೊರತು, ಆರೇ–ದೂರದಲ್ಲಿ ಅದರ, ಸಮೀಪದಲ್ಲಿ ಆದರೂ, ಕಿಂಚನ–ಒಂದು ಕಾರ್ಯವಾದರೂ, ನಕ್ರಿಯತೇ– ಮಾಡಲ್ಪಡೋದಿಲ್ಲ, ಮಹಾಮರ್ಕಂ– ದೊಡ್ಡವನಾದಂಥಾ ಪ್ರಕಾಶರೂಪ ನಾದಂಥಾ, ಚಿತ್ರಂ–ಆಶ್ಚರ್ಯನಾದಂಥ (ತ್ವಮೇವ–ಎಂಬ ಪದ ಅಧ್ಯಾಹಾರ ಮಾಡಿಕೊಂಡು) ನಿನ್ನನ್ನು, ನಿನಗೆ ನೀನೇವೆ ಅರ್ಚ–ಪೂಜಾ ಮಾಡಿಕೋಬೇಕು–ಎಂತ ತಾತ್ಪರ್ಯ. ಇದು ಭಾಗವತ ದಶಮಸ್ಕಂಧ ಉತ್ತರಾರ್ಧ–**ಶ್ರುತಿಗೀತಾ** ಸಪ್ತಮಶ್ಲೋಕ ತಾತ್ಪರ್ಯ. ||೫||

**೨. ಭಾವಪ್ರಕಾಶಿಕೆ :**

ವೇದಾಭಿಮಾನಿಯಾದ ರಮಾದೇವಿಯರಿಂದಲೂ ಸಹ ಪರಮಾತ್ಮನ ಗುಣಗಳನ್ನು ಪಾರ ಕಂಡು ಉಪಾಸನೆ ಮಾಡಲು ಅಸಾಧ್ಯವಾಗಿರುವುದು. ಸತ್ವಾದಿ ಪ್ರಾಕೃತಗುಣಗಳಿಂದ ಬದ್ಧನಾಗದವನು. ತನ್ನ ಉದರದಲ್ಲಿರುವ ಬ್ರಹ್ಮಾಂಡದಿಂದ ವಿಲಕ್ಷಣನು. ಸಕಲಸಜ್ಜನರೂ ಪ್ರಮಾಣವೆಂದು ಅಂಗೀಕರಿಸುತ್ತಿರುವ **ನಿಷುಸೀದಗಣಪತೇ**–ಎಂಬ ಶೃತಿಯು ಪರಮಾತ್ಮನ ಅನಂತಗುಣಗಳನ್ನು ಸ್ತುತಿಸಿ, ಕೊನೆಕಾಣದೆ, ಅನಂತಗುಣ–ಪರಿಪೂರ್ಣನೆಂದು ಸರ್ವದಾ ಸ್ಫುಟವಾಗಿ ಹೇಳುತ್ತಿರು ವುದು. ದಾಸಾರ್ಯರು ಈ ಪದ್ಯದಲ್ಲಿ ಉದಾಹರಿಸಿರುವ ಶೃತಿಯು ನಿಷುಸೀದಗಣಪತೇಸುಣೇಷುತ್ವಾ ಮಾಹುರ್ವಿಪ್ರಥಮಃ ಕವೀನಾಂ|| ನಋತೇ ತ್ವತ್ಕ್ರಿಯತೇ ಕಿಂಚ ನಾರೇ ಮಹಾಮರ್ಕಂ ಮಘವನ್ ಚಿತ್ರಮರ್ಚ–"ಇದರ ತಾತ್ಪರ್ಯ" – ಎಲೈ ಗಣಪತೇ, ಇಂದ್ರಿಯಾಭಿಮಾನಿ ದೇವತೆಗಳ ಗಣಕ್ಕೆ ಅಧಿಪತಿಯೇ! ನಿನ್ನನ್ನು ಜ್ಞಾನಿಗಳು ಇಂದ್ರಿಯಾಭಿಮಾನಿಗಳಲ್ಲಿ ಉತ್ತಮನೆಂದು ಹೇಳುತ್ತಿರುವರು. ನಿನ್ನನ್ನು ಬಿಟ್ಟರೆ, ಯಾವ ಕಾರ್ಯವೂ ಯಾರಿಂದಲೂ ಆಗುವಂತಿಲ್ಲ.

ನೀನು ರಮಾ ಬ್ರಹ್ಮಾದಿ ದೇವತೆಗಳಲ್ಲಿದ್ದು, ನಿನ್ನ ಪೂಜೆಯನ್ನು ನೀನೇ ಮಾಡಿಕೊಳ್ಳುತಿರುವೆ! ಎಲೈ ಶಶ್ವದೇಕಪ್ರಕಾರನಾದ ಐಶ್ವರ್ಯವಂತನೆ! ಅಯೋಗ್ಯರಲ್ಲಿದ್ದು, ಅವರ ದ್ವೇಷಾದಿಗಳನ್ನು ನೀನೆ ಮಾಡಿಸಿಕೊಳ್ಳುವೆ. ಅದು ಅವರಿಗೆ ತಮಸ್ಸಾಧನವು. ಮುಖ್ಯವಾಗಿ ಸಕಲಕರ್ತೃತ್ವವೂ ನಿನ್ನದೇ ಇರುವುದು-ಎಂದು ಶ್ರುತಿಯ ತಾತ್ಪರ್ಯವು. ಶ್ರುತ್ಯರ್ಥಕ್ಕೂ ಈ ಪದ್ಯಾರ್ಥಕ್ಕೂ ಸಂಬಂಧವೇನೆಂದರೆ, ಶ್ರುತಿಯ ಮುಖ್ಯತಾತ್ಪರ್ಯವು ಭಾಗವತ ಶ್ರುತಿಗೀತೆಯ ತಾತ್ಪರ್ಯದಲ್ಲಿ-"ಶ್ರೀಬ್ರಹ್ಮರುದ್ರ ಪೂರ್ತೀಷು ಕ್ರಮಾತ್ಸ್ಥಿತ್ವಾಜನಾರ್ದನಃ॥ ಸ್ವಾತ್ವಾನಮರ್ಚಯತ್ಯದ್ಧಾ ಬಹಿರಂತರ ಸತ್ಕುಚ". ರಮಾ ಬ್ರಹ್ಮಾದಿಗಳಲ್ಲಿದ್ದು, ಕ್ರಮವಾಗಿ ತನ್ನನ್ನು ಪೂಜಿಸಿಕೊಳ್ಳುವನು. ಒಳಗೂ ಹೊರಗೂ ವ್ಯಾಪ್ತನಾಗಿದ್ದು, ಯೋಗ್ಯರಿಂದ ಪೂಜೆಯನ್ನೂ ಅಯೋಗ್ಯರಿಂದ ದ್ವೇಷವನ್ನೂ ತಾನೇ ಮಾಡಿಕೊಡಿಸಿಕೊಳ್ಳುವನೆಂದು-ಈ ಶ್ಲೋಕದ ತಾತ್ಪರ್ಯ. ಶ್ರುತಿಯ ತಾತ್ಪರ್ಯವೂ ಇದೇ ಆಗಿರುವುದು. ಸರ್ವಕರ್ತೃತ್ವವು ಪರಮಾತ್ಮನದು-ಎಂದು ಹೇಳಿದ್ದರಿಂದ, ರಮಾಬ್ರಹ್ಮಾದಿಗಳಿಗಿಂತಲೂ ಉತ್ತಮನೆಂದು ಹೇಳಿದಂತಾಯಿತು. ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡೇ, ದಾಸಾರ್ಯರು ಈ ಶ್ರುತಿಯನ್ನು ಉದಾಹರಿಸಿರುವರೆಂದು ತಿಳಿಯಬೇಕು. ॥ ೫ ॥

**೬. ಭಾವದರ್ಪಣ :**

ಅಮುಖ್ಯತಃ ಕರ್ಮಪ್ರತಿಪಾದನವು । ಮುಖ್ಯತಃ ಬ್ರಹ್ಮರುದ್ರೇಂದ್ರಾದಿ ದೇವತಾ ಪ್ರತಿಪಾದನವು । ಪರಮಮುಖ್ಯತಃ ತದಷ್ಠಾನದಲ್ಲಿದ್ದ ವಿಷ್ಣು ಪ್ರತಿಪಾದನವು ಮಾಡತಕ್ಕದ್ದು ಶ್ರುತಿಸ್ವಭಾವ । ಇಂಥಾದರಲ್ಲಿ ಶ್ರೀಹರಿಗುಣಪ್ರಾಂತಗಾಣದೆ ಗಣಪತಿ ಶ್ರುತಿಯು. ಶ್ರೀಹರಿಯನ್ನ ಸರ್ವೋತ್ತಮತ್ವನ ಪ್ರತಿಪಾದಿಸುತ್ತಾನೆಂದು ಹೇಳುತ್ತಾರೆ । ವೇರೇತಿ॥ "ಅನಂತಗುಣಪೂರ್ಣತ್ವಾದ್ಬ್ರಹ್ಮೇತಿ ಹರಿರುಚ್ಯತೇ"- ಇತಿ ಗರುಡ ಪುರಾಣೇತೇಃ. ॥ ೬ ॥

೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ :

ವೇದ "ಇತಿ॥ ಅನುಪಾಸ್ಯ ಸಾಕಲ್ಯೇನ॥" ತ್ವಚ್ಛ್ರವಣಾದಿ ಪೂಜಾಂ ತ್ವಮೇವ ಕುರು-"ಇತಿ ಭೋದಕ ಚಿತ್ರಪದ ಸತ್ವಾತ್ ಏತದುದಾಹೃತಮ್॥

**ಕನ್ನಡಾರ್ಥ**

"ವೇದಮಾನಿ ರಮಾನುಪಾಸ್ಯ"-ಎಂಬ ಪದಕ್ಕೆ "ವೇದಾಭಿಮಾನಿಯಾದ ರಮಾದೇವಿಯು ಪರಮಾತ್ಮನನ್ನು ಉಪಾಸಿಸುವುದಿಲ್ಲ"-ಎಂದು ಅರ್ಥೈಯಿಸಲಾರದು. ರಮಾದೇವಿಯು ಪರಮಾತ್ಮನನ್ನು ಮಿಕ್ಕವರಿಗಿಂತ ಹೆಚ್ಚಾಗಿ ಉಪಾಸಿಸುತ್ತಾಳೆ. "ಅನುಪಾಸ್ಯ"-ಎಂಬುದಕ್ಕೆ ಅರ್ಥವೇನೆಂದರೆ- "ಸಂಪೂರ್ಣವಾಗಿ ಉಪಾಸಿಸಲು ಶಕ್ತಳಲ್ಲ" ಎಂದರ್ಥ. ಪರಮಾತ್ಮನ ಗುಣಕ್ರಮಾದಿಗಳನ್ನು ಸಂಪೂರ್ಣವಾಗಿ (ಸಾಕಲ್ಯೇನ) ತಿಳಿಯಲು ಸಾಧ್ಯವಿಲ್ಲ. ಸಂಪೂರ್ಣರೂಪವಾದ ಉಪಾಸನೆ ಶ್ರೀರಮಾದೇವಿರಿಂದಲೂ ಸಾಧ್ಯವಿಲ್ಲವೆಂದರ್ಥ.

ಪರಮಾತ್ಮನ ಗುಣಗಳ ರೂಪಗಳನ್ನು (ಅಂತವನ್ನು) ಇಷ್ಟೇ-ಎಂದು ಯಾರೂ ಕಾಣಲು ಸಮರ್ಥರಲ್ಲ. ಇದನ್ನು ತಿಳಿಸಲು- "ನಿಷುಸೀದ"-ಎಂಬ ಶ್ರುತಿವಾಕ್ಯ ಹೊರಟಿದೆ. "ಪರಮಾತ್ಮನೇ ತನ್ನ ವಿಷಯಕವಾದ ಶ್ರವಣ ಮನನ ಧ್ಯಾನ-ಇತ್ಯಾದಿ ರೂಪವಾದ ಪೂಜೆಯನ್ನು ತಾನೇ ಮಾಡಿಕೊಳ್ಳುತ್ತಾನೆ"-ಎಂಬರ್ಥ. ಈ ಅರ್ಥವನ್ನು ತಿಳಿಸುವ "ಚಿತ್ರ"-ಎಂಬ ಪದವಿರುವುದರಿಂದ, ದಾಸರಾಯರು ಈ ಶ್ರುತಿವಾಕ್ಯವನ್ನು ಹೇಳಿರುತ್ತಾರೆ. ॥ ೪ ॥

೪ ಶ್ರೀಗುರುಹೃದಯ ಪ್ರಕಾಶಿಕ :

ಹೀಗೆ, ಸರ್ವಕ್ರಿಯೆಗಳನ್ನೂ ದೇವರು ಸ್ವಪೂಜಾತ್ವೇನ ಆಚರಿಸುತ್ತಿರುವನೆಂದು ಶ್ರುತಿಸಮ್ಮತಿಯನ್ನು ತಿಳಿಸುತ್ತಾರೆ. ವೇದವೆಂದು ಶ್ರೀಹರಿಯು ವೇದಗಳಿಗೆ ಅಭಿಮಾನಿಯಾದ ರಮಾದೇವಿಯಿಂದಲೂ ಸಹ ಉಪಾಸನೆಗೆ ಕಾಣೆಗಾಣದ ಸಾಮ್ಯಸಂಗ ಆನಂದಾದಿ

ಗುಣಗಳುಳ್ಳವನು. ತ್ರಿಗುಣಸಂಬಂಧವರ್ಜಿತನು. ತನ್ನುದರದಲ್ಲಿರುವ ಅನಂತಬ್ರಹ್ಮಾಂಡಕ್ಕೆ ಪೃಥಕ್ಕಾಗಿರುವನು. ಆತನ ಗುಣ ರೂಪ ಕ್ರಿಯೆಗಳನ್ನ ಕೊನೆಗಾಣದೆ, ಸಾಧುಸಮ್ಮತವಾದ–ನಿಷುಸೀದ ಗಣಪತೇ ಗಣೇಷು–ತ್ವಾಮಾಹುರ್ಕವಿನಾಂ–ಎಂಬ ಶ್ರುತಿಯು ಸದಾ ವರ್ಣಿಸುತ್ತಿರುವುದು.

**ನಿಷು...... ಚಿತ್ರಮರ್ಚ**–ಎಂಬ ಶ್ರುತಿಯು, ಇದೇ ಅರ್ಥವನ್ನೇ, (ಈ ಶೃತಿಯ ಪೂರ್ಣಪಾಠವನ್ನು ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ನೋಡುವುದು).

**ಪ್ರಕ್ರಮವತ್ಸ್ವ ಸತ್ಕೃತಂ ಪುರುಷೇಷು ಧೀಷು ತು**
**ಬಹಿರಂತರಸಚ್ಛರಣೇ।**
**ತವ ಪುರುಷವದಂತ್ಯಖಿಳ ಶಕ್ತಿ ಧೃತಃ ಸ್ವಕೃತಂ ॥**
–ಎಂಬ **ಶ್ರುತಿಗೀತೆಯು.**
**ಶ್ರೀ ಬ್ರಹ್ಮ ರುದ್ರ ಪೂರ್ವೇಷು ಕ್ರಮಾತ್ ಸ್ಥಿತ್ವಾ ಜನಾರ್ದನಃ ।**
**ಸ್ವಾತ್ಮಾನಮರ್ಚಯತ್ಯದ್ಧಾ ಬಹಿದಂತರ ಸುತ್ಸ್ವ ಚ ।**
**ಅಸತಾಮಧಮಾಚಾರೋ ಹರಿದೃಷ್ಟ್ಯಾತ್ಮ ಪೂಜನಂ ।**
**ತಸ್ಮಾಧೋಗಮನಾಯೇತಿ ಶ್ರುತಿರಾಹಾಖಿಳ ಕ್ರಿಯಂ ।**
ಎಂಬ ತಂತ್ರ **ಭಾಗವತಾರ್ಥ**– ವಿವರಿಸಿತು. ॥ ೫ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಅನಂತಾನಂತ ವೇದರಾಶಿಗಳಿಗೆ ಅಭಿಮಾನಿಯು ಶ್ರೀ ಲಕ್ಷ್ಮೀದೇವಿಯು. ಅಂತಹ ವೇದಾಭಿಮಾನಿ ರಮಾದೇವಿಗೂ ಸಹ ಪರಮಾತ್ಮನು **ಅನುಪಾಸ್ಯನು.**

**ಅನುಪಾಸ್ಯನೆಂದರೆ** – ಶ್ರೀರಮಾದೇವಿಯು ಪರಮಾತ್ಮನನ್ನು ಉಪಾಸಿಸುವುದಿಲ್ಲ–ಎಂಬ ಅರ್ಥವಲ್ಲ. ಅಪಾರಗುಣಸಂಪನ್ನನಾದ ಶ್ರೀಹರಿಯ ಗುಣ–ರೂಪ–ಕ್ರಿಯಾವಿಶೇಷಗಳನ್ನು ಸಂಪೂರ್ಣವಾಗಿ ಅಂತ ಪರ್ಯಂತ ಅರಿಯಳು. ಸಾಕಲ್ಯೇನ ಅವಳಿಂದಲೂ ಅಸಾಧ್ಯವೆಂದರ್ಥ.

೨. ರಮಾನುಪಾಸ್ಯನಾದ ಶ್ರೀಪರಮಾತ್ಮನು ಅನಂತಕಲ್ಯಾಣಗುಣ ಪರಿಪೂರ್ಣನು. ಗುಣಸಾಗರನು (ಗುಣೋದಧಿ), ಆ ಗುಣೋದಧಿಯು ಸತ್ವ-ರಜ-ತಮಸ್ಸು-ಎಂಬ ಪ್ರಾಕೃತಗುಣಗಳಿಂದ ವಿವರ್ಜಿತನು. (ಗುಣತ್ರಯವಿವರ್ಜಿತ) ಗುಣತ್ರಯವಿವರ್ಜಿತನಾದ ಶ್ರೀಪರಮಾತ್ಮನು ಅಪ್ರಾಕೃತ, ನಿರ್ದೋಷಗಳಾದ, ಅಪರಿಚ್ಛಿನ್ನಗಳಾದ ಜ್ಞಾನಾನಂದಾದಿ ಸ್ವರೂಪನು.

೩. ಆ ವಿಶ್ವಂಭರನ ಉದರದಲ್ಲಿ ಅನಂತಾನಂತ ಬ್ರಹ್ಮಾಂಡ ಕೋಟಿಗಳಿವೆ. ಚರಾಚರಾತ್ಮಕವಾದ ಅನಂತಬ್ರಹ್ಮಾಂಡಗಳನ್ನು ಉದರ ದಲ್ಲಿ ಧರಿಸಿದ್ದಾನೆ. (ಸ್ವೋದರಸ್ಥಿತ ನಿಖಿಳಬ್ರಹ್ಮಾಂಡಗಳು) ಅಂತಹ ಅನಂತಬ್ರಹ್ಮಾಂಡಾಂತರ್ಗತ ಸಕಲಜೀವ ಜಡರಿಂದ ಅತ್ಯಂತಭಿನ್ನನು. (ವಿಲಕ್ಷಣನು). ಜಡ, ಜೀವರಲ್ಲಿ ತದಾಕಾರ, ತನ್ನಾಮಕನಾಗಿ, ತದ್ರೂಪ-ತತ್‌ಶಬ್ದವಾಚ್ಯನಾಗಿದ್ದರೂ, ಅವುಗಳಿಂದ ಅತ್ಯಂತ ವಿಲಕ್ಷಣನು. ಇದು ಶ್ರೀಹರಿಯ ಪರಮವೈಶಿಷ್ಟ್ಯ.

೪. **"ನಿಷುಸೀದ ಗಣಪತೇ"**- ಎಂಬ ಶ್ರುತಿಪಾದ್ಯನು.

**ಶ್ರುತಿಯ ಪೂರ್ಣಪಾಠ :**

ನಿಷುಸೀದ ಗಣಪತೇ ಗಣೇಷು ತ್ವಾಮಾಹುರ್ವಿಪ್ರತಮ್
ಕವೀನಾಮ್ ।
ನಋತೇ ತ್ವತ್ಕ್ರಿಯತೇ ಕಿಂಚನಾರೇ ಮಹಾಮರ್ಕಂ ಮಘವನ್
ಚಿತ್ರಮರ್ಚ॥

**ಈ ಶ್ರುತಿಯ ಅರ್ಥ :**

**ಗಣಪತೇ** = ನಮ್ಮ ಇಂದ್ರಿಯಗಳಿಗೆ ಸ್ವಾಮಿಯಾದವನೇ, **ಗಣೇಷು** =ಇಂದ್ರಿಯಸಮೂಹಗಳಲ್ಲಿ, **ತ್ವಾಂ** = ನಿನ್ನನ್ನು, ವಿಪ್ರತಮಂ= ವಿಶೇಷವಾಗಿ (ಸರ್ವಶ್ರೇಷ್ಠನೆಂದು), **ಆಹುಃ** = ಜ್ಞಾನಿಗಳು ಹೇಳುತ್ತಾರೆ. **ಕವೀನಾಂ** = ಜ್ಞಾನಿಗಳಲ್ಲಿ, **ನಿಷುಸೀದ** = ವ್ಯಾಪಿಸಿಕೊಂಡಿರುವ (ಅಂತರ್ಯಾಮಿಯಾಗಿರುವ) **ಮಘವನ್** = ಐಶ್ವರ್ಯವಂತನೇ, ನ

**ಋತೇ ತ್ವತ್** = ನಿನ್ನ ಹೊರತು, **ಆತೀ** = ದೂರದಲ್ಲಿ ಆದರೂ, ಸಮೀಪದಲ್ಲಿ ಆದರೂ, **ಕಿಂಚನ** = ಒಂದು ಕಾರ್ಯವಾದರೂ, **ನಕ್ರಿಯತೇ** = ಮಾಡಲ್ಪಡುವುದಿಲ್ಲ. **ಮಹಾಮರ್ಕಂ** = ದೊಡ್ಡವನೂ, ಪ್ರಕಾಶರೂಪನೂ ಆದಂಥಾ, **ಚಿತ್ರಂ** = ಆಶ್ಚರ್ಯನಾದಂಥ ನಿನಗೆ, ನಿನ್ನನ್ನು ನೀನೇನೆ, **ಅರ್ಚ** = ಪೂಜಾಮಾಡಿಕೊಳ್ಳುತ್ತೀಯ–ಎಂದು ಶ್ರುತ್ಯರ್ಥವು. ಇದು **ಶ್ರೀಮದ್ಭಾಗವತ ದಶಮಸ್ಕಂಧ ಉತ್ತರಾರ್ಧ ಶ್ರುತಿಗೀತಾ–ಸಪ್ತಮ ಶ್ಲೋಕದ ತಾತ್ಪರ್ಯವು.**

**ಶ್ರುತಿಯ ಭಾವಾನುವಾದ :**

ಹೇ ಪರಮಾತ್ಮನೇ, ನೀನು ಸಕಲಇಂದ್ರಿಯಾಭಿಮಾನಿದೇವತೆಗಳಿಗೆ ನಿಯಾಮಕನಾಗಿರುವೆ. ಅವರಲ್ಲಿ ಅಂತರ್ಯಾಮಿರೂಪದಿಂದ ಸಕಲೇಂದ್ರಿಯವ್ಯಾಪಾರಗಳನ್ನು ಮಾಡಿ, ಮಾಡಿಸುತ್ತಿರುವೆ. ನಿನ್ನನ್ನು ಬಿಟ್ಟರೆ, ಯಾವ ಕಾರ್ಯವೂ ನಡೆಯಲಾರದು. ನೀನು ರಮಾ ಬ್ರಹ್ಮಾದಿ ಸಕಲ ದೇವತಾಂರ್ಗತನಾಗಿದ್ದು, ನಿನ್ನ ಪೂಜೆಯನ್ನು ನೀನೇ ಮಾಡಿಕೊಳ್ಳುತ್ತಿರುವೆ. ನೀನು ಶಶ್ವದೇಶಪ್ರಕಾರವಾದ ಪರಮೈಶ್ವರ್ಯ ವಂತನು. ಅಯೋಗ್ಯರಲ್ಲಿದ್ದು, ದ್ವೇಷಸಾಧನೆ ಮಾಡಿಸುವೆ. ಅದು ಅವರಿಗೆ ತಮಸ್ಸಿಗೆ ಸಾಧನವಾಗುವುದು. ಸಕಲಕರ್ತೃತ್ವವೂ ನಿನ್ನಾಧೀನ.

೫. ಸದಾ ಸರ್ವಕಾಲಗಳಲ್ಲಿ, ಶ್ರೀಹರಿಯು ಪ್ರಸಕ್ತ ಶ್ರುತಿಪ್ರತಿಪಾದ್ಯನಾಗಿದ್ದಾನೆ. ತನ್ನ ಪೂಜೆಯನ್ನು ತಾನೇ ಮಾಡಿಕೊಳ್ಳುವ ಸ್ವರಮಣನೂ, ಆಪ್ತಕಾಮನೂ ಆದ ಆ ಸರ್ವೇಶ್ವರನ ಗಣಸಮೂಹಗಳ ಪ್ರಾಂತವನ್ನು, ಅಂದರೆ, ಕೊನೆಯನ್ನು ರಮಾಬ್ರಹ್ಮಾದಿಗಳು ಸಾಕಲ್ಯೇನ ಕಾಣರು ಮತ್ತು ಅರಿಯರು. ಇನ್ನಿತರರ ಪಾಡೇನು? ॥ ೫ ॥

## ಪದ್ಯ-೬

**ಮೂಲ :**

**ಕರೆಸುವನು ಮಾಯಾರಮಣ ತಾ ।**
**ಪುರುಷರೂಪದಿ ತ್ರಿಸ್ಥಳಗಳೊಳು ।**
**ಪರಮ ಸತ್ಪುರುಷಾರ್ಥದ ಮಹತ್ತತ್ತ್ವದೊಳಗಿದ್ದು ॥**
**ಸರಸಿಜಭವಾಂಡಸ್ಥಿತ ಸ್ತ್ರೀ ।**
**ಪುರುಷ ತನ್ಮಾತ್ರಗಳ ಏಕೋ ।**
**ತ್ತರದಶೇಂದ್ರಿಯಗಳ ಮಹಾಭೂತಗಳ ನಿರ್ಮಿಸಿದ ॥ ೬ ॥**

**ಅವತರಣಿಕೆ :**

ಅಂಡದ ಹೊರಗೆ ಶ್ರೀಪರಮಾತ್ಮನು ನಿರ್ಮಿಸಿದ ಸೃಷ್ಟಿರೂಪವಾದ ತತ್ತ್ವಗಳ ವಿಚಾರವನ್ನು ತಿಳಿಸುತ್ತಾರೆ. ॥ ೬ ॥

**ಪ್ರತಿಪದಾರ್ಥ :**

**ಪುರುಷ** = ಪುರುಷಶಬ್ದವಾಚ್ಯನಾದ, **ಮಾಯಾರಮಣ** = ಮಾಯಾಪತಿಯಾದ ಶ್ರೀವಾಸುದೇವನು, **ತಾ** = ತಾನು, **ರೂಪದಿ** = ಸೃಷ್ಟಿಗೆ ಕಾರಣವಾದ ರೂಪವಿಶೇಷದಿಂದ, **ತ್ರಿಸ್ಥಳಗಳೊಳು** = ಶ್ವೇತದ್ವೀಪ, ಅನಂತಾಸನ, ವೈಕುಂಠ-ಎಂಬ ಮೂರು ಸ್ಥಾನಗಳಲ್ಲಿ, **ಪರಮ** = ಅತ್ಯಂತ ಶ್ರೇಷ್ಠವಾದ, **ಸತ್ಪುಷಾರ್ಥದ** = ಪುರುಷಾರ್ಥಗಳನ್ನು ಕೊಡುವವನು. **ಮಹತ್ತತ್ತ್ವದೊಳಗೆ ಇದ್ದು** = ಮಹತ್ತತ್ತ್ವದಲ್ಲಿ ವಿದ್ಯಮಾನನಾಗಿದ್ದು, ತದ್ವಾರಾ, ವೈಕಾರಿಕ, ತೈಜಸ, ತಾಮಸ ಭೇದದಿಂದ ಅಹಂಕಾರತತ್ತ್ವವನ್ನು ಸೃಷ್ಟಿಸಿ, ತದ್ವಾರಾ, **ಏಕೋತ್ತರ ದಶೇಂದ್ರಿಯಗಳ** = ವೈಕಾರಿಕ ಅಹಂಕಾರದಿಂದ ಮನಸ್ಸು, ತೈಜಸಾಂಹಾಂಕಾರದಿಂದ ಪಂಚ ಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು - ಅಲ್ಲಿಗೆ ಹನ್ನೊಂದು

ಇಂದ್ರಿಯಗಳು, **ತನ್ಮಾತ್ರ ಮಹಾಭೂತಗಳು** = ತಾಮಸಾಂಹಕಾರದಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚ ತನ್ಮಾತ್ರೆಗಳು, ತನ್ಮೂಲಕ ಆಕಾಶ, ವಾಯು, ತೇಜಸ್ಸು, ಅಪ್, ಪೃಥ್ವೀ–ಎಂಬ ಪಂಚಭೂತಗಳನ್ನು, **ಸರಸಿಜಭವಾಂಡಸ್ಥಿತ** = ಬ್ರಹ್ಮಾಂಡದಲ್ಲಿ ಒಳಗೆ ಹೊರಗೆ ಇದ್ದು, **ಸ್ತ್ರೀಪುರುಷ** = ಸ್ಥೂಲದೇಹಗಳಿಂದ ಮುಕ್ತರಾದ ಸ್ತ್ರೀಪುರುಷ ಜೀವರಾಶಿಗಳನ್ನು, **ನಿರ್ಮಿಸಿದ** = ಸೃಷ್ಟಿ ಮಾಡಿದನು. ॥ ೬ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮ ಅಂಡದ ಹೊರಗೆ ಸೃಷ್ಟಿರೂಪವಾದ ಮಹಾತ್ಮೆಗಳ ಹೇಳತಾರೆ.

ಪುರುಷಶಬ್ದವಾಚ್ಯನಾದ, ಮಾಯಾನಾಮಕ ಲಕ್ಷ್ಮೀದೇವರಿಗೆ ಪತಿಯಾದ ಶ್ರೀವಾಸುದೇವರೂಪಿಯಾದ ತಾನು ಸೃಷ್ಟಿಗೆ ಕಾರಣನಾದ ವಾಸುದೇವರೂಪ ವ್ಯತಿರಿಕ್ತವಾದ, ಶ್ವೇತದ್ವೀಪಗತ ವಾಸುದೇವರೂಪ ದಿಂದ, ಮುಕ್ತಿಯೋಗ್ಯರಾದ ಲಿಂಗಭಂಗರಾದ ಪ್ರಾಣಿಗಳ ಇಚ್ಛಾವರಣ ಅಪಸರಣ ಮಾಡಿ, ಆವರವರ ಸ್ವರೂಪಾನಂದ ವ್ಯಕ್ತಮಾಡಿ, ಭೋಗಕ್ಕೆ ಕೊಡತಕ್ಕವನೆಂದು ಕರೆಸುವನು. ಈ ಪ್ರಕಾರ ಕರೆಸಿ, ಇಚ್ಛಾವರಣ ಅಪಸರಣ ಮಾಡಿ, ಭಗವದ್ಭಕ್ತರಾದ ಸಜ್ಜನರಿಗೆ ಶ್ವೇತದ್ವೀಪ, ಅನಂತಾಸನ, ವೈಕುಂಠ–ಈ ಮೂರು ಸ್ಥಾನಗಳೊಳು ಅತ್ಯಂತ ಶ್ರೇಷ್ಠವಾದ ಪ್ರಯೋಜನಗಳಾದ ನಾನಾ ಪ್ರಕಾರ ಮುಕ್ತವಿಹಾರ ಪ್ರಯೋಜನಗಳನ್ನು ಕೊಡತಕ್ಕವನು. ಎರಡನೇದಾದ ಪುರುಷಸಾಂಕೇತವಾದ, ಸೃಷ್ಟಿಗೆ ಕಾರಣವಾದ ನಾರಾಯಣ ರೂಪದಿಂದ ಅಭಿವ್ಯಕ್ತವಾದ ವಾಸುದೇವ ರೂಪದಿಂದ, ಮಹತ್ತತ್ವದೊಳಗಿದ್ದು, ತದ್ದ್ವಾರಾ, ವೈಕಾರಿಕ, ತೈಜಸ,

ತಾಮಸಭೇದದಿಂದ ಯುಕ್ತವಾದ ಅಹಂಕಾರತತ್ವ ಸೃಜಿಸಿ, ಆ ಅಹಂಕಾ
ತತ್ವದ್ವಾರಾ, ಹನ್ನೊಂದು ಇಂದ್ರಿಯಗಳ-ಎಂದರೆ, ವೈಕಾರಿಕ ಅಹಂಕಾ
ದಿಂದ ಮನೋಇಂದ್ರಿಯ, ತೈಜಸ ಅಹಂಕಾರದಿಂದ ಪಂ
ಜ್ಞಾನೇಂದ್ರಿಯಗಳು-ಪಂಚಕರ್ಮೇಂದ್ರಿಯಗಳು, ತಾಮಸ ಅಹಂಕಾ
ದಿಂದ ಶಬ್ದ ಸ್ಪರ್ಶ ರೂಪ ರಸ ಗಂಧ-ಎಂಬ ಪಂಚತನ್ಮಾತ್ರಗಳು
ತದ್ವಾರಾ, ಪೃಥಿವ್ಯಾದಿ ಪಂಚಮಹಾಭೂತಗಳು. ಪೂರ್ವೋಕ್ತ ಅಹಂಕಾ
ತತ್ವದಿಂದ ಸೃಷ್ಟವಾದ ಪಂಚಮಹಾಭೂತಗಳಿಂದ ಬ್ರಹ್ಮಾಂಡದ ಒಳಗೆ
ಹೊರಗೆ ವಿದ್ಯಮಾನಗಳಾದ ಸ್ಥೂಲದೇಹದಿಂದ ಸಹಿತರನ್ನಾಗಿ ಸ್ತ್ರೀಪುರು
ಜೀವರುಗಳ ನಿರ್ಮಾಣ ಮಾಡೋವನಾದ.

**ವಿಶೇಷಾರ್ಥ :**

ವಾಸುದೇವರೂಪದಿಂದ ಮಹತ್ತತ್ವ ಸೃಷ್ಟಿ, ತದ್ವಾರಾ
ಅಂಕಾರತತ್ವ. ಸಂಕರ್ಷಣರೂಪದಿಂದ ಪಂಚಮಹಾಭೂತಗಳ ಸೃಷ್ಟಿ
ಪ್ರದ್ಯುಮ್ನರೂಪದಿಂದ ಅಂಡದ ಹೊರಗೆ ಅರ್ಧನಾರೀ ರೂಪನಾಗಿ
ಎಡಭಾಗವಾದ ಅರ್ಧನಾರೀ ರೂಪದಿಂದ ಸ್ತ್ರೀಯರ, ಬಲಭಾಗವಾದ
ಅರ್ಧ ಪುರುಷರೂಪದಿಂದ ಪುರುಷರ ಸೃಷ್ಟಿ ಮಾಡಿ, ಅನಿರುದ್ಧ
ರೂಪದಿಂದ ಬ್ರಹ್ಮಾಂಡಾಂತರ್ಗತ ಸ್ತ್ರೀಪುರುಷರುಗಳಿಗೆ ಸ್ಥೂಲದೇಹಗ
ಕೊಡೋವನಾದ ಎಂತ ತಾತ್ಪರ್ಯ. ॥ ೬ ॥

**೨. ಭಾವಪ್ರಕಾಶಿಕೆ**

ಮಾಯಾನಾಮಕಳಾದ ಲಕ್ಷ್ಮೀಪತಿಯಾದ ಶ್ರೀವಾಸುದೇವನು
ಶ್ವೇತದ್ವೀಪ, ಅನಂತಾಸನ, ವೈಕುಂಠವೆಂಬ ಮೂರು ಸ್ಥಳಗಳಲ್ಲಿದ್ದು
ಮುಕ್ತಜನರಿಗೆ ಸಕಲಪುರುಷಾರ್ಥಗಳನ್ನು ಕೊಡುವನು. ಸೃಷ್ಟಿಕಾಲದಲ್ಲಿ
ಪುರುಷರೂಪವನ್ನು ಸ್ವೀಕರಿಸಿ, ಮಹತ್ತತ್ವದೊಳಗಿದ್ದು, ಬ್ರಹ್ಮಾಂಡ
ದೊಳಗಿರುವ ಸ್ತ್ರೀಯರು, ಪುರುಷರು, ಮೊದಲಾದವರನ್ನು ಮನಸ್ಸಿ

ಜ್ಞಾನೇಂದ್ರಿಯಗಳು ೫, ಕರ್ಮೇಂದ್ರಿಯಗಳು ೫, ಪಂಚಮಹಾ ಭೂತಗಳು, ೫, ತನ್ಮಾತ್ರಾಗುಣಗಳನ್ನು ಸೃಷ್ಟಿಸಿದನು. ಈ ಪದ್ಯಕ್ಕೆ ಪ್ರಾಕಾರಾಂತರವೂ ಅರ್ಥವಾಗುವುದು. ಪರಮಾತ್ಮನು ಮೂರುಸಲ ಮೂರು ಪುರುಷ ರೂಪಗಳನ್ನು ಸ್ವೀಕರಿಸಿರುವನು. ಮೊದಲು ಮಾಯಾ ನಾಮಕರಾದ ಲಕ್ಷ್ಮೀದೇವಿಯರಲ್ಲಿ ಪುರುಷನಾಮಕನಾಗಿ ವೀರ್ಯದಾನ ಮಾಡಿದನೆಂದು ಭಾಗವತ ವಾಕ್ಯವಿರುವುದು. ಎರಡನೆಯ ಪುರುಷ ರೂಪವು ಬ್ರಹ್ಮದೇವರಿಗೆ ಶರೀರಭೂತವಾದ ಮಹತ್ತತ್ವದಲ್ಲೂ ಬ್ರಹ್ಮಾಂಡದಲ್ಲೂ ಇದ್ದರೂಪವು. ಆ ರೂಪದಿಂದಲೇ ಇಂದ್ರಿಯಾದಿಗಳ ಸೃಷ್ಟಿ–ಎಂದು ತಾತ್ಪರ್ಯ. ॥ ೬ ॥

**೩. ಭಾವದರ್ಪಣ:**

ಕರೆಸುವನು । ವ್ಯಾಖ್ಯಾನ । ತ್ರಿಸ್ಥಲೇತಿ । ಶ್ವೇತದ್ವೀಪಾನಂತಾಸನ ವೈಕುಂಠ–ಎಂಬುದೇ ಉಕ್ತಂಚ । "ತ್ರೀಣಿ ಧರ್ಮಾಣಿ ವೈ ವಿಷ್ಣೋ ಸ್ತ್ರೀಲೋದಾದ್ಧರಿರೇವ ಇತಿ" ॥ **ಛಾಂದೋಗ್ಯ ।** ಈತನೇ ತನ್ಮಂದ್ರಿಯ ಭೂತಗಳನ್ನು ನಿರ್ಮಾಣ ಮಾಡಿ, ತಂದತರ್ಯಾಮಿಯಾಗಿ ಇರುವ ನೆಂದು ತಾತ್ಪರ್ಯ. ॥ ೬ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ–**

"ಕರೆಸುವನು"–ಇತಿ ॥ "ತ್ರಿಃ"–"ತ್ರಿಸ್ಥಲ"–ಮಹದಂಡಸರ್ವೇಷು॥ ಉಕ್ತಂ ಸ್ಮಾರಿತಂ ಮಾತ್ರ ರೂಪಾದಿ ॥ ೬ ॥

## ಕನ್ನಡಾರ್ಥ

ಮಹತ್ತತ್ತ್ವ – ಬ್ರಹ್ಮಾಂಡ – ಸರ್ವರು – ಹೀಗೆ ಮೂರುಸ್ಥಳಗಳು. ಶ್ರೀಪರಮಾತ್ಮನು ಪುರುಷನಾಮಕನಾಗಿ ಅವತರಿಸಿ, ಶ್ರೀಮಾಯನಾಮಕ ಲಕ್ಷ್ಮೀದೇವಿಯಲ್ಲಿ ವೀರ್ಯದಾನ ಮಾಡಿದನು. ಅನಂತಪ್ರಕೃತಿಯಲ್ಲಿ ಗುಣವೈಷಮ್ಯದ್ವಾರಾ, ಬ್ರಹ್ಮದೇವರದೇಹವಾದ ಮಹತ್ತತ್ತ್ವವನ್ನು

ನಿರ್ಮಿಸಿದನು. ಅದರಲ್ಲಿ ವಿದ್ಯಮಾನನಾಗಿದ್ದು, ನಂತರ ಬ್ರಹ್ಮಾಂಡವನ್ನು ನಿರ್ಮಿಸಿ, ಅದರಲ್ಲಿ ಅಂತಸ್ಥಿತನಾಗಿದ್ದು, ಇಂದ್ರಿಯಾದಿಗಳನ್ನು ಸೃಷ್ಟಿಸಿದನು. ॥ ೬ ॥

**೧. ಶ್ರೀಗುರುಹೃದಯಪ್ರಕಾಶಿಕೆ :**

ಮೂರನೇ ಸಂಧಿಯಲ್ಲಿ ಹೇಳಿದ **ಪುರುಷರೂಪತ್ರಯವನ್ನು** ಎರಡು ಪದ್ಯದಿಂದ ವಿವರಿಸುತ್ತಾರೆ-ಕರೆಸುವನು-ಎಂದು.

ಮಾಯಾರಮಣನಾದ ವಾಸುದೇವನು ಮಹತ್ತತ್ವನಿರ್ಮಾಣ ಮಾಡಿದ ಪುರುಷರೂಪ ಒಂದು, ಪರಮಪುರುಷಾರ್ಥ ಕೊಡುವ ಮಹತ್ತತ್ವದೊಳಗೆ ಇರುವುದು ಒಂದು, ಸರಸಿಜಭವಾಂಡವೆಂಬ ಬ್ರಹ್ಮಾಂಡದೊಳಗಿರುವ ಮತ್ತೊಂದು ಪುರುಷರೂಪದಿಂದ ಸ್ತ್ರೀಪುರುಷ ದೇಹಗಳನ್ನು, ಶಬ್ದ, ಸ್ಪರುಷ, ರೂಪ, ರಸ, ಗಂಧವೆಂಬ ಪಂಚತನ್ಮಾತ್ರೆಗಳನ್ನು, ಆಕಾಶಾದಿ ಪಂಚಮಹಾಭೂತಗಳನ್ನು, ಮನಸ್ಸು-ಮೊದಲಾದ ಹನ್ನೊಂದು ಕರಣಗಳನ್ನು ನಿರ್ಮಾಣ ಮಾಡಿದ್ದು ಒಂದು. ॥ ೬ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಮಾಯಾರಮಣನಾದ ವಾಸುದೇವರೂಪೀ ಶ್ರೀಪರಮಾತ್ಮನು ಪುರುಷರೂಪಾತ್ಮಕನು. ಇಂತಹ ಪುರುಷರೂಪಗಳು ಮೂರು ಪ್ರಕಾರ :- (೧) ಮಾಯನಾಮಕಳಾದ ಶ್ರೀಲಕ್ಷ್ಮೀದೇವಿಯರಲ್ಲಿ ವೀರ್ಯಪಾತ ಮಾಡಿ, ಸೂಕ್ಷ್ಮಸೃಷ್ಟಿಯಲ್ಲಿ ಮಾಯಾದ್ವಾರಾ ವಿರಿಂಚಿನಾಮಕರಾದ ಬ್ರಹ್ಮದೇವರ ಸೃಷ್ಟಿ. (೨) ಬ್ರಹ್ಮದೇವರ ಶರೀರವಾದ ಮಹತ್ತತ್ವ ನಿರ್ಮಿಸಿದ ಪುರುಷರೂಪ. (೩) ಸೃಷ್ಟರಾದ ಸಕಲಜೀವರ ಸ್ಥೂಲದೇಹ ವ್ಯಾಪ್ತ ಪುರುಷರೂಪ. (ಬಹಿಃಬ್ರಹ್ಮಾಂಡರೂಪ-ಬ್ರಹ್ಮಾಂಡತರ್ಗತ ರೂಪ-ಜೀವನ ದೇಹವ್ಯಾಪಕರೂಪ).

೨. ಮಾಯಾರಮಣನಾದ ಪುರುಷನಾಮಕವಾಸುದೇವನಿಂದ ಮಹತ್ತತ್ವಸೃಷ್ಟಿ. ತದ್ವಾರಾ, ಅಹಂಕಾರತತ್ವಸೃಷ್ಟಿ.

ತಾಮಸಾಂಹಕಾರದಿಂದ ಜಯಾಪತಿಸಂಕರ್ಷಣನಿಂದ, ತನ್ಮಾತ್ರಾ ಸಹಿತ ಪಂಚಮಹಾಭೂತಗಳ ಸೃಷ್ಟಿ.

ಪ್ರದ್ಯುಮ್ನರೂಪದಿಂದ ಅಂಡದ ಹೊರಗೆ ಅರ್ಧನಾರೀರೂಪದಿಂದ ಎಡಪಾರ್ಶ್ವ ದ್ವಾರಾ, ಸ್ತ್ರೀಯರ ಸ್ಥೂಲಶರೀರಗತ ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳ ಸೃಷ್ಟಿ. (ತೈಜಸಾಹಂಕಾರದಿಂದ). ಬಲಪಾರ್ಶ್ವದ್ವಾರಾ, ಸಕಲ ಪುರುಷರ ಸ್ಥೂಲದೇಹನಿರ್ಮಾಣ.

೩. ಶ್ವೇತದ್ವೀಪಗತ ವಾಸುದೇವನೇ ಮೋಕ್ಷಪ್ರದನು. ಈ ಅಭಿಪ್ರಾಯವನ್ನು ದಾಸರಾಯರು **ಪರಮಸತ್ಪುರುಷಾರ್ಥಪ್ರದ**–ವೆಂದು ಹೇಳಿದ್ದಾರೆ. ಪರಮ–ಅಂದರೆ, ಶ್ರೇಷ್ಠವಾದ ಸತ್ಪುರುಷಾರ್ಥ–ಎಂದರೆ, ಮೋಕ್ಷ. ಅದನ್ನು ಕೊಡುವವನಾದ್ದರಿಂದ, "ಪ್ರದ"ನು.

೪. ಪುರುಷನಾಮಕ ವಾಸುದೇವನು ಮಹತತ್ತ್ವವನ್ನು ನಿರ್ಮಿಸಿ, ಅದರಿಂದ ಬ್ರಹ್ಮದೇವರ ದೇಹಸೃಷ್ಟಿ (**ಮಹತತ್ತ್ವದೊಳಿದ್ದು**) ಆ ಮಹತತ್ತ್ವಸ್ಥಿತನಾಗಿರುವ ವಾಸುದೇವನು ಬ್ರಹ್ಮಾಂಡಾಂತರ್ಗತನಾಗಿದ್ದಾನೆ. (**ಸರಸಿಜಭವಾಂಡ ಸ್ಥಿತಿ**– ಸರಸಿಜ– ನೀರಿನಲ್ಲಿ ಹುಟ್ಟಿದ ಕಮಲ. ಸರಸಿಜಭವ – ಪದ್ಮನಾಭನನಾಭೀಕಮಲಸಂಜಾತರಾದ ಶ್ರೀಬ್ರಹ್ಮದೇವರು. ಅಂಡಸ್ಥಿತ–ಬ್ರಹ್ಮಾಂಡಾಂತರ್ಗತರೂಪ).

೫. ಬ್ರಹ್ಮಾಂಡಾಂತರ್ಗತನಾದ ಶ್ರೀವಾಸುದೇವನು ಪುರುಷರೂಪದಿಂದ ಸ್ತ್ರೀ ಪುರುಷರಾದ ಸಕಲಜೀವರ ಸೃಷ್ಟಿಯಲ್ಲಿ ಅಹಂಕಾರತತ್ತ್ವದ ತ್ರಿದಳಗಳಿಂದ ವೈಕಾರಿಕಾದಿ ಅಹಂಕಾರದಿಂದ, ದೇವತೆಗಳ ಸ್ಥೂಲದೇಹ, ಸರ್ವಜನರ ಮನಸ್ಸಿನ ಸೃಷ್ಟಿ ಮಾಡಿದನು.

೬. ತೈಜಸಾಹಂಕಾರದಿಂದ ಸರ್ವಜನರ ಸ್ಥೂಲದೇಹಗಳ ಪಂಚಜ್ಞಾನೇಂದ್ರಿಯಗಳು.

## ಪದ್ಯ-೭

**ಮೂಲ:-**

**ಈ ಶರೀರಿಗೆ ಪುರುಷ ತ್ರಿಗುಣದಿ ।**
**ಶ್ರೀಸಹಿತ ತಾನಿದ್ದು ಜೀವರಿ ।**
**ಗಾಶ ಲೋಭಾಜ್ಞಾನ ಮದ ಮತ್ಸರ ಕುಮೋಹ ಕ್ಷುಧ ॥**
**ಹಾಸ ಹರುಷ ಸುಷುಪ್ತಿ ಸ್ವಪ್ನ ಪಿ ।**
**ಪಾಸ ಜಾಗ್ರತಿ ಜನ್ಮ ಸ್ಥಿತಿ ಮೃತಿ ।**
**ದೋಷ ಪುಣ್ಯ ಜಯಾಪಜಯ ದ್ವಂದ್ವಗಳ ಕಲ್ಪಿಸಿದ ॥ ೭ ॥**

**ಅವತರಣಿಕೆ :-**

ಬ್ರಹ್ಮಾಂಡದಲ್ಲಿ ಸೃಷ್ಟರಾದ ಜೀವರಿಗೆ ಸ್ಥೂಲದೇಹಗಳ ದ್ವಾರಾ ಶ್ರೀ ಪರಮಾತ್ಮನು ಅವರವರ ಅನುಭವಕ್ಕೆ ತಂದೀಯುವ ಭೋಗಾದಿ ವಿಷಯಗಳನ್ನು ತಿಳಿಸುತ್ತಾರೆ. ॥ ೭॥

**ಪ್ರತಿಪದಾರ್ಥ:-**

**ಈ ಶರೀರಿಗೆ** = ಸ್ಥೂಲದೇಹಧಾರಿಯಾದ ಜೀವನಿಗೆ, **ತ್ರಿಗುಣದಿ** = ತ್ರಿಗುಣಾತ್ಮಕಲಿಂಗಶರೀರದಲ್ಲಿ ತ್ರಿಗುಣಗಳಜನ್ಯವಾದಕರ್ಮ ರೂಪದಲ್ಲಿ ರುವ ಆಶಲೋಭಾದಿಗಳಲ್ಲಿ, **ಪುರುಷ** = ಪುರುಷನಾಮಕ ಶ್ರೀವಾಸುದೇವನು, **ಶ್ರೀಸಹಿತ** = ತನ್ನ ಪತ್ನಿಯಾದ ಮಾಯಾದೇವಿ ಯಿಂದ ಕೂಡಿಕೊಂಡು, **ತಾನಿದ್ದು** = ಸ್ಥೂಲದೇಹಗತ ಇಂದ್ರಿಯ ಗಳಲ್ಲಿಯೂ ಮತ್ತು ವಿಷಯಾದಿಗಳಲ್ಲಿಯೂ ತಾನೇ ವಿದ್ಯಮಾನನಾಗಿದ್ದು, **ಜೀವರಿಗೆ** = ಶರೀರಿಯಾದ ಜೀವರಾಶಿಗಳಿಗೆ, **ಆಶ** = ವಿಷಯಗಳಲ್ಲಿ ಅಪೇಕ್ಷೆ, **ಲೋಭ** = ವಿಷಯಾದಿಗಳಿಗೆ ಅಂಟಿಕೊಂಡಿರುವ ಲೋಭತನ, **ಅಜ್ಞಾನ** = ಅಜ್ಞಾನ (ಶ್ರೀಶನ ವಿಸ್ಮರಣೆ), **ಮದ** = ಕೊಬ್ಬು (ಅಹಂಕಾರ), **ಮತ್ಸರ** = ಹೊಟ್ಟೆಕಿಚ್ಚಿನ ಬುದ್ಧಿ, **ಕುಮೋಹ** = ನಶ್ವರ

ವಸ್ತುಗಳಲ್ಲಿ ಕೆಟ್ಟ ಮೋಹ (ದುರಭಿಮಾನ). **ಕ್ಷುಧ** = ಹಸಿವೆ. **ಹಾಸ** = ನಗು. **ಹರುಷ** = ಸಂತೋಷ, (ಎಲ್ಲವೂ ಕ್ಷಣಿಕ) **ಸುಷುಪ್ತಿ** = ಗಾಢನಿದ್ರಾವಸ್ಥೆ, **ಸ್ವಪ್ನ** = ಸ್ವಪ್ನಾವಸ್ಥೆ, **ಪಿಪಾಸ** = ಬಾಯಾರಿಕೆ, **ಜಾಗ್ರತಿ** = ಎಚ್ಚರದಸ್ಥಿತಿ, **ಜನ್ಮ** = ಜನನ (ನಾನಾಜನ್ಮಗಳು) **ಸ್ಥಿತಿ** = ಬದುಕು, **ಮೃತಿ** = ಮರಣ, **ದೋಷ** = ನಾನಾವಿಧವಾದ ದೋಷಜನ್ಯ ಪಾಪಗಳು. **ಪುಣ್ಯ** = ಪುಣ್ಯ ಕಾರ್ಯಗಳು ಮತ್ತು ತತ್ಫಲ, **ಜಯ** = ಗೆಲುವು, **ಅಪಜಯ** = ಸೋಲು– **ದ್ವಂದ್ವಗಳ** = ಈ ವಿಧವಾದ ಉಭಯ ಸ್ಥಿತಿಗಳನ್ನು (ದ್ವಂದ್ವಾವಸ್ಥೆಗಳು) **ಕಲ್ಪಿಸಿದ** = ನಿರ್ಮಿಸಿ, ಸ್ಥೂಲದೇಹಗತ ಇಂದ್ರಿಯಗಳ ದ್ವಾರಾ ಜೀವರ ಅನುಭೋಗಕ್ಕೆ ಕೊಡುವವನಾದ. ॥ ೭ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ಥೂಲದೇಹದಿಂದ ಅಂಡದೊಳಗೆ ಸೃಜ್ಯರಾದ ಪ್ರಾಣಿಗಳಿಗೆ, ಅನುಭವಕ್ಕೆ ಕೊಟ್ಟದ್ದರನ್ನ ಹೇಳತಾರೆ.

ವಿದ್ಯಮಾನ ಸ್ಥೂಲದೇಹಧಾರಿಯಾದ ಜೀವನಿಗೆ ಅನಾದಿಯಿಂದ ವಿದ್ಯಮಾನವಾದ ತ್ರಿಗುಣಾತ್ಮಕಲಿಂಗಶರೀರದಲ್ಲಿ ಅನಾದಿಯಿಂದ ವಿದ್ಯಮಾನಗಳಾದ ಆಶಾ ಲೋಭಾದಿಗಳಲ್ಲಿ, ಸೃಷ್ಟಿಗೆ ಕಾರಣವಾದ ಪುರುಷನಾಮಕ ವಾಸುದೇವ ತನ್ನ ಪತ್ನಿಯಾದ ಮಾಯಾದೇವಿಯಿಂದ ಸಹಿತನಾಗಿ, ತಾನು ಇರೋವನಾಗಿ, ಪ್ರಾಣಿಗಳಿಗೆ ಆಶಾ, ಲೋಭ ಅಜ್ಞಾನ, ಮದ, ಮತ್ಸರ, ಕುತ್ಸಿತವಾದ ಮೋಹ, ಹಸಿವೆ, ನಗು, ಸಂತೋಷ, ನಿದ್ರಾ, ಸ್ವಪ್ನ ನೀರಡಿಕೆ, ಎಚ್ಚರಿಕೆ, ಜನನ, ಬದುಕಿ ಇರೋಣ, ಮರಣ ಪಾಪಕರ್ಮ, ಪುಣ್ಯಕರ್ಮ, ಜಯ, ಅಪಜಯ–ಏತಾದೃಶವಾದ ಉಭಯವಿಧಗಳ ಕಲ್ಪಿಸಿ, ಸೃಷ್ಟಿಮಾಡಿದ ಸ್ಥೂಲದೇಹದ್ವಾರಾ ಪ್ರಾಣಿಗಳಿಗೆ ಭೋಗ್ಯಕ್ಕೆ ಕೊಡೋವನಾದ ಎಂತ ತಾತ್ಪರ್ಯ. ॥ ೭ ॥

೨. ಭಾವಪ್ರಕಾಶಿಕೆ :

ಸರ್ವಪ್ರಾಣಿಗಳ ದೇಹದೊಳಗೂ ಪುರುಷರೂಪದಿಂದ ಪರಮಾತ್ಮನು, ತ್ರಿಗುಣಾತ್ಮಕರಾದ ಶ್ರೀದೇವಿ, ಭೂದೇವಿ, ದುರ್ಗಾದೇವಿ ಯರಿಂದ ಕೂಡಿ ತಾನಿದ್ದು, ಜೀವರಿಗೆ ಆಸೆ, ಲೋಭ-ಮೊದಲಾದ ದ್ವಂದ್ವವಾದ ಸುಖದುಃಖಗಳನ್ನು ಕಲ್ಪಿಸುವನು. ॥ ೭ ॥

೩. ಭಾವದರ್ಪಣಃ-

ಸ್ವಹೃದಯಾಂತರ್ಗತನೇ ಶ್ರೀಭೂದುರ್ಗಾ ಸಮೇತನಾಗಿ ಗುಣತ್ರಯದಲ್ಲಿದ್ದು, ಆಶಾ ಲೋಭಾದಿ ದ್ವಂದ್ವಗಳ ಕರ್ಮಾನುಸಾರ ಕಲ್ಪನೆ ಮಾಡಿ, ಜೀವರನ್ನ ಸೃಷ್ಟಿಗೇ ತರುತ್ತಾನೆಂದು-ಹೇಳುತ್ತಾರೆ ॥ ಈ ಶರೀರೇತಿ॥

ಹಾಸ-ನಗೋಣ, ಪಿಪಾಸ-ನೀರಡಿಕೆ. ॥ ೭ ॥.

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ-

"ಈ ಶರೀರ"- ಇತಿ ॥ "ಶ್ರೀ" ಇತಿ ॥ "ಶ್ರೀಃ ದೇವಬಂಧಿತಾ" -ಇತ್ಯುಕ್ತೇಃ॥ ಗೌಣ ಕಾರ್ಯಾಣಿ ಆಹ "ಆಶೆ" ಇತಿ. ॥ ೭ ॥

## ಕನ್ನಡಾರ್ಥ

ಶರೀರಗತ ಪುರುಷನಾಮಕ ಶ್ರೀಪರಮಾತ್ಮನ ಕಾರ್ಯಗಳನ್ನು ತಿಳಿಸುತ್ತಾರೆ - "ಈ ಶರೀರಗತ"- ಎಂಬ ಪದ್ಯದಿಂದ. "ಶ್ರೀದೇವಿಯು ದೇವತೆಗಳಿಗೆ ಬಂಧಳಾಗಿರುತ್ತಾಳೆ"-ಎಂಬ ವಾಕ್ಯದಿಂದ, "ಶ್ರೀ ಸಹಿತ"ನಾಗಿ ಹರಿಯು ಪುರುಷನಾಮಕನಾಗಿ ಶರೀರಾದ್ಯಂತ ವ್ಯಾಪಿಸಿರು ವನು. ಬಂಧಕ ಕಾರ್ಯಗಳನ್ನು ಶ್ರೀದ್ವಾರಾ ಮಾಡಿ ಮಾಡಿಸುತ್ತಿರುವನು. ಆಶಾ-ಲೋಭ-ಮುಂತಾದ ದ್ವಂದ್ವಗಳು, ತ್ರಿಗುಣಕಾರ್ಯಗಳನ್ನು ಶ್ರೀಪರಮಾತ್ಮನೇ ಶ್ರೀಸಹಿತನಾಗಿದ್ದು, ಜೀವರಲ್ಲಿ ಹುಟ್ಟಿಸುತ್ತಾನೆ. ॥ ೭॥

**೫. ಶ್ರೀ ಗುರುಹೃದಯ ಪ್ರಕಾಶಿಕೆ:**

ಈ ಸರ್ವಮನುಷ್ಯಶರೀರದಲ್ಲಿರುವ ಪುರುಷರೂಪನು ತ್ರಿಗುಣಾಭಿಮಾನಿರಮಾಸಮೇತನಾಗಿದ್ದು, ತ್ರಿಗುಣದಿಂದ ಸರ್ವಜೀವರಿಗೂ ಆಶೆ, ಲೋಭ, ಅಜ್ಞಾನ, ಮದಮತ್ಸರವೆಂಬ ಪರರು ತನ್ನ ಅಧೀನರಾಗಬೇಕೆಂಬ ಬಯಕೆ, ಕುಮೋಹವೆಂಬ ವಿಪರೀತಜ್ಞಾನ, ಕ್ಷುಧೆ ಎಂಬ ಹಸಿವೆ, ಹಾಸವೆಂಬ ನಗೆ, ಹರ್ಷವೆಂಬ ಮನಸ್ಸಂತೋಷ, ಸುಷುಪ್ತಿ ಎಂಬ ನಿದ್ರೆ, ಸ್ವಪ್ನವೆಂಬ ಮನೋಭಾವನೆ, ಪಿಪಾಸವೆಂಬ ಬಾಯಾರಿಕೆ, ಜಾಗ್ರತೆ ಎಂಬ ಎಚ್ಚರಿಕೆ, ಜನನಸ್ಥಿತಿ ಎಂಬ ಹುಟ್ಟು ದೇಹಪೋಷಣೆ, ಮೃತಿ ಎಂಬ ಮರಣ, ದೋಷವೆಂಬ ಪಾಪ, ಪುಣ್ಯವೆಂಬ ಅದೃಷ್ಟ, ಜಯಾಪಜಯ–ಇವೇ ಮೊದಲಾದ ದ್ವಂದ್ವಗಳನ್ನುಂಟು ಮಾಡುತ್ತಾ, ಮೂರು ಪುರುಷರೂಪದಿಂದ ಮೂರು ಸ್ಥಳಗಳಲ್ಲಿರುವನು. ॥ ೭ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಸ್ಥೂಲದೇಹವನ್ನು ಧರಿಸಿರುವ ಜೀವನು **ಶರೀರಿ** ಎನಿಸುವನು. ಪುರುಷನಾಮಕನಾದ ಶ್ರೀಹರಿಯು ಲಿಂಗೋಪದಾನದಿಂದ ಜೀವರನ್ನು ಸೃಷ್ಟಿಗೆ ತರುವನು. ಅನಾದಿಕರ್ಮಗಳನುಸಾರವಾಗಿ ಜನ್ಮಗಳ ಉತ್ಪತ್ತಿ. ಇದರಿಂದ, ಜನ್ಮಗಳಿಗೆ ಕಾರಣವಾದ ಅನಿರುದ್ಧಶರೀರವನ್ನು ಸೃಷ್ಟಿಸುವನು. ಸಾಧನೆಗಾಗಿ, ಸ್ಥೂಲದೇಹವನ್ನು ನಿರ್ಮಿಸಿ, ಅದರಲ್ಲಿ ಜೀವರನ್ನು ನಿವಾಸಿಗಳನ್ನಾಗಿ ಮಾಡುವನು. ಸ್ಥೂಲದೇಹದ ದ್ವಾರಾ ಸಾಧನೆಗಳನ್ನು ಮಾಡಿ ಮಾಡಿಸುತ್ತಿರುವುದರಿಂದ, ಜೀವಿಗೆ **ಶರೀರಿ**–ಎಂದು ಹೆಸರು.

೨. ಸತ್ವ–ರಜ–ತಾಮಸಗಳೆಂಬ ಮೂರು ಪ್ರಾಕೃತಗುಣಗಳಿಂದ ಜೀವರನ್ನು ಲಿಂಗದೇಹದಿಂದ ಬಂಧಿಸುವನು. ಇದರಿಂದ, ಜೀವರನ್ನು ಕರ್ಮಭೋಗಕ್ಕಾಗಿ ಸಂಸಾರಾವಸ್ಥೆಯಲ್ಲಿ ಬಿಡುವನು.

೩. ಲಿಂಗದೇಹಗತ ಅನಾದಿಪ್ರಾಕೃತಗುಣತ್ರಯಗಳಲ್ಲಿ ಪುರುಷ ನಾಮಕನಾದ ವಾಸುದೇವನು ತ್ರಿಗುಣಾಭಿಮಾನಿಗಳಾದ ಶ್ರೀ ಭೂದುರ್ಗಾ ರೂಪದಲ್ಲಿರುವ ಶ್ರೀಲಕ್ಷ್ಮೀಸಹಿತನಾಗಿ ತಾನು ವಿದ್ಯಮಾನನಾಗಿರುವನು. ಸ್ಥೂಲಶರೀರವು ಸಾಧನದೇಹವು. ಸಾಧನಶರೀರಗತ ಸಕಲೇಂದ್ರಿಯಗಳ ದ್ವಾರಾ, ಕರ್ಮಾನುಭವ ಜೀವನಿಗೆ. ತ್ರಿಗುಣಗಳಿಂದ ಜನ್ಯವಾದದ್ದು ಕರ್ಮ.

೪. ಈ ಕರ್ಮಪ್ರವಾಹದ ಅನುಭವವು ಆಸೆ-ಲೋಭ, ಜ್ಞಾನ-ಅಜ್ಞಾನ-ಹಾಸ-ಹರುಷ-ಜನ್ಮ-ಮೃತಿ, ಪುಣ್ಯ-ಪಾಪ, ಜಯ-ಅಪಜಯಗಳೆಂಬ ದ್ವಂದ್ವಗಳಿಂದ ಯುಕ್ತವಾಗಿದೆ. ಸ್ಥೂಲದೇಹಧಾರಿಯಾದ ಜೀವನಿಗೆ ಇಂದ್ರಿಯಗಳ ದ್ವಾರಾ ಗಂಧಾದಿ ವಿಷಯಗಳ ಸನ್ನಿಕರ್ಷ ಮಾಡಿಸಿ, ಮನಸ್ಸಿನ ದ್ವಾರಾ, ಜೀವನಿಗೆ ಅದು ಬೇಕು-ಇದು ಬೇಕು ಎಂಬ **ಆಶೆ**, ವಿಷಯಗಳ ಪ್ರಾಪ್ತನಾಗಿ, ನಿರಂತರ ಹಂಬಲರೂಪವಾದ **ಲೋಭ** (ವಿಷಯಗಳನ್ನು ಬಿಡದಿರುವುದು), ಭಗವತ್ಸಂಬಂಧವಾದ ವಿಷಯದಲ್ಲಿ ವಿಸ್ಮರಣಾರೂಪವಾದ **ಅಜ್ಞಾನ**, ಅಹಂಕಾರರೂಪವಾದ **ಮದ**, ಇತರರನ್ನು ಕಂಡರೆ, ಅಸೂಯಾರೂಪವಾದ **ಮತ್ಸರ**, ಕ್ಷಣಿಕವಾದ ವಿಷಯಗಳಲ್ಲಿ ಮಾಯಾರೂಪವಾದ **ಮೋಹ**, ಹಸಿವು **(ಕ್ಷುಧೆ)** ಆನಂದದಿಂದ ನಗುವುದು **(ಹಾಸ)**, ಮನಸ್ಸಿನ ಸಂತೋಷ **(ಹರುಷ)**. ಗಾಢನಿದ್ರಾವಸ್ಥೆ **(ಸುಷುಪ್ತಿ)** ಸ್ವಪ್ನಾವಸ್ಥೆ **(ಸ್ವಪ್ನ)** ಬಾಯಾರಿಕೆ **(ಪಿಪಾಸ)** ಎಚ್ಚರಿಕೆಯ ಸ್ಥಿತಿ **(ಜಾಗ್ರತಿ)**, ಜನನ, ಬದುಕು ಮತ್ತು ಮರಣ (**ಜನ್ಮ-ಸ್ಥಿತಿ-ಮೃತಿ**) ದೋಷಭೂತವಾದ ಪಾಪಫಲ **(ದೋಷ)** ಪುಣ್ಯಫಲಾನುಭವ ಗೆಲುವು ಮತ್ತು ಸೋಲು **(ಜಯ-ಅಪಜಯ)**- ಇವೇ ಮೊದಲಾದ ದ್ವಂದ್ವಕರ್ಮಗಳಲ್ಲಿ ಜೀವರನ್ನು ತೊಳಲಾಡಿಸಿ, ತನ್ಮೂಲಕ ಕರ್ಮಾನುಭವಮಾಡಿಸಿ, ಕೊನೆಯಲ್ಲಿ ಕರ್ಮವಿಮೋಚನೆ ಮಾಡುತ್ತಾನೆ. ॥ ೭ ॥

## ಪದ್ಯ–೮

**ಮೂಲ :–**

**ತ್ರಿವಿಧ ಗುಣಮಯ ದೇಹ ಜೀವಕೆ ।**
**ಕವಚದಂದದಿ ತೊಡಿಸಿ ಕರ್ಮ ।**
**ಪ್ರವಹದೊಳು ಸಂಚಾರಮಾಡಿಸುತಿಪ್ಪ ಜೀವರನ ।**
**ಕವಿಸಿ ಮಾಯಾರಮಣ ಮೋಹವ ।**
**ಭವಕೆ ಕಾರಣನಾಗುವನು ಸಂ ।**
**ಶ್ರವಣ ಮನನವ ಮಾಳ್ಪರಿಗೆ ಮೋಚಕನೆನಿಸುತಿಪ್ಪ ॥ ೮॥**

**ಅವತರಣಿಕೆ :–**

ಅಸೃಜ್ಯರಾಶಿಯಿಂದ ಸೃಷ್ಟಿಗೆ ತರುವ ಜೀವರನ್ನು ತ್ರಿಗುಣಾತ್ಮಕವಾದ ಲಿಂಗದೇಹದ ಉಪಚಯದ್ವಾರಾ, ಭವವೆಂಬ ಕರ್ಮಪ್ರವಾಹದಲ್ಲಿ ತೊಳಲಾಡಿಸಿ, ಕೊನೆಗೆ ಕರ್ಮವಿಮೋಚನೆಗೈಸುವ ವಿಷಯವನ್ನು ತಿಳಿಸುತ್ತಾರೆ. ॥ ೮ ॥

**ಪ್ರತಿಪದಾರ್ಥ :–**

**ತ್ರಿವಿಧ** = ಮೂರು ಪ್ರಕಾರರಾದ, **ಜೀವಕೆ** = ಸೃಷ್ಟಿಗೆ ಯೋಗ್ಯರಾದ ಜೀವರಿಗೆ (ತ್ರಿವಿಧ ಜೀವರಿಗೂ), **ಕವಚದಂದದಿ** = ಜೀವಸ್ವರೂಪದ ಸುತ್ತಲೂ ಆವರ್ಕವಾಗಿ ಇರತಕ್ಕ ಅನಾದಿಲಿಂಗ ದೇಹಾವರಣ, **ಗುಣಮಯ** = ತ್ರಿಗುಣಾತ್ಮಕವಾದ ಲಿಂಗದೇಹವನ್ನು, **ತೊಡಿಸಿ** = ಗುಣ ವೈಷಮ್ಯದಿಂದ ನಿರವಕಾಶದಿಂದ ಜೀವನಸ್ವರೂಪ ದೇಹಕ್ಕೆ ಪ್ರಾಕೃತದೇಹದ ಸಂಬಂಧ ಮಾಡಿ, **ಕರ್ಮಪ್ರವಾಹದೊಳು** = ಲಿಂಗದೇಹಗತ ಅನಾದಿಕರ್ಮ ಅಭಿವ್ಯಕ್ತಗೊಳಿಸಿ, ತದ್ವಾರಾ, ಜನಿತವಾದಸಂಚಿತಾಗಾಮಿ ಕರ್ಮಗಳೆಂಬೋ ಮಹಾಪ್ರವಾಹದಲ್ಲಿ, **ಸಂಚಾರಮಾಡಿಸುತ್ತಿಪ್ಪ** = ಜನ್ಮಾಂತರಗಳ ದ್ವಾರಾ ಓಡಾಡಿಸುತ್ತಿರುತ್ತಾನೆ.

**ಜೀವರನ್ನು** = ತ್ರಿವಿಧ ಜೀವರನ್ನು, **ಮಾಯಾರಮಣ** = ಮಾಯಾಪತಿ ಯಾದ ಶ್ರೀವಾಸುದೇವನು, **ಮೋಹದ ಕವಿಸಿ** = ಕ್ಷಣಿಕವಾದ ಐಹಿಕ ವಿಷಯೋಪಭೋಗಗಳಲ್ಲಿ ಮೋಹವನ್ನು ಹುಟ್ಟಿಸಿ, ಅವರನ್ನು ಸಂಸಾರ ಚಕ್ರಕ್ಕೆ ಸಿಲುಕಿಸಿ, **ಬಾಧಕ** = ಅಹಂಮಮಕಾರಗ್ರಸ್ತರನ್ನಾಗಿಸಿ, ಸಂಸಾರಕ್ಕೆ ವಶರಾಗುವಂತೆ ಮಾಡಿಸಲು, **ಕಾರಣನಾಗುವನು** = ತಾನೇ ಮುಖ್ಯ ಕಾರಣನಾಗಿದ್ದಾನೆ. **ಸಂಶ್ರವಣ** = ಸಮೀಚೀನವಾದ ಗುರುಗಳ ದ್ವಾರಾ, ಭಗವತ್ಸಂಬಂಧವಾದ ಮಹಾಮಹಿಮೆಗಳನ್ನು ಶ್ರವಣ ಮಾಡುವುದು, **ಮನನವ ಮಾಳ್ಪರಿಗೆ** = ಶ್ರವಣಮಾಡಿದ್ದ ವಿಷಯಗಳನ್ನು ಮನಸಾ ಚಿಂತಿಸಿ, ಧ್ಯಾನಕ್ಕೆ ಗುರಿಯನ್ನಾಗಿ ಮಾಡುವ ಭಗವದ್ಭಕ್ತರಿಗೆ, **ಮೋಚಕನೆನಿಸುತಿಪ್ಪ** = ಸಂಸಾರಾಖ್ಯ ಬಂಧನ ಪರಿಹಾರಮಾಡಿ, ಮೋಕ್ಷಪ್ರದನಾಗುತ್ತಾನೆ. ॥ ೮ ॥

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಬಂಧಕನು-ಮೋಚಕನು ಪರಮಾತ್ಮನೆಂದು ಹೇಳತಾರೆ. ಮೂರು ಪ್ರಕಾರರಾದ, ಸೃಷ್ಟಿಗೆ ಯೋಗ್ಯರಾದ ಪ್ರತಿಪ್ರತೀ ಜೀವಕ್ಕೆ ಜೀವಾಕಾರವಾಗಿ ಕವಚದೋಪಾದಿಯಲ್ಲಿ ಇರತಕ್ಕ, ಒಣಗಿದ ಗಜ್ಜಗೆಕಾಯಿಯೊಳಗೆ ಇರುವ ಬೀಜಕ್ಕೂ, ಆ ಬೀಜದ ಮ್ಯಾಲಿನ ಆವರಣಕ್ಕೂ ಸಂಬಂಧವಿಲ್ಲದೆ ಅವಕಾಶ ದಿಂದ ಸಹಿತವಾಗಿ ಇರೋಪಾದಿಯಲ್ಲಿ, ಜೀವರಿಗೆ ಲಿಂಗದೇಹಾಖ್ಯ ಆವರಣ ಸಂಬಂಧವಾಗಿ, ಸಾವಕಾಶದಿಂದ ಸಹಿತವಾಗಿ ಅನಾದಿಯಿಂದ ಇರೋದಾಗಿ ಅದೆ. ಅಂಥಾ ತ್ರಿಗುಣಾತ್ಮಕವಾದ ಅನಾದಿಲಿಂಗದೇಹ ಗುಣವೈಷಮ್ಯದಿಂದ ನಿರವಕಾಶದಿಂದ ಸಂಬಂಧಮಾಡಿ-ಎಂತ ತಾತ್ಪರ್ಯ. ಈ ಪ್ರಕಾರ ತೊಡಿಸಿ, ನಂತರ ಸ್ಥೂಲದೇಹಗಳ ಕೊಟ್ಟು, ಲಿಂಗಗತ ಅನಾದಿಕರ್ಮ ವ್ಯಕ್ತಿಮಾಡಿ, ತದ್ವಾರಾ, ಜನಿತಗಳಾದ ಆಗಾಮಿ ಸಂಚಿತಾಖ್ಯಕರ್ಮಪ್ರವಾಹದೊಳು ಯಾವತ್ತೂ ಪ್ರಾಣಿಗಳ ಸಂಚಾರ

ಮಾಡಸತಾ ಇರೋವನಾಗಿದ್ದಾನೆ. ಮಾಯಾಪತಿ ವಾಸುದೇವನು ನಶ್ವರ ಐಹಿಕ ವಿಷಯದಲ್ಲಿ ಜೀವರಿಗೆ ಮೋಹವನ್ನು ಹುಟ್ಟಿಸಿ, ತನ್ನಲ್ಲಿ ವಿರಕ್ತಿ, ಸಂಸಾರದಲ್ಲಿ ರಕ್ತಿ ಉಂಟುಮಾಡಿದ್ದರಿಂದ, ಪ್ರಾಣಿಗಳು ಅಹಂಮಮತಾಖ್ಯ ಸಂಸಾರಕ್ಕೆ ವಶರಾಗಿ ಭ್ರಮಿಸೋವರಾಗಿದ್ದಾರೆ. ಏತಾದೃಶವಾದ ಬಂಧಕ್ಕೆ, ಇದರ ಪರಿಹಾರಕ್ಕೆ ಕಾರಣನಾಗೋವನಾಗತಾನೆ. ತನ್ನ ಮಾಹಾತ್ಮ್ಯ ಸಮೀಚೀನರಾದ ಗುರುಗಳಿಂದ ಶ್ರವಣವೇನು, ಆ ಶ್ರವಣ ಮಾಡಿದ್ದರನ್ನ ಮನನವೇನು, ಅದರನ್ನ ಅನುಷ್ಠಾನಕ್ಕೆ ತರೋಣವೇನು–ಈ ಪ್ರಕಾರ ಮಾಡತಕ್ಕವರಿಗೆ ಸಂಸಾರಾಖ್ಯಬಂಧನ ಪರಿಹಾರಮಾಡಿ, ಮೋಕ್ಷವನ್ನು ಕೊಡೋವನಾಗತಾನೆ–ಎಂತ ತಾತ್ಪರ್ಯ. ॥ ೮ ॥

**೨. ಭಾವಪ್ರಕಾಶಿಕೆ**

ಲಿಂಗದೇಹಗಳಿಂದ ಯುಕ್ತರಾದ ತ್ರಿವಿಧಜೀವರಿಗೂ ಮೇಲೆ ಕವಚ ಹಾಕಿದಂತೆ ಸ್ಥೂಹದೇಹವನ್ನು ತೊಡಿಸಿ, ಕರ್ಮಪ್ರವಾಹದೊಳಗೆ ಜೀವ ರನ್ನು ಸಂಚಾರ ಮಾಡಿಸುತ್ತಿರುವನು. ಮಾಯಾರಮಣನಾದ ಶ್ರೀವಾಸು ದೇವನು ಮೋಹದಿಂದ ಜೀವರನ್ನು ಆಚ್ಛಾದಿಸುವರನು. ಆದರಿಂದ, ಸಂಸಾರಕ್ಕೆ ಜೀವರು ಕಾರಣರಾಗುವರು. ಭಗವತ್ಕಥಾಶ್ರವಣ, ಮನನಾದಿ ಗಳಿಂದ ಪರಮಾತ್ಮನು ಪ್ರೀತನಾಗಿ, ಸಂಸಾರದಿಂದ ಮುಕ್ತರನ್ನಾಗಿ ಮಾಡಿಸುವನು. ॥ ೮ ॥

**೩. ಭಾವದರ್ಪಣ**

ತ್ರಿವಿಧಗುಣಮೇಯದೇಹೇತಿ । ವ್ಯಾ ॥ "ಈ ದೇಹ ಕವಚದಂದದಿ ತೊಡಿಸಿ" – ಎಂದು ಜಗನ್ನಾಥದಾಸರಾಜರು ಹೇಳಿರೋದರಿಂದ, ಲಿಂಗದೇಹ ಪೂರ್ವದಲ್ಲಿ ಜೀವಗೆ ಇದ್ದಿಲ್ಲವೆಂದು ತೋರುತದೆ. ಆದರೆ ಆನಾದಿಕಾಲದಿಂದಲೂ ಲಿಂಗದೇಹವದೆ. ಎಂಬುದಕ್ಕೆ ಪ್ರಮಾಣ–ಉಕ್ತಂಚ **ವಿಷ್ಣುರಹಸ್ಯೇ**–"ತತ್ತದಾಕಾರಸದೃಶೌರ್ಲಿಂಗ ದೇಹರ್ನೈನಾದಿಭಿಃ । ಕಂಚುಕರೈವ ಸಂಛನ್ನಾಸ್ತತ್ತದರ್ಹೈಃ ಪೃಥಕ್ ಪೃಥಕ್ ॥ ಏತಾದೃಶ

ಲಿಂಗದೇಹದಿಂದ ಯುಕ್ತರಾಗಿ, ಅಸೃಜ್ಯಾವಸ್ಥೆಯಲ್ಲಿ ಜೀವರು ಬದ್ಧರುತ್ತಾರೆಂದು ಹೇಳುತ್ತದೆ. ಅದಕ್ಕೆ ಪ್ರಮಾಣ:– ಲಿಂಗದೇಹಯುತಾಃ ಸರ್ವೇ ಪತಿತಾ ಮೂರ್ಛಿತಾ ಇವ। ಇಂದ್ರಿಯಾಣಿ ದಶೈಕಂಚ ಮನಸ್ತನ್ಮಾತ್ರಕಾಸ್ತಥಾ. ॥ ೮ ॥

### ೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ

"ತ್ರಿವಿಧ" ಇತಿ॥ "ದೇಹ"–ಲಿಂಗ॥ "ಕವಿಸಿ"– ವ್ಯಾಪಿಸಿ॥ "ಸಂಶ್ರವಣಂ" ಭಕ್ತ್ಯಾ ಮುಹೂರ್ತಂ ವಾ ಅಹರಹಃ ॥ ಶ್ರವಣಂ ತ್ವತ್ಕೃತಂ ಚೇತ್ ಸರ್ವಮಪಿ ಸುದಿನಂ ಸಾರ್ಥಕಮ್॥ ಅವರಥಾದುರ್ದಿನಮ್॥ ದ್ವಾದಶಾಧ್ಯಾಯೇ ವಿಷ್ಣುರಹಸ್ಯೇ – "ದಿವಸೇ ಷಷ್ಟಿನಾಡಿಕೆ॥ ಮುಹೂರ್ತ ಮಪಿ ನಿತ್ಯಶಃ॥ ಸಂಕುಚ್ಯ ಸರ್ವಕರ್ಮಾಣಿ ಮಮ ಶ್ರವಣಮಾಚರೇತ್॥ ತೇನ ಸಾರ್ಥಕತಾಂ ಯಾತಿ ತದ್ದಿನಂ ತೇನ ಸಂಸ್ಕೃತಿಃ॥ ಸಾರ್ಥಕ್ಯಂ ಯಾತಿ ಜೀವನಾಂ ಅನ್ಯಥಾ ದುರ್ದಿನಂ ಭವೇತ್ ॥ ಇತಿ ॥ ೮ ॥

### ಕನ್ನಡಾರ್ಥ

ಲಿಂಗದೇಹವು ತ್ರಿವಿಧಗುಣಮಯವು. ಸಂಶ್ರವಣವೆಂದರೆ, ಭಕ್ತಿಯಿಂದ ಶ್ರವಣಮಾಡುವುದೆಂದರ್ಥ. ಪ್ರತಿದಿನವೂ ಒಂದು ಮುಹೂರ್ತವಾದರೂ, ಹರಿಕಥಾರೂಪವಾದ ತತ್ತ್ವಗಳನ್ನು ಶ್ರವಣ ಮಾಡಿದರೂ ಸಾಕು. ಆ ಸಮಯ ಸಾರ್ಥಕವು. ಇಲ್ಲದಿದ್ದರೆ, ದುರ್ದಿನವಾಗುವುದು. ವಿಷ್ಣುರಹಸ್ಯದ ೧೨ನೆಯ ಅಧ್ಯಾಯದಲ್ಲಿ, "ದಿವಸಕ್ಕೆ ೬೦ ನಾಡಿಗಳು (ಘಳಿಗೆಗಳು) ಅವುಗಳಲ್ಲಿ ದಿನಾಲು ಒಂದು ಮುಹೂರ್ತವಾದರೂ, ಸಕಲಕರ್ಮಗಳನ್ನು ಸಂಕೋಚನಮಾಡಿ, ನನ್ನ ವಿಷಯಕವಾದ ಕಥಾಶ್ರವಣ ಮಾಡು. ಅದರಿಂದ, ನಿನ್ನ ಆಯಸ್ಸು ಮತ್ತು ಸಂಸಾರದ ದಿನಗಳು ಸಾರ್ಥಕವಾಗುವುವು. ಇಲ್ಲದಿದ್ದರೆ, ಶ್ರವಣ ರಹಿತವಾದ ದಿನಗಳು ದುರ್ದಿನಗಳಾಗುವುವು. ಜೀವನವು ಅಸಾರ್ಥಕ ವಾಗುವುದು"–ಎಂದು ಭಗವದ್ವಚನವಿದೆ. ॥ ೮॥

## ೧. ಶ್ರೀಗುರುಹೃದಯಪ್ರಕಾಶಿಕೆ

ಈ ಪುರುಷರೂಪನೇ ಅಜ್ಞಾನ, ಜ್ಞಾನ ಮೂಲಕ ಬಂಧಮೋಕ್ಷಪ್ರದನೆಂದು ತಿಳಿಸುತ್ತಾರೆ – ತ್ರಿವಿಧ ಎಂದು. ಮಾಯಾದೇವೀಪತಿ ವಾಸುದೇವನು ತ್ರಿವಿಧಗುಣವೆಂಬ ಸತ್ವರಜಸ್ತಮವೆಂಬ ಪರಿಚ್ಛೇದಗಳುಳ್ಳ ಅನಾದಿಯಾದ ಲಿಂಗದೇಹವನ್ನು ಜೀವರಿಗೆ ಕವಚದಂತೆ ತೊಡಿಸಿ, ಅಂದರೆ, ಉಪಚಯದಿಂದ ವೃದ್ಧಿಮಾಡಿ, ಮೋಹವೆಂಬ ದೇಹಾಭಿಮಾನಾದಿಗಳನ್ನು ಕವಿಸಿ, ಅಂದರೆ, ತಗಲಿಸಿ, ಅನಾದಿಕರ್ಮದೇಹಗಳಲ್ಲಿ ಜೀವರನ್ನ ಸಂಚಾರ ಮಾಡಿಸುವನು. ಸಾತ್ವಿಕರಿಗೆ ಶ್ರವಣ ಮನನಾದಿ ಸಾಧನಗಳನ್ನು ಮಾಡಿಸಿ, ಮೋಕ್ಷಪ್ರದನೆಂದು ಕರೆಸುವನು. ॥ ೮ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅನಾದಿಯಾದ ಲಿಂಗಶರೀರವು ತ್ರಿಗುಣಾತ್ಮಕವಾದದ್ದು. ೧೬ ಕಳೆಗಳಿಂದ ಯುಕ್ತವಾದದ್ದು. ಅಪ್ರಾಕೃತವಾದ ಚಿದಾನಂದಾತ್ಮಕವಾದ ಸ್ವರೂಪಶರೀರಕ್ಕೆ ಅನಾದಿಯಿಂದ ಆವರಕವಾಗಿದೆ. ಲಿಂಗಶರೀರವು ಸ್ವರೂಪದೇಹಕ್ಕೆ ಗಜ್ಜುಗದಲ್ಲಿನ ಬೀಜದಂತೆ ಸಾವಕಾಶವಾಗಿದೆ. ಅನಾದಿ ಲಿಂಗದೇಹವು ಅನಾದಿಕರ್ಮಬೀಜಗಳ ಆಗರವು. ಅಪ್ರಾಕೃತನಾದ ಜೀವನಿಗೆ ಬಂಧಕರೂಪದಲ್ಲಿರುವ ಲಿಂಗಶರೀರವು ಭಂಗವಾಗಬೇಕು. ಅದು ಉಪಾಧಿ ರೂಪದಲ್ಲಿರುವ ಪ್ರತಿಬಂಧಕ ಸಾಮಗ್ರಿಯಾಗಿದೆ ಅನಾದಿನಿತ್ಯನಾದ ಜೀವನಿಗೆ. ಲಿಂಗದೇಹವು ಅನಾದಿ, ಆದರೆ ಅಂತ್ಯವುಳ್ಳದ್ದು (ನಿತ್ಯವಲ್ಲ). ಪ್ರಾಕೃತ–ಸತ್ವ–ರಜ–ತಮಗಳೆಂಬ ತ್ರಿಗುಣಗಳ ಸಂಪರ್ಕವನ್ನು ಲಿಂಗೋಪಚಯದಿಂದ ಜೀವನ ಸ್ವರೂಪಕ್ಕೆ ಅವನ ಇಚ್ಛಾಮಾತ್ರದಿಂದ ಉಂಟುಮಾಡುವನು. ಈ ಅಭಿಪ್ರಾಯವನ್ನು ದಾಸರಾಯರು–"**ತ್ರಿವಿಧ ಗುಣಮಯ ದೇಹ ಜೀವಕೆ ಕವಚದಂತದಿ ತೊಡಿಸಿ**"–ಎಂದಿದ್ದಾರೆ.

**ಪ್ರಮಾಣ :**

**"ತತ್ತದಾಕಾರ ಸದೃಶೈರ್ಲಿಂಗದೇಹರ್ಕೈನಾದಿಭಿಃ ।**
**ಕಂಚುಕರ್ಕೈವ ಸಂಛನ್ನಾಸ್ತತ್ತದ್ವರ್ಗ್ಯೈಃ ಪೃಥಕ್ ಪೃಥಕ್ ॥**

**–ಇತಿ ವಿಷ್ಣು ರಹಸ್ಯೇ**

೨. ಲಿಂಗೋಪಚಯದಿಂದ ಸುಪ್ತಿಯಲ್ಲಿದ್ದ ಜೀವನಿಗೆ, ಕರ್ಮದ ಸಂಬಂಧ ಉಂಟಾಗುವುದು. ಅದರಿಂದ ಪ್ರಪ್ರಥಮವಾಗಿ ಅಹಂಕಾರ ಮಮಕಾರಗಳು ಜೀವನಲ್ಲಿ ಮೂಡುವುವು. ಇದೇ ಅನಾದಿಕರ್ಮದ ಸಂಬಂಧದಿಂದ ಪ್ರಪ್ರಥಮ ಜನ್ಮಕ್ಕೆ ಕಾರಣವು. ಅಲ್ಲಿಂದ ಕರ್ಮಪ್ರವಾಹದಲ್ಲಿ ಜೀವರನ್ನು ಬಿಟ್ಟು, ಸಂಚರಿಸುವಂತೆ ಮಾಡುವನು. ಕಮಸಂಬಂಧದಿಂದ ಜೀವನಿಗೆ ಸಂಸಾರಾವಸ್ಥೆ ಪ್ರಾಪ್ತಿ.

೩. ಕರ್ಮಪ್ರವಾಹದಲ್ಲಿ ಬಿದ್ದ ಜೀವನಿಗೆ ಮಾಯಾಪತಿಯಾದ ಶ್ರೀ ವಾಸುದೇವನು ಅವನಿಗೆ ದೇಹಾಭಿಮಾನ, ಕ್ಷಣಿಕವಾದ ವಿಷಯಾ ಭೋಗಗಳಲ್ಲಿ ಆಸಕ್ತಿ ಹುಟ್ಟಿಸಿ, ಅವನ ಸಂಸಾರಕ್ಕೆ (ಭವಕೆ) ಕಾರಣನಾಗುವನು.

೪. ಆದರೆ, ಭಗವತ್ಸಂಬಂಧವಾದ ಕಥಾಮೃತದ ನಿರಂತರ ಶ್ರವಣ ಮಾಡುವವರ ಶ್ರವಣದ್ವಾರಾ ತತ್ತ್ವವಿಷಯಗಳನ್ನು ಮನಸಿನಲ್ಲಿ ನೆಲೆಗೊಳಿಸಿ, ಧ್ಯಾನಕ್ಕೆ ನಿರಂತರ ವಿಷಯವನ್ನಾಗಿಸಿ, ಭಗವದ್ಧ್ಯಾನದಲ್ಲಿಯೇ ನಿರತರಾಗಿರುವ ಜೀವರಿಗೆ, ಕರುಣಾಮಯನಾದ ಕಮಲಾಕಾಂತನು ಕರ್ಮಮೋಚನಕ್ಕೆ ಕಾರಣನಾಗುವನು. ಯಾರು ಕರ್ಮಬಂಧಕನೋ, ಅವನೇ ಕರ್ಮಮೋಚಕನು. ॥ ೧೮ ॥

## ಪದ್ಯ–೯

**ಮೂಲ :**

**ಸಾಶನಾಹ್ವಯ ಸ್ತ್ರೀಪುರುಷರೊಳು ।**
**ವಾಸವಾಗಿಹನೆಂದರಿದು ವಿ।**
**ಶ್ವಾಸಪೂರ್ವಕ ಭಜಿಸಿ ತೋಷಿಸು ಸ್ವಾವರೋತ್ತಮರ ॥**
**ಕ್ಲೇಶನಾಶನ ಅಚಲಗಳೊಳು ಪ್ರ।**
**ಕಾಶಿಸುತಲಿಹನಶನರೂಪೋ ।**
**ಪಾಸನವ ಮಾಳ್ಪರಿಗೆ ತೋರ್ಪನು ತನ್ನ ನಿಜರೂಪ ॥ ೯ ॥**

**ಅವತರಣಿಕೆ :**

"ಸಾಶನ'–ನಾಮಕನಾದ ಶ್ರೀ ಪರಮಾತ್ಮನು ತನ್ನನ್ನೂ ಮತ್ತು ತದ್ಭಕ್ತರನ್ನೂ ಭಜಿಸಿ, ಪೋಷಿಸುತ್ತಿರುವವರನ್ನು ಉದ್ಧರಿಸಿ, ನಿಜರೂಪವನ್ನು ತೋರ್ಪನೆಂದು ಹೇಳುತ್ತಾರೆ. ॥ ೯ ॥

**ಪ್ರತಿಪದಾರ್ಥ :**

**ಸಾಶನ** = ಅಶನಾದಿ ಆಹಾರಗಳಿಂದ ಸಹಿತವಾದ ಸ್ಥೂಲದೇಹ ಬಿಂಬರೂಪೀ ಶ್ರೀಪರಮಾತ್ಮನು, **ಆಹ್ವಯ** = "ಸಾಶನ"–ಎಂಬ ಹೆಸರಿನಿಂದಲೇ ವಾಚ್ಯನಾಗಿದ್ದು, **ಸ್ತ್ರೀ ಪುರುಷರೊಳು** = ಸ್ಥೂಲದೇಹ ಯುಕ್ತರಾದ ಸ್ತ್ರೀ ಮತ್ತು ಪುರುಷರಲ್ಲಿ, **ವಾಸವಾಗಿಹನೆಂದು** = ಹೃತ್ಪದ್ಮಸ್ಥಿತನಾಗಿ ವಾಸವಾಗಿದ್ದಾನೆಂತ, **ಅರಿತು** = ಅನುಸಂಧಾನಪೂರ್ವಕ ತಿಳಿದವನಾಗಿ, **ವಿಶ್ವಾಸಪೂರ್ವಕ** = ಅತ್ಯಂತಭಕ್ತಿಯಿಂದ, **ಭಜಿಸಿ** = ಸ್ತೋತ್ರರೂಪವಾಗಿ ಕೊಂಡಾಡಿ, **ತೋಷಿಸು** = ಸಂತೋಷಪಡಿಸುವವನಾಗು, **ಸ್ವಾವರ ಉತ್ತಮರ** = ಅವರ ಯೋಗ್ಯತಾನುಸಾರ ಭಜಿಸಿದ ಸ್ವಾವರ (ಕಡಿಮೆ) ಮತ್ತು ಉತ್ತಮ ಜೀವರುಗಳನ್ನು, **ಕ್ಲೇಶನಾಶನ** = ಅವರ ಸಂಸಾರವೆಂಬ ಮಹಾದುಃಖವನ್ನು ಪರಿಹರಿಸುವನು. **ಅಚಲರೊಳು** =

ಅಚಲವಾದ ಪ್ರತಿಮಾದಿಗಳಲ್ಲಿ (ಅಶನ ಸೇವಿಸುವ ಜೀವರ ಹೃತ್ಪದ್ಮದಲ್ಲಿ) **ಪ್ರಕಾಶಿಸುತಲಿಹ** = ಜಾಜ್ವಲ್ಯಮಾನನಾಗಿ ಇರುವಂತಹ, **ಅಶನ ರೂಪೋಪಾಸನವ** = ಜೀವಾಂತರ್ಗತನಾದ ಬಿಂಬರೂಪನಾದ ಅಶನ ನಾಮಕನ, ಉಪಾಸನೆಯನ್ನು **ಮಾಳ್ಪರಿಗೆ** = ಮಾಡುವವರಿಗೆ, **ತನ್ನ ನಿಜರೂಪವ** = ಜೀವಾಕಾರವಾದ ತನ್ನ ರೂಪವನ್ನು **ತೋರ್ಪನು** = ಪ್ರತ್ಯಕ್ಷರೂಪದಿಂದ ತೋರಿಸುವನು. ॥ ೯ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ತನ್ನ ಅಪರೋಕ್ಷ ದಾರಿಗೆ ಕೊಡತಾನೆಂದರೆ–ಅದರನ್ನ ಈ ಶ್ಲೋಕದಲ್ಲಿ ಹೇಳತಾರೆ.

ಅಶನಾದಿ ಆಧಾರಗಳಿಂದ ಸಹಿತವಾದ ಸ್ಥೂಲದೇಹಗತ ಸ್ಥೂಲದೇಹಧಾರಿಗಳಾದ ಗಂಡಸರು ಮತ್ತು ಹೆಂಗಸರಲ್ಲಿ ಆವಾಸನಾಗಿ ಇದ್ದಾನಂತ ತಿಳಿದವನಾಗಿ, ಅತ್ಯಂತ ಸ್ನೇಹಪೂರ್ವಕ ಧ್ಯಾನೋಪಾಸನಾದಿಗಳಿಂದ ಭಜನಾ ಮಾಡಿ ಸಂತೋಷಿಸುವವನಾಗು. ಅವರವರ ಯೋಗ್ಯತಾನುಸಾರವಾಗಿ ಭಜನಾ ಮಾಡಿದ ಸ್ವಾವರ ಜೀವರ, ಉತ್ತಮಜೀವರ ಸಂಸಾರ ದುಃಖವನ್ನ ನಾಶನ ಮಾಡೋವನಾಗತಾನೆ. ಭೇದಭೇದಾದಿಗಳಿಂದ ರಹಿತವಾಗಿ ಚಲನರೂಪದಿಂದ ಯುಕ್ತರಾದ ಜೀವರ ಸ್ವರೂಪದೇಹದೊಳು, ಜೀವನ ಸ್ವರೂಪ ಪ್ರಾಕೃತ ಅಶನದಿಂದ ರಹಿತವಾದದ್ದು. ಆದ್ದರಿಂದ, ತದಂರ್ಗತ ಬಿಂಬಗೆ ಅನಶನ–ಎಂತ ನಾಮ. ಇಂಥಾ ಜೀವಾಂತರ್ಗತದಲ್ಲಿ ಬಿಂಬನಾದ ಅನಶನರೂಪ ಪ್ರಕಾಶಮಾನವಾಗತ ಇದ್ದಾನೆ. ಇಂಥಾ ರೂಪವನ್ನ ಉಪಾಸನಾ ಮಾಡುವರಿಗೆ, ನಿಜವಾದ ಜೀವನಾದ ತನ್ನ ಸ್ವರೂಪಾಂತರ್ಗತ ಬಿಂಬರೂಪೀ ಪರಮಾತ್ಮ, ಜೀವಾಕಾರವಾದ ತನ್ನ ರೂಪ ಪ್ರತ್ಯಕ್ಷದಿಂದ ತೋರಿಸತಾನೆ.

ದೇಹಾತರ್ಗತ ಸಾಶನರೂಪೋಪಾಸನವೂ, ಜೀವಾಂತರ್ಗತ ಅನಶನರೂಪೋಪಾಸನವೂ ಹೇಳಿದಂತಾಯಿತು. ॥ ೯ ॥

**೨. ಭಾವಪ್ರಕಾಶಿಕೆ**

ಭೋಜನಪಾನಾದಿಗಳನ್ನು ಮಾಡುವವರು ಸಾಶನರೆಂತಲೂ, ಅದಿಲ್ಲದವರು ಅನಶನರೆಂತಲೂ ಕರೆಸಿಕೊಳ್ವರು. ಚರಪ್ರಾಣಿಗಳು ಸಾಶನರು, ಅಚಲ ಪ್ರಾಣಿಗಳು ಅನಶನರೆಂತಲೂ ತಿಳಿಯಬೇಕು. ಚರ ಪ್ರಾಣಿಗಳಲ್ಲಿ ಮನುಷ್ಯರು ಉತ್ತಮರು. ಲೋಕದಲ್ಲಿರುವ ಸಾಮಾನ್ಯ ಸ್ತ್ರೀ ಪುರುಷರುಗಳಲ್ಲಿ ಸಾಶನ ನಾಮಕನಾಗಿ ಪರಮಾತ್ಮನು ವಾಸಮಾಡುವನೆಂದು ತಿಳಿದು, ವಿಶ್ವಾಸಪೂರ್ವಕವಾಗಿ ಭಜಿಸುತ್ತಾ ತನಗಿಂತಲೂ ವಿದ್ಯೆ, ಜ್ಞಾನ-ಮೊದಲಾದ ವಿಷಯಗಳಲ್ಲಿ ಕಮ್ಮಿಯಾಗಿದ್ದರೂ, ತನಗಿಂತಲೂ ಉತ್ತಮರಾಗಿದ್ದರೂ, ಅವರಲ್ಲಿ ಸಾನಶನಾಮಕ ಪರಮಾತ್ಮನನ್ನು ಚಿಂತಿಸಿ, ಎಲ್ಲರನ್ನು ಸಂತೋಷಪಡಿಸಬೇಕು. ಕಷ್ಟನಿವಾರಕನಾದ ಸ್ವಾಮಿಯು ಅಚಲವಾದ ಪರ್ವತ, ಸಾಲಿಗ್ರಾಮ ಮೊದಲಾದವುಗಳಲ್ಲಿ ಅನಶನಾಮಕನಾಗಿ ಇರುವನೆಂದು ಉಪಾಸನ ಮಾಡಬೇಕು. ಹೀಗೆ ಉಪಾಸನೆ ಮಾಡುವವರಿಗೆ, ಶ್ರೀಹರಿಯು ತನ್ನ ನಿಜ ರೂಪವನ್ನು ತೋರಿಸುವನು. ॥ ೯ ॥

**೩. ಭಾವದರ್ಪಣ**

ಸ್ತ್ರೀ ಪುರುಷರಲ್ಲಿ ಶ್ರೀಹರಿ ಸಾಶನ-ಎಂದರೆ, ಭೋಜನದಿಂದ ಸಹಿತನಾಗಿ ಇರತಾನೆಂತಲೂ, ಜಡಗಳಲ್ಲಿ ಅನಶಸ-ಎಂದರೆ, ಭೋಜನ ರಹಿತನಾಗಿರತಾನೆಂತಲೂ ಹೇಳುತ್ತಾರೆ । ಸಾಶನೇತಿ. ॥ ೯ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ಸಾಶನ" ಇತಿ ॥ ಸಾಶನಾಃ ಮಾನವಾಃ ॥ ಅನಶನಾಃ ದೇವಾಃ ॥ ಸಾಶನೇಷು ಸಂಸ್ಥೇವ್ಯ ದೇವೇಷು ಭಜನೀಯಃ ಇತ್ಯರ್ಥಃ ॥ "ತ್ರಿಪಾತ್ ಸ ಏವ ಭಗವಾನ್ ಸರ್ವ ಪ್ರಾಣಿಷು ಸಂಸ್ಥಿತಃ ॥ ನಿರಸ್ನೇಷು ಚ ವಿದ್ವತ್ಸು ತ್ರಿದಶೇಷ್ವಿ ತರೇಷು ಚ" ॥ ಇತಿ ದ್ವಿತೀಯ ತಾತ್ಪರ್ಯೇ. ॥ ೯ ॥

## ಕನ್ನಡಾರ್ಥ

ಸಾಶನ-ನಿರಶನ, ಚಲ-ಅಚಲ-ಇವುಗಳಲ್ಲಿ ಬಿಂಬರೂಪೀ ಶ್ರೀ ಪರಮಾತ್ಮನನ್ನು ಉಪಾಸಿಸಬೇಕೆಂದು ನಿರೂಪಿಸುತ್ತಾರೆ. "ಸಾಶನ"-ಎಂಬ ಈ ಪದ್ಯದಿಂದ.

ಅನ್ನ-ಮುಂತಾದ ಅಶನಗಳಿಂದ ಜೀವಿಸುವುದರಿಂದ, ಮಾನವರಿಗೆ "ಸಾಶನರು" ಎನ್ನುತ್ತಾರೆ. ದೇವತೆಗಳು ನಿರಶನರು. ಮಾನವರಲ್ಲಿ ಅಧಿಷ್ಠಿತ ನಾಗಿರುವ ಸಾಶನನಾಮಕ ಹರಿಯನ್ನು ಭಕ್ತ್ಯಾದರಗಳಿಂದ ಸೇವಿಸಬೇಕು. ಸ್ತೋತ್ತಮರು-ಸ್ವಾವರರು-ಸಮರು-ಹೀಗೆ ವಿಭಾಗ ಮಾಡಿ, ಅವರವರ ಉಚಿತಾನುಸಾರ ಅವರಲ್ಲಿರುವ ಶ್ರೀಹರಿಯನ್ನು ಉಪಾಸಿಸಬೇಕು-ಎಂತ ತಾತ್ಪರ್ಯ. ನಿರಶನರಾದ ದೇವತೆಗಳಲ್ಲಿ ಇರುವ ಹರಿಯನ್ನು ಅತಿಶಯ ಭಕ್ತಿಪೂರ್ವಕ ಭಜಿಸಬೇಕು.

"ಶ್ವೇತದ್ವೀಪ - ಅನಂತಾಸನ - ವೈಕುಂಠ" - ಎಂಬ ಮುಕ್ತ ತ್ರಿಧಾಮಗಳಲ್ಲಿ ಸ್ವರೂಪಾಂಶದಿಂದ ಇರುವ ಶ್ರೀಹರಿಯು ಸರ್ವಪ್ರಾಣಿ ಗಳಲ್ಲಿ ಅಂತರ್ಗತರೂಪನಾಗಿರುತ್ತಾನೆ. ಅನ್ನವುಳ್ಳವರು-ಅನ್ನತಿನ್ನದವರು-ವಿದ್ವಜ್ಜನರು - ಅವಿದ್ವಾಂಸರು, ದೇವತೆಗಳು - ಇತರರು - ಈ ಸರ್ವರಲ್ಲಿಯೂ ಅವನೇ ಅಂತರ್ಯಾಮಿಯಾಗಿದ್ದಾನೆ-ಎಂದು **ಭಾಗವತ ದ್ವಿತೀಯ ಸ್ಕಂಧ ತಾತ್ಪರ್ಯದಲ್ಲಿ**, ಶ್ರೀಮದಾಚಾರ್ಯರು ಉಪದೇಶಿಸಿರು ತ್ತಾರೆ. ॥ ೯ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಈ ಪುರಷರೂಪವೇ ಸಾಶನ-ಅನಶನರೂಪವೆಂದು ಸ್ಥಾನಭೇದ ದಿಂದ ಕರೆಸುವುದೆಂತ ತಿಳಿಸುತ್ತಾರೆ. ಜೀವಯೋಗ್ಯರಸಗಳನ್ನು ಸ್ವೀಕರಿಸಿ ಕೊಡುವುದರಿಂದ ಸಾಶನನೆಂದು ಹೆಸರುಳ್ಳ ಪುರುಷರೂಪನು, ಸ್ತ್ರೀ ಪುರುಷ ರೂಪಗಳಲ್ಲಿ ವಾಸವಾಗಿಹನೆಂದು ತಿಳಿದು, ವಿಶ್ವಾಸಪೂರ್ವಕ ಅನ್ನೋದಕಾದಿ ಗಳಿಂದ ಶಕ್ತ್ಯನುಸಾರ ಭಜಿಸಿ, ಸ್ವಾವರರೆಂಬ ಚಿಕ್ಕವರನ್ನೂ,

ಉತ್ತಮರನ್ನೂ ಸಹ ಸಂತೋಷಪಡಿಸುತ್ತಿರಬೇಕು. ಕ್ಲೇಶನಾಶನಾದ ದೇವರು ಅಚಲವೆಂಬ ಪ್ರತಿಮಾದಿಗಳಲ್ಲಿದ್ದು, ದೃಷ್ಟ್ಯಾ ಅನ್ನಪರಿಶುದ್ಧಿ ಕೊಡುವುದರಿಂದ, ಅನಶನರೂಪನೆಂದು ಹೆಸರುಳ್ಳವನಾಗಿದನೆಂದು ಉಪಾಸನೆ ಮಾಡುವವರಿಗೆ ತನ್ನ ದರ್ಶನವನ್ನು ಕೊಡುವನು. ॥ ೯ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. **"ಸಾಶನ"** "ಅಶನ"-ಎಂದರೆ, ಭೋಜನ ಮಾಡುವ ಭೋಜ್ಯವಸ್ತು. ಅನ್ನಾದಿ ಆಹಾರ ಪದಾರ್ಥಗಳು "ಅಶನ"ವೆನಿಸುವುವು. ಕಲಿಯುಗದಲ್ಲಿ ಮಾನವರಿಗೆ ಅನ್ನಗತ ಪ್ರಾಣ. ಅನ್ನರಸದಲ್ಲಿ ರಸಪದ ವಾಚ್ಯನಾಗಿದ್ದು, ತದ್ಗತ ಸ್ವಾಖ್ಯರಸವನ್ನು ತಾನು ಸ್ವೀಕರಿಸಿ, ಸ್ಥೂಲದೇಹಕ್ಕೆ ಉಪಚಯಕೊಡುತ್ತಾ, ಸರ್ವಸಾರಭೋಕ್ತನಾದ ಶ್ರೀಹರಿಯೇ ಜೀವರಿಗೆ ತೃಪ್ತಿ ಕೊಡುವನು. ಇದರಿಂದ, **"ಸಾಶನ"**-ಎಂಬ ಹೆಸರಿನಿಂದ ಆ ಶಬ್ದವಾಚ್ಯನಾಗಿ, ಬಿಂಬರೂಪೀ ಶ್ರೀಹರಿಯು ಮಾನವ ಸ್ತ್ರೀಪುರುಷರುಗಳ ಸ್ಥೂಲದೇಹದಲ್ಲಿ ವಿದ್ಯಮಾನನಾಗಿದ್ದಾನೆ.

೨. "ನಿರಶನಃ"-ಎಂದರೆ, ದೇವತೆಗಳೆಂದರ್ಥ. ಅವರ ದೇಹ ವೈಕಾರಕಾಂಹಕಾರದಿಂದ ನಿರ್ಮಿತವಾದದ್ದು. ಅವರಿಗೆ ಹಸಿವು-ನೀರಡಿಕೆ-ನಿದ್ರೆ-ದೇಹವಿಕಾರ, ಇತ್ಯಾದಿ ಬಾಧಕ ವಸ್ತುಗಳಿಲ್ಲ. ದೇವತೆಗಳಲ್ಲಿ ನಿರಶನ ಶಬ್ದವಾಚ್ಯನಾಗಿದ್ದಾನೆ.

೩. ಈ ರೀತಿ ಸಾಶನಾಹ್ವಯನಾಗಿ, ಮಾನವರಲ್ಲೂ, ನಿರಶನಾಹ್ವಯನಾಗಿ, ಉತ್ತಮರಾದ ದೇವತೆಗಳಲ್ಲೂ, ಶ್ರೀಹರಿಯು ವಾಸವಾಗಿದ್ದಾನೆಂದು, ಶಾಸ್ತ್ರದ್ವಾರಾ ಅರಿತು, ಜ್ಞಾನಾನುಸಂಧಾನಪೂರ್ವಕ ಆತನನ್ನು ನಿರಂತರ ಭಜಿಸುತ್ತಾ, ನಿತ್ಯಾನಂದರೂಪನನ್ನು ಪೋಷಿಸುತ್ತಿರಬೇಕೆಂದು ತಿಳಿಸುತ್ತಾರೆ ದಾಸರಾಯರು.

೪. ತಾರತಮ್ಯಾನುಸಾರ, ಸ್ವೋತ್ತಮರು-ಸಮರು-ಸ್ವಾವರರು-ಎಂದು ಮೂರು ಪ್ರಕಾರ. ತನಗಿಂತಲೂ ಗುಣದಲ್ಲಿ ಉತ್ತಮರಾದವರು-

ಸ್ಥೋತ್ತಮರು. ಸಮಾನಸ್ಕಂಧರು ಸಮರು. ತನಗಿಂತಲೂ ಗುಣದಲ್ಲಿ ಕನಿಷ್ಠರಾದವರು ಸ್ಥಾವರರು. ಹೀಗೆ, ಅವರವರ ಯೋಗ್ಯತಾನುಸಾರ ತಿಳಿದು, ತನಗಿಂತ ಭಗವದ್ರೂಪಗಳನ್ನು ಚಿಂತಿಸಬೇಕೆಂದು ತಿಳಿಸುತ್ತಾರೆ.

೫. ಜೀವನದಲ್ಲಿ ಅಡಿಗಡಿಗೆ ಬರುತ್ತಿರುವ ದುಃಖದಾಯಕವಾದ ಕ್ಲೇಶಗಳು ಕರ್ಮಜನ್ಯವಾದುವು. ಕರ್ಮವು ತ್ರಿಗುಣಜನ್ಯವು. ಪ್ರಾಕೃತ ತ್ರಿಗುಣಗಳಿಂದ ಯುಕ್ತವಾದದು ಈ ಸಂಸಾರವು. ಭವಜನಿತವಾದ ಪರಿಪರಿ ಕ್ಲೇಶಗಳನ್ನು ಶ್ರೀಹರಿಯು ಪರಿಹರಿಸುವುದರಿಂದ–**ಕ್ಲೇಶನಾಶನನು.**

೬. **ಅಚಲ**–ವೆಂದರೆ, ಚಲಿಸದಿರುವ ಪರ್ವತಾದಿ ಜಡವಸ್ತುಗಳು. ಸಕಲಜಡವಸ್ತುಗಳಲ್ಲಿ ಖಂಡಾಖಂಡರೂಪಗಳಿಂದ ವ್ಯಾಪ್ತನಾಗಿದ್ದಾನೆ ಶ್ರೀಹರಿ. ಈ ರೀತಿಯಲ್ಲಿ ಜೀವಾಂತರ್ಗತನಾಗಿ, ಕಾಂತಿಯುಕ್ತನಾಗಿ ಪ್ರಕಾಶಿಸುತ್ತಿರುವ ಅಶನನಾಮಕನಾದ ಶ್ರೀಹರಿಯ ರೂಪೋಪಾಸನೆ ನಿರಂತರವೂ ಮಾಡುತ್ತಿರುವ ಭಗವದ್ಭಕ್ತರಿಗೆ ಅಪರೋಕ್ಷರೂಪವಾದ ತನ್ನ ಸಂದರ್ಶನಭಾಗ್ಯವನ್ನು ಅವರ ದಹರಾಕಾಶಗತ ಹೃತ್ಪದ್ಮದಲ್ಲಿ ಹೊಳೆದು, ನೀಡುವನೆಂದು–ಪ್ರಸಕ್ತಪದ್ಯದ ತಾತ್ಪರ್ಯಾರ್ಥ. ॥ ೯ ॥

## ಪದ್ಯ–೧೦

**ಮೂಲ:**

**ಪ್ರಕಾರಾಂತರ ಚಿಂತಿಸುವುದೀ ।**
**ಪ್ರಕೃತಿಯೊಳು ವಿಶ್ವಾದಿರೂಪವ ।**
**ಪ್ರಕಟಮಾಳ್ಪೆನು ಯಥಾಮತಿಯೊಳು ಗುರುಕೃಪಾ ಬಲದಿ ॥**
**ಮುಕುರನಿರ್ಮಿತ ಸದನದೊಳಗೆ ಪೊಗೆ ।**
**ಸ್ವಕೀಯರೂಪವ ಕಾಂಬ ತೆರದಲಿ ।**
**ಅಕುಟಿಲಾತ್ಮ ಚರಾಚರದಿ ಸರ್ವತ್ರ ತೋರುವನು ॥ ೧೦ ॥**

**ಅವತರಣಿಕೆ :**

ಬಿಂಬರೂಪನಾದ ಶ್ರೀಹರಿಯ ಚಿಂತನಾಕ್ರಮವನ್ನು ಇನ್ನೂ ತಿಳಿಸುತ್ತಾರೆ. ॥ ೧೦ ॥

**ಪ್ರತಿಪದಾರ್ಥ :**

**ಈ ಪ್ರಕೃತಿಯೊಳು** = ಲಿಂಗದೇಹಾಖ್ಯ ಈ ಪ್ರಕೃತಿಯ ಆವರಣದಲ್ಲಿ, **ಪ್ರಕಾರಾಂತರ** = ಇನ್ನೊಂದು ಪ್ರಕಾರವಾಗಿ, **ಚಿಂತಿಸುವುದು** = ಧ್ಯಾನಿಸುವವರಾಗಬೇಕು. **ವಿಶ್ವಾದಿರೂಪವ** = ವಿಶ್ವಾದಿ ಎಂಟುರೂಪಗಳನ್ನು, **ಗುರು ಕೃಪಾಬಲದಿ** = ಗುರುಗಳ ಕರುಣೆಯಿಂದ, **ಯಥಾಮತಿಯೊಳು** = ಬುದ್ಧಿಗೆ ತೋಚಿದಷ್ಟು ಮಟ್ಟಿಗೆ, **ಪ್ರಕಟ ಮಾಳ್ಪೆನು** = ವಿಸ್ತಾರರೂಪದಿಂದ ಹೇಳುತ್ತೇನೆ. **ಮುಕುರನಿರ್ಮಿತ** = ಕನ್ನಡಿಯಿಂದ ಮಾಡಿದ, **ಸದನದೊಳು** = ಮನೆಯಲ್ಲಿ, **ಪೊಗೆ** = ಒಬ್ಬನು ಪ್ರವೇಶಿಸಿದರೆ, **ಸ್ವಕೀಯ ರೂಪವ** = ತನ್ನದೇ ಆದ ಪ್ರತಿಬಿಂಬರೂಪಗಳನ್ನು, **ಕಾಂಬ ತೆರದಲಿ** = ಕಾಣುವಂತೆ, **ಅಕುಟಿಲಾತ್ಮ** = ಸಕಲದೋಷವಿದೂರನಾದ ಶ್ರೀಪರಮಾತ್ಮನು, **ಚರಾಚರದಿ** = ಸ್ಥಾವರ ಜಂಗಮಾಧಿಷ್ಠಾನಗಳಲ್ಲಿ, **ಸರ್ವತ್ರ ತೋರುವನು** = ಸರ್ವಾಧಿಷ್ಠಾನಗಳಲ್ಲಿ ತತ್ತದಾಕಾರನಾಗಿ ಕಾಣಿಸುವನು. ॥ ೧೦ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಲಿಂಗದೇಹಾಖ್ಯ ಈ ಪ್ರಕೃತಿಯಲ್ಲಿ ಪ್ರಕಾರಾಂತರ ಭಗವದ್ರೂಪಗಳ ಮತ್ತೊಂದು ಪ್ರಕಾರ ಚಿಂತಿಸೋವರಾಗಬೇಕು. ಚಿಂತಿಸಬೇಕಾದ ಭಗವದ್ರೂಪಾದಿಗಳಾದ ವಿಶ್ವಾದಿ ಎಂಟುರೂಪಗಳ ಗುರುಗಳ ಅಂತಃಕರಣ ಬಲದಿಂದ ಬುದ್ಧಿಗೆ ತೋರಿದಷ್ಟು ವಿಸ್ತಾರವಾಗಿ ಹೇಳತೇನು. ಕನ್ನಡಿಯಿಂದ ನಿರ್ಮಿತವಾದ ಮನಿಯನ್ನ ಒಬ್ಬ ಪುರುಷ ಪ್ರವೇಶ ಮಾಡಿದರೆ, ಪ್ರವೇಶ ಮಾಡಿದ ಪುರುಷನ ರೂಪ ಅನೇಕ ದರ್ಪಣಗಳಲ್ಲಿ ಅನೇಕ ರೂಪಗಳ ಕಾಣೋವನಾಗತಾನೆ. ಇಚರೋಪಾದಿಯಲ್ಲಿ, ದೋಷ ದೂರನಾದ ಪರಮಾತ್ಮನು ಸ್ಥಾವರ ಜಂಗಮ ಸರ್ವಾಧಿಷ್ಠಾನಗಳಲ್ಲಿ ಅನೇಕ ರೂಪಗಳಿಂದ ಕಾಣಿಸೋವನಾಗತಾನೆ–ಎಂತ ತಾತ್ಪರ್ಯ. ॥ ೧೦ ॥

### ೨. ಭಾವಪ್ರಕಾಶಿಕೆ

ಪ್ರಕಾರಾಂತರವಾಗಿಯೂ, ಪರಮಾತ್ಮನ ರೂಪಗಳನ್ನು ಸರ್ವತ್ರ ಚಿಂತಿಸಬಹುದು. ಪ್ರಕೃತಿಯೊಳಗೆ, ವಿಶ್ವಾದಿರೂಪದಿಂದ ಪರಮಾತ್ಮನು ಕಾಣುವನು. ನಮ್ಮ ಗುರುಗಳ ಕೃಪಾಬಲದಿಂದ ಪ್ರಕೃತಿಯೊಳಗೆ ವಿಶ್ವಾದಿರೂಪವನ್ನು ಚಿಂತಿಸುವ ಪ್ರಕಾರವನ್ನು ನನಗೆ ತೋರಿದಷ್ಟು ಹೇಳುವೆನು. ರಸಸಂಬಂಧವಾದ ಕನ್ನಡಿಯಿಂದ ಮನೆಕಟ್ಟ, ಆ ಮನೆಯಲ್ಲಿ ಯಾವನಾದರೂ ಪ್ರವೇಶಮಾಡಿದರೆ, ಆ ಭಾಗದಲ್ಲೂ ಕನ್ನಡಿ ಇರುವುದರಿಂದ, ಒಂದು ಕನ್ನಡಿಗೆ ಮತ್ತೊಂದು ಕನ್ನಡಿಯು ಪ್ರತಿಬಿಂಬ ವಾಗಿ, ಆ ಕಡೆಯಲ್ಲೂ ಒಳಹೊಕ್ಕವನ ರೂಪವು ಅನಂತವಾಗಿ ಕಾಣುವುದು. ಹೋದವನು ಒಬ್ಬನೇ ಆದರೂ, ಎದುರೆದುರಿಗೆ ಕನ್ನಡಿಗಳ ಪ್ರತಿಬಿಂಬದಿಂದ ಅನಂತರೂಪ ಕಾಣುವಂತೆ, ಪರಮಾತ್ಮನು ಚರಾಚರಾತ್ಮಕ ಪ್ರಪಂಚದಲ್ಲಿ ಸ್ವರೂಪಭೂತವಾದ ಶರೀರೋಪಾಧಿ ಯಿಂದ ಅನಂತಾನಂತ ರೂಪಿಯಾಗಿ ಕಾಣುವನು. ॥ ೧೦ ॥

**೩. ಭಾವದರ್ಪಣ**

ಸರ್ವತ್ರವ್ಯಾಪ್ತನೆಂದು ಸದೃಷ್ಟಾಂತ ಹೇಳುತ್ತಾರೆ ॥ ಪ್ರಕಾರಾಂತೇತಿ॥ ಅಕುಟಿಲಾತ್ಮಕ–ವಕ್ರರಹಿತ ಸ್ವರೂಪ ಎಂಬರ್ಥ. ಮುಕುರನಿರ್ಮಿತ–ಕನ್ನಡಿಯಿಂದ ಮಾಡಲ್ಪಟ್ಟಂಥ ॥ ಸದನ–ಗೃಹ. ॥ ೧೦ ॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ**

"ಪ್ರಕಾರ"–ಇತಿ ॥ "ಮುಕುರ"–ಕನ್ನಡಿ ॥ "ಪೊಗೆ"–ಹೋಗಲು ॥ ೧೦ ॥

### ಕನ್ನಡಾರ್ಥ

ಹರಿಯ ಚಿಂತನಾಕ್ರಮವನ್ನು ಬೇರೊಂದು ರೀತಿಯಲ್ಲಿ ತಿಳಿಸುತ್ತಾರೆ. "ಪ್ರಕಾರ"–ಎಂಬ ಪದ್ಯದಿಂದ. ಮುಕುರಃ–ಎಂದರೆ, ಕನ್ನಡಿ, ಪೊಗೆ–ಎಂದರೆ, ಹೋಗಲು, ಪ್ರವೇಶಿಸಲು–ಎಂದರ್ಥ. ॥ ೧೦ ॥

### ೪. ಶ್ರೀಗುರುಹೃದಯಪ್ರಕಾಶಿಕೆ

ವಿಶ್ವ–ಮೊದಲಾದ ಎಂಟು ರೂಪವನ್ನು ಪ್ರಕಾರಾಂತರವಾಗಿ ಸ್ಮರಿಸುವ ಬಗೆಯನ್ನು ತಿಳಿಸುತ್ತಾರೆ–ಪ್ರಕಾರವೆಂದು ಎರಡು ಪದ್ಯದಿಂದ.

ಮುಕುರ ನಿರ್ಮಿತ ಸದನವೆಂಬ ಕನ್ನಡಿ ಮನೆಯೊಳಗೆ ಹೋಗಲು, ತನ್ನ ರೂಪ ಅನೇಕ ಸ್ಥಳಗಳಲ್ಲಿ ಉಂಟಾಗಿ, ಅನೇಕ ರೂಪ ಕಾಣಬರುವಂತೆ ದೇವರು ಪ್ರಕೃತಿ–ಮೊದಲಾದ ಅಧಿಷ್ಠಾನಗಳಲ್ಲಿ, ಅಕುಟಿಲಾತ್ಮನೆಂಬ ನಿರ್ದೋಷನಾದ ದೇವರು ಜಡಚೇತನಗಳಲ್ಲಿ ಸರ್ವತ್ರ ಅನೇಕ ರೂಪವಾಗಿರುವುದನ್ನು ಯಥಾಮತಿ ಗುರುಕೃಪಾಬಲದಿಂದ, ಪ್ರಕೃತಿ–ಮೊದಲಾದ ವಸ್ತುಗಳಲ್ಲಿ ವಿಶ್ವ–ಮೊದಲಾದ ರೂಪಚಿಂತನಾಪ್ರಕಾರವನ್ನು ತಿಳಿಸುತ್ತೇನೆ. ॥ ೧೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಪ್ರಕೃತ್ಯಾತ್ಮಕವಾದ ಈ ಜಗತ್ತಿನಲ್ಲಿ ಭಗವದ್ರೂಪಗಳನ್ನು ಪ್ರಾಕಾರಂತವಾಗಿ, ಅಂದರೆ, ಬೇರೆ ವಿಧದಲ್ಲಿ, ಚಿಂತಿಸುವ ಉಪಾಸನಾ ಕ್ರಮವನ್ನು ಪ್ರಸಕ್ತಪದ್ಯದಿಂದ ತಿಳಿಸುತ್ತಾರೆ.

ಜೀವನಸ್ವರೂಪಕ್ಕೆ ಆವರ್ಕರೂಪದಲ್ಲಿರುವ ಲಿಂಗದೇಹವು ಪ್ರಕೃತ್ಯಾತ್ಮಕವಾದದ್ದು. ಸೂಕ್ಷ್ಮಪ್ರಕೃತಿಯು ತ್ರಿಗುಣಾತ್ಮಕವಾದದ್ದು. ಈ ರೀತಿಯಲ್ಲಿರುವ ಲಿಂಗದೇಹಾಖ್ಯ ಈ ಪ್ರಕೃತಿಯ ಆವರಣದಲ್ಲಿ ವಿಶ್ವಾದಿ ಎಂಟುರೂಪಗಳನ್ನು ಚಿಂತಿಸುವ ವಿಧಾನವನ್ನು ಹೇಳುತ್ತಾರೆ.

೨. ವಿಶ್ವ – ತೈಜಸ – ಪ್ರಾಜ್ಞ – ತುರ್ಯ – ಆತ್ಮ – ಅಂತರಾತ್ಮ– ಜ್ಞಾನಾತ್ಮ–ಪರಮಾತ್ಮ–ಎಂಬ ಶ್ರೀಹರಿಯ ಎಂಟು ಭಗವದ್ರೂಪಗಳ ಉಪಾಸನಾ ವಿಧಾನವನ್ನು ಗುರುಕೃಪಾಬಲದಿಂದ ಯಥಾಮತಿ ತಿಳಿಯ ಬೇಕು. ತದ್ವಾರಾ, ಶ್ರೀಪರಮಾತ್ಮನು ಅನಂತಾನಂತರೂಪಗಳಿಂದ ಪ್ರಕಟನಾಗಿದ್ದಾನೆಂದು–ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ.

೩. ಒಂದು ಮನೆಯಲ್ಲಿ ಗೋಡೆಗಳ ಮೇಲೆ ಎದಿರುಬದಿರಾಗಿ ಕನ್ನಡಿಗಳ ಸಾಲುಗಳನ್ನು ನಿರ್ಮಿಸಿ, ಅವುಗಳ ಮಧ್ಯೆ ನಿಂತಾಗ, ಆ ಪುರುಷನ ಪ್ರತಿಬಿಂಬಗಳು ಅನಂತಸಂಖ್ಯೆಯಲ್ಲಿ ಮೂಡುವುವು. ಒಂದು ಕನ್ನಡಿಯಲ್ಲಿ ಮೂಡುವ ಪ್ರತಿಬಿಂಬವು ಅಭಿಮುಖ ಕನ್ನಡಿಗೆ ಬಿಂಬವಾಗಿ ಪರಿಣಮಿಸಿ, ಬಹುಸಂಖ್ಯಾ ಪ್ರತಿಬಿಂಬಗಳ ಉತ್ಪತ್ತಿಯಿಂದ, ಅನಂತಸಂಖ್ಯೆಯಲ್ಲಿ ಪುರುಷನು ಸ್ವಕೀಯ ಪ್ರತಿಬಿಂಬಗಳನ್ನು ಕಾಣುತ್ತಾನೆ.

೪. ಈ ರೀತಿಯಲ್ಲಿ, ಏಕಮೇವಾದ್ವಿತೀಯನಾದ ಶ್ರೀಪರಮಾತ್ಮನು ಸಕಲ ಜೀವರ ಬಿಂಬನು. ಸರ್ವಚೇತನರು ಅವನ ಪ್ರತಿಬಿಂಬಭೂತರು. ಅಂತೆಯೇ, ಸಕಲಜಡವಸ್ತುಗಳು ಶ್ರೀಹರಿಯ ಅಚಲಾಧಿಷ್ಠಾನಗಳು. ಹೀಗೆ ಚಲಪ್ರತೀಕಗಳಾದ ಸರ್ವ ಜೀವರು, ಅಚಲಪ್ರತೀಕಗಳಾದ

ಜಡವಸ್ತುಗಳು–ಪರಮಾತ್ಮನಿಗೆ ಅಧಿಷ್ಠಾನಭೂತರು. ಶ್ರೀಪರಮಾತ್ಮನು ಸಕಲದೋಷವಿ, ದೂರನು. ಇದನ್ನು **ಅಕುಟಿಲಾತ್ಮ**–ಎಂದಿದ್ದಾರೆ ದಾಸರಾಯರು. ಅಂದರೆ ವಕ್ರರಹಿತಸ್ವರೂಪನೆಂದರ್ಥ.

ಹಾಗೆ, ಸರ್ವದೋಷವಿವರ್ಜಿನಾದ ಬಿಂಬನು ಚರಚರಾತ್ಮಕವಾದ ಈ ಜಗತ್ತಿನಲ್ಲಿ ಸರ್ವತ್ರ, ದೇಶ ಕಾಲಗಳಲ್ಲಿ ಪ್ರಕಟನಾಗಿದ್ದಾನೆ. ||೧೦||

## ಪದ್ಯ–೧೧

**ಮೂಲ :**

**ಪರಿಚ್ಛೇದತ್ರಯ ಪ್ರಕೃತಿಯೊಳ ।**
**ಗಿರುತಿಪನು ವಿಶ್ವಾದಿರೂಪವ ।**
**ಧರಿಸಿ ಆತ್ಮಾದಿತ್ರಿರೂಪವ ಈ ಷಣತ್ರಯದಿ ॥**
**ಸುರುಚಿ ಜ್ಞಾನಾತ್ಮ ಸ್ವರೂಪದಿ ।**
**ತುರಿಯನಾಮಕ ವಾಸುದೇವನ ।**
**ಸ್ಮರಿಸು ಮುಕ್ತಿಸುಖಪ್ರದಾಯಕ ನೀತನಹುದೆಂದು ॥ ೧೧ ॥**

**ಅವತರಣಿಕೆ :**

ಲಿಂಗದೇಹಗತ ಭಗವದ್ರೂಪಗಳ ವಿಚಾರವನ್ನೇ ವಿಸ್ತಾರರೂಪದಿಂದ ಹೇಳುತ್ತಾರೆ. ॥ ೧೧ ॥

**ಪ್ರತಿಪದಾರ್ಥ :**

**ಪರಿಚ್ಛೇದತ್ರಯ** = ಸತ್ವ–ರಜ–ತಮ–ಎಂಬ ಮೂರು ಪ್ರಾಕೃತ ಆವರಣಗಳಿಂದ ಯುಕ್ತವಾದ, **ಪ್ರಕೃತಿಯೊಳಗೆ** = ಪ್ರಕೃತಿ ಸಾಂಕೇತವಾದ ಅನಾದಿಲಿಂಗ ಶರೀರಾಖ್ಯ ಸತ್ವಾದಿ ಗುಣತ್ರಯಗಳೊಳಗೆ, **ವಿಶ್ವಾದಿ ರೂಪವ** = ಸತ್ವಗುಣದಲ್ಲಿ ವಿಶ್ವ, ರಜೋಗುಣದಲ್ಲಿ ತೈಜಸ ಮತ್ತು ತಮೋಗುಣದಲ್ಲಿ ಪ್ರಾಜ್ಞ, **ಧರಿಸಿ** = ಈ ನಾಮತ್ರಯಗಳಿಂದ ವಿದ್ಯಮಾನನಾಗಿದ್ದುಕೊಂಡು, **ಆತ್ಮಾದಿ ತ್ರಿರೂಪವ** = ಆತ್ಮ–ಅಂತರಾತ್ಮ ಮತ್ತು ಪರಮಾತ್ಮ–ಎಂಬ ಮೂರುರೂಪಗಳಿಂದ, **ಈಷಣತ್ರಯದಿ** = ಆತ್ಮರೂಪದಿಂದ ದಾರೇಷಣ, ಅಂತರಾತ್ಮರೂಪದಿಂದ ವಿತ್ತೇಷಣ ಮತ್ತು ಪರಮಾತ್ಮ ರೂಪದಿಂದ ಪುತ್ರೇಷಣ–ಈ ಮೂರು ವಿಧವಾದ ಕ್ಲೇಶಪ್ರದವಾದ ಈ ಕ್ಷಣಗಳ ಅಧಿಷ್ಠಾನಗತನಾಗಿ, **ಸುರುಚಿ** = ಸಮೀಚೀನವಾದ ಕಾಂತಿಸಂಪನ್ನನಾದ, **ಜ್ಞಾನಾತ್ಮ** = ಜ್ಞಾನನಾಮಕನಾದ

**ಶ್ರೀ** ಪರಮಾತ್ಮನು, **ಸ್ವರೂಪದಿ** = ಜೀವನ ಸ್ವರೂಪದೇಹದಲ್ಲಿ, **ಮುಕ್ತಿಸುಖಪ್ರದಾಯಕನು** = ಮೋಕ್ಷಾನಂದವನ್ನು **ಕೊಡತಕ್ಕ**, **ತುರಿಯನಾಮಕ ವಾಸುದೇವನ** = ತುರ್ಯನಾಮಕನಾದ ವಾಸುದೇವ ರೂಪವನ್ನು, **ಈತನಹುದೆಂದು** = ಈ ಪ್ರಕಾರ, ವಿಶ್ವಾದಿ ಎಂಟು ನಾಮಗಳಿಂದ ಅಷ್ಟಾಧಿಷ್ಠಾನಗತನಾಗಿರುವನೆಂದು ತಿಳಿದು, **ಸ್ಮರಿಸು** = ಧ್ಯಾನ ಮಾಡುವವನಾಗು. ॥ ೧೧ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಹತ್ತನೇ ಶ್ಲೋಕದಲ್ಲಿ ಹೇಳಿದ ಲಿಂಗದೇಹದ ವಿಚಾರ ಸವಿಸ್ತಾರವಾಗಿ ಹೇಳತಾರೆ.

ಜೀವನ ಮ್ಯಾಲೆ ಮೂರು ಆವರಣದಿಂದ ಯುಕ್ತವಾದ ಪ್ರಕೃತಿ ಸಾಂಕೇತವಾದ ಗುಣತ್ರಯಾತ್ಮಕ ಅನಾದಿಲಿಂಗಶರೀರಾಖ್ಯ ಸತ್ವಾದಿ ಗುಣತ್ರಯದೊಳಗೆ ಆದಿಶಬ್ದದಿಂದ ವಿಶ್ವ ತೈಜಸ ಪ್ರಾಜ್ಞ–ಈ ಮೂರು ರೂಪಗಳೂ ಗ್ರಾಹ್ಯ. ವಿಶ್ವ, ಸತ್ವಗುಣದಲ್ಲಿ. ತೈಜಸ, ರಜೋಗುಣದಲ್ಲಿ, ಪ್ರಾಜ್ಞ, ತಮೋಗುಣದಲ್ಲಿ, ಆದಿಶಬ್ದದಿಂದ ಆತ್ಮ, ಅಂತರಾತ್ಮ, ಪರಮಾತ್ಮ–ಈ ಮೂರುರೂಪಗಳೂ ಗ್ರಾಹ್ಯ. ಈ ಮೂರುರೂಪಗಳೂ ಲಿಂಗದೇಹಗತಗಳಾದ ದಾರೇಷಣ–ಆತ್ಮ, ವಿತ್ತೇಷಣ–ಅಂತರಾತ್ಮ. ಪುತ್ರೇಷಣ–ಪರಮಾತ್ಮ. ಈ ಮೂರರಲ್ಲಿ ಮೂರು ರೂಪಗಳು. ಸಮೀಚೀನವಾದ ಕಾಂತಿಸಂಪನ್ನನಾದ, ಜೀವನ ಸ್ವರೂಪದಲ್ಲಿ ಜ್ಞಾನಾತ್ಮಕನಾದ ಪರಮಾತ್ಮ, ಮೋಕ್ಷಪ್ರದಾಯಕನಾದ ತುರ್ಯನಾಮಕ ವಾಸುದೇವನ ಆಯಾ ಅಧಿಷ್ಠಾನಗಳಲ್ಲಿ ಆಯಾ ಭಗವದ್ರೂಪಗಳ ಸ್ಮರಣ ಮಾಡೋವನಾಗಬೇಕು. ಈ ಪ್ರಕಾರ ಗುಣಪೂರ್ಣನಾದ ಪರಮಾತ್ಮ ವಿಶ್ವಾದಿ ಎಂಟುರೂಪಗಳ ಧರಿಸಿ, ಪೂರ್ವೋಕ್ತಸ್ಥಾನಗಳಲ್ಲಿ ಇರೋವನಾಗಿದ್ದಾನೆ. ಆಯಾ ಭಗವದ್ರೂಪಗಳ ಸ್ಮರಣ ಮಾಡೋಣದ

ರಿಂದ ಆದದು, ಆಯಾ ಭಗದವದ್ರೂಪಗಳ ದ್ವಾರಾ, ಅಜ್ಞಾನ ಪರಿಹಾರ ವಾಗತದೆ. ಅನಂತರ, ವಾಸುದೇವ ಲಿಂಗಭಂಗ ಐದಿಸಿ ಸ್ವರೂಪಸುಖ ವ್ಯಕ್ತಮಾಡತಕ್ಕವನೆಂದು ತಿಳಿಯೋವನಾಗಬೇಕೆಂದು ತಾತ್ಪರ್ಯ. ॥ ೧೧ ॥

**೨. ಭಾವಪ್ರಕಾಶಿಕೆ :**

ಪ್ರಕೃತಿಯು–ಮೂರು ಪರಿಚ್ಛೇದಸ್ವರೂಪಗಳು, ಸತ್ವಪರಿಚ್ಛೇದ, ರಜಃ ಪರಿಚ್ಛೇದ, ತಮಃ ಪರಿಚ್ಛೇದವೆಂದು–ಈ ಮೂರರಲ್ಲಿ ವಿಶ್ವ, ತೈಜಸ, ಪ್ರಾಜ್ಞ–ಎಂಬ ಮೂರುರೂಪಗಳಿಂದ ಶ್ರೀ ಪರಮಾತ್ಮನು ವಾಸಮಾಡುವನು. ದಾರೇಷಣ, ಪುತ್ರೇಷಣ, ವಿತ್ತೇಷಣವೆಂಬ–ಈ ಷಣತ್ರಯದಲ್ಲಿ ಆತ್ಮ, ಅಂತರಾತ್ಮ, ಪರಮಾತ್ಮನೆಂಬ ರೂಪತ್ರಯ ಗಳಿಂದ ವಾಸಮಾಡುವನು. ಜ್ಞಾನಾತ್ಮಸ್ವರೂಪನು ತುರ್ಯ, ವಾಸದೇವ ಎಂಬ ರೂಪಗಳಿಂದ ಮುಕ್ತಿಯನ್ನಿತ್ತು, ಸುಖವನ್ನು ಕೊಡುವನೆಂದು ಸ್ಮರಿಸತಕ್ಕದ್ದು. ॥ ೧೧ ॥

**೩. ಭಾವದರ್ಪಣ**

"ಪರಿಚ್ಛೇದೇತಿ"–ಸತ್ವಪರಿಚ್ಛೇದ, ರಜೋಪರಿಚ್ಛೇದ, ತಮೋ ಪರಿಚ್ಛೇದ–ಈ ಮೂರು ಪ್ರಕಾರ ಉಳ್ಳ ಪ್ರಕೃತಿಯಲ್ಲಿ ವಿಶ್ವ, ತೈಜಸ, ಪ್ರಾಜ್ಞನಾಗಿ ಇದ್ದಾನೆಂತಲೂ, ದಾರೇಷಣ, ಪುತ್ರೇಷಣ, ವಿತ್ತೇಷಣ–ಈ ಮೂರರಲ್ಲಿ ಆತ್ಮ, ಅಂತರಾತ್ಮ, ಪರಮಾತ್ಮ–ಈ ಮೂರುರೂಪದಿಂದ ಇದ್ದಾನೆಂತಲೂ, ಸುರುಚಿ, ಎಂದರೆ–ಸಮೀಚೀನಕಾಂತಿ, ವಿಶಿಷ್ಟನಾಗಿ ಜ್ಞಾನಸ್ವರೂಪನಾದ ತುರ್ಯಾಖ್ಯವಾಸುದೇವ ಮೂರ್ತಿಯೇ ಮುಕ್ತಿ ಸುಖ ಕೊಡುವನೆಂದು ತಾತ್ಪರ್ಯ ತೋರಿಸಿದ್ದಾರೆ. ॥ ೧೧ ॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ**

ಪ್ರತಿಜ್ಞಾತಮಾಹ–"ಪರಿಚ್ಛೇದ" ಇತಿ ॥ ವಿಭಕ್ತ ತ್ರಿಗುಣೇಷು ಪ್ರಾಕೃತೌಚ ವಿಶ್ವಾದಿ ತುರೀಯಾಂತಾಃ ॥ ಆತ್ಮಾದಿ ಪರಮಾತ್ಮಾಂತಾಃ–

"ಸುತೇಷು ದಾರೇಷು ಧನೇಷು"-ಇತ್ಯುಕ್ತೇಃ ಈಷಣಾತ್ರಯೀ ॥ ಸುರುಚಿಃ ಸುಪ್ರಕಾಶಕಃ ॥ "ಅಹುದು"ಹವದು. ॥ ೧೧ ॥

## ಕನ್ನಡಾರ್ಥ

ಹಿಂದಿನ ಪದ್ಯದಲ್ಲಿ "ಪ್ರಕಟಮಾಳ್ಪನು"-ಎಂದು ಪ್ರತಿಜ್ಞಾವಾಕ್ಯವಿದೆ. ಪ್ರಸಕ್ತಪದ್ಯದಲ್ಲಿ ಪೂರ್ಣಮಾಡಲು ಪ್ರತಿಜ್ಞಾತವಾದ ವಿಷಯವನ್ನು ತಿಳಿಸುತ್ತಾರೆ. ಸತ್ತ್ವ, ರಜ, ತಮ-ಎಂದು ತ್ರಿಗುಣಗಳು ವಿಭಕ್ತವಾಗಿವೆ. ಪ್ರಕೃತಿಯಲ್ಲಿ ವಿಶ್ವ-ತೈಜಸ-ಪ್ರಾಜ್ಞ ಎಂಬ-ಮೂರು ರೂಪಗಳಿಂದ ವಿದ್ಯಮಾನನಾಗಿರುವನು. ಆತ್ಮ – ಅಂತರಾತ್ಮ – ಪರಮಾತ್ಮ – ಈ ರೂಪತ್ರಯಗಳು ಸುತೇಷಣ – ವಿತ್ತೇಷಣ – ದಾರೇಷಣಗಳಲ್ಲಿರುವುವು. ಸುಪ್ರಕಾಶಪ್ರಚುರನಾದ ಜ್ಞಾನಾತ್ಮನೇ, ತುರ್ಯನಾಮಕ ವಾಸುದೇವ ರೂಪದಿಂದ ಮುಕ್ತಿಪ್ರದನು-ಎಂದು ತಾತ್ಪರ್ಯ. ॥ ೧೧ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಸತ್ತ್ವರಜಸ್ತಮವೆಂಬ ಪರಿಚ್ಛೇದತ್ರಯ – ಎಂದರೆ, ಮೂರು ಪೊದರುಳ್ಳ ಲಿಂಗದೇಹದಲ್ಲಿ – ವಿಶ್ವತೈಜಸ ಪ್ರಾಜ್ಞರೆಂಬ – ಮೂರು ರೂಪಗಳಿಂದ ದೇವರು ಇರುವನು. ಆತ್ಮ, ಅಂತರಾತ್ಮ, ಪರಮಾತ್ಮ-ಎಂಬ ಮೂರು ರೂಪದಿಂದ ಪುತ್ರೇಷಣ, ವಿತ್ತೇಷಣ, ದಾರಾಷೇಷಣ ವೆಂಬ ಮೂರು ಆಶೆಗಳಲ್ಲಿರುವನು. ಸುರುಚಿ-ಎಂದರೆ ದಿವ್ಯಕಾಂತಿಯುಳ್ಳ ಜ್ಞಾನಾತ್ಮರೂಪ ತುರ್ಯನೆಂಬ ಸಾಕ್ಷೀರೂಪಸಹ ಜ್ಞಾನದ್ವಾರಾ, ಜೀವನ್ಮುಕ್ತಿ, ನಿಜಮುಕ್ತಿ ಸುಖಕೊಡುವ ವಾಸುದೇವನೆಂದು ಸ್ಮರಿಸಬೇಕು. ॥ ೧೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಪ್ರಕೃತಿಯು ತ್ರಿಗುಣಾತ್ಮಕವಾದದ್ದು. ಅದಕ್ಕೆ ಮೂರು ಪರಿಚ್ಛೇದಗಳಿವೆ. (ಆವರಣಗಳು) ಪ್ರಥಮ ಪರಿಚ್ಛೇದ-ಸತ್ವಾವರಣ,

ದ್ವಿತೀಯ ಪರಿಚ್ಛೇದ–ರಜೋ ಆವರಣ, ತೃತೀಯ ಪರಿಚ್ಛದ–ತಮೋ ಆವರಣ.

ಪ್ರಕೃತಿ ಸಾಂಕೇತವಾದ ಲಿಂಗದೇಹವೂ ಸಹ ಮೇಲಿನ ಪರಿಚ್ಛೇದ ತ್ರಯಗಳಿಂದ ಯುಕ್ತವಾದದ್ದು.

೨. ಸತ್ವಪರಿಚ್ಛೇದದಲ್ಲಿ ವಿಶ್ವನಾಮಕ ಪರಮಾತ್ಮನು ವಿದ್ಯಮಾನ ನಾಗಿದ್ದಾನೆ. ರಜೋಪರಿಚ್ಛೇದದಲ್ಲಿ ತೈಜಸನಾಮಕನಿದ್ದಾನೆ. ತಮೋ ಪರಿಚ್ಛೇದದಲ್ಲಿ ಪ್ರಾಜ್ಞನಾಮಕನಿರುವನು. ಈ ಅಭಿಪ್ರಾಯವನ್ನು ದಾಸರಾಯರು–**ವಿಶ್ವಾದಿರೂಪವ ಧರಿಸಿ, ಪರಿಚ್ಛೇದತ್ರಯ ಪ್ರಕೃತಿ ಯೊಳಗಿರುತಿಹನು**–ಎಂದಿದ್ದಾರೆ.

೩. **ಈಷಣ**–ಒಂದು ವಸ್ತುವಿನಿಂದ ಉಂಟಾಗಿರುವ ದುಃಖ ಅಥವಾ ಕ್ಲೇಶ. ಆ ವಸ್ತುವಿನಲ್ಲಿರುವ ಮೋಹದಿಂದ ದುಃಖಪ್ರಾಪ್ತಿ. ಇವು ಮೂರು ಪ್ರಕಾರ. (೧) ದಾರಾಷೇಣ (೨) ಪುತ್ರೇಷಣ ಮತ್ತು (೩) ವಿತ್ತೇಷಣ. ಇದೇ ಸರಿಯಾದ ಕ್ರಮ. ಬೇರೆ ಬೇರೆ ವ್ಯಾಖ್ಯಾನಗಳಲ್ಲಿ ಈ ಕ್ರಮ ವ್ಯತ್ಯಾಸವಾಗಿರುವುದನ್ನು ಗಮನಿಸಬೇಕು. (೧) ದಾರಾ–ಎಂದರೆ, ಪತ್ನೀ. ಪತ್ನೀ ವ್ಯಾಮೋಹ–ಅವರಿಂದುಂಟಾಗುವ ಕ್ಲೇಶ. (೨) ಪುತ್ರ–ಎಂದರೆ, ಮಕ್ಕಳು. (೩) ವಿತ್ತ–ಎಂದರೆ ಗಳಿಸುವ ಹಣ. ಹೀಗೆ ಪತ್ನೀ–ಪುತ್ರ–ಹಣ–ಈ ವಸ್ತುಗಳ ಮೋಹದ ನಿಮಿತ್ತ ಕ್ಲೇಶ ಉಂಟಾಗುವುದು. ಈ ಈಷಣ ತ್ರಯಗಳಲ್ಲಿ ಶ್ರೀಪರಮಾತ್ಮನು ಕ್ರಮವಾಗಿ **ಆತ್ಮ–ಅಂತರಾತ್ಮ–ಪರಮಾತ್ಮ**–ಎಂಬ ನಾಮತ್ರಯಗಳಿಂದ ಇದ್ದು, ತತ್ಸಂಬಂಧವಾದ ಮೋಹವನ್ನು ಜೀವರಿಗೆ ಉಂಟುಮಾಡುವನು.

೪. **ಜ್ಞಾನಾತ್ಮ**ನಾಮಕನು ಸ್ವರೂಪದೇಹದಲ್ಲಿ ವಿದ್ಯಮಾನನಾಗಿದ್ದಾನೆ.

೫. **ತುರ್ಯ**–ಎಂದರೆ ಕಿರೀಟಕ್ಕೆ ಮೇಲೆ ಸಿಕ್ಕಿಸುವ ತುರಾಯಿ–ಎಂಬ ಸಾಂಕೇತ. ಅಂತಹ ತುರ್ಯನಾಮಕ ಶ್ರೀಪರಮಾತ್ಮನು **ವಾಸುದೇವ ರೂಪದಿಂದ** ಬ್ರಹ್ಮರಂಧ್ರಸ್ಥಿತ ಸಹಸ್ರದಳಗಳಲ್ಲಿ ವಿರಾಜಮಾನನಾಗಿದ್ದಾನೆ.

೬. ತುರ್ಯನಾಮಕ ಶ್ರೀವಾಸುದೇವನೇ ಮೋಕ್ಷಪ್ರದನು. ಮುಕ್ತಿಯಲ್ಲಿ ಆನಂದಾನುಭವವನ್ನು ಕೊಟ್ಟು, "ಮುಕ್ತಿಯೋಗ್ಯ" ಜೀವರನ್ನು ಮೋಕ್ಷದಲ್ಲಿ ನಿತ್ಯಾನಂದ ಸ್ಥಿತಿಯಲ್ಲಿಡುವನು. ವಾಸುದೇವನಿಗೆ "ಪುರುಷ"–ನೆಂತಲೂ ಹೆಸರು. ॥ ೧೧ ॥

## ಪದ್ಯ-೧೨

**ಮೂಲ :**

**ಕಮಲಸಂಭವಜನಕ ಜಡ ಜಂ ।**
**ಗಮರೊಳಗೆ ನೆಲೆಸಿದ್ದು ಕ್ರಮ ವ್ಯ।**
**ತ್ಯಮದಿ ಕರ್ಮವ ಮಾಡಿ ಮಾಡಿಸುತಿಪ್ಪ ಬೇಸರದೆ ॥**
**ಕ್ಷಮ ಕ್ಷಾಮ ಕ್ಷಮೀಹನಾಹ್ವಯ ।**
**ಸುಮನಸಾಸುರರೊಳಗೆ ಅಹಂ ।**
**ಮಮನ ಮಮ ಎಂದೀ ಉಪಾಸನೆಗೈವ ಪ್ರಾಂತದಲಿ ॥ ೧೨ ॥**

**ಅವತರಣಿಕೆ :**

ಸಮಸ್ತ ದೇವತೆಗಳಲ್ಲಿ ಅಂತರ್ಯಾಮಿ ರೂಪದಿಂದ ನೆಲೆಸಿದ್ದು, ಅವರ ದ್ವಾರಾ ಮತ್ತು ಅಸುರಾಂತರ್ಗತನಾಗಿ ಅವರವರ ಸ್ವರೂಪ ಯೋಗ್ಯತಾನುಸಾರ ಉಪಾಸನೆಮಾಡಿ ಮಾಡಿಸುವ ಕ್ರಮವನ್ನು ತಿಳಿಸುತ್ತಾರೆ. ॥ ೧೨ ॥

**ಪ್ರತಿಪದಾರ್ಥ :**

**ಕಮಲಸಂಭವಜನಕ** = ಶ್ರೀಪರಮಾತ್ಮನ ನಾಭೀಕಮಲ ಸಂಜಾತರಾದ ಬ್ರಹ್ಮದೇವರ ತಂದೆ, **ಜಡ** = ನಿರ್ಜೀವವಾದ ವಸ್ತುಗಳಲ್ಲಿ, **ಜಂಗಮರೊಳಗೆ** = ಜೀವರಲ್ಲಿ **ನೆಲೆಸಿದ್ದು** = ಬಿಂಬನಾಗಿ ಸ್ಥಿತನಾಗಿದ್ದು (ಅಂತಶ್ಚ ಬಹಿಶ್ಚ) **ಕ್ರಮ** = ಸ್ವರೂಪಭೂತವಾದ ಸ್ವಭಾವದ ಕ್ರಮವನ್ನು ತಪ್ಪಿಸಿ, **ವ್ಯತ್ಯಮದಿ** = ಲಿಂಗದೇಹದ ಉಪಚಯದಿಂದ ಸ್ವರೂಪಕ್ಕೆ ಅನ್ಯಥಾವಾದ, **ಕರ್ಮವ** = ಅನಾದಿಕರ್ಮಾನುಸಾರವಾಗಿ ಕ್ರಿಯಾದಿಗಳನ್ನು **ಮಾಡಿ** = ಬಿಂಬಕ್ರಿಯಾದ್ವಾರಾ ತಾನೇ ಮಾಡಿ, **ಬೇಸರದೆ** = ಯಾವ ರೀತಿಯ ಬೇಸರವಿಲ್ಲದೆ, **ಮಾಡಿಸುತಿಪ್ಪ** = ಸ್ಥೂಲದೇಹೇಂದ್ರಿಯಗಳ ದ್ವಾರಾ ಮಾಡಿಸುತ್ತಿದ್ದಾನೆ. **ಪ್ರಾಂತದಲಿ** = ಸಾಧನಾನಂತರದಲ್ಲಿ (ಲಿಂಗಭಂಗ

ಕಾಲದಲ್ಲಿ) **ಸುಮನಸ** = ಬ್ರಹ್ಮಾದಿತೃಣಾಂತ ಮುಕ್ತಿಯೋಗ್ಯ ಜೀವರಲ್ಲಿ. **ಅಸುರರೊಳಗೆ** = ದೈತ್ಯರಲ್ಲಿ (ಕಲ್ಯಾಣಿ ತೃಣಾಂತ ತಮೋಯೋಗ್ಯ ಜೀವರಲ್ಲಿ) **ಮಮನ** = ಮುಕ್ತಿಯೋಗ್ಯಚೇತನರಲ್ಲಿ ನನ್ನದಲ್ಲ, ಸರ್ವವೂ ಈಶ್ವರಾಧೀನ ಎಂಬ ಜ್ಞಾನವನ್ನೂ, **ಅಹಂ** = ಬ್ರಹ್ಮೋಪಾಸಕರಾದ ಅಸುರರಲ್ಲಿ ನಾನೇ ಬ್ರಹ್ಮ. ನಾನೇ ಸರ್ವಕರ್ತ-ಎಂಬ ಜ್ಞಾನವನ್ನೂ, **ಮಮ** = ನನ್ನದೆಂಬ ಮೋಹವುಳ್ಳ ನಿತ್ಯಸಂಸಾರಿಗಳಲ್ಲಿ ಮಮಕಾರರೂಪವಾದ ಜ್ಞಾನವನ್ನೂ, **ಕ್ಷಮ** = ಕ್ಷಮಾಸಾಂಕೇತವಾದ ಶ್ರೀಪರಮಾತ್ಮ ಸುರರಲ್ಲಿ, **ಕ್ಷಾಮ** = ಕ್ಷಾಮಶಬ್ದವಾಚ್ಯನಾಗಿ ಅಸುರರಲ್ಲಿ, **ಕ್ಷಮೀಹನ** = ಕ್ಷಮೀಹನ ನಾಮಕನಾಗಿ ನಿತ್ಯಸಂಸಾರಿಗಳಲ್ಲಿ ಇದ್ದು, **ಎಂದು ಈ ಉಪಾಸನೆಗೈವ** = ಈ ಪ್ರಕಾರ ತ್ರಿವಿಧ ಜೀವರಲ್ಲಿ ಉಪಾಸನೆಯನ್ನು ಮಾಡಿ ಮಾಡಿಸುತ್ತಿದ್ದಾನೆಂದು ತಾತ್ಪರ್ಯ. ॥ ೧೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಸ್ವರೂಪದಂತೆ ಉಪಾಸನೆ ಮಾಡಿಸತಕ್ಕ ಭಗವದ್ರೂಪಗಳ ಹೇಳತಾರೆ.

ಬ್ರಹ್ಮದೇವರ ತಂದಿಯಾದ ವಾಸುದೇವ ತ್ರಿವಿಧಜೀವರು, ಜಡಜೀವರು-ಇವರೊಳಗೆ ಸ್ವರೂಪದಲ್ಲಿ, ಬಾಹ್ಯಸ್ಥೂಲದೇಹದಲ್ಲಿ ಬಿಂಬನಾಗಿದ್ದು, ಸ್ವರೂಪಸ್ವಭಾವದ ಕ್ರಮವನ್ನು ತಪ್ಪಿಸಿ, ತ್ರಿಗುಣಾತ್ಮಕ ಲಿಂಗದೇಹದ ಕಾರಣದಿಂದ ಸ್ವರೂಪಕ್ಕೆ ಅನ್ಯಥಾವಾದ, ಅನಾದಿಕರ್ಮಕ್ಕೆ ಅನುಸಾರಿಯಾದ ಕರ್ಮವ, ಸ್ಥೂಲದೇಹಾಂತರ್ಗನಾಗಿ ಇದ್ದು, ಸ್ಥೂಲದೇಹೇಂದ್ರಿಗಳ ದ್ವಾರಾ, ಬಿಂಬಕ್ರಿಯಾದ್ವಾರಾ ತಾನು ಮಾಡಿ ಮಾಡಿಸೋವನಾಗತಾ ಇರತಾನೆ. ತ್ರಿವಿಧ ಜೀವರು ಏತಾದೃಶವಾದ ಪಾಪಪುಣ್ಯ ಕರ್ಮಗಳ ಮಾಡತಾರೆ. ಇದರಲ್ಲಿ ವ್ಯತ್ಯಾಸವಿಲ್ಲ. ಅವರವರ ಜ್ಞಾನದಲ್ಲಿ ಮಾತ್ರವೇ ವ್ಯತ್ಯಾಸ ಇರತದೆ. ಈ ಪ್ರಕಾರ ಕರ್ಮ

ಮಾಡಿಸೋದರಲ್ಲಿ ಬಿಂಬಗೆ ಬ್ಯಾಸರಿಕೆ ಇಲ್ಲದೆ ಮಾಡಿಸತಾನೆ. ಸಾಧನ ಪರಿಪಕ್ವವಾಗಿ ಅವರವರ ಲಿಂಗಭಂಗ ಐದಿಸತಕ್ಕ ಕಾಲದಲ್ಲಿ ಅವರವರ ಯೋಗ್ಯತಾನುಸಾರ ಆಯಾಜೀವರ ಸ್ಥೂಲದೇಹದಲ್ಲಿ ಅಂತರ್ಗತನಾಗಿ, ಬ್ರಹ್ಮಾದಿ ತೃಣಾಂತ ಮುಕ್ತಿಯೋಗ್ಯರಲ್ಲಿ ಕ್ಷಮಾಸಾಂಕೇತನಾದ ಪರಮಾತ್ಮ, ನಾನು ಈಶ್ವರಗೆ ದಾಸನಾದವ, ಸರ್ವಚರಾಚರ ಪದಾರ್ಥಗಳು, ಈಶ್ವರನದೆಂದು, ನನ್ನದಲ್ಲ ಎಂಬ ಜ್ಞಾನವೂ, ಕಲಿ ಆರಭಮಾಡಿ ತೃಣಾಂತದೈತ್ಯರೊಳಗೆ ಕ್ಷಾಮ, ಕ್ಷಾಮಸಾಂಕೇತನಾದ ಪರಮಾತ್ಮ ಇದ್ದು, ನಾನು ಬ್ರಹ್ಮ, ಜಗನ್ಮಿಥ್ಯಾ–ಎಂಬ ಜ್ಞಾನವೂ, ಅಸುರರಾದ ನಿತ್ಯ ಸಂಸಾರಿಗಳಲ್ಲಿ ಕ್ಷಮೀಹನಾಮಕ ಪರಮಾತ್ಮ ಇದ್ದು, ನಾನು ಬ್ರಹ್ಮ, ಜಗನ್ಮಿಥ್ಯಾ–ಎಂಬ ಜ್ಞಾನವೂ, ಸುರರಾದ ನಿತ್ಯಸಂಸಾರಿಗಳಲ್ಲಿ ಕ್ಷಮೀಹನನಾಮಕ ಪರಮಾತ್ಮ ಇದ್ದು, ದ್ರವ್ಯ, ಧಾನ್ಯ ಪಶುಪುತ್ರಾದಿಗಳು ಶಾಶ್ವತ–ಎಂಬ ಬುದ್ಧಿ, ಈಶ್ವರಜ್ಞಾನವಿಲ್ಲದೆ ನನ್ನದೂ ಎಂಬ ಜ್ಞಾನವೂ, ಈ ಪ್ರಕಾರ ತ್ರಿವಿಧ ಜೀವಗತ ತ್ರಿವಿಧ ರೂಪನಾದ ಪರಮಾತ್ಮ ಜೀವರ ಅನಾದಿಸ್ವರೂಪ ಯೋಗ್ಯತಾನುಸಾರ ಅಹಂ ಮಮ, ನ ಮಮ ಎಂಬ ಈ ಪ್ರಕಾರ ಪರಮಾತ್ಮ ಬಿಂಬಕ್ರಿಯಾದ್ವಾರಾ ಉಪಾಸನೆಗೈವುತ, ತದ್ದ್ವಾರಾ, ಜೀವನು ಉಪಾಸನೆಗೈವ ಎಂದರ್ಥ. ಬಿಂಬರೂಪೀ ಪರಮಾತ್ಮ ಪೂರ್ವೋಕ್ತನಾಮಗಳಿಂದ ಜ್ಞಾನ ವ್ಯಕ್ತಮಾಡತಾನೆಂತ ತಾತ್ಪರ್ಯ. ॥ ೧೨ ॥

**೨. ಭಾವಪ್ರಕಾಶಿಕೆ**

ಶ್ರೀವಾಸುದೇವನು ತ್ರಿವಿಧಜೀವರಾಶಿಗಳಲ್ಲೂ ಇದ್ದು, ಪುಣ್ಯ ಪಾಪಗಳನ್ನು ಮಾಡಿ ಮಾಡಿಸುವನು. ದೇವತೆಗಳಲ್ಲಿ **ಕ್ಷಮ** ಎಂಬ ಹೆಸರಿನಿಂದಲೂ, ದೈತ್ಯರಲ್ಲಿ **ಕ್ಷಾಮನೆಂಬ** ಹೆಸರಿನಿಂದಲೂ, ಮಧ್ಯಮ ಜೀವರಲ್ಲಿ **ಸಮೀಹನೆಂಬ** ಹೆಸರಿನಿಂದಲೂ ಇದ್ದು, ದೈತ್ಯರಲ್ಲಿ ನಾನೇ ಈಶ್ವರನು–ನಾನೇ ಭೋಗಿಯೂ–ಎಂದು ಅಸಮಪಾಸನೆಯನ್ನು ಸಾಧನ

ಪ್ರಾರ್ತಿಯಾಗುವ ಕಾಲದಲ್ಲಿ ಮಾಡಿ ಅವರಿಂದಲೂ ಮಾಡಿಸುವನು. ರಾಜಸಜೀವರಲ್ಲಿದ್ದು, ತನ್ನ ಹೆಂಡಿರು ಮಕ್ಕಳೆಂಬ ಮಮತೆಯನ್ನು ಕೊಟ್ಟು, ಹೆಂಡಿರು ಮಕ್ಕಳು-ಮೊದಲಾದವರ ಕ್ಷೇಮಕ್ಕಾಗಿ ಫಲಾಪೇಕ್ಷೆಯಿಂದ ಉಪಾಸನೆ ಮಾಡಿ ಮಾಡಿಸುವನು. ಸಾತ್ವಿಕರಾದ ದೇವತೆಗಳಲ್ಲಿದ್ದು, ಸಕಲವೂ ಪರಮಾತ್ಮನದು. ಅವನು ಸ್ವತಂತ್ರನು. ನಾನು ಪರತಂತ್ರನೆಂದು ಉಪಾಸನೆ ಮಾಡಿ ಮಾಡಿಸುವನು. ಕಡೆಗೆ ಆ ಉಪಾಸನೆಯನ್ನನುಸರಿಸಿ, ಫಲವನ್ನು ಕೊಡುವನೆಂಬ ತಾತ್ಪರ್ಯ. ಇದರಿಂದ ಜೀವನಿಗೆ ಸ್ವತಂತ್ರದಿಂದ ಒಂದು ತೃಣಚಲನಶಕ್ತಿಯೂ, ಪರಮಾತ್ಮನು ಕೊಟ್ಟಹೊರತು, ಉಂಟಾಗುವುದಿಲ್ಲವೆಂದು ದೃಢವಾಗಿ ಹೇಳಿದಂತಾಯಿತು. ॥ ೧೨ ॥

**೩. ಭಾವದರ್ಪಣ**

"ಅಹಂ"-ಎಂದರೆ, ಸಂಪೂರ್ಣಕರ್ತ, ನಾನೇ-ಎಂಬವ ತಮೋಯೋಗ್ಯ ಎಂಬರ್ಥ । "ಮಮ"-ಅಂದರೆ, ದಾರಾಪತ್ಯಾದಿಗಳು ನನ್ನದೇ ಎಂಬವ, ನಿತ್ಯಸಂಸಾರಿ ಎಂಬರ್ಥ । "ನಮಮ"-ಎಂದರೆ, ತೃಣಾದಿ ಬ್ರಹ್ಮಾಂತಜೀವರು ಶ್ರೀಹರಿಯ ಅಧೀನರು. "ತೇನ ವಿನಾ ತೃಣಮಪಿನಚಲತಿ"-ಎಂಬರ್ಥ-ಶೃತಿರೀತ್ಯಾ, ಶ್ರೀಹರಿ ಮಾಡಿಸಿದ್ದೇ ಜೀವರು ಮಾಡುತ್ತಾರೆ-ಎಂಬುವ ಸಾತ್ವಿಕ ಎಂದರ್ಥ । ಹೀಗೆ ಇರತಕ್ಕ ತ್ರಿವಿಧರಲ್ಲಿ ಶ್ರೀವರನೇ ನಿಂತು, ಕಾರ್ಯ ನಡೆಯಿಸುವನೆಂದ ಹೇಳುತ್ತಾರೆ-"ಕಮಲಸಂಭವೇತಿ." ॥ ೧೨ ॥

**೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ**

"ಕಮಲ" ಇತಿ ॥ ಕ್ರಮಾತ್ ಸೃಷ್ಟಿಃ । ವ್ಯುತ್ಕ್ರಮಾತ್‌ಲಯಃ ॥ "ಕ್ಷಮಃ"-"ಓಂ ಕುರ್ವಶೀ ಶಮಿ ತರುಣಂವ್ಹೋ ಜನಾನಾಂ ತ್ರದಂ ವಾಜಸ್ಯ ಗೋಮತಃ । ಸಮಾನಮು ಪ್ರಶಶಿಷಂ ಋಭಕ್ಷಣಾಂ ನವರ್ತವೇ ಓಂ ॥ ಅನೇನ ಕ್ಷಮಃ ಶಕ್ತಃ ॥"

"ಕ್ಷಾಮಃ"–"ಓಂ" ಉತ್ತೇಷು ತುಗ್ರ್ಯಾವೃಧಂ ಇಂದ್ರಸೋಮೇ ಸಚಾ ಸುತೇಯಃ ಕ್ರಂತದಿದ್ವಿ ಯೋನ್ಯಂ ತ್ರಿಶೋಕಯ ಗಿರಿಂ ಪ್ರಥುಂ ಗೋಭ್ಯೋ ಗಾತುಂ ನಿರೇತವೇ ॥ ಓಂ ॥ ಕ್ಷಂ ಗವಾಂ ಸಂರೋಧ ವಿಶೇಷಂ ಆಮಿನೋತಿ ಕ್ರಂತತಿ ಇತಿ ತಥೋಕ್ತಃ ॥

"ಸಮೀಹನಃ"–ಓಂ ಯದ್ಧಧಿಷೇ ಮನಸ್ಯಸಿ ಮಂದಾನಃ ಪ್ರೇದಿ ಯಕ್ಷಸಿ ಸಾ ತತ್ಕರಿಂದ್ರ ಮೃಳಯ ದಭೃಂಚಿದ್ದಿ ತ್ವಾವತಃ ಕೃತಂ ಶೃಣ್ವೇ ॥ ಓಂ ॥

ಭಕ್ತಾನಾಂ ಸಮ್ಯಕ್ ಹಿತಕರಣ ಅಭೀಷ್ಟದಾನ ತತ್ಕೃತ ಸ್ತುತಿ ಶ್ರವಣಾದಿ ರೂಪಂ ಈಹನಂ ಚೇಷ್ಟಾಯಸ್ಯ ಸ ತಥೋಕ್ತಃ ॥

"ಅಹಂ, ಮಮ, ನಮಮ"–ಎಂದು–ಇತಿ ॥ ಅಹಮೀಶ್ವರ ॥ ಮಮ ಏತೇ ಭಾರ್ಯಾದಯಃ ॥ ಇತ್ಯಸುರಾಣಾಂ ॥ ವಿಪರೀತಂ ॥ ದೇವಾನಾಮ್ ॥ ಷಷ್ಠ ತಾತ್ಪರ್ಯೇ– "ಮದನ್ಯೋ ನಾಸ್ತಿ ದೇವೇಶಃ ಇತಿ ವಿದ್ವಾನ್ಸುರಂ ಮತಮ್ ॥ ಅಸ್ತೀತಿ ದೈವಮುಭಯೋಃ ಹರಿರೇವ ಹ್ಯಪೇಕ್ಷಿತಃ ॥ ವಿಧಿ ನಿಷೇಧ ಪ್ರವರ್ತಕತ್ವಾತ್ ತದ್ಬುದ್ಧಿ ಕಾರಣತ್ವಾತ್ ಉತ್ತರಂ ತದುಚ್ಚ ನೀಚಸ್ಥಾನ ಜನಕತ್ವಾತ್ ಚ" ಇತಿ. ॥ ೧೨ ॥

**ಕನ್ನಡಾರ್ಥ**

ಸೃಷ್ಟಿಯನ್ನು ಕ್ರಮದಿಂದ ಮಾಡುತ್ತಾನೆ. ವ್ಯುತ್ಕ್ರಮದಿಂದ ಲಯವನ್ನು ಮಾಡುತ್ತಾನೆ. "ಕ್ಷಮಃ"–ಇದು ಸಹಸ್ರನಾಮಾಂತರ್ಗತವಾದುದು. "ಸಮರ್ಥ"–ಎಂದು ಬೃಹತೀಮಂತ್ರ ಸೂಚಿತ ಅರ್ಥ.

"ಕ್ಷಾಮ"–ಕ್ಷ–ಗೋಸಂರಕ್ಷಣ ಅಭಿವೃದ್ಧಿಗಳ ಬಗ್ಗೆ ಅವರ ದ್ವೇಷವನ್ನು ಅಮಿನೋತಿ–ನಾಶಮಾಡುವವನು–ಎಂದು ಬೃಹತೀಮಂತ್ರ ಸೂಚಿತವಾದ ಅರ್ಥ.

"ಸಮೀಹನ"–ಭಕ್ತರಿಗೆ ಸರಿಯಾಗಿ ಅತಿಶಯವಾಗಿ ಹಿತವನ್ನುಂಟು ಮಾಡುವುದು. ಅವರ ಅಭೀಷ್ಟಗಳನ್ನು ಪೂರೈಸುವುದು. ಅವರ ಸ್ತೋತ್ರಗಳನ್ನು ಕೇಳುವುದು. ಇತ್ಯಾದಿ ವ್ಯಾಪಾರಗಳುಳ್ಳವನು.

"ನಾನು ಆಳುವ ಧಣಿಯು. ನಿಯಾಮಕನು, ಹೆಂಡತಿ–ಇತ್ಯಾದಿ ನನ್ನ ಅಧೀನರು"–ಎಂದು ಅಸುರರ ಭಾವನೆ ಇರುತ್ತದೆ. ದೇವತೆಗಳಿಗೆ ಮಾತ್ರ ಈ ಅಸುರಜ್ಞಾನಕ್ಕೆ ನೇರ ವಿರುದ್ಧವಾದ ಜ್ಞಾನವಿರುವುದು.

**ಷಷ್ಠಸ್ಕಂಧ ಭಾಗವತ ತಾತ್ಪರ್ಯದಲ್ಲಿ**–"ನಾನೇ ಸರ್ವೇಶನು. ನನ್ನುಳಿದು ಇನ್ಯಾರೂ ಸರ್ವೇಶರಿಲ್ಲ"–ಎಂಬ ತಿಳಿವಳಿಕೆಯ ಅಸುರರ ಮತವೆಂದು ತಿಳಿ. "ನಾನು ಈಶ್ವರನಲ್ಲ. ನನ್ನಿಂದ ಅನ್ಯನಾದ ಪ್ರಭು ಬೇರೊಬ್ಬನಿದ್ದಾನೆ. ಅವನೇ ಶ್ರೀಹರಿಯು"–ಎಂಬ ತಿಳಿವಳಿಕೆ ದೇವತೆಗಳ ಮತವೆಂದರ್ಥ. ಈರ್ವರ ವ್ಯಾಪಾರಗಳೂ ಶ್ರೀಹರಿಯಿಂದಲೇ ನಡೆಯುವುವು. ಪರಮಾತ್ಮನು ವಿಧಿ ನಿಷೇಧಗಳನ್ನು ಪ್ರವರ್ತಿಸುವು ದರಿಂದ, ನಡೆಯಿಸುವವನು. ತದನುಗುಣವಾದ ಯೋಗ್ಯಫಲಗಳನ್ನು ನೀಡುವವನು. ಅವರವರ ಬುದ್ಧಿಗಳಿಗೆ ಆಯಾ ಭಾವನೆಗಳಿಗೆ ಕಾರಣನಾಗಿದ್ದಾನೆ. ಮುಂದೆ ಉಚ್ಚ ನೀಚ ಸ್ಥಾನಗಳನ್ನು ಕಲ್ಪಿಸಿಕೊಡುವನು. ಈ ಕಾರಣದಿಂದ, ಸರ್ವೇಶನು ಶ್ರೀಹರಿಯೇ ವಿನಾ ಮತ್ತ್ಯಾರೂ ಆಗಲು ಅರ್ಹರೇ ಅಲ್ಲ–ಎಂದು ಹೇಳಲಾಗಿದೆ. ॥ ೧೨ ॥

## ಈ. ಶ್ರೀಗುರುಹೃದಯಪ್ರಕಾಶಿಕೆ

ಕ್ರಮ, ವ್ಯುತ್ಕ್ರಮ, ಪ್ರೇರಕರೂ ಸ್ಮರಣೋಪಾಸನೆಯನ್ನು ತಿಳಿಸುತ್ತಾರೆ– ಕಮಲಸಂಭವ–ಎಂದು.

ಅಪಾರಾಧ ಸಹಿಷ್ಣು–ಎಂದರೆ, ಅಪರಾಧವನ್ನು ಸಹಿಸುವ ನಾದ್ದರಿಂದ **ಕ್ಷಮಾ** ಎಂಬ ಹೆಸರುಳ್ಳ, ಕ್ಷಮೆಯುಳ್ಳವರಿಗೆ ಪ್ರಿಯನಾಗಿರು ವುದರಿಂದ **ಕ್ಷಾ**ಮನಾಮಕನಾದ ಕ್ಷಮೆಯನ್ನು ಪ್ರೇರಿಸುವುದರಿಂದ **ಕ್ಷಮೀಹನನೆಂದು** ಹೆಸರುಳ್ಳ ಬ್ರಹ್ಮಜನಕನಾದ ದೇವರು ಜಡವೆಂಬ ದೇಹದಲ್ಲೂ, ಜಂಗಮವೆಂಬ ಜೀವರಲ್ಲೂ ಸ್ಥಿರವಾಗಿದ್ದು, ಸುಮನಸರೆಂಬ ದೇವಾದಿ ಮುಕ್ತಿಯೋಗ್ಯ ಜೀವರಲ್ಲೂ, ಅಸುರರೆಂಬ ಅಯೋಗ್ಯ ಜೀವರಲ್ಲೂ, ಕ್ರಮ ವ್ಯುತ್ಕ್ರಮವೆಂಬ ವೇದವಿಹಿತ, ಅವಿಹಿತಕರ್ಮಗಳನ್ನು

ವ್ಯಕ್ತಿಮಾಡಿ ಮಾಡಿಸುತ್ತಾ ಬೇಸರಹೊಂದದೇ ಇರುವನು. ಪ್ರಾಂತವೇ
ಅವರವರ ಸ್ವರೂಪ ಯೋಗ್ಯಗತಿ ಕೊಡುವ ಕಾಲದಲ್ಲಿ, ಅಯೋಗ್ಯರ
ಅಹಂ-ಮಮ-ಎಂಬ ವೇದವಿರುದ್ಧ ಉಪಾಸನೆಯನ್ನು ವ್ಯಕ್ತಿ
ಮಾಡುವನು. ಮುಕ್ತಿಯೋಗ್ಯರಲ್ಲಿ ನಮಮ-ಎಂದರೆ ನನ್ನದೊಂದೂ
ಅಲ್ಲ, ಸರ್ವವೂ ದೇವರಧೀನವೆಂಬ ವೇದವಿಹಿತ ಉಪಾಸನೆ ವ್ಯಕ್ತಿ
ಮಾಡುವನು.

**ದ್ವ್ಯಕ್ಷರಾದ್ಯಂಧಮಿತ್ಯಾಹುಸ್ತ್ರ್ಯಕ್ಷರೇಽಮೃತಮಾಹಿತಂ** । - ಎಂಬ
ಮೋಕ್ಷಧರ್ಮಶ್ಲೋಕಾರ್ಥ ವಿವರಿಸಿತು. ॥ ೧೨ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಪದ್ಮನಾಭರೂಪೀ ಹರಿಯ ನಾಭಿಯಲ್ಲಿ ಉತ್ಪನ್ನವಾದ ಸುವರ್ಣಾತ್ಮಕವಾದ ಕಮಲದಲ್ಲಿ ಚತುರ್ಮುಖ, ಬ್ರಹ್ಮದೇವರು ಅಭಿವ್ಯಕ್ತರಾದರು. ಕಮಲಸಂಜಾತರಾದ ಬ್ರಹ್ಮದೇವರ ಜನಕನು ಶ್ರೀಹರಿ. ಇದರಿಂದ, **ಕಮಲಸಂಭವಜನಕ**-ಎಂದಿದ್ದಾರೆ ದಾಸರಾಯರು.

೨. ಶ್ರೀಪರಮಾತ್ಮನು **ಕ್ರಮದಿಂದ** ಜಗತ್ತನ್ನು ಸೃಷ್ಟಿಸುತ್ತಾನೆ. ಸೃಷ್ಟವಾದ ಜಗತ್ತನ್ನು **ವ್ಯತ್ಯಮದಿಂದ** ಲಯಗೊಳಿಸುತ್ತಾನೆ. ಅಂದರೆ, ಮೊದಲು ಸೃಷ್ಟರಾದ ಬ್ರಹ್ಮದೇವರಿಗೆ ಕೊನೆಯಲ್ಲಿ ಮುಕ್ತಿ. ಕೊನೆಯಲ್ಲಿ ಸೃಷ್ಟರಾದವರಿಗೆ ಬ್ರಹ್ಮಣಾಸಹ ಮೊದಲು ಮುಕ್ತಿ. ಸೃಷ್ಟಿ ಮಾಡಿದ ಕ್ರಮದಲ್ಲಿಯೇ ವ್ಯತ್ಯಮವಾಗಿ ಲಯ.

೩. ಕಮಲಸಂಭವಜನಕನಾದ ಕರುಣಾಳುವು ಸಕಲ ಜಡ ವಸ್ತುಗಳಲ್ಲಿಯೂ ಮತ್ತು ಜಂಗಮರಾದ ಸರ್ವಚೇತನರಲ್ಲಿಯೂ ಅಂತರ್ಯಾಮಿರೂಪದಿಂದ ಅಂತಶ್ಚ ಬಹಿಶ್ಚ ನೆಲೆಸಿರುವನು.

೪. ಸರ್ವವಿಧವಾದ ಸುಕರ್ಮ-ಮಿಶ್ರಕ್ರಮ-ದುಷ್ಕರ್ಮಗಳನ್ನು ಜೀವರದ್ವಾರಾ, ನಿರಂತರದಲ್ಲಿಯೂ ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸುತ್ತಿರುವನು. ಇದರಿಂದಲೇ, ಜೀವರಿಗೆ ಅನಾದಿರೂಪವಾದ

ಕರ್ಮನಿವೃತ್ತಿ. ಸರ್ವಕರ್ಮಕರ್ತನಾದ ಆ ಸರ್ವೇಶ್ವರನಿಗೆ ಈ ವಿಷಯದಲ್ಲಿ ಸ್ವಲ್ಪವೂ ಬೇಸರವಿಲ್ಲ. ತ್ರಿವಿಧಜೀವರಲ್ಲಿದ್ದು, ಅವರ ಸ್ವರೂಪಯೋಗ್ಯತಾನುಸಾರ ಸರ್ವಕರ್ಮಗಳನ್ನೂ ಲೀಲಾಜಾಲವಾಗಿ ಮಾಡಿ ಮಾಡಿಸುತ್ತಿರುವನು.

೫. ಶ್ರೀಹರಿಗೆ **ಕ್ಷಮ**–ಎಂದು ಹೆಸರು. ಈ ಹೆಸರು ವಿಷ್ಣು ಸಹಸ್ರನಾಮಾಂತರ್ಗತವಾದದ್ದು. ಈ ಶಬ್ದಕ್ಕೆ **"ಸಮರ್ಥ"**ನೆಂದರ್ಥ.

ಕ್ಷಮನಾಮಕನಾಗಿ, ಮುಕ್ತಿಯೋಗ್ಯಚೇತನರಾದ ದೇವತೆಗಳಲ್ಲಿದ್ದು **(ಸುಮನಸ) ನಮಮ**–ಎಂಬ ಉಪಾಸನಾ ದ್ವಾರಾ ಕರ್ಮಗಳನ್ನು ಮಾಡಿಸುವನು.

"ಈ ಸಕಲಕರ್ಮಗಳೂ ನಿನ್ನಿಂದ ಪ್ರೇರಿತವಾದುವು. ನಾನು ಮಾಡುವವನಲ್ಲ. ನೀನೇ ಸರ್ವೇಶನು. ನಿನ್ನ ಹೊರತು ಸಮರ್ಥರು ಅನ್ಯರಾರಿಲ್ಲ"–ಎಂಬ ಜ್ಞಾನರೂಪವಾದ ಉಪಾಸನೆಯನ್ನು ಮುಕ್ತಯೋಗ್ಯ ರಾದ ಸಾತ್ವಿಕರಲ್ಲಿದ್ದು ಮಾಡಿಸುವನು. ತದನುಸಾರ ಯಾವ ನಿತ್ಯ ಸುಖರೂಪವಾದ ಫಲಪ್ರಾಪ್ತಿ.

೬. **ಕ್ಷಮೀಹನ**–ಎಂಬ ಹೆಸರಿನಿಂದ ರಜೋಜೀವರಲಿದ್ದು, ಮಿಶ್ರಕರ್ಮ ಮಾಡಿಸುವನು. **"ಮಮ"**–ಎಂಬ ತಿಳಿವಳಿಕೆ ರೂಪವಾದ "ಇದು ನನ್ನದು, ಪತ್ನೀ ಪುತ್ರ ವಿತ್ತಾದಿಗಳೆಲ್ಲವೂ ನನ್ನವು"–ಎಂಬ ಮಮಕಾರಗ್ರಸ್ತರಾಗಿ ರಜೋಜೀವರು ಉಪಾಸಿಸುವರು. ಅಪರಾಧವನ್ನು ಸಹಿಸುವವನಾದ್ದರಿಂದ, **"ಕ್ಷಮೀಹನ"**ನೆಂತ ನಾಮ.

೭. ತಮೋಯೋಗ್ಯರಾದ ದೈತ್ಯರಲ್ಲಿ **(ಅಸುರರೊಳಗೆ) "ಕ್ಷಾಮ"**–ಎಂಬ ಹೆಸರಿನಿಂದ ಕರ್ಮಗಳನ್ನು ಮಾಡಿಸುವನು.

ತಮೋಯೋಗ್ಯರಲ್ಲಿ **ಅಹಂ**–ಉಪಾಸನೆ. "ನಾನೇ ಈಶ್ವರನು. ನಾನೇ ಭೋಗಿ. ಸಕಲಕ್ಕೂ ನಾನೇ ಕರ್ತನು"–ಎಂಬ ಭಾವನೆಯು ಅಸುರರಲ್ಲಿರುವುದು. ಈ ಭಾವನೆಯನ್ನು ಪ್ರಚೋದಿಸುವುದರಿಂದ,

ಶ್ರೀಹರಿಗೆ **“ಕ್ಷಾಮ”**-ನೆಂತ ನಾಮ. ತಮೋಯೋಗ್ಯರಲ್ಲಿ ಕ್ಷಾಮನಾಗಿದ್ದು, ಅಹಂಬ್ರಹ್ಮಾಸ್ಮಿ-ಎಂಬ ಉಪಾಸನೆಯನ್ನು ಮಾಡಿ ಮಾಡಿಸುತ್ತಾ, ಅವರ ಸ್ವರೂಪಯೋಗ್ಯತೆಗೆ ಅನುಗುಣವಾದ ನಿತ್ಯದುಃಖರೂಪವಾದ ಫಲವನ್ನು ಕೊಡುವನು.

೮. ಈ ರೀತಿ, ಸಾತ್ವಿಕರಲ್ಲಿ “ಕ್ಷಮ”ನಾಮಕನಾಗಿ, “ನಮಮ” ಉಪಾಸನಾ, ರಜೋ ಜೀವರಲ್ಲಿ “ಕ್ಷಮೀಹನ” ನಾಮಕನಾಗಿ, “ಮಮ” ಉಪಾಸನಾ, ಮತ್ತು ತಾಮಸರಲ್ಲಿ “ಕ್ಷಮಾ”ನಾಮಕನಾಗಿ “ಅಹಂ”-ಎಂಬ ಉಪಾಸನಾ ಮಾಡಿ ಮಾಡಿಸುತ್ತಾ, ಅವರಿಗೆ ನಿತ್ಯಸುಖ, ಸುಖದುಃಖ ಮಿಶ್ರ-ನಿತ್ಯ ದುಃಖರೂಪವಾದ ಫಲಗಳನ್ನು ಕೊಡುವನೆಂದು ತಾತ್ಪರ್ಯ. ॥ ೧೨ ॥

## ಪದ್ಯ–೧೩

**ಮೂಲ :**

**ಈ ಸಮಸ್ತ ಜಗತ್ತು ಈಶಾ ।**
**ವಾಸ್ಯವೆನಿಪುದು ಕಾರ್ಯರೂಪವು ।**
**ನಾಶವಾದರು ನಿತ್ಯವೇ ಸರಿ ಕಾರಣ ಪ್ರಕೃತಿ ॥**
**ಶ್ರೀಶಗೆ ಜಡಪ್ರತಿಮೆಯೆನಿಪುದು ।**
**ಮಾಸದೊಮ್ಮೆಗು ಸನ್ನಿಧಾನವು ।**
**ವಾಸವಾಗಿಹ ನಿತ್ಯ ಶಾಲಿಗ್ರಾಮದೋಪಾದಿ ॥ ೧೩ ॥**

**ಅವತರಣಿಕೆ :**

ಈಶಾವಾಸ್ಯವೆನಿಪ ಈ ಜಗತ್ತು ಸತ್ಯವಾದದ್ದು. ಪ್ರಕೃತಿಯು ಶ್ರೀಶಗೆ ಜಡಪ್ರತಿಮೆಯೆನಿಸುವುದೆಂದು ತಿಳಿಸುತ್ತಾರೆ. ॥ ೧೩ ॥

**ಪ್ರತಿಪದಾರ್ಥ :**

**ಈ ಸಮಸ್ತ ಜಗತ್ತು** = ಕಾರ್ಯರೂಪವಾದ ಈ ಸಮಗ್ರಜಗತ್ತು, **ಈಶಾವಾಸ್ಯವೆನಿಪುದು** = ಶ್ರೀಪರಮಾತ್ಮನಿಗೆ ಆವಾಸಸ್ಥಾನ ಎನಿಸುವುದು. **ಕಾರ್ಯರೂಪವು** = ಕಾರ್ಯಾತ್ಮನಾ ಇರತಕ್ಕ ಈ ಜಗತ್ತು, **ನಾಶವಾದರು** = ಪ್ರಳಯಕಾಲದಲ್ಲಿ ನಾಶಹೊಂದಿದರೂ, **ಕಾರಣ ಪ್ರಕೃತಿ** = ಜಗತ್ತಿನ ನಿರ್ಮಾಣಕ್ಕೆ ಉಪಾದಾನಕಾರಣವಾಗಿ ಪ್ರಕೃತಿಯು, **ನಿತ್ಯವೇ ಸರಿ** = ನಿತ್ಯವಾಗಿಯೇ ಇರುತ್ತದೆ. **ಪ್ರಕೃತಿ ಶ್ರೀಶಗೆ** = ಈ ಪ್ರಕೃತಿಯು ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನಿಗೆ, **ಜಡಪ್ರತಿಮೆಯೆನಿಪುದು** = ಜಡಪ್ರತೀಕ–ಎಂದು ಕರೆಯಿಸುತ್ತದೆ. **ಮಾಸದು ಒಮ್ಮೆಗು** = ಅನಾದ್ಯನಂತ ಕಾಲಕ್ಕೂ ನಾಶವಾಗುವುದಿಲ್ಲ. **ಸನ್ನಿಧಾನವು** = ಜಗತ್ತಿನಲ್ಲಿ ಶ್ರೀ ಪರಮಾತ್ಮನ ಸನ್ನಿಧಾನವೆಂಬುದು, **ಶಾಲಿಗ್ರಾಮದೋಪಾದಿ** = ಶಾಲಿಗ್ರಾಮದಲ್ಲಿ ನಿತ್ಯ ಸನ್ನಿಧಾನ ಹೇಗೆ ಇರುವದೋ, ಅದರಂತೆ, **ನಿತ್ಯ** = ಸದಾ ಬ್ರಹ್ಮಾಂಡದಲ್ಲಿ, **ವಾಸವಾಗಿಹ** = ವಾಸವಾಗಿದ್ದಾನೆ. (ನಿತ್ಯಸನ್ನಿಧಾನಯುಕ್ತ) ॥ ೧೩ ॥

## ವ್ಯಾಖ್ಯಾನಗಳು

**ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ**

ಕಾರಣ ಪ್ರಕೃತಿಗೆ ನಾಶವಿಲ್ಲ–ಎಂತ ಹೇಳತಾರೆ.

ಈ ವರ್ತಮಾನ ಕಾರ್ಯರೂಪವಾದ ಜಗತ್ತು ದೇವರಿಂದ ಆವಾಸವಾದದ್ದು ಎಂತ ಎನಿಸತದೆ. **ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್**–ಎಂಬ ಈಶಾವಾಸ್ಯ ಉಪನಿಷತ್ತು ಪ್ರಮಾಣ. ಕಾರ್ಯಾತ್ಮನಾ ಇರತಕ್ಕ ಈ ಜಗತ್ತು ಪ್ರಳಯಕಾಲದಲ್ಲಿ ನಾಶವಾದರೂ, ಈ ಕಾರ್ಯಕ್ಕೆ ಉಪಾದಾನಕಾರಣವಾದ ಪ್ರಕೃತಿ ನಿತ್ಯವಾಗೇ ಇರತದೆ. ನಿಶ್ಚಯ ಅಂದರೆ, ಈ ಕಾರ್ಯರೂಪವಾದ ಜಗತ್ತು ನಾಶಾನಂತರ ಇದೇ ಕಾರಣಾತ್ಮನಾ ಇದ್ದು, ಮತ್ತು ಉತ್ತರೋತ್ತರ ಕಾರ್ಯಾತ್ಮನಾ ಪರಿಣಮಿಸತದೆ ಎಂತ ಅರ್ಥ. ಏತಾದೃಶವಾದ ಕಾರಣಪ್ರಕೃತಿ, ಲಕ್ಷ್ಮೀಪತಿಯಾದ ಶ್ರೀನಾರಾಯಣ ದೇವರಿಗೆ ನಿತ್ಯವಾದ ಜಡಪ್ರತಿಮಾ–ಎಂತ ಕರಸತದೆ. ನಿತ್ಯವಾದ ಜಡಾಧಿಷ್ಠಾನವೂ ಅನಾದ್ಯನಂತ ಕಾಲಕ್ಕೂ ದಾವ ಕಾಲದಲ್ಲೂನೂ ನಾಶವಾಗೋದಿಲ್ಲ. ನಿತ್ಯವಾಗೇ ಇರತದೆ. ಇದರಲ್ಲಿ ಪರಮಾತ್ಮನ ಸನ್ನಿಧಾನವೆಂಬುದು, ಶಾಲಿಗ್ರಾಮದಲ್ಲಿ ನಿತ್ಯಸನ್ನಿಧಾನವು ಹ್ಯಾಂಗೆ ಇರತದೋ, ಅದರಂತೆ ಸದಾ ಬ್ರಹ್ಮಾಂಡದಲ್ಲಿ ಪರಮಾತ್ಮನ ವಿಭೂತಿರೂಪಸನ್ನಿಧಾನ ಸಾಕಾರ ಸಾವಯವದಿಂದ ಇರತದೆ–ಎಂತ ತಾತ್ಪರ್ಯ. ॥ ೧೩ ॥

**೨. ಭಾವಪ್ರಕಾಶಿಕೆ**

"ಈಶಾವಾಸ್ಯಮಿದಂ ಸರ್ವಂ"–ಎಂಬ ಈಶಾವಾಸ್ಯೋಪನಿಷದ್ವಾಕ್ಯದಂತೆ, ಈ ಜಗತ್ತೆಲ್ಲವೂ ಶ್ರೀಪರಮಾತ್ಮನ ಆವಾಸಸ್ಥಾನವಾಗಿರುವುದು. ಘಟಕ್ಕೆ ಕಾರಣ ಮೃತ್ತಿಕೆ; ಕಾರ್ಯರೂಪವು ಘಟ. ಘಟನಾಶವಾದರೂ, ಕಾರಣರೂಪವಾದ ಮೃತ್ತಿಕೆಯು ನಿತ್ಯವಾದುದರಿಂದ ಮತ್ತು ಘಟ ಸೃಷ್ಟಿಯಾಗುವುದು. ಅದರಂತೆ, ಪ್ರಕೃತಿಯಲ್ಲಿ ಚೇತನ

ಪ್ರಕೃತಿಯು ಚೇತನ ಸೃಷ್ಟಿಗೆ ಕಾರಣಳು. ಜಡಪ್ರಕೃತಿಯು ಜಡಸೃಷ್ಟಿಗೆ ಕಾರಣರೂಪವು. ಕಾರ್ಯರೂಪವಾದ ಜಗತ್ತು ನಾಶವಾದರೂ, ಕಾರಣರೂಪ ಪ್ರಕೃತಿ ನಿತ್ಯವಾದುದರಿಂದ ಮತ್ತು ಸೃಷ್ಟಿಯಾಗುವದು. ಇದೇ ಚೇತನಾತ್ಮಕವಾದುದು ಪ್ರಪಂಚವು. ಇದರಲ್ಲಿ ಜಡರೂಪವಾದ ಪ್ರಪಂಚ ವೆಲ್ಲವೂ ಪರಮಾತ್ಮನಿಗೆ ಜಡಪ್ರತಿಮೆ ಎನಿಸುವುದು. ಚೇತನರೆಲ್ಲರೂ ಪರಮಾತ್ಮನ ಚೇತನ ಪ್ರತಿಮೆ-ಎಂದು ಹಿಂದಿನ ಪದ್ಯದಲ್ಲಿ ಸೂಚಿಸಿರುವರು. ಕಾರ್ಯರೂಪ ಪ್ರಪಂಚವಿರುವವರೆಗೂ, ಪರಮಾತ್ಮನ ಸನ್ನಿಧಾನವಿದ್ದೇ ಇರುವುದು. ಪ್ರಳಯದಲ್ಲೂ ಸಹ ಕಾರಣದಲ್ಲಿ ವಾಸವಾಗಿರುವನು. ಸಾಲಿಗ್ರಾಮದಲ್ಲಿ ಹೇಗೆ ನಿತ್ಯದಲ್ಲೂ ಸನ್ನಿಧಾನವಿದ್ದೇ ಇರುವುದೋ, ಹಾಗೆಯೇ ಪ್ರಪಂಚದಲ್ಲೂ ನಿತ್ಯಸನ್ನಿಧಾನವು ಇದ್ದೇ ಇರುವದು. ॥ ೧೩ ॥

**೩. ಭಾವದರ್ಪಣ**

**ಈಶನಿಗೆ ಆವಾಸಕ್ಕೆ ಯೋಗ್ಯನಾದಾಂಥಾದು**-ಈ ಸಮಸ್ತ ಜಗತ್ತು ಎಂಬರ್ಥ ಮತ್ತು ಕಾರ್ಯರೂಪವಾದ ಲಿಂಗದೇಹ ನಷ್ಟವಾದರೂ, ಕಾರಣರೂಪವಾದ ಗುಣಗಳು ನಿತ್ಯವೇ ಸರಿ. ಪ್ರಮಾಣ : "ಗುಣಕಾಲ ದೇಶ ವೇದ ಜೀವ ಲಕುಮೀನಾರಾಯಣ ನಿತ್ಯವಸ್ತು ಎನ್ನಿ"-ಎಂದು **ಶ್ರೀ ಪುರಂದರದಾಸರ** ಸುಳಾದಿ ಇರೋಣದರಿಂದ, ಸನ್ನಿಧಾನ ಎಂದಿಗೂ ತಪ್ಪೋದಿಲ್ಲೆಂತ ಹೇಳುತ್ತಾರೆ-"ಈಶಾವಾಸ್ಯೇತಿ". ॥ ೧೩ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ಈ ಸಮಸ್ತ"-ಇತಿ ॥ "ಮಾಸದು-ಹೋಗದು" ॥ ೧೩ ॥

**ಕನ್ನಡಾರ್ಥ**

ಕಾರಣರೂಪವಾದ ಪ್ರಕೃತಿಯು ಪರಮಾತ್ಮನಿಗೆ ಜಡಪ್ರತಿಮಾ ರೂಪವಾಗಿದೆ ಎಂದು ತಿಳಿಸುತ್ತಾರೆ "ಈ ಸಮಸ್ತ"-ಎಂಬ ಪದ್ಯದಿಂದ. ॥ ೧೩ ॥

## ಶ್ರೀಗುರುಹೃದಯಪ್ರಕಾಶಿಕೆ

ಆದ್ದರಿಂದ ಈ ಜಗತ್ತೆಲ್ಲಾ ದೇವರಾಧಿಷ್ಠಾನವೆಂದು ತಿಳಿಸುತ್ತಾರೆ–ಈ ಸಮಸ್ತ ಜಗತ್ತು–ಎಂದು ಮೊದಲು ಏಳು ಪದ್ಯದಿಂದ.

ಈ ಸಮಸ್ತ ಜಗತ್ತೆಂಬ ಬ್ರಹ್ಮಾಂಡವು ಸರ್ವನಿಯಾಮಕ ದೇವರಿಗೆ ಆವಾಸಯೋಗ್ಯವೆನಿಸುವುದು. ಸ್ಥೂಲರೂಪ ನಾಶವಾದಾಗ್ಯೂ, ಸೂಕ್ಷ್ಮ ಕಾರಣ ಪ್ರಕೃತಿ ನಿತ್ಯವಾಗಿಯೇ ಇರುವುದರಿಂದ, ಶ್ರೀಶನಾದ ಸ್ವಾಮಿಗೆ ಜಡಪ್ರತಿಮೆ–ಎಂತ ಎನಿಸಿಕೊಳ್ಳುವುದು. ಸಾಲಿಗ್ರಾಮವೆಂಬ ಚಕ್ರಶಿಲೆ ಒಡೆದಾಗ್ಯೂ, ಸನ್ನಿಧಾನ ಇರುವ ಹಾಗೇ, ಸೃಷ್ಟಿ ಸ್ಥಿತಿ ಪ್ರಳಯ–ಮೂರುಕಾಲದಲ್ಲೂ ದೇವರ ಸನ್ನಿಧಾನವು ತಪ್ಪುವುದಿಲ್ಲವೆಂದರ್ಥ. ॥ ೧೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಚರಾಚರಾತ್ಮಕವಾದ ಈ ಸಮಸ್ತಜಗತ್ತು ಶ್ರೀಶನಿಂದ ಸೃಷ್ಟಿಯಾದದ್ದು. ಅದು ಸರ್ವನಿಯಾಮಕನೂ, ಜಗತ್ಪ್ರಭುವೂ ಆದ ಶ್ರೀಪರಮಾತ್ಮನಿಗೆ ಆವಾಸಸ್ಥಾನವೆನಿಸುವುದು.

**"ಈಶಾವಾಸ್ಯಮಿದಂ ಸರ್ವಂ"–ಎಂಬ ಈಶಾವಾಸ್ಯೋಪನಿಷತಿನ** ವಾಕ್ಯದಂತೆ, ಇದಂ–ಚರಾಚರಾತ್ಮವಾದ ಈ ಸಮಸ್ತ ಜಗತ್ತು. ಈಶ–ಸರ್ವನಿಯಾಮಕನೂ, ಜಗತ್ಪತಿಯೂ ಆದ ಈಶನಿಗೆ, ಆವಾಸ್ಯಂ–ನಿವಾಸಸ್ಥಾನವು.

ಅಣುರೇಣುತೃಣಕಾಷ್ಠ ಪರಿಪೂರ್ಣನಾಗಿ ವ್ಯಾಪಿಸಿರುವ ಶ್ರೀಶನು ಇಲ್ಲದ ಸ್ಥಳವಿಲ್ಲ. ಜಡವಸ್ತುಗಳ ಪ್ರತಿ ಪ್ರತಿ ಕಣದಲ್ಲೂ ವ್ಯಾಪ್ತರೂಪ ಗಳಿಂದಲೂ, ಚೇತನರಾದ ಜೀವರಲ್ಲಿ ಬಿಂಬರೂಪದಿಂದಲೂ, ಸರ್ವತ್ರ ವ್ಯಾಪ್ತನಾಗಿರುವ ಪರಿಪೂರ್ಣ ಮಹಾಮಹಿಮ ಸಂಪನ್ನನು ಮಾರಮಣನು.

ಜಗತ್ತಿನ ಸೃಷ್ಟಿಗೆ ಮೂರುಕಾರಣವು ಸೂಕ್ಷ್ಮಪ್ರಕೃತಿಯು. ಇದಕ್ಕೆ ಉಪಾದಾನಕಾರಣವೆನ್ನುವರು. ಕಾರಣರೂಪವಾದ ಪ್ರಕೃತಿಯು ನಿತ್ಯವಾದದ್ದು. ಪ್ರಕೃತಿಯಿಂದ ನಿರ್ಮಿತವಾದ ಈ ಜಗತ್ತು ಕಾರ್ಯ ರೂಪವು. ಅದು ಅನಿತ್ಯ ಲಯಕಾಲದಲ್ಲಿ ನಾಶಹೊಂದುವುದು. ಕಾರಣ ಪ್ರಕೃತಿಯಿಂದ ಪರಿಣಾಮ ಹೊಂದಿದ ತತ್ತ್ವಗಳೆಲ್ಲವೂ ಮೂಲಪ್ರಕೃತಿಯಲ್ಲಿ ಸೇರುವುವು.

ದೃಷ್ಟಾಂತವಾಗಿ, ಘಟವು ಮೃತ್ತಿಕೆಯಿಂದ ಸೃಷ್ಟಿಯಾಗಿದೆ. ಘಟವು ನಾಶವಾದರೂ, ಉಪಾದಾನ ಕಾರಣವಾದ ಮೃತ್ತಿಕೆ ನಿತ್ಯವು. ಪ್ರಕೃತಿ ನಿತ್ಯ ಭೂತವಾಗಿರುವುದರಿಂದ, ಪ್ರಧಾನ ಸೃಷ್ಟಿಕರ್ತಾದ ಪರಮಾತ್ಮನು ತನ್ನ ಇಚ್ಛಾಮಾತ್ರದಿಂದ ಪ್ರತಿಕಲ್ಪಕಲ್ಪಗಳಲ್ಲಿ ಜಗತ್ತನ್ನು ಪ್ರಕೃತಿಯಿಂದ ಪರಿಣಾಮ ಹೊಂದಿಸಿ, ಸೃಷ್ಟಿಸುತ್ತಲೇ ಇರುವನು. ತಾನು ಮಾತ್ರ ಕಾರ್ಯ ಕಾರಣಗಳಿಂದ ಅತ್ಯಂತ ವಿಲಕ್ಷಣನಾಗಿರುವನು. (ಜಗದಾದ್ಯಂತಭಿನ್ನನು).

೩. ಈ ಜಗತ್ತು ಶ್ರೀಶನಾದ ಲಕ್ಷ್ಮೀಪತಿಗೆ ಅಚಲಪ್ರತೀ ವೆನಿಸುವುದು. ಜಗತ್ತು ಈಶನ ಅಧಿಷ್ಠಾನವು. ಅವನು ಅಧಿಷ್ಠೇಯನು. (ಬಿಂಬ–ಪತಿಬಿಂಬನ್ಯಾಯದಂತೆ). ಸಕಲ ಜೀವರೂ ಶ್ರೀಶನ ಪ್ರತಿಬಿಂ ರೂಪರು. (ಚಲಪ್ರತೀಕರು).

ಜಡಪ್ರತಿಮೆಯೆಂದೆನಿಪ ಈ ಜಗತ್ತಿಗೆ ಕಾರಣಭೂತವಾದ ಪ್ರಕೃತಿಯು ಅನಾದ್ಯಂತಕಾಲದಿಂದಲೂ ಒಮ್ಮೆಗಾದರೂ ನಾಶ ಹೊಂದುವುದಿಲ್ಲ. (ಮಾನದೊಮ್ಮೆಗಾದರು) ಪ್ರಕೃತಿಸ್ಥ ಶ್ರೀಶನ ಸನ್ನಿಧಾನದಿಂದ ನಿತ್ಯಭೂತವಾಗಿರುವುದು.

೪. ಶಾಲಿಗ್ರಾಮ ಶಿಲೆಯು ಶ್ರೀಹರಿಯ ಸ್ವಯಂ ವ್ಯಕ್ತರೂಪವು. ಅದರಲ್ಲಿ ಶ್ರೀಶನ ಸನ್ನಿಧಾನ ನಿತ್ಯ. ಅದರಂತೆ, ಕಾರಣರೂಪವಾದ ಮೂಲಪ್ರಕೃತಿಯಲ್ಲಿಯೂ ಸಹ ಶ್ರೀಪರಮಾತ್ಮನ ಸನ್ನಿಧಾನ ವಿಶೇಷ ನಿತ್ಯವಾದದ್ದೆಂದು–ತಿಳಿಸುತ್ತಾರೆ–ಪ್ರಸಕ್ತಪದ್ಯದಿಂದ. ॥ ೧೩ ॥

## [illegible]-೧೪

[illegible] :

[illegible] ।
[illegible] ।
[illegible] ॥
[illegible] ।
[illegible] ।
[illegible] ॥ ೧೪ ॥

[illegible] :

ಏಕೋದ ಅದ್ವಿತೀಯನಾದ ಶ್ರೀಪರಮಾತ್ಮನ ಮಹಾ ಮಹಿಮೆಗಳನ್ನು ತಿಳಿಸುತ್ತಾರೆ. ॥ ೧೪ ॥

[illegible] :

**ಏಕೋದ** = ತಾನೊಬ್ಬನೇ, **ಅದ್ವಿತೀಯ** = ತನಗೆ ಸಮರೂ ಅಧಿಕರೂ ಇವರ್‍ಯಾರು ಇಲ್ಲದ ಶ್ರೀಪರಮಾತ್ಮನು, **ಅನೇಕ ಜೀವರೊಳಿದ್ದು** = ಅನಂತಜೀವರುಗಳಲ್ಲಿ, ಅನಂತರೂಪಗಳಿಂದ ಅಂತರ್ಗತನಾಗಿದ್ದು, **ತಾ** = ಬಿಂಬರೂಪನಾದ ತಾನು, **ಪ್ರತ್ಯೇಕ ಕರ್ಮವ** = ಅವರವರ ಸ್ವರೂಪಕ್ಕೆ ಅನ್ಯವಾದ ಜಡಕರ್ಮಗಳನ್ನು, (ಪೃಥಕ್ ಎಂಬರ್ಥವೂ ಉಂಟು), **ಮಾಡಿ ಮಾಡಿಸಿ** = ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಪ್ರತಿಬಿಂಬರಾದ ಜೀವರ ದ್ವಾರಾಮಾಡಿಸುತ್ತಾ, **ತಿಳಿಸದಲೆ** = ತನ್ನ ಕರ್ಮತ್ವದ ವಿಷಯವನ್ನು ಜೀವರಿಗೆ ತಿಳಿಸದೇ, **ಮೋಹಿಸುತಿಪ್ಪ** = ಜೀವರಿಗೆ ತಾವೇ ಕರ್ತೃತ್ವಗಳು–ಎಂಬ ಜ್ಞಾನವನ್ನುಂಟುಮಾಡಿ, ಅಹಂಕರ್ತೃತ್ವದಿಂದ ಮೋಹಗೊಳಿಸುವನು. **ಮೂಕ** = ಮೂಕ ಎಂತಲೂ (ಮಾತುಬಾರದಿದ್ದವನು), **ಬಧಿರ** = ಕಿವಿಡನೆಂತಲೂ, **ಅಂಧ** = ಕುರುಡನೆಂತಲೂ, **ಆದಿನಾಮಕ**= ಇತ್ಯಾದಿ ನಾಮಗಳಿಂದ, **ಈ ಕಳೇವರದೊಳಗೆ** = ಜೀವರುಗಳ ಸ್ಥೂಲದೇಹಗಳಲ್ಲಿ,

**ಕರೆಸುವ** = ಎಂದು ಕರೆಯಿಸಲ್ಪಡುವ, **ಮಾಕಳತ್ರನ** = ಲಕ್ಷ್ಮೀಪತಿಯ, **ಲೌಕಿಕ** = ಪ್ರಾಪಂಚಿಕವಾದ (ಲೋಕಾಧಿಷ್ಠಾನದಲ್ಲಿ ದೃಶ್ಯಮಾನವಾದ), **ಮಹಾ ಮಹಿಮೆಗೆ** = ಅಪಾರಮಹಿಮಾಸಂಪತ್ತಿಗೆ, **ಏನೆಂಬೆ** = ಏನು ಎಂತ ಹೇಳಲಿ? ಅಂದರೆ, ಆತನ ಮಹಾಮಹಿಮೆ ಅಸದೃಶವಾದದ್ದು. ವರ್ಣನಾತೀತವು ॥ ೧೪ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಮಹಾತ್ಮ್ಯ ಹೇಳತಾರೆ.

ಈ ಪೂರ್ವೋಕ್ತ ಪರಮಾತ್ಮ ಒಬ್ಬನೇ. ಇವಗೆ ಸರಿಯಾದವರು ಇನ್ನೊಬ್ಬರೂನೂ ಇಲ್ಲದವ. ಏಕಮೇವಾದ್ವಿತೀಯಂ ಬ್ರಹ್ಮ-ಎಂಬ ಶ್ರುತ್ಯರ್ಥನಾದ ಈ ಪರಮಾತ್ಮ ಅನಂತರಾದ ಜೀವರಲ್ಲಿ ಅನೇಕ ರೂಪಗಳಿಂದ ಅಂತರ್ಗತನಾಗಿದ್ದು, ಬಿಂಬರೂಪನಾದ ತಾನು ಸ್ವರೂಪಕ್ಕೆ ಅನ್ಯವಾದ ಜಡಕರ್ಮವ ಪ್ರತ್ಯೇಕವಾದ ಸ್ಥೂಲದೇಹದೊಳಿದ್ದು, ದೇಹಗತರಾದ ಜೀವರಿಗೆ ಪರಮಾತ್ಮನಾದ ತಾನು ಮಾಡತೇನೆಂಬೋದು ತಿಳಸಧಾಂಗೆ, ತಾನು ಮಾಡಿ, ಜೀವರಿಂದ ಮಾಡಿಸತಾ, ದೇಹೇಂದ್ರಿಯಾದಿಗಳಲ್ಲಿ ಇರೋವನಾಗಿದ್ದಾನೆ. ಈ ಸ್ಥೂಲದೇಹದೊಳಗೆ ತದಾಕಾರನಾಗಿದ್ದು, ಮೂಕ ಎಂತಲೂ, ಕಿವುಡ ಎಂತಲೂ, ಕುರುಡ ಎಂತಲೂ, ಇವೇ ಮೊದಲಾದ ನಾಮಕನಾಗಿ ಕರಸೋವನಾಗತಾನೆ. ದೇವರೇನು, ಜೀವರೇನು-ಈ ಉಭಯರೂ ಮೂಕ ಬಧಿರ ಅಂಧರಲ್ಲ. ಅನಾದ್ಯನಂತ ಕಾಲಕ್ಕೂ ಎಲ್ಲಾ ಜೀವರಿಗೆ ಕರ್ಮವಶಾತ್ ಅಂಗನ್ಯೂನವಾದ ನಾನಾ ದೇಹಗಳು ಬರತವೆ. ತದ್ಗತರಾದ ಜೀವ, ಪರಮಾತ್ಮ ಇವರು ಅಧಿಷ್ಠಾನವನ್ನನುಸರಿಸಿ, ಆಯಾ ನಾಮಗಳಿಂದ ಕರಸತಾರೆ. ಲಕ್ಷ್ಮೀಪತಿಯಾದ ಶ್ರೀಪರಮಾತ್ಮನ, ಲೋಕಾಧಿಷ್ಠಾನದಲ್ಲಿ ಕಣ್ಣಿಗೆ ಕಾಣುವಂತೆ ಮಾಡತಕ್ಕ ಲೋಕಕ್ಕೆ ಅನುಸರಿಸಿದ ಮಹಾತ್ಮೆ, ಇಂಥಾದ್ದು ಅಂತ ನಿರ್ಧಾರಕ್ಕೆ

ಶಕ್ಯವಲ್ಲದ ಮಹಿಮೆಗಳಿಗೆ ಏನಂತ ಹೇಳಲಿ? ಎಂದರೆ, ಪರಮಾತ್ಮನ ಮಹಿಮಾ ಅಸದೃಶವಾದದ್ದು-ಎಂತ ತಾತ್ಪರ್ಯ. ॥ ೧೪ ॥

**೩. ಭಾವಪ್ರಕಾಶಿಕೆ**

ಏಕಮೇವಾ ದ್ವಿತೀಯವೆಂಬ ಶ್ರುತಿ ಪ್ರತಿಪಾದ್ಯನಾದ ಶ್ರೀಹರಿಗೆ ಸಮಾನರು ಮತ್ತಾರೂ ಇಲ್ಲವು. ಇಂತಹ ಹರಿಯು ಒಬ್ಬನೇ ಆದರೂ, ಅನೇಕ ವಿಧ ಪ್ರಾಣಿಗಳಲ್ಲಿದ್ದು, ಅವರಿಗೆ ಗೊತ್ತಿಲ್ಲದೇ ಅನೇಕ ಪ್ರಕಾರವಾದ ಕರ್ಮಗಳನ್ನು ಮಾಡಿ ಮೋಹಿಸುತ್ತಿರುವನು. ಮೂಕರಲ್ಲಿದ್ದು ಮೂಕನೆಂತಲೂ, ಕಿವಿಡನಲ್ಲಿದ್ದು, ಕಿವಿಡನೆಂತಲೂ, ಕುರುಡನಲ್ಲಿದ್ದು, ಕುರುಡನೆಂತಲೂ ಕರೆಸಿಕೊಳ್ಳುವನು. ಇಂತಹ ಶ್ರೀಪತಿಯ ಮಹಿಮೆಯನ್ನಷ್ಟೆಂದು ವರ್ಣಿಸುವೆ. ॥ ೧೪ ॥

**೩. ಭಾವದರ್ಪಣ**

ಏಕಮೇವಾದ್ವಿತೀಯಮಿತಿ ॥ ತನ್ನ ಸಮಾನವಸ್ತು ಎರಡನೆಯದು ಇಲ್ಲದವ-ಎಂಬರ್ಥ. । ಬಧಿರ-ಕಿವುಡ. ॥ ೧೪ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

ಮೂಕ -ಇತಿ ॥ ತದಧೀನತ್ವ ಹೇತುತಃ ॥ ಶಬ್ದಃ ಬ್ರಹ್ಮಣಿ ವರ್ಣಂತೇ-ಇತ್ಯುಕ್ತೇಃ ॥ ೧೪ ॥

## ಕನ್ನಡಾರ್ಥ

ಶ್ರೀಹರಿಯ ಅಗಾಧಮಹಿಮೆಯನ್ನು ಏಕಮೇವ ಎಂಬ ಪದ್ಯದಿಂದ ವರ್ಣಿಸುತ್ತಾರೆ. ಮೂಲತಃ ಶ್ರೀಪರಮಾತ್ಮನು ಏಕರೂಪನು. ಆದರೂ, ತನ್ನ ಅದ್ಭುತಶಕ್ತಿಯಿಂದ ಅನೇಕ ರೂಪಗಳನ್ನು ಧರಿಸಿ, ಸಮಸ್ತಜೀವರಲ್ಲಿದ್ದು, ಅವರವರ ಕರ್ಮಗಳನ್ನು ಬೇರೆ ಬೇರೆಯಾಗಿ, ಯಾರಿಗೂ ತಿಳಿಯದಂತೆ ಮಾಡಿ ಮಾಡಿಸುತ್ತಿರುವನು. ಸ್ಥೂಲದೇಹದಲ್ಲಿದ್ದು ಜಡ, ಬಧಿರ, ಮೂಕ-ಎಂಬ ವಿವಿಧ ಶಬ್ದಗಳಿಂದ ವಾಚ್ಯನಾಗಿರುವನು.

ಮೂಕತ್ವ, ಬಧಿರತ್ವ, ಅಂಧತ್ವ, ಪರಮಾತ್ಮನಿಗಿಲ್ಲ. ಮೂಕರಲ್ಲಿ ಮೂಕತ್ವವೆಂಬ ಧರ್ಮವನ್ನೂ ನಿಯಾಮಿಸುವನು. ಅವರಿಗೆ ಸ್ವಾಮಿಯಾಗಿ,

ಅಂತರ್ಯಾಮಿಯಾಗಿರುವುದರಿಂದ, ಮೂಕ-ಇತ್ಯಾದಿ ಶಬ್ದಗಳು ಅವನಲ್ಲಿ ಅನ್ವಯವಾಗುವುವು.

ಅಧೀನವಾದವರ ಹೆಸರುಗಳು ನಿಯಾಮಕನಿಗೆ ಸಲ್ಲುವದೇ ಹೊರತು, ಅಧೀನರಿಗೆ ಸಲ್ಲುವುದಿಲ್ಲ-ಎಂದು **ಅನುವ್ಯಾಖ್ಯಾನದ ವಾಕ್ಯ.**

ಸರ್ವತಂತ್ರ ಸ್ವಾಮಿಯು ಸರ್ವರಿಗೂ ನಿಯಾಮಕನು. ದುಃಖಬದ್ಧ ಜೀವಾದರೂ, ಅನ್ಯತ್ರ ಅಪ್ರಸಿದ್ಧ ಶಬ್ದಗಳೂಕೂಡ ಶ್ರೀಹರಿಯಲ್ಲಿಯೇ ಸಮನ್ವಯಿಸುವುವು-ಎಂದು **ಶ್ರೀಮದಾಚಾರ್ಯರ** ನಿರೂಪಣೆಯು. ॥ ೧೪ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಅನೇಕ ರೂಪನಾದಾಗ್ಯೂ, ಸಮಾನಾಧಿಕರಹಿತ ಏಕರೂಪನಾದ ದೇವರು ಅನೇಕ ಜೀವರಲ್ಲಿದ್ದು, ಪ್ರತ್ಯೇಕ ಸರ್ವಕರ್ಮವ್ಯಕ್ತಿಮಾಡಿ, ತನ್ನ ಸ್ವಾತಂತ್ರ್ಯ ತಿಳಿಸದೆ, ಜೀವರಿಗೆ ಮೋಹವೆಂಬ ಸ್ವಾತಂತ್ರ್ಯಾಭಿಮಾನವನ್ನು ಕೊಡುವನು. ಈ ಕಳೇಬರವೆಂಬ ದೇಹದಲ್ಲಿ ಜೀವರಿಗೆ ಮೂಕತನ ಕೊಡುವುದರಿಂದ, ಮೂಕನಾಮದಿಂದಲೂ, ಬಧಿರ-ಎಂಬ ಕಿವುಡುತನ ಕೊಡುವುದರಿಂದ ಬಧಿರನೆಂಬ ನಾಮದಿಂದಲೂ, ಅಂಧ-ಎಂಬ ಕುರುಡುತನ ಕೊಡುವುದರಿಂದ, ಕುರುಡನೆಂಬ ನಾಮದಿಂದಲೂ, ಕರೆಯಿಸಿ ಕೊಳ್ಳುವ ಮಾಕಳತ್ರನೆಂಬ ರಮಾಪತಿಯ ಲೌಕಿಕವೆಂಬ ಪ್ರಾಕೃತ ನಾಮಾನುಕರಣ ಮಹಾಮಹಿಮೆಗೆ ಏನೆಂಬೆ? ಎಂದರೆ, ನಾನೇನು ವರ್ಣಿಸಬಲ್ಲೆ-ಎಂದರ್ಥ. ॥ ೧೪ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. **ಏಕಮೇವ ಅದ್ವಿತೀಯ**-ಇದು ಶ್ರುತಿವಾಕ್ಯ. **ಏಕಮೇವ**-ಶ್ರೀಮನ್ನಾರಾಯಣನೊಬ್ಬನೇ. **ಅದ್ವಿತೀಯ**-ಅವನನ್ನು ಹೊರತು ಅನ್ಯರಾದ ಎರಡನೆಯವರು ಬ್ಯಾರಾರು ಇಲ್ಲವೆಂದರ್ಥ. ಶ್ರೀಪರಮಾತ್ಮನಿಗೆ ಸಮರಾರೂ ಇಲ್ಲ. ಅಧಿಕರು ಇಲ್ಲವೆಂದು ಹೇಳುವುದಿನ್ನೇನು ?

೨. ಸಮಾಭ್ಯಧಿಕಶೂನ್ಯನಾದ ಸರ್ವೇಶ್ವರನು ಮೂಲರೂಪ ದಿಂದದ್ದಾಗ್ಯೂ, ಅನೇಕ ಜೀವರುಗಳಲ್ಲಿ ಆಯಾಯಾ ಅಧಿಷ್ಠಾನಗತನಾಗಿ, ಅನಂತರೂಪಗಳಿಂದ ಬಿಂಬನಾಗಿ ಅಂತಸ್ಥನಾಗಿದ್ದಾನೆ. ಜೀವರುಗಳಿಂದ ಅತ್ಯಂತ ಭಿನ್ನನಾದ ಬಿಂಬರೂಪೀ ಶ್ರೀಹರಿಯು ಆಯಾಯಾ ಜೀವರ ಸ್ವರೂಪಯೋಗ್ಯತಾನುಸಾರ, ಅವರವರ ಅನಾದಿರಕರ್ಮಾನುಸಾರ, ಕರ್ಮವಾಚ್ಯನಾಗಿದ್ದು, ತಾನೇ ಬಿಂಬಕ್ರಿಯಾದ್ವಾರಾ ಕರ್ಮಗಳನ್ನು ಮಾಡಿ, ಪ್ರತಿಬಿಂಬಭೂತರಾದ ಜೀವರುಗಳ ದ್ವಾರಾ ಮಾಡಿಸುತ್ತಿರುವನು. ತಾನೇ ಸರ್ವತಂತ್ರ ಸ್ವತಂತ್ರನಾಗಿದ್ದು, ಕರ್ತನಾಗಿದ್ದರೂ, ತನ್ನ ಕರ್ತೃತ್ವವನ್ನು ಜೀವರಿಗೆ ತಿಳಿಸದಲೇ, ತಾವೇ ಸಕಲಕರ್ಮಗಳಿಗೂ ಕರ್ತರೆಂಬ-ಅಹಂ ಕರ್ತೃತ್ವಾಭಿಮಾನವನ್ನು ಕೊಟ್ಟು, ಜೀವರನ್ನು ಮೋಹಗೊಳಿಸುವನು. ಆ ಜಗನ್ಮೋಹನನ ಲೀಲಾವಿಲಾಸವೆಂತಹುದು!

೩. ಜೀವರ ಸ್ಥೂಲದೇಹಾಂತರ್ಗತನಾಗಿದ್ದು, ಮೂಕರಲ್ಲಿದ್ದು, ಮೂಗನೆಂತಲೂ, ಕಿವುಡರಲ್ಲಿದ್ದು (ಬಧಿರ) ಕಿವುಡನೆಂತಲೂ, ಕುರುಡರಲ್ಲಿದ್ದು, (ಅಂಧ) ಅಂಧನೆಂತಲೂ, ಅದೇ ಅದೇ ನಾಮಗಳಿಂದ ಕರೆಯಿಸುತ್ತಾನೆ. ಸರ್ವಶಬ್ದವಾಚ್ಯನು ಆ ಸರ್ವೇಶ್ವರನು. ಸಮಸ್ತಶಬ್ದ, ವರ್ಣಗಳೂ ಶ್ರೀಹರಿಯಲ್ಲಿಯೇ ಮುಖ್ಯತಾತ್ಪರ್ಯವು.

೪. ಹೀಗೆ, ತತ್ತದಾಕಾರನಾಗಿ, ತನ್ನಾಮಕನಾಗಿ ಜೀವರ ಕಳೇಬರಗಳಲ್ಲಿದ್ದು, (ಸ್ಥೂಲದೇಹದಲ್ಲಿ) ಕಾರ್ಯನಿರ್ವಹಿಸುತ್ತಿರುವ ಆ ಕಮಲದಳಾಯತಾಕ್ಷನ ಅಪಾರ ಮಹಿಮೆಗಳನ್ನು ವರ್ಣಿಸಲು ಸಾಧ್ಯವಿಲ್ಲ. ಅವನ ಲೀಲಾವೈಭವಗಳು ವರ್ಣನಾತೀತ. ॥ ೧೪ ॥

## ಪದ್ಯ–೧೫

**ಮೂಲ :**

**ಲೋಕಬಂಧುಲೋಕನಾಥ ವಿ ।**
**ಶೋಕ ಭಕ್ತರ ಶೋಕನಾಶನ ।**
**ಶ್ರೀಕರಾರ್ಚಿತಸೋಕದಂದಲಿಪ್ತ ಸರ್ವರೊಳು ॥**
**ಸಾಕುವನು ಸಜ್ಜನರ ಪರಮ ಕೃ ।**
**ಪಾಕರೇಶ ಪಿನಾಕಿಸನ್ನುತ ।**
**ಸ್ವೀಕರಿಸು ವಾನತರು ಕೊಟ್ಟ ಸಮಸ್ತ ಕರ್ಮಗಳ ॥ ೧೫ ॥**

**ಅವತರಣಿಕೆ** :

ಸರ್ವಜಡ ಜೀವರುಗಳಿಂದ ಅತ್ಯಂತಭಿನ್ನನಾದ ಲೋಕನಾಥನು, ತಾನು ಜೀವರುಗಳ ದ್ವಾರಾ ಮಾಡಿಸುತ್ತಾ, ಕರ್ಮಗಳಿಂದ ನಿರ್ಲಿಪ್ತ ನಾಗಿದ್ದರೂ, ಭಕ್ತರು ತನಗರ್ಪಿಸುವ ಸಮಸ್ತಕರ್ಮಗಳನ್ನು ಸ್ವೀಕರಿಸುವನು. ಇದರಿಂದ, ವಿಶೋಕನಾದ ಅವನಿಗೆ ಯಾವ ಬಾಧಕವಿಲ್ಲ ವೆಂದು ತಿಳಿಸುತ್ತಾರೆ. ॥೧೫॥

**ಪ್ರತಿಪದಾರ್ಥ** :

**ಲೋಕಬಂಧು** = ಸಜ್ಜನರ ಪರಮಾಪ್ತಬಾಂಧವನಾದ ಶ್ರೀ ಪರಮಾತ್ಮನು, **ಲೋಕನಾಥ** = ಜಗತ್ತಿಗೇ ಯಜಮಾನಾದವನು, **ವಿಶೋಕ** = ಯಾವ ವಿಧವಾದ ದುಃಖಗಳೂ ಇಲ್ಲದವನು, **ಭಕ್ತರ ಶೋಕನಾಶನ** = ತನ್ನ ಭಕ್ತಜನರ ದುಃಖಗಳನ್ನು ನಾಶಮಾಡುವವನು, **ಶ್ರೀಕರಾರ್ಚಿತ** = ಲಕ್ಷ್ಮೀದೇವಿಯರ ಕರಗಳಿಂದ ಪೂಜಿತನಾದವನು. **ಸರ್ವರೊಳು** = ಸಮಸ್ತ ಚರಾಚರಾಧಿ ಷ್ಠಾನಗಳಲ್ಲಿ ಅಂತರ್ಯಾಮಿಯಾಗಿದ್ದರೂ ಸಹ, **ಸೋಕದಂದಲಿಪ್ತ**=ಯಾವುದಕ್ಕು ಸಂಬಂಧವಾಗದೆ ನಿರ್ಲಿಪ್ತನಾಗಿದ್ದಾನೆ. (ಸಮಸ್ತ ಜಡಜೀವರುಗಳಿಂದ ಅತ್ಯಂತ ವಿಲಕ್ಷಣನು), **ಸಜ್ಜನರ** =

ಮುಕ್ತಿಯೋಗ್ಯರಾದ ತನ್ನ ಭಕ್ತಜನಗಳನ್ನು **ಸಾಕುವನು** = ಸರ್ವಪ್ರಕಾರ ಗಳಿಂದಲೂ ಸಂರಕ್ಷಿಸುವನು. **ಪರಮ ಕೃಪಾಕರೇಶ** ಅವರಲ್ಲಿ ಅತ್ಯಂತ ದಯಮಾಡುವ ಸ್ವಾಮಿಯು, **ಪಿನಾಕಿಸನ್ನುತ** = ಪಿನಾಕ–ಎಂಬ ಧನುಸ್ಸನ್ನು ಧರಿಸಿರುವ ಶ್ರೀರುದ್ರದೇವರಿಂದ ಚೆನ್ನಾಗಿ ಸ್ತುತ್ಯನಾದವನು. **ಆನತರು** = ಶರಣಾಗತರಾದ ಭಕ್ತರು, **ಕೊಟ್ಟ ಸಮಸ್ತ ಕರ್ಮಗಳ** ಸಕಲವಾದ ದ್ವಂದ್ವ ಕರ್ಮಗಳನ್ನೂ **ಸ್ವೀಕರಿಸುವ** ತಾನು ಸ್ವೀಕಾರ ಮಾಡುತ್ತಾನೆ. ॥ ೧೫ ॥

## ವ್ಯಾಖ್ಯಾನಗಳು

ಶ್ರೀಪರಮಾತ್ಮನ ಮಾಹಾತ್ಮ್ಯ ಹೇಳತಾರೆ.

ಶ್ರೀ ಪರಮಾತ್ಮ ಲೋಕರಿಗೆ ಬಾಂಧವನಾದವ. ಸರ್ವರಿಗೂ ಯಜಮಾನ ಮಾಡತಕ್ಕವ. ಲಕ್ಷ್ಮೀದೇವರ ಕೈಗಳಿಂದ ಪೂಜಿತನಾದವ. ಸಮಸ್ತ ಚರಾಚರ ಅಧಿಷ್ಠಾನಗಳಲ್ಲಿ ಇದ್ದವನಾಗಿ, ದಾವದಕ್ಕೂ ಸಂಬಂಧ ವಾಗದೆ ನಿರ್ಲಿಪ್ತನಾಗಿದ್ದಾನೆ. ಮುಕ್ತಿಯೋಗ್ಯರನ್ನ ಸರ್ವಪ್ರಕಾರದಿಂದಲೂ ರಕ್ಷಿಸತಾನೆ. ಇವರಲ್ಲಿ ಅತ್ಯಂತವಾದ ಅಂತಃಕರಣ ಮಾಡತಕ್ಕ ಸ್ವಾಮಿ ಯಾದವನು. ರುದ್ರದೇವರಿಂದ ಚೆನ್ನಾಗಿ ಸ್ತುತ್ಯನಾದವನು. ಇಂಥಾ ಪರಮಾತ್ಮ, ತನ್ನ ಸರ್ವೋತ್ತಮನೆಂದ ತಿಳಿದು, ಚಂದಾಗಿ ವಂದನಾ ಮಾಡತಕ್ಕ ಭಕ್ತರು ಕೊಟ್ಟಂಥ ಎಲ್ಲಾ ದ್ವಂದ್ವಕರ್ಮಗಳ ತಾನು ಸ್ವೀಕಾರ ಮಾಡತಾನಂತ ತಾತ್ಪರ್ಯ. ॥ ೧೫ ॥

### ೨. ಭಾವಪ್ರಕಾಶಿಕೆ

ಸರ್ವಲೋಕಕ್ಕೂ ನಾಥನಾದ, ಲೋಕಬಂಧುವಾದ, ಶ್ರೀಹರಿಯು ಭಕ್ತರ ಶೋಕವನ್ನು ನಾಶಮಾಡುತ್ತಾ, ನಿರ್ಲಿಪ್ತನಾಗಿ ಎಲ್ಲರಲ್ಲೂ ಇದ್ದು, ಸಜ್ಜನರನ್ನು ರಕ್ಷಿಸುವನು. ಭಕ್ತರು ಕೊಟ್ಟ ಕರ್ಮಗಳನ್ನು ಒಪ್ಪಿಕೊಂಡು, ಅವರಿಗೆ ಉತ್ತಮವಾದ ಫಲವನ್ನು ಕೊಡುವನು. ॥ ೧೫ ॥

೬. ಭಾವದರ್ಪಣ

ಲೋಕಬಂಧುರಿತಿ ॥ "ಲೋಕಬಂಧುರ್ಲೋಕನಾಥೇತಿ"–ಸಹಸ್ರನಾಮಸ್ತು ಪಾಠಾತ್. ॥ ೧೫ ॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

"ಲೋಕಬಂಧು"–ಇತಿ ॥ ಓಂ ॥ ಜುಷಂತ ಯತ್ ಪ್ರತ್ನವಜ್ಜನಯಾಗಿರಃ ಶೃಣುಧೀ ಜರಿಮರ್ಹವಮ್ ॥ ಮದೇ ಮದೇ ಏವಕ್ಷಿಥಾ ಸುಕೃತ್ವನೇ (ಕ್ರೀಳಂತ್ವಸ್ಯ) ॥ ಓಂ ॥ ಲೋಕಾನ್ ಸಾಧುಜನಾನ್ ಆತ್ಮನಿ ಬಧ್ನಾತಿ–ಇತಿ ತಥೋಕ್ತಃ ॥

"ಲೋಕನಾಥಃ"–॥ ಓಂ ॥ ಸೂನೃತಾ ಆಘೋನ ಪ್ರವತಾ ಯತೀಃ ಆಯಾ ಧಿಯಾ ಯ ಉಚ್ಯತೇ ಪತಿರ್ದಿವಃ ಉತೋ ಪತಿರ್ಯ ಉಚ್ಯತೇ ಕೃಷ್ಣನಾಮಕಃ ॥ ಓಂ ॥ ಲೋಕಾನಾಂ ನಾಥಃ ಐಶ್ವರ್ಯಾತ್ ಇಂದ್ರಃ॥

"ವಿಶೋಕ"–॥ ಓಂ ॥ ವಿದ್ವಾನ್ ಚಕಿತ್ವಾನ್ ಹರ್ಯಶ್ವ ವರ್ಧಸೇ ಇಂದ್ರ ವಿಶ್ವಾ ಅಭಿಶ್ರೀಯಃ ದ್ಯಾಮಿಂದ್ರೋ ಹರಿಧಾಯಸಂ ಪೃಥಿವೀಂ ಹರಿವರ್ಪಸಮ್ ॥ ಓಂ ॥ ವಿಗತಃ ಶೋಕಃ ಯಸ್ಮಾತ್–ತಥೋಕ್ತಃ॥

"ಶೋಕನಾಶನಃ"–॥ ಓಂ ॥ ಆಧಾರಯದ್ಧರಿತೋರ್ಭೂರಿ ಭೋಜನಂ ಯಯೋರಂತರ್ಹರಿಶ್ಚರತ್ ಜಜ್ಞಾನೋ ಹರಿತೋ ವೃಷಾ ವಿಶ್ವಮಾ ಭಾತಿ ರೋಚನಂ ॥ ಓಂ ॥ ಶೋಕಂ ನಾಶಯತಿ ಇತಿ–ತಥೋಕ್ತಃ॥

"ಸೋಕ – ಲೇಪ". ಪನಾಕೀ – ರುದ್ರಃ ॥ ಆನತಾಃ – ನಮಸ್ಕೃತಃ. ॥ ೧೫ ॥

## ಕನ್ನಡಾರ್ಥ

"ಲೋಕಬಂಧು"–ಸಾಧುಜನರನ್ನು ತನ್ನಲ್ಲಿ ಬಂಧಿಸುವವನು. ಆಕರ್ಷಿಸಿ ಬಿಟ್ಟಗಲದೇ ಇರುವವನು. "ಲೋಕನಾಥ"–ಅಖಂಡೈಶ್ವರ್ಯದಿಂದ ಲೋಕಗಳಿಗೆಲ್ಲ ಸ್ವಾಮಿಯಾದವನು–ಅಧಿಪತಿ.

"ವಿಶೋಕ"–ಶೋಕದಿಂದ ಸರ್ವದಾ ಅಧಿದೂರದಲ್ಲಿರುವನು.

"ಶೋಕನಾಶನ"–ಸಜ್ಜನರ ಶೋಕಗಳನ್ನು ಪರಿಹರಿಸುವನು. ಹೀಗೆ ಬೃಹತೀಮಂತ್ರಾಭಿಪ್ರೇರಿತವಾದ ನಾಮಾರ್ಥಗಳ ಸಂಕ್ಷೇಪ ವಿವರಣೆ ಸರ್ವರಲ್ಲಿದ್ದರೂ, ಲೇಪವಿಲ್ಲ–ಪಾಪ ಸಂಬಂಧವಿಲ್ಲದವನು. ಪಿನಾಕಿ– ರುದ್ರ–ಶಂಭು. ಆನತರು–ನಮಸ್ಕರಿಸಿದವರು. ॥ ೧೫ ॥

## ಶ್ರೀಗುರುಹೃದಯಪ್ರಕಾಶಿಕೆ

ಲೋಕವೆಂಬ ಸರ್ವಜೀವರಿಗೆ ಅನಿಮಿತ್ತಬಂಧುವಾದ, ಲೋಕವೆಂಬ ಚತುರ್ದಶಭುವನಕ್ಕೆ ಸ್ವಾಮಿಯಾದ, ಸರ್ವದುಃಖವರ್ಜಿತನಾದ, ಭಕ್ತರ ಕ್ಲೇಶಪರಿಹಾರಕನಾದ, ಲಕ್ಷ್ಮೀಕರಾರ್ಚಿತನಾದ ದೇವರು, ಸರ್ವರಲ್ಲೂ ಸೋಂಕದಲಿಪ್ತ–ಅಂದರೆ, ಆಕಾಶದಂತೆ ನಿರ್ಲೇಪನಾಗಿರುವನು. ಕೃಪಾಕರ ನೆಂಬ ಕರುಣಾಳುಗಳಿಗೆ ಸ್ವಾಮಿಯಾದ ದೇವರು, ತನ್ನ ಶರಣಾಗತರು ಸಮರ್ಪಿಸಿದ ಸರ್ವಕರ್ಮಫಲ ಸ್ವೀಕರಿಸಿ, ಅಂದರೆ, ಅವರ ಕರ್ಮಬಂಧ ಪರಿಹರಿಸಿ, ಆ ಸಜ್ಜನರನ್ನು ರಕ್ಷಿಸುವನು. ॥ ೧೫ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಸಜ್ಜನರನ್ನು ತನ್ನಲ್ಲಿ ಯಾವಾಗಲೂ ಬಂಧಿಸಿ, ಅವರ ಆಪ್ತಬಂಧುವಾಗಿರುವುದರಿಂದ, ಶ್ರೀಪರಮಾತ್ಮನಿಗೆ "ಲೋಕಬಂಧು" ಎಂತ ನಾಮ. ಭಕ್ತರ ಜನರಾಪ್ತನು. ಲೋಕವೆಂಬ ಸರ್ವಜೀವರಿ ಅನಿಮಿತ್ತ ಬಂಧುವು. ಅವರಿಂದ ಯಾವುದನ್ನೂ ಅಪೇಕ್ಷಿಸದ ಆಪ್ತಬಂಧುವಿನಂತೆ ಸಂರಕ್ಷಿಸುವ ಬಿಂಬನು.

೨. ಲೋಕ–ವೆಂದರೆ, ಚತುರ್ದಶಭುವನಾತ್ಮಕವಾದ ಈ ಜಗತ್ತು ಅದನ್ನು ಸೃಷ್ಟಿಸಿ, ಪರಿಪಾಲಿಸುವ ಜಗತ್ಪ್ರಭುವು ಶ್ರೀಮನ್ನಾರಾಯಣನು ಅವನಿಗೆ ಲೋಕನಾಥನೆಂದು ಹೆಸರು. ಅಂದರೆ, ಭಗವದಾತ್ಮಕವಾದ ಈ ಸಮಗ್ರಜಗತ್ತಿಗೇ ಪ್ರಭುವು.

೩. ಜೀವರಂತೆ ಅವನಿಗೆ ಯಾವ ಕ್ಲೇಶಾದಿಗಳಾಗಲೀ, ದುಃಖವಾಗಲೀ ಅನಾದ್ಯನಂತಕಾಲದಿಂದಲೂ ಇಲ್ಲವೇ ಇಲ್ಲ. ಇದರಿಂದ **ವಿಶೋಕನು.**

೪. ಅವನು ವಿಶೋಕನಾಗಿರುವುದರಿಂದಲೇ, ತನ್ನ ಭಕ್ತರಿಗೆ ಒದಗಿಸುತ್ತಿರುವ ದುಃಖಗಳನ್ನು ಪರಿಹರಿಸುವನು.

೫. ಭಕ್ತರ ಶೋಕನಾಶಕನಾದ ಭಕ್ತವತ್ಸಲನು ಲಕ್ಷ್ಮೀದೇವಿಯರ ಕರಕಮಲದಿಂದ ಪೂಜಿತ ಪಾದಪದ್ಮವುಳ್ಳವನು. ರಮಾದೇವಿ ನಿರಂತರದಲ್ಲಿಯೂ ಆಭರಣಗಳಾಗಿ, ಆಯುಧಗಳಾಗಿ, ವ್ಯಜನ ಪರ್ಯಂಕ ರೂಪದಲ್ಲಿ ಸೇವೆಯನ್ನು ಮಾಡುತ್ತಿರುವರು. ಇದರಿಂದ **ಶ್ರೀಕರಾರ್ಚಿತನು.**

೬. ಶ್ರೀಕರಾರ್ಚಿತನಾದ ಶ್ರೀನಿಧಿಯು ಸರ್ವಜೀವರಲ್ಲಿ ಅಂತರ್ಯಾಮಿಯಾಗಿ ಬಿಂಬರೂಪದಿಂದಿರುವನು. ಅವರ ದ್ವಾರಾ, ಸಕಲ ಕರ್ಮಗಳನ್ನು ತಾನೇ ಮಾಡಿ ಮಾಡಿಸುತ್ತಿರುವ ಸರ್ವಕರ್ತನು. ಸರ್ವ ಜೀವರಲ್ಲಿದ್ದು, ನಾನಾ ಕರ್ಮಗಳನ್ನು ಮಾಡಿ ಮಾಡಿಸುತ್ತಿದ್ದರೂ ಸಹ, ಜೀವರಿಂದ ಅತ್ಯಂತ ವಿಲಕ್ಷಣನು. ಜೀವರಿಂದ ಭಿನ್ನನಾದ ಜೀವರ ನಿಯಾಮಕನಿಗೆ ಅವರ ಕರ್ಮಗಳ ಲೇಪನವಿಲ್ಲ. ನಿರ್ಲಿಪ್ತನಾಗಿರುವ ನಿರಂಜನನ್ನು **ಸೋಕದಂದಲಿಪ್ತಸರ್ವರೊಳು**–ಎಂದಿದ್ದಾರೆ ದಾಸರಾಯರು.

೭. ಸರ್ವರೊಳು ಸೋಕದಂದಲಿಪ್ತ ಸರ್ವೇಶನು ಸಜ್ಜನರನ್ನು ಸದಾ ಸಂರಕ್ಷಿಸುವನು. ಅವನು ಅತ್ಯಂತ ದಯಾಮಯನು. ಅವನ ಕೃಪಾಶ್ರಯ ದಲ್ಲಿರುವ ಸರ್ವ ಸಜ್ಜನರು ಸದಾ ಸುಕ್ಷೇಮಿಗಳು.

೮. ಪಿನಾಕವೆಂಬ ಧನುಸ್ಸನ್ನು ಧರಿಸಿರುವುದರಿಂದ, ಶ್ರೀರುದ್ರದೇವರಿಗೆ **ಪಿನಾಕಿ**–ಎಂದು ಹೆಸರು. ಆ ಪರಮ ಕೃಪಾಕರನು ಪಿನಾಕಿಸನ್ನುತನು. ರುದ್ರದೇವರಿಂದ ಸಂಸ್ತುತ್ಯಮಾನನಾಗಿದ್ದಾನೆ.

೯. ರುದ್ರದೇವರು ಮನೋನಿಯಾಮಕರಾಗಿರುವುದರಿಂದ, "ಪಿನಾಕಿಸನ್ನುತ" ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆ. ಮನಸ್ಸಿನ ದ್ವಾರಾ ಸಕಲಕರ್ಮಗಳ ಅಭಿವ್ಯಕ್ತಿ. ಮನಸ್ಸೇ ಪುಣ್ಯ-ಪಾಪ ಕರ್ಮಗಳಿಗೆಲ್ಲಾ ಮುಖ್ಯ

ಪ್ರೇರಕಕೇಂದ್ರವು. ಭಕ್ತರು ನೀಡುವ ಶುಭ–ಅಶುಭ–ಮಿಶ್ರ–ಎಂಬ ಸಮಸ್ತ ಕರ್ಮಗಳನ್ನೂ ಕರ್ಮಪತಿಯಾದ ಕಮಲನಾಥನು ಸ್ವೀಕರಿಸುವನು. ಅವರನ್ನು ಪಾಪವಿಮೋಚನನ್ನಾಗಿ ಮಾಡಿ, ಪುಣ್ಯಪಾಪಗಳನ್ನು ಅನಂತಮಾಡಿ ಮಾಡಿ, ಅನುಗ್ರಹಿಸುವನು. ॥ ೧೫ ॥

## ಪದ್ಯ–೧೬

**ಮೂಲ :**

**ಆಹಿತ ಪ್ರತಿಮೆಗಳೆನಿಸುವುವು ।**
**ದೇಹ ಗೇಹಾಪತ್ಯ ಸತಿ ಧನ ।**
**ಲೋಹ ಕಾಷ್ಠ ಶಿಲಾ ಮೃದಾತ್ಮಕವಾದ ದ್ರವ್ಯಗಳು ॥**
**ಸ್ನೇಹದಲಿ ಪರಮಾತ್ಮ ಎನಗಿ ।**
**ತ್ತೀಹನೆಂದರಿದನುದಿನದಿ ಸ ।**
**ಮ್ಮೋಹಕೊಳಗಾಗದಲೆ ಪೂಜಿಸು ಸರ್ವನಾಮಕನ ॥ ೧೬ ॥**

**ಅವತರಣಿಕೆ :**

ಶ್ರೀಪರಮಾತ್ಮನಿಗೆ ಅಆಹಿತಪ್ರತಿಮೆಗಳೆನಿಸುವ ದೇಹ–ಗೃಹ–ಪುತ್ರಾದಿಗಳ ವಿಚಾರ ತಿಳಿಸುತ್ತಾರೆ. ಪೂಜಾ ವಿಧಾನವನ್ನೂ ಸಹ ಹೇಳುತ್ತಾರೆ. ॥ ೧೬ ॥

**ಪ್ರತಿಪದಾರ್ಥ :**

**ಆಹಿತ** = ದಶವಿಧವಿಭೂತಿಗಳೊಳಗೆ ಆಹಿತವಿಭೂತಿ ಇರತಕ್ಕ ಅಧಿಷ್ಠಾನ ವಿಶೇಷಗಳಾದ, **ದೇಹ** = ನಮ್ಮ ಶರೀರ, **ಗೇಹ** = ವಾಸಿಸುವ ಮನೆ, **ಆಪತ್ಯ** = ಪುತ್ರರು ಹಾಗೂ ಬಂಧುವರ್ಗ, **ಸತಿ** = ಹೆಂಡತಿ, **ಧನ** = ಗಳಿಸಿದ ದ್ರವ್ಯ, **ಲೋಹ** = ಬಂಗಾರಾದಿ ಆಭರಣಗಳು, **ಕಾಷ್ಠ** = ಉದ್ಯಾನವನಗಳು (ಲೋಭ ಇತ್ಯಾದಿ ಚರಆಸ್ತಿ) **ಶಿಲಾ** = ನವರತ್ನಗಳು, **ಮೃದಾತ್ಮಕವಾದ ದ್ರವ್ಯಗಳು** = ಭೂಮಿ ಇತ್ಯಾದಿ ಆಸ್ತಿಪಾಸ್ತಿಗಳು, (ಮೃತ್ತಿಕಾಸಂಬಂಧ) **ಆಹಿತಪ್ರತಿಮೆಗಳೆನಿಸುವುವು** = ಶ್ರೀಪರಮಾತ್ಮನಿಗೆ ಆಹಿತಪ್ರತೀಕಗಳು–ಎಂದು ಕರೆಯಿಸುತ್ತವೆ. ಇವುಗಳಲ್ಲಿ ಪರಮಾತ್ಮನ "ಆಹಿತವಿಭೂತಿರೂಪ"–ಇರುವುದು. ಸ್ನೇಹದಲಿ ಭಕ್ತಿಪೂರ್ವಕವಾಗಿ, **ಪರಮಾತ್ಮ** = ಸಕಲಕ್ಕೂ ಒಡೆಯನಾದ ಶ್ರೀಹರಿಯೇ, **ಎನಗೆ ಇತ್ತಿಹನೆಂದು**

= ನನ್ನ ಸಾಧನೆಗಾಗಿ ಕೊಟ್ಟಿದ್ದಾನೆ–ಎಂದು ತಿಳಿದು, **ಸಮ್ಮೋಹಕೊಳಗಾಗದಲೆ** = ಅವುಗಳಲ್ಲಿ ಮೋಹಾಸಕ್ತನಾಗದೇ (ನಿರ್ಮಮತಿಯಿಂದ), **ಸರ್ವನಾಮಕನ** = ಆಯಾಯ ಅಧಿಷ್ಠಾನಗತ ತತ್ತನ್ನಾಮಕನನ್ನು, **ಅನುದಿನದಿ** = ಪ್ರತಿದಿನದಲ್ಲೂ, **ಪೂಜಿಸು** = ಅವೆಲ್ಲವೂ ಅವನಿಂದ ದತ್ತವಾದದ್ದು. ಅವನ ಅಧೀನ. ಅವನಿಗೇ ಅರ್ಪಿತವೆಂದು ಅರ್ಪಿಸುತ್ತಿರು. ॥ ೧೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ವಿಭೂತಿಸಂಧಿಯಲ್ಲಿ ಹೇಳಿದ ದಶವಿಧ ವಿಭೂತಿಗಳೊಳಗೆ ಅಹಿತ ವಿಭೂತಿ ಇರತಕ್ಕ ಅಧಿಷ್ಠಾನಸಾಂಕೇತಗಳಾದ ತನ್ನ ದೇಹವೇನು, ಮನಿ, ಪುತ್ರರು ಅಥವಾ ಸಮಸ್ತರಾದ ಬಂಧುಗಳು, ಹೆಂಡತಿ, ದ್ರವ್ಯ ಬಂಗಾರ ಮೊದಲಾದ ಆಭರಣಗಳು, ನವರತ್ನಗಳು, ಉದ್ಯಾನವನಗಳು, ಭೂಮಿ–ಮೊದಲಾದ ಏತಾದೃಶವಾದ ಅನೇಕ ಪದಾರ್ಥಗಳು ಶ್ರೀಪರಮಾತ್ಮಗೆ ಪ್ರತಿಮೆಗಳೆಂತ ಕರಸೋವಾಗತವೆ. ಇವುಗಳಲ್ಲಿ ಪರಮಾತ್ಮನ ಅಹಿತವಿಭೂತಿ ಇರೋದಾಗಿ ಅದೆ. ಈ ಪದಾರ್ಥಗಳು ತನ್ನವು–ಎಂತ ತಿಳಿಯದೆ, ಇವು ಯಾವತ್ತೂ ಶ್ರೀಪರಮಾತ್ಮಂದು, ನನ್ನದಲ್ಲ ಎಂತ–ತಿಳಿದು ಇವುಗಳಲ್ಲಿ ಕೇವಲ ಮಮತಾ ಮಾಡದೆ, ದೇವರು ನನಗೆ ಸಾಧನೋದ್ದೇಶದಿಂದ ಕೊಡೋವ ನಾಗಿದ್ದಾನೆಂತಲೂ, ಅದರಲ್ಲಿ ಅಹಿತ ವಿಭೂತಿ ಶ್ರೀಪರಮಾತ್ಮ ಆವಾಸನಾಗಿದ್ದಾನೆಂತ ತಾನು ತಿಳಿದವನಾಗಿ, ಅವುಗಳಲ್ಲಿ ದೇವರ ಸನ್ನಿಧಾನ ಅದೆ–ಎಂತ ತಿಳದು, ಅವಿಚ್ಛಿನ್ನ ಸ್ನೇಹ ಬೆಳಸತಾ, ಇವುಗಳಲ್ಲಿ ವಿಶೇಷ ಮಮತಾ ಮಾಡದೇ, ಅವುಗಳಿಗೆ ನೀನು ವಶನಾಗದೆ, ಚಂದಾಗಿ, ಮೋಹವನ್ನು ದೂರಮಾಡಿ, ನಿರ್ಲಿಪ್ತನಾಗಿ ಸಂಚಾರಮಾಡತಾ, ಪ್ರತಿದಿನದಲ್ಲೂ ದಾರಾಪುತ್ರಾದಿ ಪೂರ್ವೋಕ್ತ ಅಧಿಷ್ಠಾನಗಳಲ್ಲಿ ಇರತಕ್ಕ ತತ್ತನ್ನಾಮಕನಾದ ಶ್ರೀಪರಮಾತ್ಮನ ಪೂಜಾದಿ ಉಪಚಾರಗಳ ಮಾಡೋವನಾಗು ಎಂತ ಅರ್ಥ. ಇದರಿಂದ

ಇಷ್ಟಂ ದತ್ತಂ ಹುತಂ ಜಪ್ತಂ ಪೂರ್ತಂ ಯಚ್ಚಾತ್ಮನಃ ಪ್ರಿಯಂ ।
ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಪರಸ್ಮೈ ಸನ್ನಿವೇದಯತ್ ॥

ಎಂಬ ಶ್ಲೋಕಾರ್ಥ ವಿವರಿಸಿದಂತಾಯಿತು. ॥ ೧೬ ॥

**೨. ಭಾವಪ್ರಕಾಶಿಕೆ**

ದೇಹ, ಮನೆ, ಮಕ್ಕಳು, ಹೆಂಡರು, ಧನ, ಲೋಹ, ಕಾಷ್ಟ, ಶಿಲೆ, ಮೃದಾತ್ಮಕವಾದ ದ್ರವ್ಯಗಳೆಲ್ಲವೂ ಪರಮಾತ್ಮನಿಗೆ ಆಹಿತಪ್ರತಿಮೆ ಎನಿಸುವುವು. ಇವುಗಳನ್ನು ಪರಮಾತ್ಮನು ನನಗೆ ಕೊಟ್ಟಿರುವನೆಂದು ತಿಳಿದು, ಅವುಗಳಲ್ಲಿ ತನ್ನದೆಂಬ ಅಭಿಮಾನ ಮಾಡದೆ, ಅವುಗಳಲ್ಲಿ ಅಂತರ್ಗತನಾದ ಸರ್ವನಾಮಕ ನಾದ ಪರಮಾತ್ಮನನ್ನು ಪೂಜಿಸು. ॥ ೧೬ ॥

**೩. ಭಾವದರ್ಪಣ :**

ಆಹಿತೇತಿ ॥ ಭಗವತ್ಸನ್ನಿಧಾನಕ್ಕ ಯೋಗ್ಯಾಧಿಷ್ಠಾನ ಎಂಬರ್ಥ । ಗೇಹೇ–ಮನೆ, ಅಪತ್ಯ–ಪುತ್ರ, ಸತೀ–ಪತ್ನೀ, ಮೃದಾತ್ಮಕ–ಮಣ ಸಂಬಂಧ ಎಂಬರ್ಥ। ಸಂಮೋಹ–ಅಜ್ಞಾನ. ॥ ೧೬ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ಆಹಿತ"–ಇತಿ ॥ "ನಿತ್ಯಂ ತತ್ರೇಶ ಸನ್ನಿಧೇಂ"॥ ॥ ೧೬ ॥

**ಕನ್ನಡಾರ್ಥ**

ದೇಹ ಗೇಹಾದಿಗಳು (ಶರೀರ–ಮನೆ) ಆಹಿತ ಪ್ರತಿಮೆಗಳು ಅವುಗಳಲ್ಲಿ ಶ್ರೀಪರಮಾತ್ಮನ ಸನ್ನಿಧಾನವನ್ನು ಚಿಂತಿಸಬೇಕು. ಸ್ನೇಹದಿಂದ ವರ್ತಿಸಿ, ಸರ್ವನಾಮಕನನ್ನು ಸರ್ವದಾ ಪೂಜಿಸುತ್ತಿರಬೇಕು–ಎಂದು ಹೇಳುತ್ತಾರೆ–"ಆಹಿತ"–ಎಂಬ ಪದ್ಯದಿಂದ. ಇದರ ತಾತ್ಪರ್ಯಾರ್ಥವು "ಈ ಆಹಿತ ಪ್ರತಿಮೆಗಳಲ್ಲಿ ನಿತ್ಯ ಹರಿಯ ಸನ್ನಿಧಾನವಿರುತ್ತದೆ. ॥ ೧೬ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ದೇಹವೂ, ಗೇಹವೆಂಬ ಮನೆಯೂ, ಅಪತ್ಯವೆಂಬ ಮಕ್ಕಳೂ, ಸತಿ ಎಂಬ ಸ್ತ್ರೀಯೂ, ಧನವೂ, ಲೋಹವೆಂಬ ಕಂಚುಮುಟ್ಟುಗಳೂ,

ಶಿಲಾಮೃದಾತ್ಮಕವೆಂಬ ಕಲ್ಲುಮಣ್ಣಿನ ಪಾತ್ರೆಗಳೂ, ಸಹಾ ಆಹಿತ ಪ್ರತಿಮೆಗಳೆನಿಸುವುವು, ಎಂದರೆ, ದೇವರ ಸನ್ನಿಧಿಗೆ ಪಾತ್ರವಾದ ಜಡಪ್ರತಿಮೆಗಳೆಂದರ್ಥ. ಸ್ನೇಹದಿಂದ ಪರಮಾತ್ಮ ನನ್ನ ವಶಕ್ಕೆ ಕೊಟ್ಟದ್ದಾನೆ. ಸರ್ವವೂ ಆತನದೇ–ಎಂದು ತಿಳಿದು, ಸಂಮ್ಮೋಹವೆಂಬ ಸ್ವಾತಂತ್ರ್ಯಾಭಿ ಮಾನಕ್ಕೆ ಒಳಗಾಗದೆ, ಸರ್ವನಾಮಕನಾದ ದೇವರನ್ನು ಪೂಜಿಸು–ಎಂದರೆ, ಯಥಾಯೋಗ್ಯವಾಗಿ ಅರ್ಚಿಸುವುದೇ ಪೂಜೆ ಎಂದರ್ಥ. ॥ ೧೬ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಭಗವತ್ಸನ್ನಿಧಾನಕ್ಕೆ ಯೋಗ್ಯವಾದ ಪಾತ್ರ ಅಥವಾ ಅಧಿಷ್ಠಾನಗಳಿಗೆ **ಆಹಿತಪ್ರತಿಮೆ**ಗಳೆಂದು ಹೆಸರು. ದಶವಿಧವಾದ ವಿಭೂತಿಗಳಲ್ಲಿ "ಆಹಿತವಿಭೂತಿ"–ಒಂದು.

೨. ಸಾಧನ ಸಂಪತ್ತುಳ್ಳ ನಮ್ಮ ಸ್ಥೂಲದೇಹವು, ನಾವು ವಾಸಿಸುವ ಮನೆ (ಗೇಹ), ಪುತ್ರ ಪುತ್ರಿಯರು ಮತ್ತು ಇತರ ಬಂಧುಜನಗಳು, ಪತ್ನೀ (ಸತಿ), ನಾವು ಸಂಪಾದಿಸುವ ದ್ರವ್ಯ (ಧನ), ಲೋಹಸಂಬಂಧವಾದ ಬಂಗಾರದ ಆಭರಣ ವಿಶೇಷಗಳು, ಕಂಚು, ತಾಮ್ರ, ಹಿತ್ತಾಳೆಯ ಪಾತ್ರೆಗಳು, ಉಪಕರಣಾದಿಗಳು, ಮರದಿಂದ ಮಾಡಿದ ಮಂಚ, ಬೀರು ಮುಂತಾದ ಉಪಯುಕ್ತ ವಸ್ತುಗಳು (ಕಾಷ್ಠ), ನವರತ್ನಗಳು (ಶಿಲಾ) ಮಣ್ಣಿಗೆ ಸಂಬಂಧಿಸಿದ ಭೂಮಿ, ಜಮೀನು, ತೋಟ ಮುಂತಾದ ಆಸ್ತಿಗಳು, (ಮೃದಾತ್ಮಕ) ಇತ್ಯಾದಿ ನಾವು ನಿತ್ಯಜೀವನದಲ್ಲಿ ಉಪಭೋಗಿಸುವ ವಸ್ತುಗಳೆಲ್ಲವೂ ಆಹಿತಪ್ರತಿಮೆಗಳೆನಿಸುವುವು.

ಕ್ಷಣಭಂಗುರವಾದ ಈ ವಸ್ತುಗಳಲ್ಲಿ ಮೋಹವನ್ನಿಡದೆ, ತದಂರ್ಗತ ಭಗವದ್ರೂಪಗಳನ್ನು ನಿರಂತರವೂ ಚಿಂತಿಸಬೇಕು. ಸರ್ವೇಶನಾದ ಶ್ರೀಶನೇ ಈ ವಸ್ತುಗಳಲ್ಲಿ ಇದ್ದು, ತದ್ವಾರಾ, ಕಾರ್ಯಗಳನ್ನು ಮಾಡಿ ಮಾಡಿಸಿ, ನಮ್ಮ ಉಪಭೋಗಕ್ಕೆ ಕೊಡುತ್ತಾನೆಂದ ಉಪಾಸಿಸಬೇಕು. ಪತ್ನೀ–ಸುತರು–ಬಂಧುಗಳಲ್ಲೂ ಅವನ ಪರಿವಾರಭೂತರು, ಧನ–ಕನಕಾದಿಗಳು ಅವನಿಂದ

ದತ್ತವಾದುವು. ಆವನ ಸೇವಾಕಾರ್ಯಗಳಲ್ಲಿ ವಿನಿಯೋಗಿಸಬೇಕು. (ಹೆಂಡಿರು ಮಕ್ಕಳು ನಿನ್ನ ತೊಂಡರೆಂಬೋರು–ಎಂಬ ಪದದಂತೆ).

೪. ಅನಿತ್ಯವಾದ ಪೂರ್ವೋಕ್ತವಸ್ತುಗಳಲ್ಲಿ ಮೋಹವನ್ನು ತ್ಯಜಿಸಬೇಕು. ಮಮತಾರಹಿತರಾಗಿ ಸರ್ವಶಬ್ದವಾಚ್ಯನೂ, ಸರ್ವನಾಮಕನೂ ಆದ ಆ ಸರ್ವೇಶನನ್ನು ಆಯಾಯ ಪದಾರ್ಥಗಳೊಳಗೆ ಅಂತರ್ಯಾಮಿಯಾಗಿದ್ದಾನೆಂದು ಜ್ಞಾನಾನುಸಂಧಾನದಿಂದ ತಿಳಿದು, ತತ್ತದ್ರೂಪಗಳನ್ನು ಭಜಿಸುತ್ತಾ, ಅರ್ಪಿಸುತ್ತಿರಬೇಕೆಂದು ಪ್ರಸಕ್ತ ಪದ್ಯದ ತಾತ್ಪರ್ಯವು.

**ಪ್ರಮಾಣ :**

ಇಷ್ಟಂ ದತ್ತಂ ಹುತಂ ಜಪ್ತಂ ಪೂರ್ತಂ ಯಚ್ಚಾತ್ಮನಃ ಪ್ರಿಯಂ।
ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಪರಸ್ಮೈ ಸನ್ನಿವೇದಯತೇ
॥ ೧೬ ॥

## ಪದ್ಯ-೧೭

**ಮೂಲ :**

**ಶ್ರೀತರುಣಿವಲ್ಲಭಾಗೆ ಜೀವರು ।**
**ಚೇತನಪ್ರತಿಮೆಗಳು ಓತ ।**
**ಪ್ರೋತನಾಗಿದ್ದೆಲ್ಲರೊಳು ವ್ಯಾಪಾರ ಮಾಡುತಿಹ ॥**
**ಹೋತ ಸರ್ವೇಂದ್ರಿಯಗಳೊಳು ಸಂ ।**
**ಪ್ರೀತಿಯಿಂದುಂಡುಣಿಸಿ ವಿಷಯ ವಿ ।**
**ಖ್ಯಾತ ದೇಶಗ ದೀಪದಂದದಲಿಪ್ಪ ನಿರ್ಭಯದಿ ॥ ೧೭ ॥**

**ಅವತರಣಿಕೆ :**

ಚಲಪ್ರತೀಕಗಳೆಂದೆನಿಪ ಸರ್ವಜೀವರುಗಳಲ್ಲಿ ಅಂತಸ್ಥಿತನಾಗಿಹ, ಆ ಅನಂತಮಹಿಮಾಸಂಪನ್ನನು ಮಾಡುವ ಕ್ರಿಯಾದಿಗಳನ್ನು ತಿಳಿಸುತ್ತಾರೆ. ॥ ೧೭ ॥

**ಪ್ರತಿಪದಾರ್ಥ :**

**ತರುಣಿ** = ನಿತ್ಯಯೌವ್ವನೆಯಾದ, **ಶ್ರೀವಲ್ಲಭಗೆ** = ಕಾಂತಿಸಂಪನ್ನಳಾದ ಶ್ರೀಲಕ್ಷ್ಮೀಪತಿಯಾದ ಶ್ರೀಪರಮಾತ್ಮನಿಗೆ, **ಜೀವರು** = ಸಕಲ ಪ್ರಾಣಿಗಳು, **ಚೇತನ ಪ್ರತಿಮೆಗಳು** = ಚಲಪ್ರತೀಕಗಳೆಂದು ಕರೆಯಿಸುವರು. **ಎಲ್ಲರೊಳು** = ಸಮಸ್ತ ತ್ರಿವಿಧ ಜೀವರುಗಳಲ್ಲಿ, **ಓತಪ್ರೋತನಾಗಿದ್ದು** = ಅಡ್ಡ ಉದ್ದವಾಗಿ ನೇಯ್ದಿರುವ ದಾರಗಳಿಂದ ನಿರ್ಮಾಣವಾದ ಬಟ್ಟೆಯಂತೆ, ಬಿಂಬನಾಗಿ ವ್ಯಾಪಿಸಿಕೊಂಡಿದ್ದು, **ಹೋತ** = ಹೋತನಾಮಕನಾಗಿದ್ದು, (ಯಜ್ಞಕ್ಕೆ ವಿಷಯನಾಗಿ) **ಸರ್ವೇಂದ್ರಿಯಗಳೊಳು** = ಸ್ಥೂಲದೇಹಗತ ಸಮಸ್ತ ಇಂದ್ರಿಯಗಳಲ್ಲಿ ವ್ಯಾಪ್ತನಾಗಿದ್ದು, **ಸಂಪ್ರೀತಿಯಿಂದ** = ಅತ್ಯಂತ ಪ್ರೀತಿಪೂರ್ವಕವಾಗಿ, **ವಿಷಯ** = ವಿಷಯಗಳನ್ನು ಆಯಾಯಾ ಇಂದ್ರಿಯಗಳಿಗೆ ಸನ್ನಿಕರ್ಷ ಮಾಡಿ, **ಉಂಡು ಉಣಿಸಿ** = ವಿಷಯಗತ

ಸ್ವಾಖ್ಯರಸವನ್ನು ತಾನು ಬಿಂಬಕ್ರಿಯಾದಿಂದ ಸ್ವೀಕರಿಸಿ, ತದನ್ಯಜೀವ **ಯೋಗ್ಯರಸಗಳನ್ನು** ಜೀವರಿಗೆ ಉಣಿಸಿದವನಾಗಿ, **ನಿರ್ಭಯದಿ** = ಭಯರಹಿತನಾಗಿ, **ನಿರ್ವಾತ ದೇಶಗ** = ಗಾಳಿಯಿಲ್ಲದ ಪ್ರದೇಶದಲ್ಲಿರುವ, **ದೀಪದಂದದಿ** = ದೀಪವು ಹೇಗೆ ನಿಶ್ಚಲವಾಗಿ ಉರಿಯುವುದೋ ಹಾಗೇ, **ಇಪ್ಪ** = ವಿದ್ಯಮಾನನಾಗಿ ಇರುತ್ತಾನೆ. ॥ ೧೭ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಮಾಹಾತ್ಮ್ಯವನ್ನ ಹೇಳತಾರೆ.

ನಿತ್ಯಯೌವನೆಯರಾದ ಶ್ರೀಲಕ್ಷ್ಮೀದೇವೇರ ಪತಿಯಾದ ಪರಮಾತ್ಮಗೆ ಸರ್ವಪ್ರಾಣಿಗಳು ಚಲಪ್ರತಿಮಾ–ಎಂತ ಕರಸೋವರಾಗತಾರೆ. ತದನ್ಯಗಳು ಜಡಪ್ರತಿಮ–ಎಂತ ತಾತ್ಪರ್ಯ. ಸಮಸ್ತರಾದ ತ್ರಿವಿಧಜೀವರೊಳು ಬಿಂಬನಾಗಿ, ತಂತುಗಳಿಂದ ಪಟದೋಪಾದಿಯಲ್ಲಿ ಎಂದರೆ, ವಸ್ತ್ರದೃಷ್ಟಾಂತ ದಾರಗಳೋಪಾದಿಯಲ್ಲಿ ಜೀವಾಂತರ್ಗತ, ಸ್ಥೂಲ ದೇಹಾಂತರ್ಗತದಲ್ಲಿ ಇದ್ದವನಾಗಿ, ಹೋತನಾಮಕ ಪರಮಾತ್ಮ ಸಮಸ್ತ ಇಂದ್ರಿಯಗಳಲ್ಲಿ ಕಾರ್ಯ ಮಾಡೋವನಾಗಿದ್ದಾನೆ. ಅತ್ಯಂತ ಪ್ರೀತಿಪೂರ್ವಕ, ಇಂದ್ರಿಯಜನ್ಯ ವಿಷಯಗಳ, ತನ್ನ ಸ್ವಾಖ್ಯಗಳ ತಾನು ಸ್ವೀಕರಿಸಿ, ತದನ್ಯ ಜೀವಯೋಗ್ಯಗಳ (ಜೀವಭುಕ್ತಗಳ) ಜೀವರಿಗೆ ಉಣಿದವನಾಗಿ, ತಾನು ಭಯರಹಿತನಾಗಿ, ಗಾಳಿ ಬಾರದೆ ಇದ್ದ ಪ್ರದೇಶದಲ್ಲಿ ಇರುವ ದೀಪ ಹ್ಯಾಂಗೆ ಚಲನರಹಿತವಾಗಿ ಇರೋದೋ, ತದ್ವತ್ ಸರ್ವಾಧಿಷ್ಠಾನಗಳಲ್ಲಿ ಇರತಾನೆ. ಅಂದರೆ, ಸರ್ವತ್ರ ವ್ಯಾಪ್ತನಾದ ಪರಮಾತ್ಮಗೆ ಅಧಿಷ್ಠಾನಗಳಿಗೆ ಛೇದ, ಭೇದ, ಭಯಾದಿಗಳು ಬಂದರೂ, ತದ್ಗತ ಶ್ರೀಪರಮಾತ್ಮ ನಿರ್ಭೀತನಾಗಿ, ನಿರ್ಲಿಪ್ತನಾಗಿ, ನಿಶ್ಚಂಚಲನಾಗಿ ಇರತಾನಂತ ತಾತ್ಪರ್ಯ. ॥ ೧೭ ॥

**೨. ಭಾವಪ್ರಕಾಶಿಕೆ**

ಪರಮಾತ್ಮನಿಗೆ ಜೀವರೆಲ್ಲರೂ ಚೇತನಪ್ರತಿಮೆಗಳೆನಿಸುವರು. ದಾರಗಳಿಂದ ನೇಯಿದ ವಸ್ತ್ರದಲ್ಲಿ ಹೇಗೆ ಧಾರವು ಅಡ್ಡ ಹಾಗೂ ಉದ್ದವಾಗಿಯೂ ವ್ಯಾಪಿಸಿಕೊಂಡು, ದಾರವಾಗಿ ಕಾಣದೆ ವಸ್ತ್ರವಾಗಿ ಕಾಣುವುದೋ ಹಾಗೆಯೇ ಪರಮಾತ್ಮನು ಎಲ್ಲಾ ಪ್ರಾಣಿಗಳಲ್ಲೂ ಅಡ್ಡವಾಗಿಯೂ, ಉದ್ದವಾಗಿಯೂ ಸೇರಿಕೊಂಡು, ಪ್ರಾಣಿಗಳಂತೆ ಕಾಣುತ್ತಾ ಕರ್ಮಗಳನ್ನು ಮಾಡುತ್ತಿರುವನು. ಸರ್ವೇಂದ್ರಿಯಗಳಲ್ಲೂ ಹೋತನಾಮಕ ನಾಗಿದ್ದು ವಿಷಯಸುಖವನ್ನು ತಾನುಂಡು, ಅವರಿಗೂ ಪ್ರೀತಿಯಿಂದುಣಿಸಿ, ಹೆಬ್ಬಾದ ಗಾಳಿ ಇಲ್ಲದ ಪ್ರದೇಶದಲ್ಲಿರುವ ದೀಪಕ್ಕೆ ಹೇಗೆ ಆರಿಹೋಗುವ ಭಯವಿಲ್ಲವೋ ಹಾಗೆ ಸರ್ವತ್ರದಲ್ಲೂ ನಿರ್ಭೀತನಾಗಿ ವಾಸಮಾಡುವನು ॥ ೧೭ ॥

**೩. ಭಾವದರ್ಪಣ**

ಸಮಸ್ತಚೇತನರು ಶ್ರೀಶಗೆ ಪ್ರತಿಮಾಸ್ಥಾನೀಯರೆಂದು ಹೇಳುತ್ತಾರೆ. ತುರುಣೇತಿ ॥ ಓತಪ್ರೋತ – ಅಡ್ಡವಾಗಿ – ಉದ್ದವಾಗಿ, ಹೋತ-ಸರ್ವೇಂದ್ರಿಯಸ್ಥ ಎಂಬರ್ಥ । ನಿರವಾತ–ಗಾಳಿ ಇಲ್ಲದೇ ಇದ್ದಂಥ-ದೇಶದಲ್ಲಿದ್ದಂಥ. ॥ ೧೭ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ಶ್ರೀತರುಣಿ" ಇತಿ ॥ "ಓತಪ್ರೋತ"-ಸಂಬದ್ಧ ॥ ನಿರ್ವಾತ-ನಿರ್ವಾಯು. ॥ ೧೭ ॥

## ಕನ್ನಡಾರ್ಥ

ಚೇತನಪ್ರತಿಮೆಗಳಲ್ಲಿ – ಜೀವರಲ್ಲಿ ಬಿಂಬರೂಪಿಯಾದ ಶ್ರೀಪರಮಾತ್ಮನ ವ್ಯಾಪಾರಗಳನ್ನು ತಿಳಿಸುತ್ತಾರೆ–ಹೇಳುತ್ತಾರೆ. "ಶ್ರೀತರುಣಿ"–ಎಂಬ ಪದ್ಯದಿಂದ. ಪದ್ಯಾರ್ಥವು ಸ್ಪಷ್ಟವಾಗಿದೆ.

## ೫. ಶ್ರೀಗುರುಹೃದಯಪ್ರಕಾಶಿಕೆ

ಶ್ರೀತರುಣಿ ಎಂಬ ಲಕ್ಷ್ಮಿಗೆ ಪ್ರಿಯನಾದ ದೇವರಿಗೆ ಜೀವರು ಜ್ಞಾನವುಳ್ಳ ಪ್ರತಿಮೆಗಳು. ಓತಪ್ರೋತನಾಗಿದ್ದು, ಎಂದರೆ, ಅಂತರ್ಬಹಿಶ್ಚ ಸರ್ವತ್ರವ್ಯಾಪ್ತನಾಗಿ, ಎಲ್ಲರಲ್ಲೂ ಕ್ರಿಯಾವ್ಯಕ್ತಿ ಮಾಡುವನು. ಆದ್ದರಿಂದ ಸರ್ವೇಂದ್ರಿಯಗಳಲ್ಲಿಯೂ ಹೋತೌ ಎಂದರೆ, ಕಣ್ಣು ಮೊದಲಾದ ಇಂದ್ರಿಯಗಳಿಗೆ ರೂಪ ಮೊದಲಾದ ವಿಷಯಸಂಪರ್ಕವೆಂಬ ಹೋಮ ಕರ್ತನು. ಆ ರೂಪಾದಿಗಳಲ್ಲಿರುವ ಸ್ವರಸಗಳನ್ನು ಸಂಪ್ರೀತಿಯಿಂದ ಅಂದರೆ, ಬಹು ಅಂತಃಕರಣದಿಂದ ತಾನು ಸ್ವೀಕರಿಸಿ, ಇತರ ಯೋಗ್ಯರಸಗಳನ್ನವರವರಿಗೆ ಉಣಿಸುವನು. ನಿವಾತವೆಂಬ ಗಾಳಿಯಿಲ್ಲದ ಸ್ಥಳದ ದೀಪದಂತೆ ನಿಶ್ಚಲನಾಗಿ ಸಾಕ್ಷಿಯಾಗಿರುವನು. ॥ ೧೭ ॥

### ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಲಕ್ಷ್ಮೀದೇವಿಯು ನಿತ್ಯಯೌವ್ವನವತಿಯರು. ಅತ್ಯಂತ ಕಾಂತಿ ಸಂಪನ್ನರು. ಇದರಿಂದ ಶ್ರೀ ರಮಾರಮಣನಾದ ಶ್ರೀಪರಮಾತ್ಮನು **ಶ್ರೀತರುಣಿ ವಲ್ಲಭನು.**

೨. ಶ್ರೀತರುಣಿವಲ್ಲಭಗೆ ಸರ್ವವಿಧವಾದ ತ್ರಿವಿಧ ಜೀವರೆಲ್ಲರೂ ಚಲಪ್ರತೀಕಗಳೆನಿಸುವರು. ಶ್ರೀಹರಿಯು ಜೀವರ ಬಿಂಬನು. ಜೀವರೆಲ್ಲರೂ ಅವನ ಪ್ರತಿಬಿಂಬಭೂತರು. ಇದರಿಂದ ಜೀವರು **ಚೇತನಪ್ರತಿಮೆಗಳೆನಿಸುವರು.**

೩. ಶ್ರೀತರುಣಿ ವಲ್ಲಭಗೆ ಚೇತನಪ್ರತಿಮೆಗಳಾದ ಸರ್ವಜೀವರಲ್ಲಿ ಬಿಂಬನಾದ ಶ್ರೀ ಪರಮಾತ್ಮನು ವಸ್ತ್ರದಲ್ಲಿ ನೇಯ್ದಿರುವ ದಾರದ ಎಳೆಗಳಂತೆ **ಓತಪ್ರೋತನಾಗಿ** ವ್ಯಾಪಿಸಿರುವರು. ಅಂದರೆ, ಅಡ್ಡವಾಗಿ, ಉದ್ದವಾಗಿ, ದಾರಗಳನ್ನು ಸೇರಿಸಿ, ನೇಯ್ದು ವಸ್ತ್ರಗಳನ್ನು ನಿರ್ಮಿಸುವರು. ಅಂತೆಯೇ, ಜೀವರ ಅಂತಶ್ಚಬಹಿಶ್ಚ ವ್ಯಾಪ್ತನಾಗಿದ್ದಾನೆ-ಆ ಅಪಾರ ಮಹಿಮಾ ಸಂಪನ್ನನು.

೪. ಜೀವರಲ್ಲಿ ಓತಪ್ರೋತವಾಗಿ ವ್ಯಾಪಿಸಿಕೊಂಡಿದ್ದು, ಸರ್ವಕರ್ತನಾದ ಶ್ರೀಪರಮಾತ್ಮನೇ ಬಿಂಬಕ್ರಿಯಾರೂಪದಿಂದ ಸ್ಥೂಲದೇಹಗತ ಸಕಲೇಂದ್ರಿಯ ಗಳ ದ್ವಾರಾ, ಸಕಲ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು.

೫. ವಿಷಯಗಳನ್ನು ಆಯಾಯಾ ಇಂದ್ರಿಯಗಳಿಗೆ ಸನ್ನಿಕರ್ಷ ಮಾಡಿ, ಇಂದ್ರಿಯಗಳ ದ್ವಾರಾ ಜೀವನ ಅನುಭವಕ್ಕೆ ತರುವುದರಿಂದ ಅವನಿಗೆ **ಹೋತೃ**–ಎಂತ ಹೆಸರು. ಇದೊಂದು ಯಜ್ಞರೂಪವಾದ ಕ್ರಿಯಾ. ವಿಷಯಗಳೇ ಇಂದ್ರಿಯಗಳಿಗೆ ಹವಿಸ್ಸು ವಿಷಯಂತರ್ಗತನಾಗಿದ್ದುಕೊಂಡು, ಜೀವರಿಗೆ ವಿಷಯಗಳ ಅನುಭವವನ್ನು ತಂದೀಯುವನು. ಯಜ್ಞಕ್ರಿಯೆಗಳಲ್ಲಿ ಹವಿಸ್ಸನ್ನು ಸ್ವೀಕರಿಸುವವನಿಗೆ "**ಹೋತೃ**"–ಎಂದು ಹೆಸರು.

೬. ಸ್ಥೂಲದೇಹಗತ ಪಂಚಜ್ಞಾನೇಂದ್ರಿಯಗಳು – ಪಂಚ ಕರ್ಮೇಂದ್ರಿಯಗಳು – ಮನಸ್ಸು – ಮನೋಪ್ರವೃತ್ತಿಗಳು ಇತ್ಯಾದಿಗಳಲ್ಲಿ ಅಂತರ್ಯಾಮಿಯಾಗಿದ್ದು, ವಿಷಯಗಳನ್ನು ಆಯಾಯಾ ಇಂದ್ರಿಯಗಳಿಗೆ ಸನ್ನಿಕರ್ಷ ಮಾಡುವನು. ವಿಷಯಾಂತರ್ಗತನಾಗಿದ್ದು, ತನ್ನ ಭಗವದ್ರೂಪಗಳನ್ನು ಇಂದ್ರಿಯಾಂತರ್ಗತ ಭಗವದ್ರೂಪಗಳಲ್ಲಿ ಐಕ್ಯ ಮಾಡುವನು. ಇದರಿಂದ, ಬಿಂಬಕ್ರಿಯಾದ್ವಾರಾ ವಿಷಯಗಳನ್ನು ಇಂದ್ರಿಯಗಳ ಮೂಲಕ ಜೀವರಿಗೆ ಉಂಡು ಉಣಿಸುವನು. ಆದರೆ ತಾನು ಮಾತ್ರ ಆ ವಿಷಯಗಳಿಂದ ನಿರ್ಲಿಪ್ತನಾಗಿರುವನು. ಕರ್ಮಜನ್ಯ ಫಲವನ್ನು ಮಾತ್ರ ಜೀವರಿಗೆ ಉಣಿಸುವನು. ಸಕಲಕರ್ಮಕರ್ತನಾದ ಸರ್ವೇಶನ ಈ ವ್ಯಾಪಾರವಿಶೇಷವನ್ನು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ–ದಾಸರಾಯರು.

೭. **ನಿರ್ವಾತದೇಶ**–ಎಂದರೆ ಗಾಳಿಯೇ ಇಲ್ಲದ ಪ್ರದೇಶವೆಂದರ್ಥವಲ್ಲ. ಗಾಳಿಯಿಲ್ಲದೇ ದೀಪವು ಉರಿಯುವುದಿಲ್ಲ. ಜೋರಾಗಿ ಗಾಳಿ ಬೀಸದ ಎಂದರ್ಥ. ಅಂತಹ ಮಂದಗಾಳಿಯಲ್ಲಿ ದೀಪವು

ಏಕರೀತಿಯಾಗಿ ಉರಿಯುವುದು. ಕಾಂತಿಯನ್ನು ಪಸರಿಸುವುದು. ಅಂತೆಯೇ, ಶ್ರೀಶನು ತಾನು ನಿಶ್ಚಲನಾಗಿದ್ದು, ನಿರ್ಲಿಪ್ತನಾಗಿ ದೀಪದಂತೆ ಬಂಬನಾಗಿದ್ದು, ಜೀವರ ದ್ವಾರಾ ಸಕಲ ಇಂದ್ರಿಯಕ್ರಿಯಾದಿಗಳನ್ನು ನಡೆಯಿಸುವವನು–ಎಂದು ತಾತ್ಪರ್ಯ. ॥ ೧೭ ॥

## ಪದ್ಯ-೧೮

**ಮೂಲ :**

**ಭೂತ ಸೋಕಿದ ಮಾನವನು ಬಹು ।**
**ಮಾತನಾಡುವ ತೆರದಿ ಮಹದ ।**
**ದ್ಭೂತ ವಿಷ್ಣ್ವಾವೇಶದಿಂದಲಿ ವರ್ತಿಪುದು ಜಗವು ॥**
**ಕೈತವೋಕ್ತಿಗಳಲ್ಲ ಶೇಷ ಫ ।**
**ಣಾತಪತ್ರಗೆ ಜೀವಪಂಚಕ ।**
**ವ್ರಾತವೆಂದಿಗು ಭಿನ್ನಹಾದಾಕ್ಷಯದಿ ಕರೆಸುವುದು ॥ ೧೮ ॥**

**ಅವತರಣಿಕೆ :**

ಶ್ರೀವಿಷ್ಣುವಿನ ಆವೇಶಬಲದಿಂದ ವರ್ತಿಸುವ ಚರಾಚರಾತ್ಮಕವಾದ ಈ ಜಗತ್ತಿನ ವಿಚಾರವನ್ನು ಸುಂದರವಾದ ದೃಷ್ಟಾಂತಪೂರ್ವಕವಾಗಿ ಹೇಳುತ್ತಾರೆ. ॥ ೧೮ ॥

**ಪ್ರತಿಪದಾರ್ಥ :**

**ಭೂತ ಸೋಕಿದ ಮಾನವನು** = ಪಿಶಾಚಾವೇಶದಿಂದ ಯುಕ್ತನಾದ ಮನುಷ್ಯನು, **ಬಹು ಮಾತನಾಡುವ ತೆರದಿ** = ತನ್ನ ಯೋಗ್ಯತೆಗೆ ಮೀರಿದ ಅನೇಕ ವಿಧವಾದ ಮಾತುಗಳನ್ನು ಆಡುವಂತೆ, **ಮಹದ್ಭೂತ** = ಅತ್ಯಂತ ಅದ್ಭುತನಾದ, **ವಿಷ್ಣ್ವಾವೇಶದಿಂದಲಿ** = ವಿಷ್ಣುನಾಮಕ ಶ್ರೀಪರಮಾತ್ಮನ ವಿಭೂತಿರೂಪವಾದ ಆವೇಶಬಲದಿಂದ, **ಜಗವು** = ಚರಾಚರಾತ್ಮಕವಾದ ಈ ಸಮಸ್ತಜಗತ್ತು, **ವರ್ತಿಪುದು** = ವರ್ತಿಸುತ್ತದೆ.

**ಕೈತವೋಕ್ತಿಗಳಲ್ಲ** = ಇದು ವಂಚನೆಯ ಮಾತುಗಳಲ್ಲ (ನಿಶ್ಚಯವಾಕ್ಯವು), **ಶೇಷ** = ಶೇಷದೇವರ, **ಫಣಾತಪತ್ರಗೆ** = ಹೆಡೆಗಳೇ ಶ್ವೇತಛತ್ರಿಯಾಗಿ ಉಳ್ಳ ಶ್ರೀ ಪರಮಾತ್ಮನಿಗೆ, **ಜೀವಪಂಚಕವ್ರಾತವು** = ಪಂಚಜೀವರ ಸಮೂಹವು-ದೇವ, ಋಷಿ, ಗಂಧರ್ವ, ನೃಪ,

ಮಾನುಷೋತ್ತಮರು, (ಅಂತೆಯೇ ಋಜಗಣಸ್ಥರು, ರುದ್ರಾದಿ ಶಾಷಶವಸ್ಥಾಂತ-ಕರ್ಮಜರು ಪುಷ್ಕರಾಂತ-ಆಜಾನಜರು ದೇವಗಂಧ ರ್ವಾಂತ-ನಿರಂಶರುತೃಣಾಂತ, ನಿತ್ಯಸಂಸಾರಿಗಳೂ ಮತ್ತು ತಮೋ ಯೋಗ್ಯರೂ ಸಹ ಗ್ರಾಹ್ಯ) **ಎಂದೆಂದಿಗೂ** = ಅನಾದ್ಯನಂತಕಾಲದಿಂದಲೂ, **ಭಿನ್ನ ಪಾದಾಹ್ವಯದಿ** = ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ-ಎಂಬ ಚಾತುರ್ವರ್ಣ ರೂಪವಾದ ನಾಲ್ಕು ಪಾದ ಸಾಂಕೇತನಾಮದಿಂದ, **ಕರೆಸುವುದು** = ಕರೆಯುವುದು. ॥ ೧೮ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಮಾಹಾತ್ಮ್ಯ ಹೇಳತಾರೆ.

ಪಿಶಾಚಾವೇಶದಿಂದ ಯುಕ್ತನಾದ ಮನುಷ್ಯನು ತನ್ನ ನಿಜಯೋಗ್ಯತಾಕ್ಕೆ ಮೀರಿದ ಅನೇಕ ಮಾತುಗಳ ಆಡೋವನಾಗತಾನೆ. ಇದರೋಪಾದಿಯಲ್ಲಿ, ಈ ಬ್ರಹ್ಮಾಂಡದಲ್ಲಿ ವಿದ್ಯಮಾನರಾದ ತ್ರಿವಿಧ ಜೀವರು, ಅತ್ಯಂತ ಅದ್ಭುತವಾದ ಭೂತಸಾಂಕೇತನಾದ ಶ್ರೀಪರಮಾತ್ಮನ ವಿಭೂತಿರೂಪ ಆವೇಶಧಿಂದ ಪ್ರವರ್ತಿಸತಾ ಇರೋದಾಗಿ ಅದೆ. ಈ ಮಾತುಗಳು ಅಪದ್ಧವಲ್ಲ. ನಿಶ್ಚಯವು. ಶೇಷದೇವರ ಫಣವೇ ಶ್ವೇಚ್ಛತ್ರವಾಗಿವುಳ್ಳ ಶ್ರೀ ಪರಮಾತ್ಮಗೆ, ಐದು ಜೀವರ ಸಮೂಹ-ಎಂದರೆ, ಋಜುಗಣರು, ರುದ್ರಾದಿ ಶೇಷಶತಸ್ಥಾಂತ, ಕರ್ಮಜರು ಪುಷ್ಕರಾಂತ, ಆಜಾನಜರು ದೇವಗಂಧರ್ವಾಂತ ನಿರಂಶರು ತೃಣಾಂತ-ಎತಾದೃಶ ಐದು ವಿಧ ಜೀವರಸಮೂಹವ್ವಾನೂ, ತಮೋಯೋಗ್ಯರು ನಿತ್ಯಸಂಸಾರಿಗಳೂನೂ, ಅನಾದ್ಯನಂತ ಕಾಲಕ್ಕೂ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ-ಎಂತ ನಾಲ್ಕು ಪಾದಸಾಂಕೇತನಾಮದಿಂದ ಕರಸೋವಾಗತದೆ-ಎಂತ ತಾತ್ಪರ್ಯ. ॥ ೧೮ ॥

**೨. ಭಾವಪ್ರಕಾಶಿಕೆ**

ಪಿಶಾಚಗ್ರಸ್ತನಾದ ಮನುಷ್ಯನು ಅತಿಮಾತುಗಳನ್ನಾಡುವಂತೆ, ಪರಮಾತ್ಮನೆಂಬ ಮಹಾಭೂತಗ್ರಸ್ತವಾದ ಈ ಜಗತ್ತು–ಅಂದರೆ, ಜಗತ್ತಿನಲ್ಲಿರುವ ಪ್ರಾಣಿಗಳು, ಅನೇಕ ಪ್ರಕಾರ ಅದ್ಭುತವಾದ ಕಾರ್ಯಗಳನ್ನು ಮಾಡುತ್ತಿರುವರು. ಈ ಮಾತು ಸುಳ್ಳಲ್ಲ. ಶೇಷದೇವರ ಹೆಡೆಯನ್ನು ಕೊಡೆಯನ್ನಾಗಿ ಮಾಡಿಕೊಂಡಿರುವ ಪರಮಾತ್ಮನಿಗೆ ಜೀವರ ಪಂಚಕವ್ರಾತವು ಯಾವಾಗಲೂ ಭಿನ್ನಪಾದವೆಂದು ಕರೆಸುವುದು. ಜೀವಪಂಚಕವು ಯಾವುವೆಂದರೆ : ಭಾಗವತ ದಶಮಸ್ಕಂಧದ ಮೊದಲನೆಯ ಅಧ್ಯಾಯದ ೪೨ನೆಯ ಶ್ಲೋಕದಲ್ಲಿ–"ಆತ್ಮಪಂಚಸು"–ಎಂಬ ಪದಕ್ಕೆ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಆತ್ಮವಂಚಸು:– ದೇವ, ಗಂಧರ್ವ, ಪಿತೃ, ಮನುಷ್ಯ, ಅಸುರ, ಭೇಧೇನ ಪಂಚಾನಾಂ ಆತ್ಮಗಾಂ ಮಧ್ಯೇ ಎಂದು ಅರ್ಥಮಾಡಿರುವರು. ಆ ಅಭಿಪ್ರಾಯವನ್ನೇ ಇಲ್ಲ ತೆಗೆದುಕೊಳ್ಳಬೇಕು. ಭಿನ್ನಪಾದವೆಂದರೆ : ಪಾದೋಸ್ಯ ವಿಶ್ವಭೂತಾನಿ"–ಎಂದು ಶ್ರುತಿಯೂ, ಭಾಗವತ ದ್ವಿತೀಯಸ್ಕಂಧ–೬ನೇ ಅಧ್ಯಾಯದಲ್ಲಿ ಪಾದೋಸ್ಯ ಸರ್ವಭೂತಾನಿಪುಂಸಃ ಸ್ಥಿತಿವಿದೋವಿದುಃ ॥– ಎಂಬ ಶ್ಲೋಕದ ವ್ಯಾಖ್ಯಾನದಲ್ಲಿ, ಸರ್ವಭೂತಾನಿ ಸರ್ವ ಜೀವಾಃ ಅಸ್ಯಪುರುಷಸ್ಯ ಪಾದಃ ಭಿನ್ನಾಂಶಃ ಇತಿಸ್ಥಿತಿವಿದಃ ವಿದುಃ–ಎಂದು ಮಾಡಿರುವರು. ಇದರಿಂದ ಸರ್ವಜೀವರೂ ಪರಮಾತ್ಮನ ಭಿನ್ನಾಂಶರೆಂದರ್ಥವಾಯಿತು. ಅದೇ ಅರ್ಥವನ್ನೇ ಇಲ್ಲೂ ತಿಳಿಯಬೇಕು. ॥ ೧೮ ॥

**೩. ಭಾವದರ್ಪಣ**

ಶ್ರೀಪರಮಾತ್ಮನಿಂದಲೇ ಸಮಸ್ತಜಗದ್ವ್ಯಾಪಾರ ನಡೆಯುತ್ತದೆಂದು ಹೇಳುತ್ತಾರೆ–"ಭೂತಸೋಕಿದ"–ಎಂಬ ಪದ್ಯದಿಂದ. ॥

ಕೈತವಪಂಚನ ಬ್ರಹ್ಮಾದಿ ಜೀವಪಂಚಕರು ಶ್ರೀಶಗೆ ಭಿನ್ನಾಂಶರೆಂದು ತಿಳಿಯಬೇಕು. ॥ ಜೀವಪಂಚಕೇತಿ ॥ ವ್ರಾತ–ಸಮೂಹ. ॥

"ಭಿನ್ನಾಪಾದಾಸ್ಸರ್ವಜೀವಾಸ್ತಸ್ಯ ಸಾ ದೃಶ್ಯ ಮಾತ್ರತ್"—ಇತಿ ಛಾಂದೋಗ್ಯಭಾಷ್ಯಮಾನಾತ್. ॥ ೧೮ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

"ಭೂತ"—ಇತಿ ॥ ಕೈತವ—ವಂಚನೆ ॥ ಪಂಚಕಂ ಉಕ್ತಂ ಪೂರ್ವಂ ॥ ೧೮ ॥

## ಕನ್ನಡಾರ್ಥ

"ವಿಷ್ಣುವಿನ ವ್ಯಾಪಾರವಿಲ್ಲದೆ ಯಾವ ಕ್ರಿಯೆಯೂ ನಡೆಯಲಾರದು" —ಎಂಬ ತತ್ತ್ವವನ್ನು ಸದೃಷ್ಟಾಂತಪೂರ್ವಕ ತಿಳಿಸುತ್ತಾರೆ. ಜೀವರು ಪರಮಾತ್ಮನ ಭಿನ್ನಾಂಶರು—ಎಂದು ಹೇಳುತ್ತಾರೆ—"ಭೂತ"—ಎಂಬ ಪದ್ಯದಿಂದ. ದೇವ—ಗಂಧರ್ವ – ಪಿತೃ – ಮನುಷ್ಯ – ಅಸುರರು ಜೀವಪಂಚಕರೆನಿಸಿಕೊಳ್ಳುವರು. ॥ ೧೮ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಕರ್ತೃತ್ವ ಭೋಕ್ತೃತ್ವಶಕ್ತಿ ವ್ಯಕ್ತಿಯನ್ನು ಜೀವರಲ್ಲಿ ಮಾಡುತ್ತಾ, ಕ್ಷಣ ಬಿಡದೆ, ದೇವರು ಇರುವುದರಿಂದಲೇ, ಜೀವರೆಲ್ಲರೂ ಭಿನ್ನಾಂಶರೆಂತಲೂ, ಪಾದವೆಂತಲೂ ಕರೆಸುವರೆಂದು ತಿಳಿಸುತ್ತಾರೆ—ಭೂತ ಎಂದು.

ಭೂತ—ಎಂಬ ಪಿಶಾಚಾದ್ಯಾವಿಷ್ಟ ಮನುಷ್ಯರು ಪರಾಧೀನರಾಗಿ ಮಾತಾಡುವುದು, ಭೋಜನಾದಿಗಳು ಮಾಡುವುದು—ಹೇಗೋ ಹಾಗೆ, ಅಚಿಂತ್ಯಾದ್ಭುತಶಕ್ತಿಯುಳ್ಳ ಮಹದ್ಭೂತನೆಂಬ ಶ್ರೀವಿಷ್ಣುವಿನ ಅಂತರ್ಬಹಿ ವ್ಯಾಪ್ತಿಶಕ್ತಿ . ಅಧೀನರಾಗಿ ಸರ್ವಜಗತ್ತಿನ ಜೀವರು ವ್ಯಾಪಾರವನ್ನು ಮಾಡುವರು. ಇದು ಕಪಟ ಮಾತುಗಳಲ್ಲ, ನಿಜವಾದ ಮಾತುಗಳೇ. ಶೇಷಫಣವೆಂಬ ಹೆಡೆಗಳೇ ಆತಪತ್ರವೆಂಬ ಛತ್ರಿಯಾಗಿರುವ ದೇವರಿಗೆ ಜೀವಪಂಚವ್ರಾತ—ಎಂದರೆ, ದೇವ, ಋಷಿ, ಪಿತೃ, ನರಪತಿ, ನರರೆಂಬ ಐದುವಿಧ ಮುಕ್ತಿಯೋಗ್ಯ ಗುಂಪು, ರಾಕ್ಷಸ, ಅಸುರ, ಪಿಶಾಚ, ಭೂತ, ನರಾಧಮರೆಂದು ಐದು ವಿಧ. ಅಯೋಗ್ಯ ರಾಜಸರೂ ಸಹ ಭಿನ್ನಪಾದವೆಂಬ

ಹೆಸರುಳ್ಳವರು – ಎಂಬುದು ಶ್ರುತಿ – ಪ್ರಸಿದ್ಧವೆಂದು ಅಭಿಪ್ರಾಯ. ॥ ೧೮ ॥

### ಸರ್ವವ್ಯಾಖ್ಯಾನಸಾರಸಂಗ್ರಹ

೧. ಒಬ್ಬ ಮನುಷ್ಯನ ಮೇಲೆ ಭೂತ ಅಥವಾ ಪಿಶಾಚ ಹೊಕ್ಕರೆ, ಅವನ ಸ್ವಾಭಾವಿಕ ವರ್ತನೆಯೇ ಬದಲಾವಣೆಯಾಗುವುದು. ಭೂತಾವೇಶದ ಪರಿಣಾಮದಿಂದ ತನ್ನ ಯೋಗ್ಯತೆಗೆ ಮೀರಿದ ಮಾತುಗಳನ್ನಾಡುವನು.

೨. ಸರ್ವತ್ರವ್ಯಾಪ್ತನೂ, ಗುಣಪರಿಪೂರ್ಣನೂ ಆದ ಶ್ರೀವಿಷ್ಣುವಿಗೆ **ಮಹದ್ಭೂತ**ವೆಂದು ಹೆಸರು. ಅಂದರೆ ಅದ್ಭುತವಾದ ಶಕ್ತಿಸಾಮರ್ಥ್ಯವುಳ್ಳವನು ಎಂದರ್ಥ. ಮಹದ್ಭೂತನಾಮಕನಾದ ವಿಷ್ಣುವಿನ ಆವೇಶಬಲದಿಂದ ಚರಾಚರಾತ್ಮಕವಾದ ಈ ಜಗತ್ತು ವರ್ತಿಸುವುದು. ಬ್ರಹ್ಮಾಂಡದಲ್ಲಿ ವಿದ್ಯಮಾನರಾದ ತ್ರಿವಿಧ ಜೀವರು ಶ್ರೀ ವಿಷ್ಣುವಿನ ವಿಭೂತಿರೂಪವಾದ ಅವೇಶದಿಂದ ಪ್ರವರ್ತಿಸುವರು.

೩. ಭೂತಾವೇಶ ವಿಶಿಷ್ಟವಾದ ಮಾನವನು ಪರಾಧೀನನಾಗಿರುವನು. ಅವನ ಕ್ರಿಯಾದಿಗಳೆಲ್ಲವೂ ಭೂತದ ಅಧೀನವಾಗಿರುವುವು. ಅಂತೆಯೇ, ಶ್ರೀಪರಮಾತ್ಮನ ಪ್ರತಿಬಿಂಬರೂಪಭೂತರಾದ ತ್ರಿವಿಧಜೀವರು ಭಗವದಧೀನರು. ಅವನ ಇಚ್ಛೆಯಂತೆ ಜೀವರ ಕ್ರಿಯಾದಿಗಳ ವರ್ತನೆ.

೪. ಇದು ಕೇವಲ ವಂಚನೆಯ ಮಾತುಗಳಲ್ಲ. (ಕೈತವೋಕ್ತಿಗಳಲ್ಲ) ಶಾಸ್ತ್ರಸಮ್ಮತವಾದ ವಾಕ್ಯಗಳಿವು.

೫. ಶ್ರೀಹರಿಯು ಶೇಷಶಯನನು. ಶೇಷದೇವರ ಹೆಡೆಗಳೇ ಅವನಿಗೆ ಶ್ವೇತಛತ್ರಿಯಂತಿರುವುದು. ಇದರಿಂದ, **ಶೇಷಫಣಾತಪತ್ರ**–ಎಂದಿದ್ದಾರೆ. ಅಂದರೆ, ಶೇಷದೇವರ ಹೆಡೆ (ಫಣ)ಯೇ ಆತಪತ್ರ–ಎಂದರೆ ತಲೆಯ ಮೇಲೆ ಹಿಡಿಯುವ ಛತ್ರವು.

೬. ಜೀವವರ್ಗದಲ್ಲಿ ಐದು ವಿಧ. ಇದನ್ನೇ **ಜೀವಪಂಚಕ**–ವೆಂದಿದ್ದಾರೆ. ಜೀವಪಂಚಕ–ಅವು ಯಾವುವೆಂದರೆ :– (೧) ದೇವ (೨) ಋಷಿ (೩) ಪಿತೃ (೪) ನೃಪ (೫) ಮಾನುಷೋತ್ತಮರೆಂದು ಐದು ಪ್ರಕಾರ. ಇದು ಸಾತ್ವಿಕವರ್ಗದರ ಪ್ರಭೇದಗಳು. ತ್ರಿವಿಧದಲ್ಲಿ ನಿತ್ಯಸಂಸಾರಿಗಳು ಮತ್ತ ತಮೋಯೋಗ್ಯರೂ ಗ್ರಾಹ್ಯ.

**ಪ್ರಮಾಣ :**

"ದೇವ, ಗಂಧರ್ವ, ಪಿತೃ, ಮನುಷ್ಯ, ಅಸುರಭೇಧೇನ ಪಂಚಾನಾಂ ಆತ್ಮಾನಾಂ ಮಧ್ಯೇ"–**ಭಾಗವತ ವಚನ.**

೭. ಈ ಸಮೂಹವು (ವ್ರಾತ) ಶ್ರೀಪರಮಾತ್ಮನಿಗೆ ಭಿನ್ನಾಂಶವೆಂದೆನಿಸುವುದು. ಸರ್ವಜೀವರೂ ಶ್ರೀಶನ ಪ್ರತಿಬಿಂಬಭೂತರು ಮತ್ತು ಸದೃಶರು. ಇದನ್ನು ಭಿನ್ನಪಾದರೆಂದು ಹೇಳಿದ್ದಾರೆ. ಆದರೆ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ ಎಂಬ ನಾಲ್ಕು ಪಾದ ಸಾಂಕೇತರೂಪವಾದ ಚತುರ್ವರ್ಮಗಳೆಂದಿದ್ದಾರೆ. ಜೀವರಿಂದ ಈಶನು ಅತ್ಯಂತ ವಿಲಕ್ಷಣನು. ಶ್ರೀ ಪರಮಾತ್ಮನು ಜೀವಾಂತರ್ಯಾಮಿಯಾಗಿದ್ದು ತದಾಕಾರ, ತನ್ನಮಕ, ತತ್ ಶಬ್ದವಾಚ್ಯನು, ತದ್ರೂಪನೂ ಆಗಿದ್ದರೂ ತದ್ಭಿನ್ನನಾಗಿದ್ದಾನೆ. ಇದರಿಂದ ಜೀವರು ಈಶನ ಭಿನ್ನಾಂಶಸ್ವರೂಪರು. ॥ ೧೮ ॥

## ಪದ್ಯ ೧೯

**ಮೂಲ :**

**ದಿವಿಯೊಳಿಪ್ಪುವು ಮೂರು ಪಾದಗ ।**
**ಳವನಿಯೊಳಗಿಹುದೊಂದು ಈ ವಿಧ ।**
**ಕವಿಭಿರೀಡಿತ ಕರೆಸುವ ಚತುಷ್ಪಾತು ತಾನೆಂದು ॥**
**ಇವನ ಪಾದಚತುಷ್ಟಯಗಳನು ।**
**ಭವಕೆ ತಂದು ನಿಂರತರದಿ ಉ ।**
**ದ್ಧವನ ಸಖ ಸರ್ವಾಂತರಾತ್ಮಕನೆಂದು ಸ್ಮರಿಸುತಿರು ॥ ೧೯ ॥**

**ಅವತರಣಿಕೆ :**

"ಚತುಷ್ಪಾತ್"-ಎಂದೆನಿಸುವ ಶ್ರೀಹರಿಯ ಮಹಾತ್ಮ್ಯೆಯನ್ನು ಹೇಳುತ್ತಾರೆ. ॥ ೧೯ ॥

**ಪ್ರತಿಪದಾರ್ಥ :**

**ದಿವಿಯೊಳಗೆ** = ಸ್ವರ್ಗಸಮಾನವಾದ ದೇಶದಲ್ಲಿ, **ಇಪ್ಪುವು** = ಇರೋದಾಗಿವೆ. **ಮೂರು ಪಾದಗಳು** = ದಿವಿಸಾಂಕೇತದಿಂದ, ವೈಕುಂಠ-ಅನಂತಾಸನ-ಶ್ವೇತದ್ವೀಪಗಳೆಂಬ ಮುಕ್ತಿಧಾಮತ್ರಯಗಳು. **ಅವನಿಯೊಳಗೆ** = ಬ್ರಹ್ಮಾಂಡದ ಒಳಗೆ ಭಿನ್ನಾಂಶದಿಂದ ಇವೆ. **ಈ ವಿಧ** = ಈ ಪ್ರಕಾರವಾಗಿ, **ಕವಿಭಿರೀಡಿತ** = ಜ್ಞಾನಿಗಳಿಂದ ಸಂಸ್ತುತ್ಯಮಾನನಾದ ಶ್ರೀಪರಮಾತ್ಮನು, **ಚತುಷ್ಪಾತು ಎಂದೆನಿಸಿ** = ಅನಿರುದ್ಧ-ಪ್ರದ್ಯುಮ್ನ-ಸಂಕರ್ಷಣ-ವಾಸುದೇವ -ಎಂಬ ರೂಪಚತುಷ್ಟಯಗಳಿಂದ ನಾಲ್ಕು ಸ್ಥಾನಗಳ ಜೀವರುಗಳನ್ನು ರಕ್ಷಿಸತಕ್ಕವನೆಂದು, **ಕರೆಸುವ** = ಕರೆಯಿಸುವವನಾಗಿದಾನೆ. **ಇವನ** = ಇಂತಹ ಗುಣಪರಿಪೂರ್ಣನಾದ ಮೂಲರೂಪೀ ಶ್ರೀಮನ್ನಾರಾಯಣನ ಅಂಶಗಳಾದ, **ಪಾದಚತುಷ್ಟಯಗಳನು** = ಅನಿರುದ್ಧಾದಿ ವಾಸುದೇವ ಪರ್ಯಂತ ಭಗವದ್ರೂಪ ಚತುಷ್ಟಯಗಳನ್ನು, **ಅನುಭವಕೆ ತಂದು** =

ಧ್ಯಾನೋಪಾಸನಾದಿಗಳ ದ್ವಾರಾ ಮನಸ್ಸಿಗೆ ತಂದುಕೊಂಡು, **ನಿರಂತರದಿ =** ಪ್ರತಿದಿನದಲ್ಲೂ, **ಉದ್ಧವನ ಸಖ =** ಪರಮಭಕ್ತನಾದ ಉದ್ಧವನಿಗೆ ಮಿತ್ರನಾದ ಶ್ರೀಕೃಷ್ಣನನ್ನು, **ಸರ್ವಾಂತರಾತ್ಮಕನೆಂದು =** ಸರ್ವಜೀವರ ಸ್ವರೂಪದಲ್ಲಿ ಅಂತರ್ಯಾಮಿಯಾಗಿದ್ದಾನೆಂದು, **ಸ್ಮರಿಸುತಿರು =** ಭಕ್ತಿಭಾವದಿಂದ ಸ್ಮರಣೆ ಮಾಡುವವನಾಗು. ॥ ೧೬ ॥

## ವ್ಯಾಖ್ಯಾನಗಳು

**೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ**

ಶ್ರೀಪರಮಾತ್ಮನ ಮಾಹಾತ್ಮ್ಯ ಹೇಳತಾರೆ,

ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ-ಅಂತ ನಾಲ್ಕು ರೂಪಗಳು. ನಾಲ್ಕು ಪಾದಸಾಂಕೇತಗಳು. ಈ ನಾಲ್ಕು ರೂಪಗಳು ದಿವಿ ಸಾಂಕೇತದಿಂದ ಶ್ವೇತದ್ವೀಪ, ಅನಂತಾಸನ, ವೈಕುಂಠ-ಏತಾದೃಶಸ್ಥಾನ ತ್ರಯದೊಳು, ಮೂರು ಪಾದವಾದ ವಾಸುದೇವಾದಿ ಪ್ರದ್ಯುಮ್ನಾಂತ ಮೂರು ಭಗವದ್ರೂಪಗಳು ಇರೋವಾಗಿ ಅವೆ. ಬ್ರಹ್ಮಾಂಡದ ಒಳಗೆ ಭೂಲೋಕಾದಿಗಳಲ್ಲಿ ಇರತಕ್ಕದ್ದು-ಅನಿರುದ್ಧರೂಪ ಒಂದು, ಇದು ಒಂದು ಪಾದ-ಅಂತು, ನಾಲ್ಕು ಪಾದ ಸರಿ ಆಯಿತು.

**ಪ್ರಮಾಣ-ತ್ರಿಪಾದಸ್ಯಾಮೃತಂ ದಿವಿ ತ್ರಿಪಾದೂರ್ಧ್ವಮುದೈತ್ಪುರುಷಃ ॥**

ಎಂಬ ಶ್ರುತ್ಯರ್ಥ, ಮೃತ್ಯುವಿನಿಂದ ರಹಿತರಾದ ಜೀವರು ಇರತಕ್ಕ ದಿವಿಸಾಂಕೇತವಾದ ಶ್ವೇತದ್ವೀಪಾದಿಗಳು, ಪಾದೋಸ್ಯ ಇಹಭವೇತ್, ಒಂದು ಪಾದ ಇಹಲೋಕದಲ್ಲಿ ಇರದಾಗಿ ಅದೆ. ಸಾಧನಸ್ಥಾನ ಒಂದು, ಮುಕ್ತಸ್ಥಾನಗಳು ಮೂರು-ಅಂತು ನಾಲ್ಕು ಸ್ಥಾನಗಳು. ಈ ಪ್ರಕಾರ ಸ್ಥಾನಗಳಿಂದ ಸ್ತುತ್ಯನಾದ ಪರಮಾತ್ಮ ನಾಲ್ಕು ಸ್ಥಾನಗತ ಜೀವರುಗಳ ರಕ್ಷಿಸತಕ್ಕವನೆಂದು ಕರಸೋವನಾಗತಾನೆ. ಗುಣಪೂರ್ಣನಾದ ಶ್ರೀನಾರಾಯಣನ ಅಂಶಗಳಾದ ಪಾದಸಾಂಕೇತ ನಾಲ್ಕು ಭಗವದ್ರೂಪ

ಗಳ ವ್ಯಾಪಾರಾದಿಗಳ ಪ್ರತಿದಿನದಲ್ಲೂ ಧ್ಯಾನೋಪಾಸನಾದಿಗಳಿಗೆ ತಂದುಕೊಂಡು, ಪರಮಭಕ್ತನಾದ ಉದ್ಧವಗೆ ಸ್ನೇಹಿತನಾದ ಶ್ರೀಕೃಷ್ಣನು ಸರ್ವಜೀವರ ಸ್ವರೂಪದಲ್ಲಿ ಅಂತರ್ಯಾಮಿಯಾಗಿದ್ದಾನೆಂತ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹದಿಂದ ಸ್ಮರಣೆ ಮಾಡೋವ ನಾಗಬೇಕು–ಎಂತ ತಾತ್ಪರ್ಯ ॥ ೧೯ ॥

**೨. ಭಾವಪ್ರಕಾಶಿಕೆ**

ಹಿಂದಿನ ಪದ್ಯದಲ್ಲೂ ಈ ಪದ್ಯದಲ್ಲೂ ಹೇಳಿದ ಪಾದಶಬ್ದಕ್ಕೆ ಅಂಶವೆಂದರ್ಥ. ಪರಮಾತ್ಮನಿಗೆ ೪ ಪಾದಗಳು ಅಂದರೆ, ೪ ಅಂಶ ಗಳೆಂದರ್ಥ. ಭೂಮಿಯಲ್ಲಿರುವುದೊಂದಂಶ, ಅದನ್ನು ಭಿನ್ನಾಂಶವೆಂದು ಹಿಂದಿನ ಪದ್ಯದಲ್ಲಿ ಹೇಳಿದರು. ಇಳಿದ ಮೂರು ಪಾದಗಳು "ತ್ರಿಪಾದ ಸ್ಯಾಯಾಮೃತಂದಿವಿ"–ಎಂದು ಶ್ರುತಿ ಹೇಳುವುದು. ಅದೇ ಅರ್ಥವನ್ನೇ ಭಾಗವತ ದ್ವಿತೀಯ ಸ್ಕಂಧ ೬ನೆಯ ಅಧ್ಯಾಯದಲ್ಲಿ–"ಪಾದಸ್ತ್ರಯೋ ಬಹಿಸ್ತ್ವಾಸನ್ನಪ್ರಜಾನಾಂಯ ಆಶ್ರಯಾಃ ॥"–ಮೂರು ಪಾದಗಳು ಬ್ರಹ್ಮಾಂಡಕ್ಕೆ ಹೊರಗೆ ಇರುವುವು. ಆ ಪಾದಗಳೇ ಅಪ್ರಜರಾದ ಬ್ರಹ್ಮಾದಿ ದೇವತೆಗಳಿಗೆ ಆಶ್ರಯಭೂತವಾದವು. ಆ ಪಾದಗಳು ಯಾವುವೆಂದರೆ–ಆ ಶ್ಲೋಕದ ವ್ಯಾಖ್ಯಾನದಲ್ಲಿ, ಅನಂತಾಸನ ವೈಕುಂಠ ನಾರಾಯಣಾಃ ಏಷು ಲೋಕೇಷು ವಸಂತೀತಿ ಭಾವಃ ॥ ಮತ್ತು ತಾತ್ಪರ್ಯ ವಾಕ್ಯ : "ಅನಂತಾಸನ ವೈಕುಂಠ ನಾರಾಯಣ ಪುರಾಣತು" ಎಂಬ ವಾಕ್ಯಗಳಿಂದ ಅನಂತಾಸನದಲ್ಲಿರುವ ಶೇಷಪರ್ಯಂಕಶಾಯಿ ಯಾದ ಪದ್ಮನಾಭರೂಪ ಒಂದು. ವೈಕುಂಠ ಲೋಕದಲ್ಲಿರುವ ವಾಸುದೇವ ರೂಪ ಒಂದು. ಸೃಷ್ಟ್ಯಾರಂಭದಲ್ಲಿ ಬ್ರಹ್ಮಾಂಡವನ್ನು ಸೃಷ್ಟಿ ಮಾಡಿ, ನೀರಿನಲ್ಲಿ ವಿಹರಿಸುತ್ತಿದ್ದ ನಾರಾಯಣ ರೂಪ ಒಂದು. "ಆಪೋನಾರಾ ಇತಿಪ್ರೋಕ್ತಾಃ ಆಪೋವೈನರಸೂನವಃ ॥ ಆಯನಂತಸ್ಯತಾಃ ಪೂರ್ವಂತೇನ ನಾರಾಯಣ ಸ್ಮೃತಃ"–ಎಂಬ

ಭಾಗವತ ವಾಕ್ಯಾನುಸಾರವಾಗಿ, ಉದಕಕ್ಕೆ ನಾರ ಎಂದು ಹೆಸರು. ಅವುಗಳಿಗೆ ಆಶ್ರಯಭೂತನಾದುದರಿಂದ, ನಾರಾಯಣನೆಂದು ಹೆಸರೆಂದು ಹೇಳಿರುವರು. ಈ ಆಧಾರದ ಮೇಲೆ ಉದಕಾಶ್ರಯನಾದ ನಾರಾಯಣ ರೂಪ ಒಂದು. ಅಂತು, ಇವು ಮೂರು ಪಾದಗಳು–ಅಂದರೆ, ಮೂರು ಸ್ವರೂಪಾಂಗಳೆಂದರ್ಥ. ಇಂತಹಾ ೪ ಅಂಶಗಳುಳ್ಳವನು ಪರಮಾತ್ಮನೆಂದು ತಿಳಿದು, ನಿಮ್ಮ ಅನುಭವಕ್ಕೆ ತಂದುಕೊಂಡು, ನಿತ್ಯದಲ್ಲೂ ಸರ್ವಾಂತರಾತ್ಮಕನಾದ ಪರಮಾತ್ಮನನ್ನು ಸ್ಮರಿಸಬೇಕೆಂಬ ತಾತ್ಪರ್ಯ. ॥ ೧೯ ॥

**೩. ಭಾವದರ್ಪಣ :**

"ದಿವೀತಿ"–ಮೂರು ಪಾದೇತಿ । ರೂಪಯೆಂದರ್ಥ । ಉಕ್ತಂಚ–"ಸ್ವರೂಪ ವಿಷ್ಣೋಸ್ತು ತ್ರಯೋಹಿ ದಿವಿ ಸಂಸ್ಥಿತಾಃ । ನಾರಾಯಣೋ ವಾಸುದೇವೋ ವೈಕುಂಠ ಇತಿ ಚತ್ರಯ"–**ಇತಿ ಛಾಂದೋಗ್ಯಭಾಷ್ಯೇ** । ಅವನೇತಿ–"ಪಾದೋಸ್ಯಾವಿಶ್ವಾಭೂತಾನಿ"–ಇತಿ ಶ್ರುತೇಃ । ಪಾದಚತುಷ್ಟಯೇತಿ । ತದುಕ್ತಂ **ಛಾಂದೋಗ್ಯೇ**–"ಗಾಯತ್ರೀನಾಮಕೋ ವಿಷ್ಣು ಚತುಷ್ಪಾಸ್ತರಿ ಪ್ರಕೀರ್ತಿತಃ"–ಇತಿ। ಸರ್ವಾಂತರಾತ್ಮಕ–ಸರ್ವಾಯಂತರ್ಯಾಮಿ. ॥ ೧೯ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ದಿವಿ"–ಇತಿ ॥ ಅಮೃತಂ ಕ್ಷೇಮತುಭಯಮ್ ॥ "ಪಾದತ್ರಯಮ್"–ಅಂಶತ್ರಯಮ್ ॥ ಶ್ವೇತದ್ವೀಪ–ಅನಂತಾಸನ–ವೈಕುಂಠೇತಿ ನಾರಾಯಣ ಪುರಾಖ್ಯದ್ಯುತ್ರಯೇ ॥ ಅವನಿತುಸ್ಥಜೀವಾಃ ಭಿನ್ನಪಾದಾಃ. ॥ ೧೬ ॥

**ಕನ್ನಡಾರ್ಥ**

"ಪಾದೋಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ"–ಎಂದು ಪುರುಷಸೂಕ್ತದಲ್ಲಿ ಹೇಳಿದ ವಾಕ್ಯವು, "ಚತುಷ್ಪಾತ್"–ರೂಪದ ಉಪಾಸನಾಕ್ರಮವನ್ನು ಸೂಚಿಸುವುದು.

ಮುಕ್ತರಿಗೂ ಮತ್ತು ಮುಕ್ತಿಯೋಗ್ಯ ಜೀವರಿಗೆ ಪರಮ ಸುಖಪ್ರದನೂ, ಜ್ಞಾನಾನಂದಪರಿಪೂರ್ಣನೂ ಆದ ಶ್ರೀಪರಮಾತ್ಮನ ಮೂರು ಸ್ವರೂಪಾಂಶಗಳು–ಮುಕ್ತಧಾಮತ್ರಯಗಳಾದ ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠಗಳಲ್ಲಿ ದ್ಯುಲೋಕದಲ್ಲಿ ವಿರಾಜಿಸುತ್ತಿವೆ. ಸಮಸ್ತ ವಿಶ್ವವು ಪರಮಾತ್ಮನ ಭಿನ್ನಾಂಶವು. ಅಂದರೆ, ಶ್ರೀ ಪರಮಾತ್ಮನ ಅನಂತಾನಂತ ಅಂಶಗಳಲ್ಲಿಯ ಏಕದೇಶಕ್ಕೆ ಕಿಂಚಿತ್ ಅಂಶದ ಹೋಲಿಕೆಯುಳ್ಳವರು–ಅತ್ಯಂತ ಭಿನ್ನರು–ಎಂದು ತಾತ್ಪರ್ಯ. ॥ ೧೯ ॥

**ಶ್ರೀಗುರುಹೃದಯಪ್ರಕಾಶಿಕೆ**

ದಿವಿ–ಎಂದು ಹೆಸರುಳ್ಳ ಬಹುಲಕ್ಷೋಚ್ಛ್ರಿತ ಸ್ಥಳದಲ್ಲಿರುವ ಶ್ವೇತದ್ವೀಪ, ಅನಂತಾಸನ, ವೈಕುಂಠವೆಂಬ ಮೂರು ಸ್ಥಳದಲ್ಲಿ ಸ್ವರೂಪಾಂಶ ನಾರಾಯಣ ರೂಪಗಳು ಇರುವುವು. ಅವನಿ–ಎಂಬ ಚತುರ್ದಶಭುವನಲ್ಲಿರುವ ಸರ್ವಜೀವರೂ, ಮನೆ ಮೊದಲಾದ್ದು ಪಾಲಾಗಿ ಅಂಶವೆಂದು ಕರೆಸುವಂತೆ, ಎಲ್ಲಾ ದೇವರ ಭಾಗಕ್ಕೇನೆ ಬಂದಿರುವುದರಿಂದ ಭಿನ್ನಾಂಶವೆಂತಲೂ, ಪಾದವೆಂತಲೂ ಕರೆಸುವುದು. ಈ ಪ್ರಕಾರ ಕವಿಭಿರೀಡಿತನ–ಅಂದರೆ, ಜ್ಞಾನಿಗಳಿಂದ ಸ್ತುತನಾದ ದೇವರು (ಕವಿಭಿರೀಡಿತನೆಂಬುದ ಅಲುಕ್ ಸಮಾಸ) ಚತುಷ್ಪಾತ್–ನಾಲ್ಕು ಪಾದಗಳುಳ್ಳವನೆಂದು ಹೇಳಿಸಿಕೊಳ್ಳುವನು. ಈ ಸ್ವಾಮಿಯ ನಾಲ್ಕು ಪಾದಗಳನ್ನು ಅನುಭವಕ್ಕೆ ತಂದುಕೊಂಡು, ಅಂದರೆ, ವೇದೋಕ್ತ ಜ್ಞಾನದಿಂದ ತಿಳಿದು, ಉದ್ಧವನೆಂಬ ಬೃಹಸ್ಪತಿ ಅವತಾರನಾದ ಯಾದವಕುಲದವನಿಗೆ ಸ್ನೇಹಿತನಾದ ಶ್ರೀಕೃಷ್ಣನ್ನ ಸರ್ವಾಂತರಾತ್ಮನೆಂದು ಸ್ಮರಿಸುತ್ತಿರಬೇಕು.

**ಪಾದೋಽಸ್ಯ ವಿಶ್ವಭೂತಾನಿ ತ್ರಿಪಾದ್ಯಸ್ಯಾಮೃತಂ ದಿವಿ ॥**–ಎಂಬ ಶ್ರುತಿ, **ಪಾದೋಽಸ್ಯ ಸರ್ವಭೂತಾನಿ ಪುಂಸಃಸ್ಥಿತಿ ವಿದೋಽವಿದುಃ**–ಮತ್ತು,

**ಅಮೃತಂ ಕ್ಷೇಮಮಭಯಂ ತ್ರಿಮೂರ್ಧ್ನೋಽಧಾಯಿ ಮೂರ್ಧ್ನಸು ।**

**ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋಜಗತ್**–ಎಂಬ ಭಾಗವತ ಮತ್ತು ಗೀತಾರ್ಥ–ಸಹ ವಿವರಿಸಿತು. ॥ ೧೯ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. **ದಿವಿ**–ಸ್ವರ್ಗಸ್ಥಾನ. ಬ್ರಹ್ಮಾಂಡದ ಹೊರಗೆ ವೈಕುಂಠ–ಅನಂತಾಸನ – ವೈಕುಂಠ – ಎಂಬ ಮುಕ್ತಧಾಮತ್ರಯಗಳಲ್ಲಿ ಶ್ರೀಪರಮಾತ್ಮನ ಮೂರು ಪಾದಗಳು–ಅಂದರೆ, ಅವನ ಅಂಶವು ಇರುವುದು.

ವೈಕುಂಠದಲ್ಲಿ ಶ್ರೀಮನ್ನಾರಾಯಣ ರೂಪ ಒಂದು. ಅನಂತಾಸನದಲ್ಲಿ ಶೇಷಶಾಯಿಯಾದ ಪದ್ಮನಾಭರೂಪ ಒಂದು ಮತ್ತು ಶ್ವೇತದ್ವೀಪಗತ ವಾಸುದೇವರೂಪ ಒಂದು. ಅಂತೂ ಮೂರು ಸ್ವರೂಪಾಂಶರೂಪಗಳು.

೨. **ಅವನಿಯಲ್ಲಿ**–ಅಂದರೆ ಈ ಭೂಮಿಯಲ್ಲಿ ಇನ್ನೊಂದು ಪಾದ, ಅಂದರೆ ಭಿನ್ನಾಂಶವಾದ ಜಗತ್ತು, ಈ ನಾಲ್ಕು ಭಗವದ್ರೂಪಗಳಿಂದ ವಿರಾಜಮಾನನಾಗಿರುವ ಶ್ರೀಪರಮಾತ್ಮನಿಗೆ ಜ್ಞಾನಿಗಳು (ಕವಿ) **ಚತುಷ್ಪಾತ್**–ಎಂದು ಕರೆಯುವರು.

**ಪ್ರಮಾಣ :**

"ತ್ರಿಪಾದಸ್ಯಾಮೃತಂ ದಿವಿ" **(ಪುರುಷಸೂಕ್ತವಾಕ್ಯ)** ಮತ್ತು "ಅನಂತಾಸನ, ವೈಕುಂಠ ನಾರಾಯಣಃ ಏಷು ಲೋಕೇಷು ವಸಂತೀತಿ ಭಾವಃ"–**(ಶ್ರೀಮದ್ಭಾಗವತ)**.

೩. ಕವಿಭಿರೀಡಿತನಾದ ಕಮಲದಳಾಯತಾಕ್ಷನ ಪಾದಚತುಷ್ಟಯಗಳನ್ನು ಸದಾಕಾಲಕ್ಕೂ ಸ್ಮರಿಸುತ್ತಾ, ಧ್ಯಾನೋಪಾಸನಾದಿಗಳಿಂದ ಮನಸ್ಸಿಗೆ ತಂದುಕೊಳ್ಳಬೇಕೆಂದು ತಿಳಿಸುತ್ತಾರೆ. ಉದ್ಧವನಿಗೆ ಮಿತ್ರನಾದ ಶ್ರೀಪರಮಾತ್ಮನು ಸರ್ವಜೀವರ ಅಂತರ್ಯಾಮಿಯಾಗಿದ್ದನೆಂದು ಜ್ಞಾನಾನುಸಂಧಾನದಿಂದ ತಿಳಿದು, ಅವನನ್ನು ಸದಾ ಸ್ಮರಿಸುತ್ತಿರಬೇಕೆಂದು ತಾತ್ಪರ್ಯ. ॥ ೧೯॥

## ಪದ್ಯ ೨೦

**ಮೂಲ :**

**ವಂಶಬಾಗಲು ಬೆಳೆಯೆ ಕಂಡು ನ ।**
**ರಾಂಶದಲಿ ಶೋಭಿಫುದು ಬಾಗದ ।**
**ವಂಶ ಪಾಶದಿ ಕಟ್ಟಿ ಏರುವ ಡೊಂಬ ಮಸ್ತಕಕೆ ॥**
**ಕಂಸಮರ್ದನ ದಾಸರಿಗೆ ನಿ ।**
**ಸ್ಸಂಶಯದಿ ವಂದಿಸದೆ ನಾ ವಿ ।**
**ದ್ವಾಂಸನೆಂದಂಹಕರಿಸೆ ಭಾವಗುಣದಿಂದ ಬಂಧಿಸುವ ॥ ೨೦ ॥**

**ಅವತರಣಿಕೆ :**

ಸಾಧಕರಿಗೆ ವಿನಯಪೂರಿತವಾದ ಭಾವನೆ ಇರಬೇಕೆಂಬ ವಿಷಯವನ್ನು ಸದೃಷ್ಟಾಂತವಾಗಿ ತಿಳಿಸುತ್ತಾರೆ. ॥ ೨೦ ॥

**ಪ್ರತಿಪದಾರ್ಥ :**

**ವಂಶ** = ಬಿದಿರು, **ಬಾಗಲು** = ಸೊಟ್ಟಾಗಿ ಬೆಳೆದಿದ್ದಾಗ, **ಬೆಳೆಯೆ** = ಬೆಳೆದಿಕ್ಕೆ ಬಿದಿರನ್ನು, **ಕಂಡು** = ನೋಡಿದವರಾಗಿ, **ನರಾಂಶದಲಿ** = ಪಲ್ಲಕ್ಕಿಗೆ ಉಪಯೋಗವಾಗಿ, ಅದನ್ನು ಹೊರತಕ್ಕ ಮನುಷ್ಯರ ಭುಜವಲ್ಲಿ, **ಶೋಭಿಫುದು** = ಶೋಭಾಯಮಾನವಾಗುವುದು, **ಬಾಗದ ವಂಶ** = ಬಗ್ಗದೇ (ಡೊಂಕಗಿರದೇ), ನೇರವಾಗಿ ಬೆಳೆದ ಬಿದಿರನ್ನು ತಂದವನಾಗಿ, **ಡೊಂಬ** = ಡೊಂಬನಾದವನು, **ಪಾಶದಿ ಕಟ್ಟಿ** = ಹಗ್ಗಗಳಿಂದ ಕಟ್ಟಿ ನಿಲ್ಲಿಸಿ, ಏರುವ **ಮಸ್ತಕಕೆ** = ಅದರ ಶಿಖರದಲ್ಲಿ ಏರಿಕೂತು, ತನ್ನ ಆಟವನ್ನು ಆಡುವನು. **ಕಂಸಮರ್ದನ ದಾಸರಿಗೆ** = ಸೋದರಮಾವನಾದ ಕಂಸಾಸುರನನ್ನು ಸಂಹರಿಸಿದ ಶ್ರೀಕಷ್ಣನಿಗೆ ದಾಸರಾದ ಭಗವದ್ಭಕ್ತರಿಗೆ, **ನಿಸ್ಸಂಶಯದಿ** = ಕಾಪಟ್ಯರಹಿತನಾಗಿ, **ವಂದಿಸದೆ** = ನಮಸ್ಕರಿಸದೆ, **ನಾ ವಿದ್ವಾಂಸನೆಂದು** = ನಾನೇ ಮಹಾಪಂಡಿತನು–ಎಂತ ಅಹಂಕಾರಯುಕ್ತನಾದರೆ, (**ಅಹಂಕರಿಸೆ**).

**ಭವಗುಣದಿಂದ** = ಸಂಸಾರಪಾಶವೆಂಬ ಹಗ್ಗದಿಂದ, **ಬಂಧಿಸುವ** = ಎಂದೆಂದಿಗೂ ಬಿಚ್ಚದಂತೆ ಕಟ್ಟುವನು. ॥ ೨೦ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವದ್ಭಕ್ತರಿಗೆ ವಂದನ ಮಾಡದವಗೆ ಆಗತಕ್ಕ ಫಲ ಹೇಳತಾರೆ.

ಅಡವಿಯಲ್ಲಿ ಬೆಳೆದ ವಾರೆ-ಎಂನತಕ್ಕ ಬಿದಿರು ಸೊಟ್ಟಗಿ ಬಗ್ಗಿದ್ದಾಗಿ, ಬೆಳೆದಿರತಕ್ಕ ಬಿದಿರನ್ನು ನೋಡಿವರಾಗಿ, ಜನರು, ಅದರನ್ನು ತಂದು, ಆಂದೋಳಿಕ ಎನ್ನತಕ್ಕ ಪಲ್ಲಕ್ಕಿಗೆ ಹಾಕತಾರೆ. ಆ ಪಲ್ಲಕ್ಕಿಗೆ ಹಾಕಿದ ಬಿದಿರು ಪಲ್ಲಕ್ಕಿ ಹೊರತಕ್ಕ ಮನುಷ್ಯರ ಭುಜದಲ್ಲಿ ಶೋಭಸೋದಾಗತದೆ. ಆ ಬಿದಿರು ಬಗ್ಗಿ ಸೊಟ್ಟಗಿದ್ದ ಪ್ರಯುಕ್ತ. ಬಗ್ಗದೇನೆ ಸರಿಯಾಗಿ ಋಜುತರವಾಗಿ ಬೆಳೆದು ಇರತಕ್ಕ ಬಿದಿರನ್ನ ತಂದವನಾಗಿ, ಡೊಂಬನಾದವನು ತಾನು ಆಟ ಆಡೋ ನಿಮಿತ್ತವಾಗಿ ನಾಲ್ಕು ಪಾರ್ಶ್ವದಲ್ಲಿ ಈ ಬಿದಿರನ್ನ ಕದಲದಂತೆ ಹಗ್ಗಗಳಿಂದ ಕಟ್ಟಿ ನಿಲ್ಲಿಸಿ, ಅದರ ಶಿಖರದಲ್ಲಿ ಏರಿ ಕೂತು, ಆಟಗಳ ಆಡತಾನೆ. ತದ್ವತ್, ಭಗವದ್ಭಕ್ತರಿಗೆ ವಂದನಾದಿಗಳ ಮಾಡಿ ಶಿರಬಾಗಿದವ ದೇವತೆಗಳಿಂದ ಮಾನ್ಯನಾಗಿ ಪಲ್ಲಕ್ಕಿಗೆ ಹಾಕಿದ ಬಿದಿರಿನೋಪಾದಿಯಲ್ಲಿ ಇಹದಲ್ಲಿ ಉತ್ತಮನು ಎಂತ ಕರಸತಾನೆ. ಹಾಂಗಿಲ್ಲದೇ ಸೋದರಮಾವನಾದ ಕಂಸನ್ನ ಸಂಹಾರ ಮಾಡಿದ ಶ್ರೀಕೃಷ್ಣನಿಗೆ ಪ್ರೀತಿವಿಷಯರಾದ ಭಗವದ್ಭಕ್ತರಿಗೆ, ಕಾಪಟ್ಯರಹಿತನಾಗಿ ನಮಸ್ಕಾರಗಳ ಮಾಡದೆ, ನಾನು ಪಂಡಿತನು-ಎಂತ ಅಹಂಕಾರಯುಕ್ತನಾದರೆ, ಡೊಂಬನೋಪಾದಿಯಲ್ಲಿ, ಬಿದಿರನ್ನ ಹಗ್ಗಗಳಿಂದ ಕಟ್ಟಿದೋಪಾದಿಯಲ್ಲಿ, ದೇವರು ಅಹಂ-ಎಂಬ ಜ್ಞಾನವಿಶಿಷ್ಟನಾದವಗೆ ಎಂದಿಗೂ ಮೋಚನ ಇಲ್ಲದ ಸಂಸಾರದಲ್ಲಿ ಇಟ್ಟು, ದುಃಖಪಡಸತಾ ಇರತಾನೆ. ಗುಣ-ಎಂದರೆ, ಹಗ್ಗ ಎಂತ ತಾತ್ಪರ್ಯ. ॥ ೨೦ ॥

**೨. ಭಾವಪ್ರಕಾಶಿಕೆ**

ದಪ್ಪವಾದ ಬಿದಿರು ಬೆಳೆಯುವಾಗಲೇ ಬೊಗ್ಗಿ ಬೆಳೆದರೆ, ಅದನ್ನು ಪಲ್ಲಕ್ಕಿಯ ಮೇಲ್ಭಾಗಕ್ಕೆ ಸೇರಿಸಿ, ಅದನ್ನು ಮನುಷ್ಯರು ತಮ್ಮ ಹೆಗಲ ಮೇಲೆ ಇಟ್ಟುಕೊಂಡು, ಹೊತ್ತುಕ್ಕೊಂಡು ಹೋಗುವರು. ಹಾಗೆ ಬೊಗ್ಗದೇ ನೆಟ್ಟಗೆ ನಿಂತಿರುವ ಬಿದಿರನ್ನು ಡೊಂಬರು ತಂದು ಗಡೆಕಟ್ಟಿ ನಿಲ್ಲಿಸಿ, ಳ ಪಾರ್ಶ್ವದಲ್ಲೂ ಹಗ್ಗದಿಂದ ಬೊಗ್ಗದಂತೆ ಕಟ್ಟಿ, ಆ ಬಿದಿರಿನ ತಲೆಗೆ ಮೇಲೇರುವರು. ಇದರಂತೆ, ಪರಮಾತ್ಮನ ಭಕ್ತರಿಗೆ ಶಿರಬೊಗ್ಗಿಸಿ ನಮಸ್ಕಾರ ಮಾಡದವನನ್ನು ಸಂದೇಹವಿಲ್ಲದೆ ಸಂಸಾರಪಾಶದಿಂದ ಕಟ್ಟುವನು. ತಲೆ ಬಾಗಿದವರನ್ನುದ್ಧರಿಸುವನೆಂಬ ಭಾವ. ॥ ೨೦ ॥

**೩. ಭಾವದರ್ಪಣ ಟೀಕಾ :**

ಜ್ಞಾನಗಳಲ್ಲಿ ಅಹಂಕಾರ ಮಾಡಬೇಡೆಂದು ಸದೃಷ್ಟಾಂತ ಹೇಳುತ್ತಾರೆ–ವಂಶೇತಿ. ವಂಶ–ಬಿದಿರು, ನರಾಂಶ–ಮನುಷ್ಯನ ಹೆಗಲು, ಭವಗುಣದಿಂದ–ಸಂಸಾರವೆಂಬೋ ಹಗ್ಗದಿಂದ, ಬಾಗಲು–ಬಗ್ಗಲು, ಬೆಳೆಯ ಕಂಡು–ಮೌಲ್ಯಕಂಡು. ॥..೨೦ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ವಂಶ"–ಇತಿ ॥ ವಂಶಃ–ಬಿದಿರು ॥ ಬಾಗಲು–ಬಗ್ಗಲು ॥ ಬೆಲೆ–ಮೌಲ್ಯ ॥ ನರಾಂಸೇತಿ–ಶಿಬಿಕಾಮಧ್ಯಗತ್ವಾತ್ ॥ ಭವಗುಣೇತಿ–ಗುಣಃ ತಂತುಃ ತದಾಖ್ಯ ॥ ೨೦ ॥

## ಕನ್ನಡಾರ್ಥ

ಜೀವನು ಸದಾ ಸರ್ವದಾ ಪರಾಧೀನನು ಮತ್ತು ಜಡಸದೃಶನು. ಶ್ರೀಪರಮಾತ್ಮನ ದಾಸನಾದರೆ, ಶ್ರೀಶನ ಪರಮಾನುಗ್ರಹವನ್ನು ಪಡೆಯುವನು. ಶ್ರೀಶನಲ್ಲಿ ದಾಸ್ಯಭಾವನ್ನಿಡದೆ, ಅಹಂಕಾರದಿಂದ ಮತ್ತನಾದರೆ, ಹರಿಯು ಅಂತಹ ಜೀವನನ್ನು ಸಂಸಾರವೆಂಬ ಪಾಶದಿಂದ ಬಂಧಿಸುವನು. ಈ ವಿಷಯವನ್ನು ಬಿದುರಿನ ದೃಷ್ಟಾಂತದಿಂದ

ವಿವರಿಸುತ್ತಾರೆ. ಪಲ್ಲಕ್ಕಿಯನ್ನು ಹೊರುವ ಮನುಷ್ಯರು, ಬಾಗಿ ಡೊಂಕಾಗಿರುವ ಬಿದಿರಿನ ದಂಡವನ್ನು ತಮ್ಮ ಹೆಗಲ ಮೇಲೆ ಇರಿಸುವರು. ಅದೇ ಬಿದಿರು ಸೆಟೆದು ಕೊಂಡು, ನೇರವಾಗಿದ್ದರೆ, ಡೊಂಬರು ತಮ್ಮ ಆದಕ್ಕೆ ಉಪಯೋಗಿಸಿ ಕೊಂಡು, ಪಾಶದಿಂದ ಕಟ್ಟಿ ನೇರವಾಗಿ ನಿಲ್ಲಿಸಿ, ಅದರ ನೆತ್ತಿಯ ಮೇಲೆ ಮಾಡಿ ಹತ್ತಿನಿಲ್ಲುವರು. ಬಾಗುವುದು, ದೀನವಾದ-ದಾಸಭಾವ, ನೆಟೆದು ನಿಲ್ಲುವುದು, ಅಹಂಕಾರಯುಕ್ತ ಭಾವವೆಂದು ತಾತ್ಪರ್ಯ. ॥ ೨೦ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ತಿಳಿದವರಿಗೆ ತಗ್ಗಿ ನಡೆಯದವರಿಗೆ ಭವಬಂಧ ತಪ್ಪದೆಂದು ಸದೃಷ್ಟಾಂತ ತಿಳಿಸುತ್ತಾರೆ–ವಂಶವೆಂದು.

ವಂಶವೆಂಬ ಬಿದುರು ಪಾಲಕಿಕೊಂಬಾಗಿ ಬಗ್ಗುವುದರಿಂದ ವಿಶೇಷ ಬೆಲೆ ಹೊಂದಿ, ನರಾಂಸವೆಂಬ ಮನುಷ್ಯರ ಹೆಗಲಿನಲ್ಲಿ ಶೋಭಿಸುವುದು. ಬಗ್ಗದೆ ಬೆಳೆದ ಬಿದುರನ್ನು ಗಣೆ ಮಾಡಿಕೊಂಡು ಹಗ್ಗದಿಂದ ಕಟ್ಟಿ ಡೊಂಬರವನು ಅದರ ತಲೆಯ ಮೇಲೆ ಕೂತುಕೊಳ್ಳುವನು, ಹೇಗೋ ಹಾಗೇ, ಕಂಸಮರ್ದನನೆಂಬ ಶ್ರೀಕೃಷ್ಣನಿಗೆ ದಾಸರೆಂಬ ಸ್ವೋತ್ತಮ ಭಕ್ತಜನಗಳಿಗೆ ನಿಸ್ಸಂಶಯವೆಂಬ ದೃಢಭಕ್ತಿಯಿಂದ ಎರಗದೆ ಅಂದರೆ ನಮಸ್ಕರಿಸದೆ, ನಾನು ವಿದ್ವಾಂಸನೆಂದು ಉತ್ತಮರಲ್ಲಿ ಅಹಂಕಾರ ಪಡುವವರನ್ನು ದೇವರು ಸಂಸಾರಪಾಶದಿಂದ ಕಟ್ಟಿ ಬಳಲಿಸುವನು.

**ನಮೋ ಮಹೋದ್ಭ್ಯೋನಮಃ ಅರಭಕೇಭ್ಯಃ ನಮೋಯುವಭ್ಯೋನಮ ಆಶನೇಭ್ಯಃ** ।–ಎಂಬ ಶ್ರುತ್ಯರ್ಥ ವಿವರಿಸಲ್ಪಟ್ಟಿತು. ॥ ೨೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ವಂಶ–ಎಂದರೆ, ಬಿದಿರು. ಬಿದಿರು ಮೆಳೆಗಳಲ್ಲಿ ಬಿದಿರು ಎತ್ತರವಾಗಿ ಬೆಳೆಯುವುದು. ಬೆಳೆಯೆ–ಅಂದರೆ, ಮೌಲ್ಯ. ಆ ಬಿದಿರು

ಬೆಳೆಯುವಾಗಲೇ, ಡೊಂಕಾಗಿ ಬಾಗಿ ಬೆಳೆದಿದ್ದರೆ, ಅದು ಪಲ್ಲಕ್ಕಿಗೆ ಉಪಯೋಗವಾಗುವುದು. ಪಲ್ಲಕ್ಕಿಗೆ ಅಧಿಕ ದಂಡವಾಗಿ, ಮನುಷ್ಯರ ಹೆಗಲಿನ ಮೇಲೆ ಧರಿಸಲ್ಪಟ್ಟು ಉಪಯೋಗಕ್ಕೆ ಬರುವುದು. ನರ- ಅಂಸದಲಿ-ಪಲ್ಲಕ್ಕಿಯನ್ನು ಹೊರುವ ಮನುಷ್ಯರ ಹೆಗಲು.

೨. ಅದೇ ಬಿದಿರು, ಡೊಂಕಾಗಿ ಬಾಗಿ ಬೆಳೆಯದೇ, ನೇರವಾಗಿ ಎತ್ತರಕ್ಕೆ ಬೆಳೆದಿದ್ದರೆ, ಅದು ಡೊಂಬರ ಆಟಕ್ಕೆ ಸಹಕಾರಿಯಾಗುವುದು. ಅಂತಹ ಬಿದಿರನ್ನು ಡೊಂಬನು ಹಗ್ಗದಿಂದ ಬಿಗಿದು, ಕಟ್ಟಿ, ನೇರವಾಗಿ ನಿಲ್ಲಿಸಿ, ಅದರ ಮೇಲೆ ಸರಸರನೆ ಏರಿ, ಅದರ ಮೇಲಿನ ತುದಿಯ ಮೇಲೆ ನಿಂತು, ತನ್ನ ಆಟದ ವಿವಿಧ ಚಮತ್ಕಾರಗಳನ್ನು ಪ್ರದರ್ಶಿಸುವನು.

೩. ಈ ಸುಂದರವಾದ ದೃಷ್ಟಾಂತದಿಂದ ಅತ್ಯಮೂಲ್ಯವಾದ ನೀತಿಯನ್ನು ಜನರಿಗೆ ಬೋಧಿಸುತ್ತಾರೆ-ಪರಮ ವಿನಯಶಾಲಿಗಳಾದ ದಾಸವರ್ಯರು.

ತನ್ನ ಸೋದರಮಾವನಾದ ದುಷ್ಟ ಕಂಸನನ್ನು ಕೊಂದು, ಸಜ್ಜನರ ರಕ್ಷಕನಾಗಿ ಮೆರೆದವನು ಶ್ರೀಕೃಷ್ಣನು. ಅಂತಹ ಕಂಸಮರ್ದನನಾದ ಶ್ರೀಕೃಷ್ಣನ ದಾಸರು ಸಜ್ಜನರು. ಅವರ ಪಾದಕ್ಕೆ ಬಾಗಿ ನಮಸ್ಕರಿಸಿದ ಮಾನವನು ತಾನೇ ವಿದ್ವಾಂಸನೆಂಬ ಅಹಂಕಾರಯುಕ್ತನಾದರೆ, ಅಂತಹ ವಿದ್ವಾಂಸನೆಂಬ ಅಹಂಕರಿಸುವ ಮಾನವನನ್ನು ಶ್ರೀಶನು ಸಂಸಾರಬಂಧನ ವೆಂಬ ಹಗ್ಗದಿಂದ ಕಟ್ಟುವನು.

ಈ ದೃಷ್ಟಾಂತದಲ್ಲಿ ಬಲ್ಲಿನಂತೆ ಬಾಗಿರುವ ಬಿದಿರಿನ ಸದೃಶರು ವಿನಯಶಾಲಿಗಳಾದ ಕಂಸಮರ್ದನನ ದಾಸಜನರು. ತಾನೇ ವಿದ್ವಾಂಸ ನೆಂದು ಅಹಂಕಾರದಿಂದ ಬೀಗುವ ನರನು, ಬಾಗದೇ ನೇರವಾಗಿ ಬೆಳೆದಿರುವ ಬಿದಿರಿನ ಸಾದೃಶ್ಯ. ಲೋಕದ ಸೂತ್ರಧಾರಕನಾದ ಶ್ರೀಪರಮಾತ್ಮನು ಡೊಂಬನು, ಬಿದಿರಿನ ಕೋಲನ್ನು ಹಗ್ಗಗಳಿಂದ ಬಂಧಿಸುವಂತೆ, ಅಹಂಕಾರಯುಕ್ತನಾದ ಮಾನವನನ್ನು ಸಂಸಾರಬಂಧನ

ವೆಂಬ ಪಾಶದಿಂದ ಬಿಗಿಯುವನು. (ಭವಗುಣದಿಂದ, ಭವ–ಸಂಸಾರ, ಗುಣ–ಹಗ್ಗ).

ಬಾಗಿರುವ ಬದಿರು ಪಲ್ಲಕ್ಕಿಯನ್ನು ಹೊರುವ ಮಾನವರ ಹೆಗಲನ್ನು ಏರುವಂತೆ, ನಿರಂಹಕಾರಿಯಾಗಿ, ವಿನಯವಂತನಾದ ಮಾನವನು ಶ್ರೀಹರಿಯ ಕೃಪಾಬಲವೆಂಬ ಆಶ್ರಯಕ್ಕೆ ಪಾತ್ರನಾಗುವನು.

ಎಂತ ಸುಂದರ ದೃಷ್ಟಾಂತವಿದು! ಸ್ವಲ್ಪ ವಿದ್ಯೆ ಬಂದರೂ, ಅನೇಕರು ತಾವೇ ದೊಡ್ಡ ವಿದ್ವಾಂಸನೆಂಬ ಅಹಂಕಾರಗ್ರಸ್ತರಾಗಿ ಬೀಗುವವರೇ ಹೆಚ್ಚು ಮಂದಿ. ವಿನಯವಿಲ್ಲದ ವಿದ್ವತ್ತು ಶೋಭಿಸದು. ಅದು ದುಸ್ಸಾಧನೆಗೆ ಕಾರಣವಾಗುವುದು. ॥ ೨೦ ॥

## ಪದ್ಯ-೨೧

**ಮೂಲ :**

**ಜ್ಯೋತಿರೂಪಗೆ ಪ್ರತಿಮೆಗಳು ಸಾಂ ।**
**ಕೇತಿಕಾರೋಪಿತ ಸುಪೌರುಷ ।**
**ಧಾತುಸಪ್ತಕ ಧೈರ್ಯ ಶೌರ್ಯೌದಾರ್ಯ ಚಾತುರ್ಯ ॥**
**ಮಾತು ಮಾನ ಮಹತ್ತ್ವ ಸಹನ ಸು ।**
**ನೀತಿ ನಿರ್ಮಲದೇಶ ಬ್ರಾಹ್ಮಣ ।**
**ಭೂತಪಂಚಕ ಬುದ್ಧಿ ಮೊದಲಾದಿಂದ್ರಿಯ ಸ್ಥಾನ ॥ ೨೧ ॥**

**ಅವತರಣಿಕೆ :**

ಬಿಂಬರೂಪಿಯಾದ ಶ್ರೀಪರಮಾತ್ಮನಿಗೆ ಅಧಿಷ್ಠಾನರೂಪಗಳಾದ ಪ್ರತಿಮಾಸ್ಥಾನಗಳ ವಿಷಯ ತಿಳಿಸುತ್ತಾರೆ-"ಜ್ಯೋತಿರೂಪಗೆ"-ಎಂಬ ಪದ್ಯದಿಂದ ॥ ೨೧ ॥

**ಪ್ರತಿಪದಾರ್ಥ :**

**ಜ್ಯೋತಿರೂಪಗೆ** = ಜ್ಞಾನಸ್ವರೂಪಿಯಾದ ಶ್ರೀಪರಮಾತ್ಮನಿಗೆ **ಪ್ರತಿಮೆಗಳು** = ಪ್ರತೀಕದಂತಿರುವ ಪ್ರತಿಬಿಂಬಾಧಿಷ್ಠಾನಗಳು, **ಆರೋಪಿತ** = ಆರೋಪಿತದಿಂದ (ತತ್ಸಂಬಂಧ), **ಸಾಂಕೇತಿಕ** = ಸಾಂಕೇತಿಕಗಳಾಗಿದ್ದು, **ಸುಪೌರುಷ** = ಪೌರುಷೇಯವಾದ ಪುರಾಣೇತಿಹಾಸ ಗ್ರಂಥಗಳು, **ಧಾತುಸಪ್ತಕ** = ತ್ವಗಾದಿ ಸಪ್ತಧಾತುಗಳಿಂದ ಕೂಡಿದ ಸ್ಥೂಲಶರೀರ, **ಮಹತ್ತ್ವ** = ಅವ್ಯಕ್ತತತ್ತ್ವ ಆರಂಭಿಸಿ, ಅಹಂಕಾರ ತತ್ತ್ವಪರ್ಯಂತ ತತ್ತ್ವತ್ರಯಗಳು, **ಬುದ್ಧಿ** = ಬುದ್ಧಿಯೇ ಮೊದಲಾದ ಪಂಚ ಮನೋವೃತ್ತಿಗಳು, **ಇಂದ್ರಿಯ** = ದಶೇಂದ್ರಿಯಗಳು, **ಭೂತಪಂಚಕ** = ತನ್ಮಾತ್ರಾಸಹಿತವಾದ ಪೃಥ್ವ್ಯಾದಿ ಭೂತಪಂಚಕಗಳು, **ಧೈರ್ಯ** = ಮನಸ್ಸಿನ ಧೈರ್ಯ, **ಶೌರ್ಯ** = ಪರಾಕ್ರಮ (ದೈಹಿಕ ಹಾಗೂ ಮಾನಸಿಕ)

**ಔದಾರ್ಯ** = ಉದಾರತ್ವಗುಣ, **ಚಾತುರ್ಯ**= ಬುದ್ಧಿಕೌಶಲ್ಯ, **ಮಾತು** = ಲೋಕಸಮ್ಮತವಾದ ವಚನಗಳು, **ಮಾನ** = ಗೌರವ, **ಸಹನ** = ಶಮದಮಾದಿ ಶಾಂತಗುಣ, **ಸುನೀತಿ** = ಶಾಸ್ತ್ರಸಮ್ಮತವಾದ ಉತ್ತಮ ನಡತೆ, (ಸೌಶೀಲ್ಯಗುಣ), ನಿರ್ಮಲದೇಶ = ಪರಿಶುದ್ಧವಾದ ಸ್ಥಳ, **ಬ್ರಾಹ್ಮಣ** = ಜ್ಞಾನಿಯದ ಬ್ರಾಹ್ಮಣ, **ಮೊದಲಾದ** = ಇವೇ ಮುಂತಾದ, **ಸ್ಥಾನ** = ಶ್ರೀಪರಮಾತ್ಮನಿಗೆ ಅಧಿಷ್ಠಾನರೂಪವಾದ ಸ್ಥಾನಗಳು. ॥ ೨೦ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನಿಗೆ ಅಧಿಷ್ಠಾನಗಳಾದ ಪ್ರತಿಮಾಸ್ಥಾನಗಳು ದಾವವೆಂದರೆ ಹೇಳತಾರೆ.

ಜ್ಞಾನಸ್ವರೂಪಿಯಾದ ಪರಮಾತ್ಮಗೆ ಪ್ರತಿಮೆಗಳೋಪಾದಿಯಲ್ಲಿ ಆರೋಪಿತದಿಂದ ಸಾಂಕೇತಿಕಗಳಾದದ್ದು, ನಿರ್ದುಷ್ಟವಾದ, ಶ್ರೀವೇದವ್ಯಾಸ ದೇವರಿಂದ ರಚಿತವಾದ ಪೌರುಷೇಯವಾದ ಪುರಾಣಗಳು, ತ್ವಗಾದಿ ಸಪ್ತಧಾತುಗಳಿಂದ ಯುಕ್ತವಾದ ಸ್ಥೂಲಶರೀರ, ಶ್ರೇಷ್ಠವಾದ ಅವ್ಯಕ್ತತತ್ತ್ವ ಆರಂಭ ಮಾಡಿ, ಅಹಂಕಾರತತ್ತ್ವದವರೆಗೂ, ತತ್ತ್ವತ್ರಯಗಳು, ಬುದ್ಧಿಯೇ ಮೊದಲಾದ ಮನೋವೃತ್ತಿಗಳು, ದಶೇಂದ್ರಿಯಗಳು, ತನ್ಮಾತ್ರಸಹಿತ ಪೃಥಿ ವ್ಯಾದಿ ಪಂಚಭೂತಗಳು, ಮನೋಧರ್ಮಗಳಾದ ಧೈರ್ಯ, ಪರಾಕ್ರಮ ದಾತೃತ್ವ, ಬುದ್ಧಿಕುಶಲತೆ, ಲೋಕಕ್ಕೆ ಸಮ್ಮತವಾದ ವಚನಗಳು, ಗೌರವ. ಶಮದಮಾದಿ ಸಂಪತ್ತು, ವೇದಶಾಸ್ತ್ರಾನುಸಾರಿಯಾದ, ಸಮೀಚೀನವಾದ ನೀತಿ, ಕಶ್ಮಲರಹಿತವಾದ ಪರಿಶುದ್ಧ ಸ್ಥಳ, ಬ್ರಹ್ಮಜ್ಞಾನಿಯಾದ ಬ್ರಾಹ್ಮಣ–ಇವುಗಳೇ, ಇನ್ನೂ ಯೋಗ್ಯವಾಗಿ ಇರತಕ್ಕ ಸ್ಥಾನಗಳು–ಎಂದರೆ, ಸನ್ನಿಧಾನ ವಿಶೇಷವಾಗಿ ಇರತಕ್ಕ ಸ್ಥಾನಗಳೆಂದು ಅರ್ಥ. ಮುಖ್ಯವಾಗಿ ಸಾಧನಗಳು ಆಗಬೇಕಾದರೆ, ಈ ಪೂರ್ವೋಕ್ತಗಳಿಂದಲೇ ಆಗಬೇಕು. ಅತಏವ ಜ್ಯೋತಿರೂಪನಾದ ಶ್ರೀಹರಿಗೆ ಇವುಗಳು ಮುಖ್ಯಾಧಿಷ್ಠಾನಗಳೆಂದು ತಾತ್ಪರ್ಯ. ॥ ೨೦ ॥

**೨. ಭಾವಪ್ರಕಾಶಿಕೆ**

ಲೋಕದಲ್ಲಿ ತಾಮ್ರ, ಹಿತ್ತಾಳೆ, ಬೆಳ್ಳಿ, ಭಂಗಾರಗಳಿಂದ ಮನುಷ್ಯಾಕಾರವಾಗಿ ಮಾಡಿ ಅದಕ್ಕೆ ರಾಮ ಕೃಷ್ಣನೆಂದು ಹೆಸರಿಟ್ಟು, ಪೂಜೆ ಮಾಡುತ್ತಿರುವರು. ತೇಜೋಮಯನಾದ ಪರಮಾತ್ಮನೇ ಈ ಪ್ರತಿಮೆಗಳಲ್ಲಿ, ಪರಮಾತ್ಮನು ಜಡನಲ್ಲ. ನಮಗೆ ಧ್ಯಾನಗೋಚರಕ್ಕಾಗಿ ಯಾವುದಾದರೂ ಒಂದು ರೂಪವನ್ನು ಧ್ಯಾನ ಮಾಡಬೇಕಾಗುವದು. ಅದರ ಉಪಯೋಗಕ್ಕಾಗಿ ಪ್ರತಿಮೆಗಳಲ್ಲಿ ಸಾಂಕೇತಿಕವಾದ ರಾಮ ಕೃಷ್ಣಾದಿ ನಾಮಗಳನ್ನು ಆರೋಪಿಸುವರು. ಆದುದರಿಂದ, ಅವುಗಳಲ್ಲಿ ಪರಮಾತ್ಮನ ಅಧಿಷ್ಠಾನವನ್ನು ತಿಳಿಯಬೇಕು. ಆದರೆ, ಪ್ರತಿಮೆಯೇ ದೇವರೆಂದು ತಿಳಿದು, ಅನ್ಯತ್ರ ಇರುವ ಭಗವದ್ರೂಪಗಳನ್ನರಿಯದೆ, ಅವೆಲ್ಲವನ್ನೂ ತಿರಸ್ಕರಿಸಿ, ಪ್ರತಿಮೆಗಳ ಪೂಜೆಯನ್ನು ಮಾಡಿದರೂ, ಆ ಪೂಜೆಯನ್ನು ಸ್ವೀಕರಿಸುವುದಿಲ್ಲ. ಆದುದರಿಂದ, ಈ ಪದ್ಯದಲ್ಲಿ ಹೇಳಿದ ಧಾತುಸಪ್ತಕ, ಧೈರ್ಯ ಮೊದಲಾದವುಗಳಲ್ಲೂ ಭಗವದ್ರೂಪಗಳನ್ನು ಚಿಂತಿಸಬೇಕು. ಧೈರ್ಯಾದಿಗಳು ಕಣ್ಣಿಗೆ ಗೋಚರವಲ್ಲ. ಅವುಗಳಲ್ಲಿ ಭಗವದ್ರೂಪ ಚಿಂತನೆ ಹೇಗೆಂದರೆ–ಧೈರ್ಯಾದಿಗಳು, ಪುರುಷನಲ್ಲಿ ಧೈರ್ಯರೂಪಿಯಾಗಿದ್ದು, ಇವನು ಧೈರ್ಯವಂತನು ! ಇವನು ಶೌರ್ಯವಂತನು–ಎಂಬ ಹೆಸರು ಪರಮಾತ್ಮನೇ ಪಡೆಯುವನೆಂದು ತಿಳಿದು, ಉಪಾಸನೆ ಮಾಡಬೇಕೆಂಬ ತಾತ್ಪರ್ಯ. ॥ ೨೧ ॥

**೩. ಭಾವದರ್ಪಣ :**

"ಸೌವರ್ಣೀ ರಾಜತೀ ತಾಮ್ರೀ ಪೈತ್ತಲೀ, ಕಾಶ್ಯಲೌಹೀಕಾ"–(ತ್ರಾಪುಷೀ–ತವರದ್ದು) – ಎಂಬ **ಪಾಂಚರಾತ್ರಾಗಮರೀತ್ಯಾ**–ಸಪ್ತಧಾತು ಪ್ರತಿಮೆಯಲ್ಲಿ ತೇಜೋರೂಪವಾದಂಥ ಶ್ರೀಹರಿಗೆ ಕೃಷ್ಣ ರಾಮ–ಇತ್ಯಾದಿ ಸಂಕೇತ ನಾಮಕರಣ ಮಾಡಿ, ಪೂಜಿಸೋಣಲ್ಲದೇ, ಪಂಚಭೂತಾದಿಗಳು ಇನ್ನೂ ಕೇವಲ ಜಡಗಳೂ ಸಹ ಪ್ರತಿಮಾಧಿಷ್ಠಾನಗಳೆಂತ ತಿಳಿದು, ತದ್ಗತ

ತನ್ನಾಮಕ ಭಗವದ್ರೂಪ ಭಜಿಸಿರಿ–ಎಂದು ಎರಡು ಪದ್ಯದಿಂದ ಹೇಳುತ್ತಾರೆ । ಜ್ಯೋತಿರೂಪಗೇತಿ ॥ ೨೧ ॥

**೪. ಶ್ರೀವ್ಯಾಸಸಿದ್ಧಾಂತ ಕೌಮುದೀ**

"ಜ್ಯೋತಿ"–ಇತಿ ॥ "ಬಿಂಬಗೇತಿ" ॥ "ಸಾಂಕೇತಿಕ"–ಕೃತಕ ॥ "ಆರೋಪಿತ"–ಸ್ವಯಂವ್ಯಕ್ತ ॥ "ಮಾತು"–ವಚನ ॥ ೨೧ ॥

**ಕನ್ನಡಾರ್ಥ**

ಬಿಂಬೋಪಾಸನೆಯ ಸಲುವಾಗಿ ಶ್ರೀಹರಿಯ ಅಧಿಷ್ಠಾನಭೂತ ಗಳಾದ ಪ್ರತೀಕಗಳನ್ನು ಹೇಳುತ್ತಾರೆ–"ಜ್ಯೋತಿರೂಪನು"–ಎಂಬ ಪದ್ಯದಿಂದ.

ಸಾಂಕೇತಿಕ–ಕೃತಕ. ಆರೋಪಿತ–ಸ್ವಯಂವ್ಯಕ್ತ. ಈ ಪ್ರಕಾರ ಪ್ರತಿಮಾಧಿಷ್ಠಾನ ವಿಚಾರಗಳನ್ನು ತಿಳಿಯಬೇಕು.

ಶ್ರೀ ಪರಮಾತ್ಮನಿಗೆ ಪದ್ಯಗತ ವಿಷಯಗಳೆಲ್ಲವೂ ಪ್ರತೀಕ ಗಳಾಗಿರುತ್ತವೆ–ಎಂದು ತಾತ್ಪರ್ಯಾರ್ಥ. ॥ ೨೧ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಬ್ರಹ್ಮಾಂಡಾದಿ ಜಡಪದಾರ್ಥಗಳೆಲ್ಲಾ ದೇವರಿಗೆ ಸಾಂಕೇತಿಕವೆಂಬ ತಾವಾಗಿಯೇ ಇಟ್ಟ ನಾಮ ಉಳ್ಳದ್ದೆಂತೂ, ಆರೋಪಿತವೆಂಬ ಸಂಬಂಧ ಮಾತ್ರ ಕಲ್ಪಿತರೂಪವೆಂತಲೂ ತಿಳಿಸುತ್ತಾರೆ, ಜ್ಯೋತಿ ಎಂದು.

ಪರಂಜ್ಯೋತಿರೂಪನಾದ ದೇವರಿಗೆ, ಪೌರುಷವೆಂಬ ಜೀವಯತ್ನವೂ, ಧಾತುವೆಂಬ ಸ್ವರ್ಣಾದಿ–ಲೋಹ ಅಂದರೆ, ಚಿನ್ನ, ಬೆಳ್ಳಿ, ತಾಮ್ರ, ಲೋಹ, ಸೀಸ, ಸತು, ಕಂಚು–ಎಂಬ ಏಳು ವಸ್ತುಗಳು, ಧೈರ್ಯವೆಂಬ ಮನೋನಿಶ್ಚಯ, ಶೌರ್ಯವೆಂಬ ಪರಾಕ್ರಮ, ಔದಾರ್ಯ ವೆಂಬ ದಾತೃತ್ವ, ಚಾತುರ್ಯ ಕುಶಲತೆ, ಮಾತು–ಎಂಬ ವಾಕ್ಪಟುತ್ವ, ಮಾನವೆಂಬ ಮರ್ಯಾದೆ, ಮಹತ್ವವೆಂಬ ದೊಡ್ಡತನ, ಸಹನವೆಂಬ ತಾಳ್ಮೆ, ಸುನೀತಿಯೆಂಬ ನ್ಯಾಯ, ನಿರ್ಮಲದೇಶವೆಂಬ ಪುಣ್ಯಸ್ಥಳ,

ಬ್ರಾಹ್ಮಣನೆಂಬ ಬ್ರಹ್ಮಜ್ಞಾನಿ, ಭೂತಪಂಚಕವೆಂಬ ಪೃಥವ್ಯಾದಿಗಳು, ಬುದ್ಧಿ. ಮೊದಲಾದ ಕರಣಗಳು ಸಹ ಸಾಂಕೇತಿಕರೂಪವೆಂತಲೂ, ಆರೋಪಿತರೂಪವೆಂತಲೂ ಕರಸಿಕೊಳ್ಳುವುವು.

**ಯಥಾ ನಭಸಿ ಮೇಘೌಘಾಃ ರೇಣುರ್ವಾ ಪಾರ್ಥಿವೇನಿಲೇ ।**
**ಏವಂ ದ್ರಷ್ಟರಿ ದೃಶ್ಯತ್ವಮಾರೋಪಿತಮ ಬುದ್ಧಿಭಿಃ ॥**

ಎಂಬ ಭಾಗವತಾರ್ಥ ವಿವರಿಸಿತು. ॥ ೨೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಪರಮಾತ್ಮನು ಜ್ಞಾನಾನಂದಸ್ವರೂಪನು. ಅನಂತ ಕೋಟಸೂರ್ಯಪ್ರಭಾನ್ವಿತನು. ಇದರಿಂದ **ಜ್ಯೋತಿರೂಪಗೆ**–ಎಂದಿದ್ದಾರೆ.

೨. ಲೋಹ, ಮಣ್ಣು, ಶಿಲೆ, ರಸಾದಿವಿಶೇಷಗಳು, ಮಣೀ, ಸೈಕತ, ಮರ–ಇತ್ಯಾದಿಗಳಿಂದ ಮಾಡಲ್ಪಟ್ಟ ಪ್ರತೀಕಗಳು (ಪ್ರತಿಮೆಗಳು) ಒಂಭತ್ತು ವಿಧವಾಗಿವೆ–ಎಂದು ಹಿಂದಿನ **ವಿಭೂತಿಸಂಧಿಯಲ್ಲಿ (ಸಂಧಿ ೫)** ದಾಸರಾಯರು ಪ್ರಸ್ತಾಪ ಮಾಡಿರುತ್ತಾರೆ.

೩. ಇಂತಹ ಪ್ರತಿಮೆಗಳಲ್ಲಿ, ಶ್ರೀ ಪರಮಾತ್ಮನನ್ನು ಆವಾಹಿಸಿ ಪೂಜಿಸಬೇಕು. ಬರೇ ಪ್ರತಿಮೆಗಳು ಜಡವಸ್ತುಗಳು. ಭಗವದಧಿಷ್ಠಾನ ರೂಪವಾದ ಆವಾಹನಾಕ್ರಮವನ್ನು **ಸಾಂಕೇತಿಕ ಆರೋಪ**–ಎಂದಿದ್ದಾರೆ. ಅಂದರೆ, ಪ್ರತಿಮಾದಿಗಳಲ್ಲಿ ಆವಾಹಿತ ಭಗವದ್ರೂಪ.

೪. ಈ ಪ್ರತಿಮೆಗಳೆಲ್ಲವೂ ಶ್ರೀ ಪರಮಾತ್ಮನಿಗೆ (ಜ್ಯೋತಿರೂಪನಿಗೆ) ಜಡ ಪ್ರತೀಕಗಳೆನಿಸುವುವು. ಅಂತಹ ಇವರ ಅಧಿಷ್ಠಾನಭೂತವಾದ ಸ್ಥಾನಗಳನ್ನು ತಿಳಿಸುತ್ತಾರೆ.

೫. **ಸುಪೌರುಷ** – ಪರಾಕ್ರಮ – ಎಂಬ ಗುಣದಲ್ಲಿ ಮತ್ತು ಪರಾಕ್ರಮವಂತರಲ್ಲಿ ಅಧಿಷ್ಠಾನ.

೬. **ಧಾತುಸಪ್ತಾಹ**–ಸ್ಥೂಲದೇಹಗತ ಆವರಣ ರೂಪದಲ್ಲಿರುವ ತ್ವಕ್–ಚರ್ಮ–ಮಾಂಸ–ರಕ್ತ–ಮಜ್ಜಾ–ಮೇದಸ್ಸು–ಅಸ್ಥಿ–ಎಂಬ ಸಪ್ತಧಾತುಗಳು ಅವನ ಅಧಿಷ್ಠಾನಗಳು.

೭. **ಧೈರ್ಯ**–ಧೈರ್ಯವು ಉತ್ತಮವಾದ ಗುಣ. ಕಷ್ಟಕಾಲದಲ್ಲಿ ತಾಳುವ ಧೈರ್ಯ ಅಸಾಧಾರಣ ಧರ್ಮವು. ವೀರರ ಧೈರ್ಯ–ಇವೆಲ್ಲವೂ ಶ್ರೀ ಪರಮಾತ್ಮನ ಅಧಿಷ್ಠಾನಗಳು.

೮. **ಶೌರ್ಯ**–ರಣರಂಗದಲ್ಲಿ ಯೋಧರು ತೋರುವ ಶೌರ್ಯ. ಕಷ್ಟವನ್ನು ಎದುರಿಸಬೇಕಾದಾಗ ಪ್ರಸಂಗದಲ್ಲಿ ತೋರುವ ಶೌರ್ಯ. ಅವನ ಅಧಿಷ್ಠಾನಗಳು.

೯. **ಔದಾರ್ಯ**–ಬೌದ್ಧಿಕ ಕೌಶಲ್ಯ ಮತ್ತು ದಾಕ್ಷ್ಮೆಯಲ್ಲಿ ಭಗವತ್ಸನ್ನಿಧಾನದ ಚಿಂತನ.

೧೧. **ಮಾತು**–ಮೃದುನುಡಿಗಳು, ಜನರನ್ನು ಆಕರ್ಷಿಸುವ ವಾಕ್ಚತುರತೆ.

೧೨. **ಮಾನ**–ನಮಗೆ ಸಲ್ಲುವ ಮರ್ಯಾದೆ ಮತ್ತು ಸಾಮಾಜಿಕ ಸ್ಥಾನಗಳಲ್ಲಿ ಭಗವತ್ ಚಿಂತನೆ.

೧೩. **ಮಹತ್ತ್ವ**–ಅವ್ಯಕ್ತತತ್ತ್ವ–ಮಹತ್ತತ್ವ ಮತ್ತು ಅಹಂಕಾರತತ್ತ್ವ–ಈ ತತ್ತ್ವತ್ರಯಗಳಲ್ಲಿ.

೧೪. **ಸಹನ–ತಾಳ್ಮೆ**–ಎಂಬ ಉದಾತ್ತಗುಣದಲ್ಲಿ ಭಗವದಿಷ್ಠಾನದ ಚಿಂತನೆ.

೧೫. **ಸುನೀತಿ**–ಶಾಸ್ತ್ರಗಳಲ್ಲಿ ಉಕ್ತವಾಗಿರುವಂತೆ ನಡೆಯುವ ಸುಮಾರ್ಗ–ನಡೆ–ಆಚಾರ ವ್ಯವಹಾರ ಪ್ರಸಂಗಗಳು.

೧೬. **ನಿರ್ಮಲದೇಶ**–ಪರಿಶುದ್ಧವಾಗಿರುವ ಸ್ಥಳ

೧೭. **ಬ್ರಾಹ್ಮಣ**–ಜ್ಞಾನಿಯಾದ ಬ್ರಾಹ್ಮಣನಲ್ಲಿ ವಿಶೇಷ ವಿಭೂತಿರೂಪ. ಇದಕ್ಕೆ "ವಿಪ್ರ"ನೆಂತ ಹೆಸರು.

೧೮. **ಭೂತಪಂಚಕ**–ಪಂಚತನ್ಮಾತ್ರಾಸಹಿತವಾದ ಆಕಾಶ–ವಾಯು–ತೇಜಸ್ಸು–ಅಪ್ಪು–ಪೃಥಿವೀ–ಎಂಬ ಪಂಚಭೂತಗಳು.

೧೯. **ಬುದ್ಧೀ**–ವಿವೇಚನಾಶಕ್ತಿಯಳ್ಳ ಬುದ್ಧಿಶಕ್ತಿ ಮತ್ತು ಮನಸ್ಸು ಆದಿ ಏಕದಶೇಂದ್ರಿಯಗಳು. ಇವೆಲ್ಲವೂ ಶ್ರೀ ಪರಮಾತ್ಮನ ಅಧಿಷ್ಠಾನ ವಿಶೇಷಗಳೆಂದು ತಿಳಿಯಬೇಕು. ॥ ೨೧ ॥

## ಪದ್ಯ-೨೨

**ಮೂಲ :**

**ಜೀವರಾಶಿಯೊಳಮೃತ ಶಾಶ್ವತ ।**
**ಸ್ಥಾವರಗಳೊಳು ಸ್ಥಾಣುನಾಮಕ ।**
**ನಾವಕಾಲದಲಿಪ್ಪನಜಿತಾಂತನೆಂದೆನಿಸಿ ॥**
**ಗೋವಿದಾಂಪತಿ ಗಾಯನಪ್ರಿಯ ।**
**ಸಾವಯುವ ಸಾಹಸ್ರನಾಮ ಪ ।**
**ರಾವರೇಶ ಪವಿತ್ರಕರ್ಮ ವಿಪಶ್ಚಿತನು ಸಾಮ ॥ ೨೨ ॥**

**ಅವತರಣಿಕೆ :**

ಶ್ರೀಪರಮಾತ್ಮನ ಮಹಾಮಹಿಮೆಗಳನ್ನು ಇನ್ನೂ ವಿಸ್ತಾರವಾಗಿ ಹೇಳುತ್ತಾರೆ. ॥ ೨೨ ॥

**ಪ್ರತಿಪದಾರ್ಥ :**

**ಅಮೃತ** = ಮರಣರಹಿತವಾದ, **ಜೀವರಾಶಿಯೊಳು** = ಸೃಜ್ಯಾಸೃಜ್ಯ ಜೀವಸಮೂಹದಲ್ಲಿ, **ಶಾಶ್ವತ** = ನಿತ್ಯನಾಗಿ (ಅವಿಯೋಗನಾಗಿ), **ಸ್ಥಾವರದೊಳು** = ಸ್ಥಾವರವಸ್ತುಗಳಲ್ಲಿ **ಸ್ಥಾಣುನಾಮಕ** = "ಸ್ಥಾಣು"-ಎಂಬ ಹೆಸರಿನಿಂದ ಕರೆಯಿಸುತ್ತಾನೆ. **ಆವ ಕಾಲದಲಿಪ್ಪ** = ಅನಾದಿಕಾಲದಿಂದ ಇದ್ದಾನೆ. ಅಜಿತ **ಅನಂತನೆಂದೆನಿಸಿ** = ಅಂತಹ ಸ್ಥಾಣುನಾಮಕನು ಅಜಿತನೆಂತಲೂ ಕರೆಯಿಸುವನು. **ಗೋವಿದಾಂಪತಿ** = ವೇದವಿದರಿಗೆ ಪ್ರಭುವಾದವನು (ಗೋ-ವೇದಗಳು, ಗೋವಿದ-ವೇದಗಳನ್ನು ಅರಿತ ಬ್ರಹ್ಮಜ್ಞಾನಿಗಳು). **ಗಾಯನಪ್ರಿಯ** = ಸಂಗೀತಪ್ರಿಯನಾದ, **ಸಾವಯವ** = ಸರ್ವಾಧಿಷ್ಠಾನಗಳಲ್ಲಿ ಸಾಕಾರನಾಗಿ, ಅಂತರ್ಯಾಮಿಯಾಗಿರುವ, **ಸಾಹಸ್ರನಾಮ** = ಅನಂತನಾಮವುಳ್ಳ (ಸಹಸ್ರ-ಎಂದರೆ, ಅನಂತ-ಎಂದರ್ಥೈಸಬೇಕು) **ಪರಾವರೇಶ** = ಬ್ರಹ್ಮಾದಿಗಳಿಗೆ ಉತ್ತಮವಾದ ರಮಾ

ದೇವಿಯರಿಗೂ ನಿಯಾಮಕನಾದವ (ಪರ–ಬ್ರಹ್ಮ, ಪರಾವರ–ಲಕ್ಷ್ಮೀ), **ಶುಚಿತ್ರಕರ್ಮ** = ನಿರ್ದೋಷವ್ಯಾಪಾರವುಳ್ಳವನಾಗಿ, (ಭಗವದ್ವ್ಯಾಪಾರಗಳೆಲ್ಲವೂ ಸರ್ವದೋಷರಹಿತವು). **ವಿಪಶ್ಚಿತನು** = ಜ್ಞಾನಸ್ವರೂಪನು, **ಸಾಮ** = ಸಾಮಗಾನಪ್ರಿಯನಾಗಿದ್ದಾನೆ. ॥ ೨೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮ ಮಾಹಾತ್ಮ್ಯ ಹೇಳುತಾರೆ.

ಮೃತರಹಿತವಾದ ಸಜ್ಯಾಸೃಜ್ಯ ಜೀವರ ಸಮೂಹದೊಳು, ಅವಿಯೋಗನಾಗಿ ಶಾಶ್ವತನಾಗಿರುತ್ತಾನಾದ್ದರಿಂದ ಶ್ರೀಪರಮಾತ್ಮ ಶಾಶ್ವತ–ಎಂತ ಕರಸತಾನೆ. ಸ್ಥಾವರ ಸಾಂಕೇತವಾದ ಪಂಚಭೂತಾತ್ಮಕ ಸ್ಥಾವರಗಳಿಂದ ನಿರ್ಮಿತವಾದ ಸ್ಥೂಲಶರೀರಗಳೊಳು, ಸ್ಥಾಣು–ಎಂಬ ನಾಮದಿಂದ ಕರಸತಾನೆ. ಜೀವರಲ್ಲಿ ಉಪಾದಾನ ಮೂಲಜಡಪ್ರಕೃತಿಯಲ್ಲಿ ಅನಾದಿಕಾಲದಿಂದ ಇದ್ದಾನೆ. ಈ ಪ್ರಕಾರ ಇರುವಂಥ, ಪೂರ್ವೋಕ್ತ ಪ್ರಕೃತಿ ನಿರ್ಮಿತ ದೇಹದಲ್ಲಿದ್ದು, ಸ್ಥಾಣುನಾಮಕನೆಂಬ ಕರಸತಾನೆ. ಅನ್ಯರಿಂದ ತಾನು ಸೋಲದೇ ಅಪರಿಚ್ಛಿನ್ನಪರಾಕ್ರಮಿ ಎಂತೆನಿಸಿ, ಇನ್ನೂ ಎಂಥಾವನೆಂದರೆ, ವೇದಾರ್ಥಗಳ ನಿರ್ದೋಷವಾಗಿ ತಿಳಿದವರಿಗೆ ಯಜಮಾನನಾದವನು, ತನ್ನ ಮಾಹಾತ್ಮ್ಯವನ್ನ ಗಾನಮಾಡತಕ್ಕವರಿಗೆ ಪ್ರೀತನಾದವನು, ಸರ್ವಾಧಿಷ್ಠಾನದಲ್ಲಿ **ಸರ್ವತಃ ಪಾಣಿ ಪಾದಾಭ್ಯಾಂ** ಎಂಬ ವಚನಾನುಸಾರ, ತನ್ನ ಸಾಕಾರರೂಪದಿಂದ ಅಂತರ್ಯಾಮಿಯಾಗ ಇರತಕ್ಕವ, ಅನಂತನಾಮ ಉಳ್ಳವ, ಬ್ರಹ್ಮಾದಿಗಳಿಗೆ ಉತ್ತಮರಾದ ರಮಾದೇವರಿಗೆ ಸ್ವಾಮಿಯಾದವ. ತನ್ನ ಭಕ್ತರ ಪಾಪಗಳ ಪರಿಹಾರ ಮಾಡತಕ್ಕ ಶುದ್ಧವಾದ ವ್ಯಾಪಾರವುಳ್ಳವ. ಜ್ಞಾನಿರೂಪಯಾದವ. **ವೇದಾನಾಂ ಸಾಮವೇದೋಽಸ್ಮಿ**–ಎಂಬ ವಚನಾನುಸಾರ, ಸಾಮಗಾನ–ಪ್ರಿಯನಾದವನು ಎಂತ ತಾತ್ಪರ್ಯ. ॥ ೨೨ ॥

೨. ಭಾವಪ್ರಕಾಶಿಕೆ

ಯಾವಾಗಲೂ, ಯಾರಿಂದಲೂ ಸೋಲದವನಾದುದರಿಂದ, ಅಜಿತನೆಂದು ಹೆಸರು. ಜೀವರಾಶಿಯೊಳಗೆ ಅಮೃತನೆಂಬ ಹೆಸರಿನಿಂದ ಶಾಶ್ವತವಾಗಿ ಇರುವನು. ಸ್ಥಾವರಗಳಲ್ಲಿ ಸ್ಥಾಣುನಾಮಕನಾಗಿ, ಸರ್ವಕಾಲದಲ್ಲೂ ಇರುವನು. ಮಿಕ್ಕಪದಗಳಿಗೆ ಅರ್ಥವು ಪದ್ಯಾರ್ಥದಲ್ಲಿ ವಿವರಮಾಡಲ್ಪಟ್ಟಿದೆ. ॥ ೨೨ ॥

೩. ಭಾವದರ್ಪಣ

"ಜೀವೇತಿ"– ॥ ಅಮೃತ–ಮೃತಿರಹಿತ. ಶಾಶ್ವತ–ಶಶ್ವದೇವ ಪ್ರಕಾರ ಇರತಕ್ಕ ಶ್ರೀಹರಿ, ಗೋವಿಂದಾಪತಿ–ಎಂದರೆ, ಗೋ–ವೇದವಾಕ್ಯಗಳನ್ನು ವಿದಾ–ತಿಳಿದಂಥ, ಜ್ಞಾನಿಗಳಿಗೆ ಪತಿ ಎಂಬರ್ಥ । ಸಾವಯವ–ಕರಚರಣಾದ್ಯವಯವಗಳಿಂದ ಸಹಿತನಾದಂಥವ ಎಂಬರ್ಥ. ॥ ೨೨ ॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

"ಜೀವ"–ಇತಿ ॥ ಅಮೃತ–ಓಂ ಯುಧ್ಮೋ ಅನರ್ವಾ ಖಜಕತ್ವಮದ್ವಾಶೂರಃ ಸತ್ರಾಷಾಟ್ ಜನುಷೇ (ಮ) ಮಾಷಾಹಂ ವ್ಯಾನ ಇಂದ್ರಃ ಪೃತನಾಸ್ಸ್ರೋಜಾ ಅಥ ವಿಶ್ವಮ್ ಓಂ ॥ ನಮೃತಃ–ಅಮೃತಃ ॥

"ಶಾಶ್ವತ"–ಓಂ ಶಶ್ವಾಯಂತೇ ಓಘಾನ ಉಭೇ ಚಂದಿದ್ರ ರೋದಸೀ ಮಹಿತಾ ಪಪ್ರಾದ ತವಿಕ್ಷೀ ಭಾನ್ತುವಿಷ್ಮಃ ನಿವಜ್ರಮಿಂದ್ರೋ ಹರಿವಾನ್ ಓಂ ॥ ಶಶ್ವದೇಕ ಪ್ರಕಾರೇಣ ವರ್ತತೇ ಇತಿ ॥

"ಸ್ಥಾಣು"–ಓಂ ವಿಮಕ್ಷನ್ ಸಮಂಧಸಾ ಮದೇಷು ಗಾ(ವಾ) ಉವೋಚ ವೃಷಾ ಜಜಾನ ವೃಷಣೇ ರಣಾಯತಮು ಚಿನ್ನಾರೀನರ್ಮಂ ಸಸೂವಪ್ರಥಃ ಓಂ ॥ ಸರ್ವಜೀವೇಷು ಸಂತಿಷ್ಠತೇ ಇತಿ ಸ್ಥಃ ॥ ಅ ಸಮ್ಯಕ್ಣಂ ಆನಂದೋ ಯಸ್ಯ ಸಃ–ಅಣುಃ ॥ ಸಚಾಸೌ ಸ ತಥೋಕ್ತಃ॥

"ಗೋವಿದಾಂಪತಿ"–ಓಂ ತದ್ಯತುಥಾ ವಿಮೋಚದ್ಧ ಸದಿದ್ಧಿ ತೇಷು ವಿಜಾತಸ್ಯ ಮನ್ಸೇ ಸಹ ಸಹಿಷ್ಠ ತುರತಸ್ತುರಸ್ಯ ಉಗ್ರಮುಗ್ರಸ್ಯ ತವಸಃ ಓಂ ॥ ಗೋವಿಂದಾಂ ತೇಜಸ್ವಿನಾಂ ಪತಿಃ ॥

**"ಸಾಮಗಾಯನಃ"**–(ಗಾಯನಪ್ರಿಯ) ಓಂ ವಿದುಷ್ಟೇ ತಸ್ಯ ಮೇಧಿರಾಸ್ತೇಷಾಂ ಶ್ರೀವಾಂಸ್ಕುತ್ತಿರ ಇಂದ್ರಮೀಶಾನ ಮೋಜಸಾಭಿಸ್ತೋಮಾ ಅನೂಷತ ಸಹಸ್ರಂ ಮಸ್ಯ ರಾತಯಃ ಓಂ ॥ ಸಾಮಾನಿ ಸ್ತೋಮ ವಿಶೇಷಾಃ ಗಾಯಂತಿ (ತೇ) ಅಸ್ಮಿನ್ ಇತಿ–ಸಾಮಗಾಯನಃ ॥

**"ಸು–ಸಾಮ"**–ಓಂ ಉದ್ರೀವ ವಜ್ರಿನ್ನವತೋ ವಸುತ್ವನಾ ಸದಾ ಪೀವೇಥೇ ದಾಶುಷೇ ಯುದ್ಧನೂನಂ ಪರಾವತಿ ಯದ್ವಾ ಪೃಥಿವ್ಯಾಂ ದಿವಿ ಓಂ ॥ ಅಧೀಷ್ಟಾನಿ ಸತಿ ದದಾತಿ–ಇತಿ ಸಾಮ ॥ ೨೨ ॥

## ಕನ್ನಡಾರ್ಥ

**"ಅಮೃತ"**–ಮರಣರಹಿತನು ॥ **"ಶಾಶ್ವತ"**–ಯಾವಾಗಲೂ ಏಕ ಪ್ರಕಾರವಾಗಿ ನಿರ್ವಿಕಾರನಾಗಿ ಇರುವವನು.

**"ಸ್ಥಾಣು"**–ಸರ್ವಜೀವರಲ್ಲಿ ಇರುವವನು ಮತ್ತು ಪೂರ್ಣಾನಂದ ಮಯನು.

**"ಗೋವಿಂದಾಂಪತಿ"**–ತೇಜಸ್ವಿಗಳಿಗೆ ಪತಿಯು. ಸಾಮಗಾಯನ ಸ್ತೋಮಗಳೆಂಬ ಸಾಮಗಳಿಂದ ಹಾಡಲ್ಪಡುವವನು ಸಾಮಗಾಯನ ಪ್ರಿಯನು.

**"ಸುಧಾಮ"**–ಸಜ್ಜನರಿಗೆ ಅಭೀಷ್ಟಗಳನ್ನು ಪೂರೈಸುವವನು ॥೨೨॥

**ಶ. ಶ್ರೀಗುರುಹೃದಯಪ್ರಕಾಶಿಕೆ**

ಅಜಿತಾದ್ಯನಂತರೂಪಸ್ಮರಣೋಪಾಸನೆ ತಿಳಿಸುತ್ತಾರೆ – ಜೀವ ಎಂದು. ಅನಂತಜೀವರಾಶಿಯಲ್ಲೂ ಅಮೃತ–ಎಂದರೆ, ಮರಣಾದಿದೋಷ ರಹಿತನೆಂತಲೂ, ಶಾಶ್ವತ–ಎಂದರೆ, ಒಂದೇ ಪ್ರಕಾರ ಇರುವನೆಂತಲೂ, ಸ್ಥಾವರವೆಂಬ ವೃಕ್ಷಾದಿ ಜಡಗಳಲ್ಲಿ ಸ್ಥಾಣು–ಎಂದು ಹೆಸರುಳ್ಳವನಾಗಿಯೂ, ಅಜಿತಾದ್ಯನಂತಮೂರ್ತಿ ಎನಿಸಿ, ಸದಾ ಇರುವನು. ಗೋವಿದಾಂಪತಿ–ಎಂದರೆ, ವೇದಜ್ಞರ ಅರಸನು,

ಗಾಯನಪ್ರಿಯ ಅಂದರೆ ಸ್ತುತಿಗಳಿಂದ ಸಂತುಷ್ಟನು. ಸಾವಯವ ಎಂದರೆ ಜ್ಞಾನಾನಂದಾತ್ಮಕ ಸಮಗ್ರ ಶರೀರನು, ಅನಂತ ಹೆಸರುಳ್ಳವನು, ಪರಾವರೇಶ–ಅಂದರೆ, ಶ್ರೇಷ್ಠ ಕನಿಷ್ಠರಿಗೆಲ್ಲಾ ಸ್ವಾಮಿಯು. ಪಾವನ ಚರಿತ್ರನು, ವಿಪಶ್ಚಿತ ಸುಧಾಮ–ಅಂದರೆ, ಜ್ಞಾನಿಗಳಿಗೆ ಮುಖ್ಯಾಶ್ರಯನು –ಎಂದು ಸ್ಮರಿಸಬೇಕೆಂದರ್ಥ. ॥ ೨೨ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಅನಂತಾನಂತ ಜೀವರಾಶಿಗಳಲ್ಲಿ ನಾನಾ ನಾಮಾತ್ಮಕನಾಗಿದ್ದುಕೊಂಡು, ಅವುಗಳನ್ನು ಸಂರಕ್ಷಿಸುತ್ತಿರುತ್ತಾನೆ.

೨. ಚತುರ್ವಿಧನಾಶವಿಲ್ಲದಿರುವ, ಸದಾ ನಿತ್ಯನಾಗಿಯೂ ಸತ್ಯನಾಗಿಯೂ, ಶಶ್ವದೇಕಪ್ರಕಾರನಾಗಿರುವುದರಿಂದ, ಶ್ರೀ ಪರಮಾತ್ಮನಿಗೆ **ಶಾಶ್ವತನೆಂದು** ಹೆಸರು.

ಸಕಲಜೀವರ ನಿತ್ಯತ್ವವು ಶಾಶ್ವತನಾಮಕನಾದ ಬಿಂಬನ ಅಧೀನವು.

೩. ವೃಕ್ಷಾದಿಸ್ಥಾವರ ಜೀವರಾಶಿಗಳಲ್ಲಿ ಸ್ಥಾಣುನಾಮಕನಾಗಿದ್ದಾನೆ. ಪೂರ್ಣಾನಂದಮಯನಾಗಿರುವುದರಿಂದ "**ಸ್ಥಾಣು**" ನಾಮಕನು.

೪. ಜನನ ಮರಣ ವಿದೂರನಾಗಿರುವುದರಿಂದ, **ಅಮೃತ**–ಎಂತ ಅವನ ನಾಮ. ಅಮೃತನಾಮಕನಾದ ಶ್ರೀಪರಮಾತ್ಮನು ಜೀವರ ಬಿಂಬರೂಪನಾಗಿದ್ದಾನೆ.

೫. ಯಾರಿಂದಲೂ ಗೆಲ್ಲಲು ಅಸಾಧ್ಯನಾಗಿರುವುದರಿಂದ, **ಅಜಿತನಾಮಕನಾಗಿ**, ಸುಜೀವರನ್ನು ನಿಯಂತ್ರಿಸುತ್ತಿರುವನು.

೬. **ಗೋ**–ಎಂದರೆ ವೇದಗಳ ಸಮೂಹ. **ವಿದ**–ವೇದಗಳನ್ನು ಬಲ್ಲ ಬ್ರಹ್ಮಜ್ಞಾನಿಗಳು. ಅವರಿಗೆ ಪ್ರಭುವಾಗಿರುವುದರಿಂದ, **ಗೋವಿಂದಾಪತಿ ನಾಯಕನು**.

೭. ಸಾಮಗಾಮಪ್ರಿಯನಾಗಿರುವುದರಿಂದ, **ಗಾಯನಪ್ರಿಯನು** ಸಾಮವಾದದಿಂದ ಗೇಗೀಯಮಾನನು.

೮. ಸಾಕಾರನಾಗಿ ಕಂಚರಣಾದ್ಯವಯವಗಳಿಂದ ವಿರಾಜಮಾನ ನಾಗಿರುವುದರಿಂದ, **ಸಾವಯವ ನಾಮಕನು**.

೯. ವಿಶ್ವಾದಿ ಸಹಸ್ರನಾಮಗಳಿಂದ ವೇದ್ಯನು. ಅಲ್ಲದೇ "ಸಾಹಸ್ರ"-ಎಂಬುದಕ್ಕೆ "ಅನಂತ" ಎಂತಲೂ ಹೆಸರು. ಅಂದರೆ, ಅನಂತ ನಾಮಾತ್ಮಕನು.

೧೦. **ಪರ**-ಬ್ರಹ್ಮಾದಿದೇವತೆಗಳು. ಪರ-ಬ್ರಹ್ಮಾದಿಗಳಿಂದ ಉತ್ತಮರಾದ ಲಕ್ಷ್ಮೀದೇವಿಯರು ರಮಾಬ್ರಹ್ಮಾದಿಗಳಿಗೆ ನಿಯಾಮಕ ನಾಗಿರುವುದರಿಂದ, **ಪರಾವರೇಶನು**.

೧೧. ಪವಿತ್ರ ಚರಿತ್ರನಾದ್ದರಿಂದ, **ಪವಿತ್ರ ಕರ್ಮನಾಮಕನು**.

೧೨. ಜ್ಞಾನಿಗಳಿಗೆ ಮುಖ್ಯ ಆಶ್ರಯನಾಗಿರುವುದರಿಂದ-**ವಿಪಶ್ಚಿತನು**.

೧೩. ಸಂಗೀತಪ್ರಿಯನಾದ್ದರಿಂದ-**ಸಾಮನಾಮಕನು**. ॥ ೨೨ ॥

## ಪದ್ಯ-೨೩

**ಮೂಲ :**

**ಮಾಧವನ ಪೂಜಾರ್ಥವಾಗಿ ನಿ ।**
**ಷೇಧಕರ್ಮವ ಮಾಡಿ ಧನ ಸಂ ।**
**ಪಾದಿಸಲು ಸತ್ಪುಣ್ಯ ಕರ್ಮಗಳೆನಿಸಿಕೊಳುತಿಹವು ।.**
**ಸ್ಯೋದರಂಭರಣಾರ್ಥ ನಿತ್ಯದಿ ।**
**ಸಾಧುಕರ್ಮವ ಮಾಡಿದರು ಸರಿ ।**
**ಐದುವನು ದೇಹಾಂತರವ ಸಂದೇಹವಿನಿತಿಲ್ಲ ॥ ೨೩ ॥**

**ಅವತರಣಿಕೆ :**

ಶ್ರೀಹರಿಯ ಪ್ರೀತ್ಯರ್ಥವಾಗಿ ಸೇವಾ ಮಾಡುತ್ತಿರುವಾಗ, ನಿಷೇಧಕರ್ಮಗಳನ್ನು ಕಾರಣಾಂತರಗಳಿಂದ ಮಾಡಿದರೂ, ಅದರಿಂದ ಸಾಧಕನಿಗೆ ಬಾಧಕವಿಲ್ಲವೆಂದು ಹೇಳುತ್ತಾರೆ. ॥ ೨೩ ॥

**ಪ್ರತಿಪದಾರ್ಥ :**

**ಮಾಧವನ ಪೂಜಾರ್ಥವಾಗಿ** = ಶ್ರೀಪರಮಾತ್ಮನ ಹಾಗೂ ಭಗವದ್ಭಕ್ತರ ಆರಾಧನಾ ಮಾಡುವ ಉದ್ದೇಶ್ಯದಿಂದ, **ನಿಷೇಧಕರ್ಮಮಾಡಿ** = ವಿಧಿಬಾಹಿರವಾದ ಕಾರ್ಯಗಳನ್ನು ಮಾಡಿ, **ಧನ ಸಂಪಾದಿಸಲು** = ತನ್ಮೂಲಕ ದ್ರವ್ಯಾರ್ಜನೆ ಮಾಡಲು, **ಸತ್ಪುಣ್ಯಕರ್ಮಗಳು ಎನಿಸಿಕೊಳುತಿಹವು**= ಅಂತಹ ನಿಷೇಧರೂಪವಾದ ಕರ್ಮಗಳೂ ಸತ್ ಪುಣ್ಯಕರ್ಮಗಳೆನಿಸಿ ಪುಣ್ಯಫಲಪ್ರದವಾಗವುವು. **ಸ್ಯೋದರರಂಭಣಾರ್ಥ** = ಸದಾ ಸಂಸಾರದ ಮೋಹದಲ್ಲಿ ಸಿಲುಕಿ, ಪತ್ನೀಪುತ್ರಾದಿಗಳನ್ನು ಸಾಕುವುದಕ್ಕಾಗಿ, (ಉದರಂಭರಣಾರ್ಥ), **ನಿತ್ಯದಿ** = ನಿರಂತರವಲ್ಲೂ, **ಸಾಧುಕರ್ಮವ ಮಾಡಿದರು** = ಬರಿ ಸಜ್ಜನರಂತೆ ನಟನೆ ಮಾಡಿ, ಕೇವಲ ಡಾಂಭಿಕವಾಗಿ, ದ್ರವ್ಯಾರ್ಜನೆ ಮಾಡಿದರೂ, **ದೇಹಾಂತರವ ಐದುವನು** =

ನರಕಾದ್ಯನರ್ಥಗಳನ್ನು ಅನುಭವಿಸಿ, ತದನಂತರ ಅನೇಕ ಜನ್ಮಗಳನ್ನು ಧರಿಸಿ ದುಃಖಪಡುವನು. **ಸಂದೇಹವಿನಿತಿಲ್ಲ**= ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲ–ಎಂದು ಹೇಳುತ್ತಾರೆ. ಅಂದರೆ, ಯಾವ ಕರ್ಮ ಮಾಡಿದರೂ, ಕೇವಲ "ವಿಷ್ಣುಪ್ರೇರಣೆಯಾ ವಿಷ್ಣು ಪ್ರೀತ್ಯರ್ಥಂ"–ಎಂಬ ಜ್ಞಾನಾನುಸಂಧಾನದಿಂದ ಆಚರಿಸಬೇಕೆಂದು ಮುಖ್ಯ ತಾತ್ಪರ್ಯ ॥ ೨೩ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದೇವಬ್ರಾಹ್ಮಣರ ಪೂಜಾರ್ಥವಾಗಿ ನಿಷೇಧರ್ಮವನ್ನು ಆಚರಿಸ ಬಹುದೆಂದು ಹೇಳತಾರೆ.

ಶ್ರೀಪರಮಾತ್ಮನ, ಅವನ ಭಕ್ತರ ಆರಾಧನ ಮಾಡೋ ಉದ್ದಿಶ್ಯದಿಂದ, ಅಂದರೆ, ಉದ್ದಿಶ್ಯವಾಗಿ ಅಂದರೆ ಬ್ರಾಹ್ಮಣರಿಗೆ ನಿಷಿದ್ಧವಾದ ಕೃಷಿ, ವ್ಯಾಪಾರವೇನು, ಕ್ಷಾತ್ರಧರ್ಮ ವ್ಯಾಪಾರವೇನು, ಈ ಕಾರ್ಯಗಳ ಮಾಡಿ, ಇದರಲ್ಲಿ ಶುದ್ಧವಾಗಿ ಪ್ರಾಣಿಹಿಂಸಾ ಮೊದಲಾದ ಅಕೃತ್ಯ ಮಾಡಧಾಂಗೆ, ದ್ರವ್ಯಾರ್ಜನಿ ಮಾಡಲು, ಈ ಕಾರ್ಯಗಳು ಪುಣ್ಯಕರ್ಮಗಳಾಗತವೆ. ಹ್ಯಾಂಗೆಂದರೆ, ಈ ದ್ರವ್ಯಗಳಿಂದ ಶ್ರೀಪರಮಾತ್ಮನ್ನ, ಅವನ ಭಕ್ತರ ಪೂಜಾದಿಗಳ ಅಹಂಮಮತಾ ರಹಿತನಾಗಿ, ಶ್ರೀಶನಪ್ರೇರಣಾನುಸಾರ ಮಾಡತೇನೆಂಬ ಜ್ಞಾನವಿರತದೆ. ಆದಕಡಿಯಿಂದಲೂ ಕೊಡುವವನು, ತೆಗೆದುಕೊಂಬುವನು ಶ್ರೀಪರಮಾತ್ಮನು–ಎಂತ ಜ್ಞಾನವಿರುವುದರಿಂದಲೂ ಈ ಕಾರ್ಯಗಳು ಪುಣ್ಯಕರ್ಮಗಳೇ ಆಗಿ ಮಹಾಫಲಕ್ಕೆ ಕಾರಣವಾಗತವೆ. ಸದಾ ಕೇವಲ ಸಂಸಾರದಲ್ಲಿ ಲೋಲನಾಗಿ, ಅಹಂ ಮಮತಾಜ್ಞಾನಯುಕ್ತನಾಗಿ, ಡಾಂಭಿಕತನದಿಂದ ಜನಮೆಚ್ಚಿಗೆಗಾಗಿ ದೇವರಲ್ಲಿ ಭಗವದ್ಭಕ್ತರಲ್ಲಿ ಉದಾಸೀನಜ್ಞಾನದಿಂದ ತನ್ನ ಪತ್ನೀಪುತ್ರಾದಿಗಳೂ, ತಾನೂ

ಬದುಕಬೇಕೆಂಬ ಕೇವಲ ಕಪಟಂದ ಯುಕ್ತನಾಗಿ, ವೇದೋಕ್ತಾನುಸಾರ ನಿರ್ಬಂಧವಾಗಿ ಭಗತ್ಪೂಜಾಜಪತಪಾದಿಗಳು ಮಾಡಿ, ಬಹಿಃ, ಸಜ್ಜನರ ನಟನೆಯಂತೆ ತೋರತ, ದ್ರವ್ಯಾರ್ಜನಿಮಾಡಿ, ಸಾಧನ ಮಾಡಿದರೆ, ಇದರಿಂದ ನರಕಾದ್ಯನರ್ಥಗಳು ಅನುಭವಿಸಿ, ಮತ್ತು ಜನ್ಮಗಳ ಧರಿಸಿ ದುಃಖಪಡತಾ ಇರತಾನೆ. ಆದಕಡಿಯಿಂದ, ಈ ವಿಷಯಕ್ಕೆ ಸಂದೇಹವಿಲ್ಲೆಂತ ತಾತ್ಪರ್ಯ. ॥ ೨೩ ॥

**ವಿಶೇಷಾರ್ಥ** : ನಿಷೇಧರ್ಮವ ಮಾಡಿ ಎಂದರೆ, ಬ್ರಾಹ್ಮಣಗೆ ಹೇಳಿರುವ ವಿಧಿಗಳೊಳಗೆ ಮುಖ್ಯವಾಗಿ ಮಾಡತಕ್ಕದ್ದನ್ನು ಮಾಡದೇ, ನಿಷಿದ್ಧಪದಾರ್ಥಗಳ ಭೋಜನ, ಅಗಮ್ಯಾಗಮನ ಮೊದಲಾದ್ದು ಮಾಡಿ ಭಗವದಾರಾಧನ ಮಾಡಧಾಂಗೆ ಸ್ನಾನ ಪೂಜಾದಿಗಳು ತಪ್ಪಿದರೂನೂ ಪರಮಾತ್ಮನಲ್ಲಿ ತದ್ಭಕ್ತರಲ್ಲಿ ದ್ವೇಷ–ಉದಾಸೀನವಿಲ್ಲದೆ ಸಂಸಾರಿಕ ಧರ್ಮದಿಂದ ಇರುವುದೂನು

**ವೃದ್ಧೌ ಚ ಮಾತಾಪಿತರೌ ಪುತ್ರಾಃ ಕೇವಲ ಬಾಲಿಶಾಃ ।**
**ಅಪ್ಯಕಾರ್ಯಶತಂ ಕೃತ್ವಾ ಭರ್ತವ್ಯಾ ಮನುರಬ್ರವೀತ್ ॥**

ಎಂಬ ಪ್ರಮಾಣಾನುಸಾರ ಅರ್ಥದಿಂದ ಅನುಸಂಧಾನಯುಕ್ತನಾಗಿ ಪ್ರವರ್ತಿಸಬೇಕು ಎಂತ ತಾತ್ಪರ್ಯ ॥ ೨೩ ॥

**೨. ಭಾವಪ್ರಕಾಶಿಕೆ**

ಭಗವತ್ಪ್ರೀತಿಗೋಸ್ಕರವಾಗಿ ದೇವಾಲಯ, ಉದ್ಯಾನವನ ಮೊದಲಾದವುಗಳನ್ನು ರಚಿಸುವ ಉದ್ದೇಶಮಾಡಿ ಯೋಚನಾದಿಗಳನ್ನು ಮಾಡಿ, ಯಥೇಷವಾಗಿ ಧನಸಂಪಾದನೆ ಮಾಡಿ ಆ ಸತ್ಕಾರ್ಯಗಳನ್ನು ಭಗವತ್ಪ್ರೀತಿಗಾಗಿ ಮಾಡಿದರೆ ಅವು ಸತ್ಕಾರ್ಯವೆಂದನಿಸಿಕೊಳ್ಳುವುವು. ಮನಸ್ಸಿನಲ್ಲಿ ನನ್ನ ದೇಹ ಪೋಷಣೆ ನಿಮಿತ್ತವನ್ನು ಇಟ್ಟುಕೊಂಡು ಬ್ರಾಹ್ಮಣ ಭೋಜನಾದಿ ನಿಮಿತ್ತವನ್ನು ಹೊರಗೆ ತೋರಿಸಿ ಹಣ ಸಂಪಾದನವನ್ನು ಮಾಡಿ ಬ್ರಾಹ್ಮಣ ಸಂತರ್ಪಣೆ ಮೊದಲಾದವುಗಳನ್ನು ಮಾಡಿದರೂ,

ಪಾಪ ಕರ್ಮದ ಫಲವಾದ ಮತ್ತು ಜನ್ಮವನ್ನು ಹೊಂದುವದು, ಸಾಯುವದು ಈ ಫಲವೇ ಪ್ರಾಪ್ತಿಯಾಗುವದು. ಆದುದರಿಂದ ಯಾವ ಕರ್ಮವನ್ನು ಮಾಡಿದರೂ ಭಗವತ್ಪ್ರೀತಿಗಾಗಿ ಮಾಡಬೇಕೆಂಬ ತಾತ್ಪರ್ಯ. ॥ ೨೩ ॥

**೩. ಭಾವದರ್ಪಣ**

ಪರರಿಂದ ನಿರ್ಮಿತವಾದಂಥ ಆರಾಮಾದಿಗಳಲ್ಲಿದ್ದಂಥ ಧನರೂಪೀ ಫಲಪುಷ್ಪಾದಿಗಳನ್ನು ತನ್ನಮನಸಾ ಧ್ಯಾನಮಾಡಿ, ಅನುಸಂಧಾನಪೂರ್ವಕ ಸ್ವಬಿಂದಾರ್ಪಣೆ ಮಾಡಿದ್ದು, ಇತರರಿಗೆ ನಿಷೇಧವೆಂತ ತೋರುತ್ತದೆ. ಅದು ಸರ್ವಥಾ ನಿಷೇಧವಲ್ಲ. ತದುಕ್ತಂಚ **ವಿಜಯರಾಜೈಃ** :

"ನರರಿಂದ ನಿರ್ಮಿಸಿದ ಉಪವನಾದಿಗಳಲ್ಲಿ । ಪರಿಪರಿ ಇಪ್ಪಂಥ ಪುಷ್ಪಫಲದಿಗಳು । ಹರುಷಾದಿ ತಂದು ನೀನು ಹರಿಪದಕರ್ಪಿಸಲು । ಹರುಷ ಪಡುವಾನು ಹನಿಗೌಸನು ನಿನ್ನ ॥" ಎಂದು **ಪೂಜಾಸುಳಾದಿಯಲ್ಲಿ** ಪರಮರಹಸ್ಯ ತಿಳಿಸಿದರಾದ ಪ್ರಯುಕ್ತ ಇದು ನಿಷೇಧವಲ್ಲ. ಏಕೆಂದರೆ, ಈ ವಿಜಯರಾಜರ ವಚನವು ಕೇವಲ ಮನಸಿನ ಕ್ರಿಯೆಯನ್ನು ಮಾತ್ರ ಹೇಳುತ್ತದೆ. ಆದರೆ, ಕಲಿಯುಗದಲ್ಲಿ ಕರ್ಮೇಂದ್ರಿಯಗಳಿಂದಾದ ನಿಷೇಧ ಕರ್ಮಗಳು ಮಾತ್ರ ಪಾತಕಾಈವೆಂದು ತಿಳಿಯುವುದು–ಅನುಭೂತಿ ವಿಷಯವಾಗಿರುವುದು. ಹೀಗಿದ್ದು ಕೇವಲ ಶ್ರೀಪತಿಯ ಸೇವಾರ್ಪಣಕ್ಕಾಗಿಯೇ ಕರ್ಮೇಂದ್ರಿಯಗಳಿಂದಾದ ನಿಷೇಧಕರ್ಮಗಳೂ ಸಹ ಪುಷ್ಕಫಲದಾಯಕವಾಗುವವೆಂಬುವುದು ಸಿದ್ಧವೇ.

**ಪ್ರಮಾಣ**

ಪಂಪಾ ಸರೋವರದಲ್ಲಿ ಶ್ರೀರಾಮಚಂದ್ರನಿರುವಾಗ್ಗೆ ಆ ಭಗವಂತನಿಗೆ ರುಚಿಕರವಾದ ಫಲಗಳರ್ಪಣ ಮಾಡುವ ಮನದ ನಿಶ್ಚಯದಿಂದಲೇ ಪರಮ ಭಗವದ್ಭಕ್ತಳಾದ ಭಿಲ್ಲಿಣಿಯು (ಶಬರಿ) ತಾನು ಸ್ವಾದತೆಗೆದುಕೊಂಡಂಥಾ ಸೀಯಾದ ಉಚ್ಛಿಷ್ಟ ಫಲಗಳನ್ನು ರಾಮಾರ್ಪಣ

ಮಾಡಿದರೂ, ಅವಳ ಮೇಲೆ ಭಗವತ್ಪ್ರೀತಿಯೇ ಆಯಿತೆಂಬುವದು ರಾಮಾಯಣದಲ್ಲಿ ಪ್ರಸಿದ್ಧವಿರುವದು. ಆದರೆ ಸ್ವತುಷ್ಠಿಯನು ಬಯಸಿ, ಭಗವದರ್ಪಣವಾಗಬೇಕೆಂಬ ಇಚ್ಛೆಯಿಂದ ಯಾವದೇ ಕರ್ಮ ಮಾಡಿದಾಗ್ಯೂ ಪುನಃ ಅನೇಕ ಜನ್ಮಗಳು ಬರೋದೇ ಸಿದ್ಧವಾದದ್ದೆಂಬರ್ಥ. ಅದು ಹ್ಯಾಂಗೆದರೆ – ತದುಕ್ತ ವಿಜಯರಾಸರಾಜ್ಞೆಃ ಮಾನಸಪೂಜಾ ಪದ್ಧತಿಯಲ್ಲಿ–

ಉನ್ನತರಾಗಿ ಅನ್ನ । ಮಾಣಿಕ್ಯ ಕನಕಕೋಲಿ । ಕನ್ಯಾದಾನ ವಸ್ತ್ರ ಅಗ್ರಹಾರ ಅನ್ನದಾನ ಅಶ್ವದಾನಕ್ಷೇತ್ರಮಿಕ್ಯಾ ಸಂ । ನ್ಯಾಸ ಮೊದಲಾದ ನಾನಾ ಆಶ್ರಮಗಳು ಕೊಂಡು । ಮತ್ತು ವೇದಾದಿಗಳು ಚಲಿಸಿದಂವಾಧನ್ಯಾ ನಾನಾನು ಕಾಣೆ । ಹರ್ಷ ತೀರಿದ ಮೇಲೆ ಎಂದರೆ। ಮೇಲ ಮಾಡಿದ ದಾನಗಳು ನಿಷ್ಕಾಮುಕನಾಗಿ । ಮುಖ್ಯ ಹರಿಪ್ರೀತಿಗೊಸ್ಕರ ಮಾಡಿದಲಾ ಆದಪ್ರಯುಕ್ತ। ಅದಕ್ಕೆ ಆಗತಕ್ಕ ಫಲ ಸರ್ವಸುಖಪಾಸರಿ । ಅದುತೀರಿದ ಮೇಲೆ–ಎಂದು ತಾತ್ಪರ್ಯ । ಬನ್ನಾ ಎಂದರೆ–ಕಷ್ಟ ॥ ೨೩ ॥

**ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ಮಾಧವ" ಇತಿ । "ಇನಿಯ" ಇಷ್ಟು ॥ ೨೩ ॥

## ಕನ್ನಡಾರ್ಥ

ಭವಗವತ್ಪೂಜೆಯ ಮಹತ್ವವನ್ನು ನಿರೂಪಿಸುತ್ತಾರೆ "ಮಾಧವ"- ಎಂಬ ಪದ್ಯದಿಂದ. ನಿಷೇಧ ಕರ್ಮಗಳನ್ನು ಮಾಡಬೇಕು–ಎಂದು ತಾತ್ಪರ್ಯವಲ್ಲ. ಹಾಗೆಯೇ ಸಾಧುಕರ್ಮಗಳನ್ನು ಬಿಡಬೇಕೆಂಬ ತಾತ್ಪರ್ಯವೂ ಅಲ್ಲ. ಭಗವತ್ಪೂಜೆಯಿಂದ ಕರ್ಮಗಳಲ್ಲಿರುವ ದೋಷಗಳು ನಾಶವಾಗುವುವು. ಲೋಪಗಳನ್ನು ತುಂಬಿ ಸಫಲ ಗೊಳಿಸುವುದು. ಪ್ರಮಾದಾಜ್ಞಾನದ ಕಾರಣವಾಗಿ ಅನಿವಾರ್ಯವಾಗಿ ದುಷ್ಕರ್ಮಗಳು ಸಂಘಟಿಸುವುವು. ಆದರೆ ಭಗವತ್ಪೂಜಾ ಉದ್ದೇಶ್ಯ ದಿಂದ ದುಷ್ಕರ್ಮಗಳೂ ಕೂಡಾ ಪುಣ್ಯಫಲಪ್ರದವಾಗಿ ಪರಿಣಮಿಸುವುವು.

ಶಾಸ್ತ್ರನಿಷಿದ್ಧ ಕರ್ಮಗಳನ್ನು ಬುದ್ಧಿಪೂರ್ವಕ ಮಾಡಿ, ತನ್ಮೂಲಕ ಸಂಪಾದಿ ದ್ರವ್ಯದಿಂದ ಭಗವತ್ಪೂಜಾ ಮಾಡಿದರೆ, ಅದು ಪುಣ್ಯಕಾರಿಯಾಗುವುದಿಲ್ಲ. ಶ್ರುತಿಸ್ಮೃತಿಗಳು ಪರಮಾತ್ಮನ ಆಜ್ಞೆಗಳು ಸ್ವವರ್ಣವಿಹಿತ ವೃತ್ತಿ ಆಚಾರಗಳಿಂದಭಗವತ್ಪೂಜಾ ಮಾಡಬೇಕು. ಶಾಸ್ತ್ರ ನಿಷಿದ್ಧವೃತ್ತಿಯಿಂದ ಭಗವದನುಗ್ರಹ ಪ್ರಾಪ್ತಿಯಾಗುವುದಿಲ್ಲ. ಆದರೆ ಕಾಲದೇಶಗಳಿಗನು ಸಾರವಾಗಿ ಕನಿಷ್ಠ ಮಾರ್ಗದಿಂದ ದ್ರವ್ಯ ಸಂಪಾದನೆ ಮಾಡಿ, ಅದರಿಂದ ಭಗವತ್ಪೂಜಾ ಮಾಡಿದರೆ ಆ ಕನಿಷ್ಠ ಕರ್ಮಗಳೂ ಸಹ ಪುಣ್ಯಪ್ರದವಾಗುವುವು ಎಂದು ತಾತ್ಪರ್ಯ. ॥೨೩॥

**ಶ. ಶ್ರೀಗುರುಹೃದಯ ಪ್ರಕಾಶಿಕೆ**

ಹೀಗೆ ಸರ್ವಕ್ರಿಯೆಗಳನ್ನೂ ದೇವರಪೂಜೆಯನ್ನಾಗಿ ಭಾವಿಸಿದವನಿಗೆ ದುಷ್ಕರ್ಮಲೇಪವಿಲ್ಲವೆಂದು ತಿಳಿಸುತ್ತಾರೆ, ಮಾಧವನ ಎಂದು.

ತ್ರಿಗುಣಕಾರ್ಯಾಭಿಮಾನಿ ರಮಾಪತಿಯಾದ ದೇವರ ಪೂಜೆ ಗೋಸ್ಕರವೆಂದು ತ್ರಿಕರಣದಲ್ಲೂ ಧಾರ್ಢ್ಯದಿಂದಿದ್ದು ತನ್ನ ಸುಖಾದಿಗಳಲ್ಲಿ ಮನಸ್ಸು ತಗಲದೆ ಇರುವ ಸದ್ಭಕ್ತನು, ನಿಷೇಧವೆಂಬ ಶಾಸ್ತ್ರವಿರುದ್ಧ ಸೇವಕಾವೃತ್ತಿ ದ್ಯೂತಾದಿಕರ್ಮದಿಂದ ಧನಸಂಪಾದಿಸಿದಾಗ್ಯೂ ಅವೆಲ್ಲಾ ಸತ್ಪುಣ್ಯಕರ್ಮಗಳೆನಿಸುವುವು. ಸ್ವೋದರಂಭರಣಾರ್ಥಿ ಎಂದರೆ ಸ್ವಸೌಖ್ಯ ದಲ್ಲೇ ಮನಸ್ಸಿಟ್ಟು, ಎಲ್ಲವೂ ದೇವರ ಸೇವೆ ಎಂದು ಬಾಯಿ ಮಾತಿನಿಂದ ಹೇಳುವ ವಂಚಕನು ನಿತ್ಯಪುಣ್ಯಕರ್ಮಗಳಾದ ಸತ್ಪರಿಗ್ರಹಾದಿಗಳನ್ನು ಮಾಡಿದಾಗ್ಯೂ, ದೇಹಾಂತರವೆಂಬ ಸಂಸಾರವನ್ನೇ ಹೊಂದುವದೇ ನಿಶ್ಚಯ, ಇದಕ್ಕೆ ಸಂದೇಹವಿಲ್ಲ.

ವೃದ್ಧೌ ಚ ಮಾತಾ ಪಿತರೌ ಸಾಧ್ವೀ ಭಾರ್ಯಾ ಸುತಃ ಶಿಶುಃ (ಇದರ ಉತ್ತರಾರ್ಧ ಶ್ರೀ ಸಂಕರ್ಷಣತೀರ್ಥರ ವ್ಯಾಖ್ಯಾನದಲ್ಲಿ ನೋಡುವುದು) ಎಂಬ ಸ್ಮೃತ್ಯರ್ಥ ವಿವರಿಸಿತು. ॥ ೨೩ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಶ್ರೀಲಕ್ಷ್ಮೀದೇವಿಯರಿಗೆ ಪ್ರಭುವೂ ನಿಯಾಮಕನೂ ಆದ ಮಾಧವನ ಪ್ರೀತ್ಯರ್ಥವಾಗಿ ಪೂಜಾರೂಪವಾದಯಾವ ರೀತಿಯ ಕರ್ಮಗಳನ್ನು ಮಾಡಿದರೂ, ಅವು ಪುಣ್ಯಫಲಪ್ರದಗಳಾವುವು-ಎಂದು ತಿಳಿಸುತ್ತಾರೆ.

೨. ಕರ್ಮಗಳಲ್ಲಿ ವಿಧಿ ಮತ್ತು ನಿಷೇಧ -ಎಂದು ಎರಡು ಪ್ರಕಾರ. "ಶ್ರುತಿಸ್ಮೃತೀರ್ಹರಿಯರ್ಾಜ್ಞಾ" - ಎಂಬ ಶ್ರುತಿವಾಕ್ಯದಂತೆ, ವಿಧಕರ್ಮಗಳನ್ನು ಆಚರಿಸಬೇಕು. ನಿಷೇಧ ರೂಪವಾದಕರ್ಮಗಳು ತ್ಯಾಜ್ಯ-ಎಂದು ಶ್ರೀಶನ ನಿಯಮ.

ದೇವಪೂಜಾ-ಅತಿಥಿ ಸತ್ಕಾರ-ಗುರುಹಿರಿಯರ ಶುಶ್ರೂಷಾ-ಕ್ಷೇತ್ರಯಾತ್ರೆ-ಸಂದರ್ಶನ-ಸಚ್ಛಾಸ್ತ್ರಗಳ ಅಧ್ಯಯನ ಮತ್ತು ಮನನ-ಪಾಠಪ್ರವಚನಗಳನು - ತ್ರಿಕಾಲ ಸಂಧ್ಯವಂದನೆ - ಶ್ರೀಹರಿನಾಮ ಸಂಕೀರ್ತನೆ.........ಇತ್ಯಾದಿಗಳೆಲ್ಲವೂ ಸತ್ಕಾರ್ಯಗಳು (ವಿಧಿಗಳು).

ಅಭಕ್ಷ್ಯ ಭಕ್ಷಣ ಅಗಮ್ಯಗಮನ-ಅನಾಚಾರ-ಅಪೇಯಪಾನ-ಅಹಂಕರ್ತೃ ಸ್ವಾಭಿಮಾನ-ವಂಚನೆ-ದ್ರೋಹಇತ್ಯಾದಿಗಳು ನಿಷೇಧ ರೂಪವಾದ ದುಷ್ಕರ್ಮಗಳು.

೩. ಇತರರನ್ನು ಯಾಚಿಸಿ, ದ್ರವ್ಯ ಸಂಪಾದನೆ ಮಾಡಿ, ತನ್ಮೂಲಕ ದೇವಪೂಜಾರೂಪವಾಗಿ ಮಾಡುವಕರ್ಮಗಳು ನಿಷಿದ್ಧವೆನಿಸಿದರೂ, ಮಾಧವನ ಪ್ರೇರಣೆಯೂ, ಮಾಧವನ ಪ್ರೀತ್ಯರ್ಥವಾಗಿ ಮಾಡಿದರೆ, ಅವುನಿಷೇಧರ್ಮಗಳೆನಿಸದೆ, ಪುಣ್ಯಫಲದಾಯಕವಾಗುವುವು. ಕೇವಲ ವಿಷ್ಣು ಪ್ರೀತ್ಯರ್ಥವಾಗಿ ಕೆಲವು ವಿಶೇಷಸಂದರ್ಭಗಳಲ್ಲಿ ನಿಷೇಧ ಕರ್ಮಗಳನ್ನು ಆಚರಿಸಿದರೂ, ಸಂಪಾದಿತ ದ್ರವ್ಯವು ಸದ್ವನಿಯೋಗಕ್ಕೆ ಉಪಯೋಗವಾಗುವುದರಿಂದ ಸಪುಣ್ಯಕರ್ಮಗಳೇ-ಎನಿಸುವುವು.

೪. ಆದರೆ ಕೇವಲ ಸಂಸಾರ ವ್ಯಾಮೋಹಕ್ಕೆ ಒಳಗಾಗಿ, ಉದರಂಭರಣಕ್ಕಾಗಿ, ಸಾಧುಕರ್ಮಗಳನ್ನು ಮಾಡಿದಾಗ್ಯೂ, ಅವು ಪುಣ್ಯರೂಪವಾದ ಫಲಗಳನ್ನು ನೀಡುವುದಿಲ್ಲ. ಆದಕ್ಕೆ ಬದಲಾಗಿ ಅನೇಕ ಜನ್ಮಾಂತರಗಳನ್ನುಹೊಂದಿ,ಭವಸಾಗರದ ಸುಳಿಯಲ್ಲಿ ಸಿಗುವನೆಂದು ಕರ್ಮದ ರಹಸ್ಯವನ್ನು ದಾಸರಾಯರು ತಿಳಿಸುತ್ತಾರೆ.

ಜಡಕರ್ಮಗಳ ಲಕ್ಷಣ ಹೇಗಿರುತ್ತದೆ ಎಂದರೆ–"ಕೆಸರಿಂದ ಕೆಸರ ತೊಳೆದಂತೆ"–ಎಂದು ಶ್ರೀಗೋಪಾಲದಾಸರಾಯರ ಅಮೃತವಚನವಿದೆ. ಅಂದರೆ ಕೆಸರು–ದೋಷಯುಕ್ತವಾದರೂ, ವಿಷ್ಣುಪ್ರೀತ್ಯರ್ಥವಾಗಿ ಮಾಡದ ಸಕಲ ಜಡಕರ್ಮಗಳೆಲ್ಲವೂ ಕೆಸರು ಮೆತ್ತಿದ ವಸ್ತುಗಳನ್ನು ಕೆಸರಿನಿಂದಲೇ ತೊಳೆಯುವ ಪ್ರಯತ್ನದಂತೆ ನಿಷ್ಫಲವೆನಿಸುವುದು. ಅವು ಕೇವಲ ಜಡಕರ್ಮಗಳೇ ಹೊರತು, ಭಗವತ್ಪ್ರೀತಿಗೆ ಕಾರಣವಾಗುವುದಿಲ್ಲ. ಒಂದು ಕರ್ಮಜನಿತ ಫಲವನ್ನು ಕಳೆದುಕೊಳ್ಳುವುದಕ್ಕೆ ಇನ್ನೊಂದು ಕರ್ಮವನ್ನು ಆಚರಿಸುವುದು ಯುಕ್ತವಾದುದಲ್ಲ. ಈ ರೀತಿ ಕರ್ಮಾಚರಣೆಯ ಮರ್ಮವನ್ನು ತಿಳಿಸಿದ್ದಾರೆ ದಾಸರಾಯರು. ॥ ೨೩ ॥

## ಪದ್ಯ–೨೪

**ಮೂಲ :**

> **ಅಪಗತಾಶ್ರಯ ಎಲ್ಲರೊಳಗಿ ।**
> **ದ್ದುಪಮನೆನಿಪಾನುಪಮರೂಪನು ।**
> **ಶಫರಕೇತನ ಜನಕ ಮೋಹಿಪ ಮೋಹಕನ ತೆರದಿ ।.**
> **ತಪನಕೋಟಿ ಸಮಪ್ರಭಾಸಿತ ।**
> **ವಪುವೆನಿಪ ಕೃಷ್ಣಾದಿ ರೂಪಕ ।**
> **ವಿಪಗಳಂತುಂಡುಣಿಪ ಸರ್ವತ್ರದಲಿ ನೆಲಿಸಿದ್ದು ॥ ೨೪ ॥**

**ಅವತರಣಿಕೆ :**

ಸರ್ವತ್ರವ್ಯಾಪಕನಾಗಿರುವ ಸರ್ವೇಶ್ವರನ ಮಹಾತ್ಮ್ಯೆಯನ್ನೂ ಇನ್ನೂ ವಿವರಿಸುತ್ತಾರೆ. ॥ ೨೪ ॥

**ಪ್ರತಿಪದಾರ್ಥ :**

**ಅಪಗಾತಾಶ್ರಯು** = ಯಾರ ಆಶ್ರಯದಲ್ಲಿಯೂ ಇರದ ಶ್ರೀ ಪರಮಾತ್ಮನು, (ಅಪಗತ–ಹೋಗಲಾಡಿಸಲ್ಪಟ್ಟ ಆಶ್ರಯ–ಆಶ್ರಯ ವುಳ್ಳವನು. ಅಂದರೆ, ಎಲ್ಲರಿಗೂ ಶ್ರೀ ಪರಮಾತ್ಮನು ಆಶ್ರಯಕಾರನು. ಆವನಿಗೆ ಯಾರ ಆಶ್ರಯದ ಅಗತ್ಯವಿಲ್ಲ. ಸರ್ವತಂತ್ರ ಸ್ವತಂತ್ರನೆಂದರ್ಥ **ಎಲ್ಲರೊಳಗಿದ್ದು** = ಸರ್ವ ತ್ರಿವಿಧಜೀವರ ಅಂತರ್ಯಾಮಿಯಾಗಿದ್ದು, **ಅನುಪಮರೂಪನು** = ಉಪಮಾನರಹಿತವಾದ (ಅಸದೃಶವಾದ) (ಸೌಂದರ್ಯರೂಪ, ಆಕಾರವುಳ್ಳ ಶ್ರೀಪರಮಾತ್ಮನು), **ಶಫರಕೇತನ ಜನಕ** = ಮನ್ಮಥನ ಪಿತನಾದ (ಶಫರ–ಮೀನು, ಕೇತನ–ಧ್ವಜ–ಲಾಂಛನ. ಮನ್ಮಥನು ಮತ್ಸ್ಯಧ್ವಜನು). **ಮೋಹಕನ ತೆರದಿ** = ವೇಷಧಾರಿಯಾದ ಪುರುಷನು ಮೋಹಿಸುವಂತೆ, **ಮೋಹಿಪ** = ಜೀವರನ್ನು ಮೋಹಪಡಿಸುತ್ತಾನೆ. ತಾನು ಮಾತ್ರ ಆನಂದಪರಿಪೂರ್ಣನಾಗಿದ್ದಾನೆ.

**ತರಣಿಕೋಟಿ ಸಮ ಪ್ರಭಾಸಿತ** = ಅನಂತಕೋಟಿಸೂರ್ಯರ ಪ್ರಕಾಶಯುಕ್ತನಾಗಿ, **ವಪುವನಿಪ** = ರಕ್ತವರ್ಣವಿಶಿಷ್ಟನಾದ ಮೂಲರೂಪೀ ಶ್ರೀಮನ್ನಾರಾಯಣನು, **ಕೃಷ್ಣಾದಿರೂಪಕ** = ತನ್ನಿಂದ ಹೊರಟ ಅಭಿನ್ನಗಳಾದ, ಶುಭ್ರವರ್ಣ ವಾಸುದೇವರೂಪ ಸ್ವರ್ಣವರ್ಣ ಸಂಕರ್ಷಣರೂಪ – ಪೀತವರ್ಣಯುಕ್ತ ಪ್ರದ್ಯುಮ್ನ – ಕೃಷ್ಣವರ್ಣ ಅನಿರುದ್ಧರೂಪ – ಈ ರೀತಿ, ಪಂಚರೂಪಗಳಿಂದ ಇದ್ದವನಾಗಿ, **ವಿಹಗಳಂತೆ** = ಪಕ್ಷಿಗಳು ತಮ್ಮ ಮರಿಗಳಿಗೆ ಆಹಾರವನ್ನು ತಿನ್ನಿಸುವಂತೆ, **ಸರ್ವತ್ರದಲಿ ನೆಲೆಸಿದ್ದು** = ಸರ್ವ ಜೀವನರ ಸ್ಥೂಲದೇಹಗತ ಇಂದ್ರಿಯಗಳಲ್ಲಿ ಅಂತರ್ಯಾಮಿಯಾಗಿದ್ದು, **ಉಂಡು** = ಸ್ವಾಖ್ಯರಸಗಳನ್ನು ತಾನು ಸ್ವೀಕರಿಸಿ, **ಉಣಿಪ** = ಜೀವಯೋಗ್ಯರಸಗಳನ್ನು ಜೀವರಿಗೆ ಉಣಿಸುವನು. ॥ ೨೪ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನ ಮಾಹಾತ್ಮ್ಯ ಹೇಳತಾರೆ.

ಮತ್ಸ್ಯಧ್ವಜನಾದ ಮನ್ಮಥನ ತಂದಿಯಾದ, ಅನ್ಯಾಧೀನನಲ್ಲದಂಥಾ, ಉಪಮಾನರಹಿತವಾದ ಸೌಂದರ್ಯವಾದ ರೂಪ ಆಕಾರವುಳ್ಳವನಾದ ಶ್ರೀಪರಮಾತ್ಮ ಸರ್ವಜೀವರ ಸ್ವರೂಪದಲ್ಲಿ, ಬಾಹ್ಯಸ್ಥೂಲ ದೇಹೇಂದ್ರಿಯಾದಿಗಳಲ್ಲಿ ಇದ್ದು, ತಾನು ಆಯಾ ಅಧಿಷ್ಠಾನದನುಸಾರ ಅದಕ್ಕೆ ಸರಿಯಾಗಿ ತದಾಕಾರ, ತನ್ನಾಮದಿಂದ ಇರತಕ್ಕವನು ಎಂತೆನಿಸಿ, ವೇಷಧಾರಿಯಾದ ಪುರುಷ ಮೋಹಪಡಿಸುವಂತೆ, ಜೀವರನ್ನ ಮೋಹಪಡಿಸತಾನೇ ಹೊರತು, ತಾನು ವೇಷಧಾರಿಯಾದ ಪುರುಷನಂತೆ ಆನಂದಪೂರ್ಣನಾಗಿರತಾನೆ. ಅನಂತ ಸೂರ್ಯಪ್ರಕಾಶಯುಕ್ತನಾದ, ರಕ್ತವರ್ಣವಿಶಿಷ್ಟನಾದ ಮೂಲರೂಪೀ ನಾರಾಯಣ, ಈ ನಾರಾಯಣನಿಂದ ಅಭಿವ್ಯಕ್ತವಾದ ಅಭಿನ್ನವಾದ ಶುಭ್ರವರ್ಣ ವಿಶಿಷ್ಟವಾದ ವಾಸುದೇವರೂಪ, ಸ್ವರ್ಣವರ್ಣ ಸಂಕರ್ಷಣ

ರೂಪ, ಪೀತವರ್ಣ ಪ್ರದ್ಯುಮ್ನರೂಪ, ಕೃಷ್ಣವರ್ಣ ಅನಿರುದ್ಧರೂಪ–ಈ ರೀತ್ಯಾ ಪಂಚರೂಪಗಳಿಂದ ದೇಹದಲ್ಲಿ ಇದ್ದವನಾಗಿ, ಪಕ್ಷಿಗಳಂತೆ ಅಂದರೆ, ಪಕ್ಷಿಗಳು ತಾವು ತಾವು ಭುಜಿಸತಕ್ಕ ಪದಾರ್ಥಗಳನ್ನು ತಾವು ತೆಗೆದುಕೊಂಡು, ತಮ್ಮ ಪಿಳ್ಳೆಗಳ ಭಾಗ ಅವುಗಳ ಬಾಯಿಯೊಳಗೆ ಇಟ್ಟು ತಿನಿಸೋವಾಗತವೆ. ಇದರಂತೆ; ಸರ್ವಪ್ರಾಣಿಗಳ ಸ್ಥೂಲದೇಹ ಇಂದ್ರಿಯ ಗಳಲ್ಲಿ ಅಂತರ್ಯಾಮಿಯಾಗಿದ್ದು, ತನ್ನ ಸ್ವಾಖ್ಯಗಳ ತಾನು ಸ್ವೀಕರಿಸಿ, ಜೀವಯೋಗ್ಯ ವಾದದ್ದರನ್ನ ಜೀವರಿಗೆ ಉಣಿಸತಾನೆ ಎಂತ ತಾತ್ಪರ್ಯ. ॥ ೨೪ ॥

### ೨. ಭಾವಪ್ರಕಾಶಿಕೆ

ತಾನು ಎಲ್ಲರಿಗೂ ಆಶ್ರಯನಾಗಿರುವನು. ತನಗೆ ಆಶ್ರಯರು ಮತ್ತೊಬ್ಬರಿಲ್ಲ. ತಾನು ಅನುಪಮನಾದರೂ ಮನುಷ್ಯಾದಿಗಳಲ್ಲಿದ್ದು, ಉಪಮಿತಾಗಿ ತೋರುವನು. ಕೋಟಿ ಸೂರ್ಯಸಮಪ್ರಭನಾದರೂ ಕೃಷ್ಣಾದ್ಯವತಾರದಲ್ಲಿ ಮನುಷ್ಯಾಕಾರನಾಗಿ, ಕಪ್ಪು, ಬಿಳುಪು–ಮೊದಲಾದ ಸಾಧಾರಣ ಬಣ್ಣವುಳ್ಳವನಾಗಿ, ಜನರನ್ನು ಮೋಹಿಸುವನು. ಸರ್ವತ್ರವಾಸವಾಗಿದ್ದು, ವಿಷಯ ಭೋಗಾದಿಗಳನ್ನು ಅನ್ನಾದಿಗಳನ್ನು ತಾನುಂಡು ಜೀವರಿಗೂ ಉಣಿಸುವನು. ॥ ೨೪॥

### ೩. ಭಾವದರ್ಪಣ

"ಅಪಗತಾಶ್ರಿಯೇತಿ" । ನಿರಾಶ್ರಯ–ಎಂಬರ್ಥ । ಶಫರೀ–ಮೀನಕೇತನ ಧ್ವಜವುಳ್ಳ ಮನ್ಮಥ । "ಪ್ರೋಷ್ಠೀತುಫರೀ ದ್ವಯೋರಿತ್ಯಮರಃ" । ತಪನ–ಸೂರ್ಯ–ದ್ವಿಪದ–ಮನುಷ್ಯ ॥ ೨೪ ॥

### ೪. ಶ್ರೀವ್ಯಾಸಸಿದ್ಧಾಂತ ಕೌಮುದೀ

ಅಸಗತ – ಇತಿ ॥ ತತ್ತದಾಕಾರ ಸಂಯುಕ್ತಮ್ – ಇತ್ಯುಕ್ತೇಃ । ಅನಪಮಃ–ಅಸದೃಶಃ ॥ ಶಫರ–ಮೀನ ॥ ತಪನ–ಸೂರ್ಯ ॥ ದ್ವಿಪ–ಗಜ ॥ ೨೪ ॥

### ಕನ್ನಡಾರ್ಥ

ಶ್ರೀಪರಮಾತ್ಮನು ಸರ್ವತ್ರವ್ಯಾಪಕನು. ಸರ್ವಸಾರಭೋಕ್ತನು. ಜೀವರನ್ನು ಅಹಂಕಾರಮಮಕಾರಗಳಿಂದ ಮೋಹಿಸುವನು. ಅವನೇ ಬಂಧಕನೆಂದು ಪ್ರಸಕ್ತಪದ್ಯದಿಂದ ತಿಳಿಸುತ್ತಾರೆ. ಜೀವರಲ್ಲಿ ತತ್ತದಾಕಾರಕಾರ, ತನ್ನಾಮರೂಪವಿಶಿಷ್ಠನಾಗಿರುವನು. ಅಂತಹ ಹರಿಯು ಅಸದೃಶನು. ಇದನ್ನು "ಅನುಪಮ"–ಎಂದು ತಿಳಿಸುತ್ತಾರೆ. ॥ ೨೪ ॥

### ಸ. ಶ್ರೀಗುರುಹೃದಯಪ್ರಕಾಶಿಕೆ

ಐಶ್ವರ್ಯಮಹಿಮೆಯಿಂದ ದೇವರಿಗೆ ವಿರುದ್ಧಧರ್ಮಗಳು ಒಪ್ಪುತ್ತಾ ಇವೆ–ಎಂದು ಸ್ಮರಿಸಬೇಕಂತ ತಿಳಿಸುತ್ತಾರೆ–ಅಪಗತ–ಎಂದು.

ದೇವರು ಅಪಗತಾಶ್ರಯ–ಎಂದರೆ, ಇತರಾಧಾರ ಇಲ್ಲದೆ ತನ್ನಲ್ಲೇ ತಾನು ಇದ್ದರೂ, ಎಲ್ಲರನ್ನೂ ಅಧಿಷ್ಠಾನ ಮಾಡಿಕೊಂಡು ಇದ್ದು, ಉಪಮಾನರಹಿತನಾದಾಗ್ಯೂ, ಕಮಲನೇತ್ರೆಂಬುದೇ ಮೊದಲಾದ ದೃಷ್ಟಾಂತದಿಂದ ಹೇಳಿಸಿಕೊಳ್ಳುವನು. ಶಫರಕೇತನನೆಂಬ ಮೀನಧ್ವಜ ನಾದ ಮನ್ಮಥನಿಗೆ ಜನಕನಾದಾಗ್ಯೂ, ಮೋಹಕನ ತೆರದಿ ಅಂದರೆ, ಮೋಸಮಾಡುವವನ ಹಾಗೆ, ಮೋಹಿಪ–ಅಂದರೆ, ಅವರವರ ಸ್ವಭಾವ ವಿಪರೀತಾದಿ ಜ್ಞಾನವನ್ನು ವ್ಯಕ್ತಿ ಮಾಡುವನು. ತಪನ, ಎಂಬ ಸೂರ್ಯಕೋಟಿ ಸಮಾಕಾಂತಿ ಉಳ್ಳವನಾದಾಗ್ಯೂ, ಕೃಷ್ಣಾದಿ ರೂಪದಿಂದ ಅಸಿತ–ಎಂಬ ಕಪ್ಪುಬಣ್ಣದವನೆಂದು ಕರೆಸುವನು. ಬಾಹ್ಯಸುಖ ವರ್ಜಿತನಾದಾಗ್ಯೂ, ಸರ್ವರಿಗೆ, ಸುಖದುಃಖ ಕೊಡುವದಕ್ಕೋಸ್ಕರ ದ್ವಿಪಗಳಂತೆ–ಅಂದರೆ, ಆನೆ ತಾನು ಸೊಂಡಿಲಿನಲ್ಲಿ ನೀರು ತುಂಬಿಕೊಂಡು, ಮರಿಗಳಿಗೆ ಕುಡಿಸುವಂತೆ ತಾನುಂಡು ಉಣಿಸುವನು.

**ಯಸ್ಮಿನ್ ವಿರುದಧಗತಯೋಃಹ್ಯನಿಶಂ ಪತಂತಿ ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯಾ** ಎಂಬ ಭಾಗವತಾರ್ಥ ವಿವರಿಸಿತು. ॥ ೨೪ ॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಅಪಗತಾಶ್ರಯ :**

ನಿರಾಶ್ರಯನೆಂದರ್ಥ. ಶ್ರೀಪರಮಾತ್ಮನು ಸರ್ವಜಗತ್ತಿಗೂ ಆಶ್ರಯದಾತನು. ಸರ್ವಜೀವರೂ ಅವನ ಆಶ್ರಯದಲ್ಲಿದ್ದಾರೆ. ಆದರೆ, ಪರಮಾತ್ಮನಿಗೆ ಇವರ್‍ಯಾರ ಆಶ್ರಯವೂ ಬೇಕಿಲ್ಲ. ಸರ್ವತಂತ್ರ ಸ್ವತಂತ್ರನು.

**೨. ಎಲ್ಲರೊಳಗಿದ್ದು :**

ಸರ್ವಜೀವರಲ್ಲಿ ಜೀವಾಂತರ್ಯಾಮಿಯಾಗಿ, ಬಿಂಬರೂಪನಾಗಿ, ಜೀವಾಕಾರನಾಗಿ, ಜೀವನಾಮಕನಾಗಿ,ಜೀವವಾಚ್ಯನಾಗಿ ಇದ್ದಾನೆ.

**೩. ಅನುಪಮರೂಪನು :**

ಸರ್ವಜೀವರ ಅಂತಸ್ಥಿತನಾದ ಬಿಂಬರೂಪೀ ಶ್ರೀಹರಿಯ ನಾನಾ ರೂಪಗಳು ಅಸದೃಶ, ಅನುಪಮ, ಅಪರಿಚ್ಛಿನ್ನವಾದುವು. ಪ್ರತಿರೂಪ ದಲ್ಲಿಯೂ ಸ್ವಗತಬೇಧವಿವರ್ಜಿತನು ಮತ್ತು ಸಮಾಭ್ಯಧಿಕ ಶೂನ್ಯನು.

**೪. ಶಫರಕೇತನ ಜನಕ :**

ಶಫರ–ಎಂದರೆ, ನೀರಿನಲ್ಲಿ ಸಂಚರಿಸುವ ಮೀನು. ಕೇತನ–ಎಂದರೆ, ಧ್ವಜ (ಲಾಂಛನ). ಮನ್ಮಥನು ತನ್ನ ಧ್ವಜದಲ್ಲಿ ಮೀನನ್ನು ಲಾಂಛನವಾಗಿ ಹೊಂದಿದ್ದಾನೆ. ಆದರಿಂದ, ಮನ್ಮಥನಿಗೆ "ಮೀನಕೇತನ"ನೆಂದು ಹೆಸರು. ಮನ್ಮಥನು ಮನೋಭಿಮಾನಿಯು. ಮನಸ್ಸು ಮೀನಿನಂತೆ ಚಂಚಲ ಸ್ವಭಾವವುಳ್ಳದ್ದು. ಇದರಿಂದ ಮೀನಿನ ಲಾಂಛನದ ಸಾಂಕೇತ. ಅಂತಹ ಮನ್ಮಥನು ಪುರುಷರೂಪೀ ಪರಮಾತ್ಮನ ಮನಸ್ಸಿನಿಂದ ಜನಿಸಿದನು. ಇದರಿಂದ ಶಫರಕೇತನನ ಜನಕನು.

**೫. ಮೋಹಿಪ ಮೋಹನಕ ತೆರದಿ :**

ಮನ್ಮಥನು ಜನರ ಮನಸ್ಸನ್ನು ಚಂಚಲಗೊಳಿಸುವನು. ಅಂದರಂತೆ, ಶಫರಕೇತನಜನಕನಾದ ಆ ಶುಭಾಂಗನು ತನ್ನ ನಾನಾ ವ್ಯಾಪಾರಗಳ ದ್ವಾರಾ ಜನರನ್ನು ಮೋಹಗೊಳಿಸುವನು. ಅವನು ವಿಡಂಬನಮೂರ್ತಿ.

ಕಪಟನಾಟಕಸೂತ್ರಧಾರಿ. ಜಗತ್ತು ಅವನ ಇಚ್ಛಾದಿಂದ ನಿಯಂತ್ರಿತ ವಾಗಿದೆ.

**೬. ತಪನಕೋಟಿ ಸಮಪ್ರಭಾಸಿತ :**

ತಪನ–ಎಂದರೆ, ಆಕಾಶದಲ್ಲಿ ಪ್ರಜ್ವಲಿಸುತ್ತಿರುವ ಸೂರ್ಯ. ಅಂತಹ ಅನಂತಕೋಟಿಸೂರ್ಯ ಪ್ರಕಾಶವುಳ್ಳವನು. ಈ ಉಪಮಾನ ಕೇವಲ ಔಪಚಾರಿಕ. ಪ್ರಭಾಸಿತ–ಚೆನ್ನಾಗಿ ಪ್ರಕಾಶಿಸುವವನು–ಎಂದರ್ಥ.

**೭. ವಪ್ರವನಿಪ ಕೃಷ್ಣರೂಪಕ**

ವಪ್ರ–ಎಂದರೆ ಶರೀರ. ಶ್ರೀಹರಿಯ ಶರೀರವು ಜ್ಞಾನಾನಂದ ಮಯವು. ಕೃಷ್ಣನ ದೇಹ–ಕಪ್ಪುಬಣ್ಣ. ಅಂದರೆ, ನೀಲಮೇಘಾ ಶ್ಯಾಮವರ್ಣನು. ಹೀಗೆ, ಜ್ಞಾನಾನಂದ ಸ್ವರೂಪಿಯಾಗಿದ್ದರೂ, ಬಿಳಿ–ಕಪ್ಪು–ನೀಲಿ ಇತ್ಯಾದಿ ವರ್ಣವಿಶಿಷ್ಟವಾದ ದೇಹಗಳನ್ನು ಧರಿಸಿ, ತಾನು ಸಾಮಾನ್ಯ ಮನುಷ್ಯನಂತೆ ನಟಿಸುವನು. ಈ ನರನಟನೆಯಿಂದ ಜಗತ್ತು ಮೋಹಗೊಳ್ಳುವುದು.

**೮. ವಿಪಗಳಂತೆ ಉಂಡು ಉಣಿಪ**

ವಿಪ–ಎಂದರೆ, ಆಕಾಶದಲ್ಲಿ ಸಂಚರಿಸುವ ಪಕ್ಷಿಗಳೆಂದರ್ಥ. ಪಕ್ಷಿಗಳು ಆಹಾರವನ್ನು ತಂದು, ತಮ್ಮ ಕೊಕ್ಕಿನಿಂದ ಮರಿಗಳ ಬಾಯಿಯಲ್ಲಿಟ್ಟು, ಅವುಗಳಿಗೆ ಆಹಾರ ಕೊಡುವುವು. ಅಂತೆಯೇ, ಸರ್ವಸಾರ ಭೋಕ್ತನಾದ ಸರ್ವೇಶ್ವರನು ಸಮಸ್ತ ಆಹಾರಗತ ಸಾಖ್ಯರಸವನ್ನು ತಾನು ಸ್ವೀಕರಿಸಿ, ಜೀವಯೋಗ್ಯವಾದ ರಸಗಳನ್ನು ಜೀವರಿಗೆ ಉಣಿಸುವನು. ಈ ಕಾರಣದಿಂದ ಪಕ್ಷಿಗಳ ದೃಷ್ಟಾಂತವನ್ನು ಕೊಟ್ಟಿರುತ್ತಾರೆ.

**೯. ಸರ್ವತ್ರದಲಿ ನೆಲೆಸಿದ್ದು :**

ಸರ್ವವಸ್ತುಗಳಲ್ಲಿ ಅಣುರೇಣುತ್ರಣಕಾಷ್ಠ ಪರಿಪೂರ್ಣನಾಗಿ, ವ್ಯಾಪಿಸಿದ್ದು, ಸಕಲಜೀವರಾಶಿಗಳಿಗೆ ಅವರವರ ಆಹಾರಗಳನ್ನು ಉಂಡು, ಉಣಿಸುತ್ತಾ, ಅವರಲ್ಲಿದ್ದು, ಸಮಸ್ತವ್ಯಾಪಾರರೂಪವಾದ ಕ್ರಿಯಾ ವಿಶೇಷಗಳನ್ನು ಸದಾಮಾಡಿ ಮಾಡಿಸುತ್ತಿರುವ ಬಿಂಬರೂಪಿಯೆಂದು ಉಪಾಸಿಸಬೇಕು. ॥ ೨೪ ॥

## ಪದ್ಯ-೨೫

**ಮೂಲ :**

**ಅಡವಿಯೊಳು ಬಿತ್ತದಲೆ ಬೆಳೆದಿಹ ।**
**ಗಿಡದ ಮೂಲಿಕೆ ಸಕಲ ಜೀವರ ।**
**ಒಡಲೊಳಿಪ್ಪಾಮಯುವ ಪರಿಹರಗೈಸುವಂದದಲಿ ॥**
**ಜಡಜಸಂಭವಜನಕ ತ್ರಿಜಗ ।**
**ದ್ವಡೆಯ ಸಂತೈಸಲು ಅವರಿ ।**
**ದ್ದೆಡೆಗೆ ಬಂದೊದಗುವನು ಭಕ್ತರ ಭಿಡೆಯಮೀರದಲೆ ॥ ೨೫ ॥**

**ಅವತರಣಿಕೆ :**

ಸಕಲದುರಿತ ಪರಿಹಾರಕನಾದ ಶ್ರೀಪರಮಾತ್ಮನ ಮಹಾಮಹಿಮೆಯನ್ನು ಇನ್ನೂ ವರ್ಣಿಸುತ್ತಾರೆ. ॥ ೨೫ ॥

**ಪ್ರತಿಪದಾರ್ಥ :**

**ಅಡವಿಯೊಳು** = ಅರಣ್ಯದಲ್ಲಿ, **ಬಿತ್ತದಲೆ** = ಯಾರೊಬ್ಬರಿಂದಲೂ ಬಿತ್ತದಲೇ ಸ್ವೇಚ್ಛಾನುಸಾರ ಬೆಳೆದಿರುವ, **ಗಿಡದ ಮೂಲಿಕೆ** = ಗಿಡದಮೂಲಿಕೆಯು, **ಸಕಲಜೀವರ** = ವ್ಯಾಧಿಗ್ರಸ್ತರಾದ ಸರ್ವಜೀವರ, **ಒಡಲಿನೊಳು ಇಪ್ಪ** = ಹೊಟ್ಟೆಯೊಳಗಿರುವ, **ಆಮಯವ** = ವ್ಯಾಧಿಗಳನ್ನು, **ಪರಿಹಾರಗೈಸುವಂದಲಿ** = ಪರಿಹರಿಸುವವೋಪಾದಿಯಲ್ಲಿ, **ಜಡಜ ಸಂಭವಜನಕ** = ಕಮಲಸಂಜಾತರಾದ ಶ್ರೀಬ್ರಹ್ಮದೇವರ ತಂದೆಯಾದ, **ತ್ರಿಜಗದ್ವಡೆಯ** = ಚತುರ್ದಶಭುವನಕ್ಕೆ ಪ್ರಭುವಾದ ಶ್ರೀಪರಮಾತ್ಮನು, **ಸಂತೈಸೆನಲು** = ಹೇ ಜಗದೊಡೆಯನೇ, ನನ್ನನ್ನು ರಕ್ಷಿಸು-ಎಂದು ಪ್ರಾರ್ಥಿಸಲಾಗಿ, **ಅವರಿದ್ದೆಡೆಗೆ** = ತನ್ನ ಭಕ್ತರು ಇರುವ ಸ್ಥಳಕ್ಕೇ, **ಬಂದು** = ಧಾವಿಸಿ ಬಂದು, **ಭಕ್ತರ ಭಿಡೆಯ ಮೀರದಲೆ** = ಭಕ್ತಜನರ ದಾಕ್ಷಿಣ್ಯ (ಭಿಡೆ) ಮೀರದಂತೆ, **ಒದಗುವನು** = ಪ್ರತ್ಯಕ್ಷನಾಗಿ ಉದ್ಧರಿಸುವನು. ॥ ೨೫ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನ ಮಾಹಾತ್ಮ್ಯವನ್ನು ಹೇಳತಾರೆ.

ಅರಣ್ಯದಲ್ಲಿ ಒಬ್ಬರಿಂದಲೂ ಬಿತ್ತದಲೇ, ತನ್ನ ಸ್ವೇಚ್ಛಾನುಸಾರ ಬೆಳೆದಿರುವ ಗಿಡದ ಮೂಲಿಕೀನ ತಂದು ವ್ಯಾಧಿಗ್ರಸ್ತನಾದವ ಸೇವನ ಮಾಡಿದರೆ ರೋಗ ಪರಿಹಾರ ಆಗೋಪಾದಿಯಲ್ಲಿ, ಕಮಲೋದ್ಭವನಾದ ಬ್ರಹ್ಮದೇವರ ತಂದಿಯಾದವ ಗಿಡದ ಕ್ರೋಧಾದಿ ರೋಗಗಳ, ಅಡವಿಯಿಂದ ಮೂಲಕಿ ತಂದು ರಸಪಾನಕ್ಕೆ ಸದೃಶವಾಗಿ, ಮೂಲಕಿ ಸದೃಶನಾದ ಚತುರ್ದಶಭುವನಕ್ಕೆ ಸ್ವಾಮಿಯಾದ, ಶ್ರೀಪರಮಾತ್ಮನನ್ನು ಹೃದಯಾಕಾಶಕ್ಕೆ ತಂದು, ಅವನ ಪಾದಮಹಾತ್ಮೆ-ಎಂಬ ರಸಪಾನ ಮಾಡಿ, ಸಂರಕ್ಷಣ ಮಾಡೆನಲು, ಅಹಂ ಮಮತಾ ಕಾಮಕ್ರೋಧಾದಿ ರೋಗಗಳ ಪರಿಹಾರ ಮಾಡಿ, ಭಕ್ತರ ದಾಕ್ಷಿಣ್ಯ ಮೀರಧಾಂಗೆ, ಅವರು ಉಪಾಸನ ಮಾಡತಕ್ಕ ಪ್ರತಿಮಾಂತರ್ಗತನಾಗಿ ಅಥವಾ ಅವರ ಮನಸ್ಸಿಗೆ ಸಮೀಪವಾಗಿನ್ನು ಪ್ರತ್ಯಕ್ಷನಾಗಿ, ಉದ್ಧಾರಮಾಡುವನು ಎಂತ ತಾತ್ಪರ್ಯ. ॥ ೨೫ ॥

### ೨. ಭಾವಪ್ರಕಾಶಿಕೆ

ನಮ್ಮ ಪ್ರಯತ್ನವಿಲ್ಲದೆ, ನಾವು ಬೀಜವನನು ಬಿತ್ತದೆ, ಕಾಡಿನಲ್ಲಿ ತಾನಾಗಿ ಬೆಳೆಯುವ ಗಿಡದ ಮೂಲಿಕೆಯು ರೋಗಿಗಳ ಸಕಲ ರೋಗವನ್ನು ಪರಿಹಾರ ಮಾಡುವದು. ಅದರಂತೆ, ಶ್ರೀಪರಮಾತ್ಮನು ನಾವು ಹೆತ್ತಪುತ್ರನಾಗಲಿ, ಮಿತ್ರನೆಂತಾಗಲಿ ಅಲ್ಲದಿದ್ದರೂ, ಮೂರು ಲೋಕದೊಡೆಯನೇ! ನನ್ನನ್ನು ರಕ್ಷಿಸೆಂದು ಬೇಡಲು ಭಕ್ತರ ದಾಕ್ಷಿಣ್ಯಕ್ಕೆ ಒಳಗಾಗಿ, ಅವರು ಇದ್ದಸ್ಥಳಕ್ಕೇ ಬಂದು, ಅವರ ಕಷ್ಟಕ್ಕೊದಗುವನು. ॥ ೨೫ ॥

**೩. ಭಾವದರ್ಪಣ**

ಶ್ರಮದಿಂದ ಗಿಡಮೂಲಿಕೆ ತಂದು, ಸೇವನ ಮಾಡಲು ರೋಗ ಹ್ಯಾಗೆ ಪರಿಹಾರವಾಗುತ್ತದೋ, ತದ್ವತ್ ನಿಷ್ಠೆಯಿಂದ ಭಗವದುಪಾಸನೆ ಮಾಡಿದರೆ, ಭವಾಖ್ಯರೋಗ ಪರಿಹರಿಸುತ್ತಾನೆಂದು ಹೇಳುತ್ತಾರೆ ॥ ಅಡವಿಯೊಳು। ಆಮಯ–ರೋಗ ॥ ೨೫ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

ಅಡವಿ–ಇತಿ ॥ ವಿಷ್ಣು ರಹಸ್ಯೇ ಯಥಾನಾನೌಷಧೀ ಗಣಾಃ ॥ ಸರ್ವವ್ಯಾಧಿ ಹರಾ ಪ್ರೋಕ್ತಾಃ ಪ್ರಯುಕ್ತಾಶ್ಚ ಚಿಕಿತ್ಸಕೈಃ ॥ ದಯಯಾ ರೋಗಿ ಸಂಘೇಷು ಭವಂತಿ ವ್ಯಾಧಿ ಘಾತಕಾಃ ॥ ತಥಾ ಸಂತತದುಃಖೇನ ಸಂತಾಪೈಃ ತ್ರಿವಿಧೈ ಅಪಿ ॥ ಅನಿಶಂ ಪೀಡ್ಯಮಾನಾನಾಂ ಪರಮಂ ದುಃಖಮೋಚನಮ್ ॥ ದೀಕ್ಷಾಯಾಃ ಗ್ರಹಣಂ ವಿಷ್ಣೋಃಏಕಮೇವ ನಚಾನ್ಯಥಾ ॥ ಇತಿ ॥ ೨೫ ॥

**ಕನ್ನಡಾರ್ಥ**

ಪರಮಾತ್ಮನಲ್ಲಿ ದೀಕ್ಷಾಭಕ್ತಿ ಶ್ರದ್ಧಾದಿಗಳು ಭವರೋಗ ಪರಿಹಾರಕಗಳು. ಈ ವಿಷಯವನ್ನು ದೃಷ್ಟಾಂತಪೂರ್ವಕ ತಿಳಿಸುತ್ತಾರೆ– "ಅಡವಿ"–ಎಂಬ ಪದ್ಯದಿಂದ.

ವ್ಯಾಧಿಪರಿಹಾರಕಗಳೆಂಬ ಪ್ರಸಿದ್ಧವಾದ ಔಷಧಿಗಳನ್ನು, ಚಿಕಿತ್ಸಕರು ರೋಗಿಗಳಿಗೆ ದಯದಿಂದ ಪ್ರಯೋಗಿಸಿದರೆ, ಆ ವ್ಯಾಧಿಗಳು ನಾಶವಾಗುವುವು. ಅದರಂತೆ, ತ್ರಿವಿಧತಾಪಗಳಿಂದ ಸಂತತ ಸಂತ್ರಪ್ತರಾಗಿರುವ ಸಜ್ಜನರ ದುಃಖಪರಿಹಾರಕ ಮಾರ್ಗವೆಂದರೆ, ವಿಷ್ಣುಭಕ್ತಿದೀಕ್ಷ ಸ್ವೀಕಾರವೆಂದು ವಿಷ್ಣುರಹಸ್ಯದಲ್ಲಿ ಹೇಳಲಾಗಿದೆ. ॥ ೨೫ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಆದ್ದರಿಂದಲೇ ಅನಿಮಿತ್ತಬಂಧುದೇವರು ಎಂದು ತಿಳಿಸುತ್ತಾರೆ– ಅಡವಿ ಎಂದು.

ಅಡವಿಯಲ್ಲಿ ಯಾರೂನೂ ಹುಟ್ಟಹಾಕಿ ಬೆಳಸದೇ ಇರುವ ಗಿಡಮೂಲಿಕೆಗಳ ಸಕಲಜೀವರ ಒಡಲೆಂಬ ಶರೀರದಲ್ಲಿರುವ ಆಮಯವೆಂಬ ರೋಗವನ್ನು ಪರಿಹರಿಸಿ, ರಕ್ಷಿಸುವಂತೆ ಜಡಜಸಂಭವನೆಂಬ ಕಮಲಜನಾದಬ್ರಹ್ಮನ ತಂದೆಯೇ, ತ್ರಿಜಗತ್ತೆಂಬ ಮೂರು ಲೋಕಕ್ಕೂ ಸ್ವಾಮಿಯಾದವನೇ, ಶ್ರೀಹರಿಯೇ–ನಮ್ಮನ್ನು ರಕ್ಷಿಸೆಂದು ಮನಃಪೂರ್ವಕವಾಗಿ ಸ್ಮರಣೆಮಾತ್ರದಿಂದ, ಆ ಭಕ್ತರು ಇದ್ದ ಸ್ಥಳಕ್ಕೆ ಗಜೇಂದ್ರನ ಬಳಿಗೆ ಬಂದಂತೆ ಬಂದು, ಭಿಡೆಯ–ಎಂಬ ದಾಕ್ಷಿಣ್ಯ ಮೀರದೇ ಒದಗುವನು–ಎಂದರೆ, ರಕ್ಷಿಸುವನು ಎಂದರ್ಥ. ॥ ೨೫ ॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಬಿತ್ತದಲೆ ಬೆಳೆದಿಹ :**

ಅರಣ್ಯದಲ್ಲಿ ಸ್ವೇಚ್ಛೆಯಾಗಿ ಅನೇಕ ವನಸ್ಪತಿಗಳು ಬೆಳೆದಿರುತ್ತವೆ. ಯಾರೂ ಆ ವನಸ್ಪತಿಗಳನ್ನು ಬೆಳೆಯಲು ಭೂಮಿಯಲ್ಲಿ ಬೀಜವನ್ನು ಬಿತ್ತಿರುವುದಿಲ್ಲ. ವನಸ್ಪತಿಗಳು ತಾವೇ ತಾವಾಗಿ ಹುಲುಸಾಗಿ ಬೆಳೆದಿರುವುವು. ಇದೇ ಪ್ರಕೃತಿಯ ಸುಂದರ ಸಂಪತ್ತು. ಅಂತಹ ವನಸ್ಪತಿಗಳಲ್ಲಿ ರೋಗಪರಿಹಾರಕವಾದ ಕೆಲವು ಗಿಡದ ಮೂಲಿಕೆಗಳನ್ನುತಂದು, ಅರೆದು ಮೂಲಿಕೆಯ ರಸವನ್ನು ಔಷಧರೂಪದಲ್ಲಿ ರೋಗಗ್ರಸ್ಥನಾದವಗೆ ಕೊಡುವರು.

**೨. ಒಡಲೊಳಿಪ್ಪ ಆಮಯವ :**

ಆ ಮೂಲಿಕೆಯ ಪ್ರಯೋಗದಿಂದ ರೋಗದಿಂದ ಬಳಲುತ್ತಿರುವ ಮಾನವನಲ್ಲಿ ಬೇರೂರಿರುವ ರೋಗವನ್ನು (ಆಮಯ) ಪರಿಹರಿಸುವುದು.

**೩. ಜಡಜಸಂಭವ ಜನಕ :**

ಜಡಜ–ಎಂದರೆ, ನೀರಿನಲ್ಲಿ ಬೆಳೆಯುವ ಕಮಲಪುಷ್ಪ (ಜಡ–ನೀರು), ಶ್ರೀಪದ್ಮನಾಭನನಾಭೀಕಮಲಸಂಜಾತರಾದ ಬ್ರಹ್ಮದೇವರು–ಜಡಜಸಂಭವರು. ಅಂತಹ ಜಡಜಸಂಭವರ ಜನಕ–ಎಂದು

ಬ್ರಹ್ಮಪಿತನಾದ ಶ್ರೀ ಪರಮಾತ್ಮನು, ಅಡವಿಯೊಳು ಸ್ವೇಚ್ಛೆಯಾಗಿ ಬೆಳೆದಿರುವ ಗಿಡದ ಮೂಲಿಕೆಯು ಔಷಧಿರೂಪದಲ್ಲಿ ಮಾನವರ ರೋಗ ವನ್ನು ರೂಢಮೂಲವಾಗಿ ಹೇಗೆ ಪರಿಹರಿಹರಿಸುವುದೋ, ಅಂತೆಯೇ, ಜಡಜಸಂಭವಜನಕನಾದ ಜಲಜದಳಾಯತಾಕ್ಷನು ಹೇ ಜಗಜ್ಜನಕನೇ! ನನ್ನನ್ನು ಭವರೋಗವೆಂಬ ಈ ದುಸ್ತಕವಾದ ವ್ಯಾಧಿಯಿಂದ ಉದ್ಧರಿಸು- ಎಂದು ಭಕ್ತಿಯಿಂದ ಮೊರೆಯಿಟ್ಟಾಗ, ಆ ಭಕ್ತವತ್ಸಲನು ಅವರಿದ್ದ ಕಡೆಗೆ ಬಂದು, ಅವರ ಅವಸರಕ್ಕೆ ಒದಗುವನು.

**೫. ಭಕ್ತರ ಭಿಡೆಯ ಮೀರದಲೆ :**

ಭಿಡೆ-ಎಂದರೆ, ದಾಕ್ಷಿಣ್ಯ-ಎಂದರ್ಥ. ಭಕ್ತರ ದಾಕ್ಷಿಣ್ಯ ರೂಪವಾದ ಭಕ್ತಿಗೆ ಒಲಿದು, ಅವರಿದ್ದೆಡೆಗೆ ಬಂದು, ಒದಗಿ, ಅವರನ್ನು ಸಂತೈಸುವನು. ಅಂತಹ ಪರಮದಯಾಮಯನು ಆ ದಾಮೋದರನು! ಭಗವಂತನ ಭಕ್ತವಾತ್ಸಲ್ಯದ ಮಹಿಮೆಯನ್ನು ಪ್ರಸಕ್ತಪದ್ಯದಿಂದ ದೃಷ್ಟಾಂತಪೂರ್ವಕ ವಾಗಿ ನಿರೂಪಿಸಿರುತ್ತಾರೆ. ॥ ೨೫ ॥

## ಪದ್ಯ-೨೬

**ಮೂಲ :**

**ಶ್ರೀನಿಕೇತನ ತನ್ನವರ ದೇ ।**
**ಹಾನುಬಂಧಿಗಳಂತೆ ಅವ್ಯವ ।**
**ಧಾನದಲಿ ನೆಲೆಸಿಪ್ಪ ಸರ್ವದ ಸಕಲ ಕಾಮದನು ॥**
**ಏನು ಕೊಟ್ಟದು ಭುಂಜಿಸುವ ಮ ।**
**ದ್ದಾನೆಯಂದದಿ ಸಂಚರಿಸು ಮ ।**
**ತ್ತೇನು ಬೇಡದೆ ಭಜಿಸುತಿರು ಅವನಂಘ್ರಿಕಮಲಗಳ ॥ ೨೬ ॥**

**ಅವತರಣಿಕೆ :**

ಐಹಿಕವಿಷಯಗಳನ್ನು ಯಾವಾಗಲೂ ಅಪೇಕ್ಷಿಸದೆ, ನಿಷ್ಕಾಮ ಮನಸ್ಸಿನಿಂದ ಶ್ರೀಪರಮಾತ್ಮನನ್ನು ಭಜಿಸುತ್ತಿರಬೇಕು – ಎಂದು ತಿಳಿಸುತ್ತಾರೆ. ॥ ೨೬ ॥

**ಪ್ರತಿಪದಾರ್ಥ :**

**ಶ್ರೀನಿಕೇತನ** = ಶ್ರೀಲಕ್ಷ್ಮೀದೇವಿಯನ್ನು ಧರಿಸಿದ, (ಶ್ರೀಲಕ್ಷ್ಮೀ ದೇವಿಗೆ ಶ್ರೀಪರಮಾತ್ಮನ ದೇಹವೇ ಮಂದಿರವು), **ತನ್ನವರ** = ತನ್ನ ಭಕ್ತರುಗಳ **ದೇಹಾನುಬಂಧಿಗಳಂತೆ** = ದೇಹಬಂಧುಗಳೋಪಾದಿಯಲ್ಲಿ **ಅವ್ಯವಧಾನದಲಿ** = ವಿಯೋಗರಹಿತನಾಗಿ, (ಬಿಂಬರೂಪನಾಗಿದ್ದು) **ನೆಲೆಸಿಪ್ಪ** = ಹೃತ್ಪದ್ಮದಲ್ಲಿ ಆವಾಸವಾಗಿದ್ದಾನೆ. **ಸರ್ವದ** = ಸದಾ ಸರ್ವ ಕಾಲಗಳಲ್ಲಿ, **ಸಕಲಕಾಮದನು** = ಎಲ್ಲಾ ಪ್ರಕಾರವಾದ ಅಭೀಷ್ಟಗಳನ್ನು ಸಲ್ಲಿಸುವವನು. **ಏನು ಕೊಟ್ಟದು** = ಏನನ್ನು ಪ್ರಸಾದರೂಪವಾಗಿ ಕೊಡುತ್ತಾನೋ, (ಸುಖವಾಗಲೀ ಅಥವಾ ದುಃಖವಾಗಲೀ) **ಭುಂಜಿಸುತ** = ಅನುಭವಿಸುತ್ತಾ, **ಮದ್ದಾನೆಯಂದದಿ** = ನಿರ್ಲಿಪ್ತನಾಗಿ, ನಿರ್ಭೀತನಾಗಿ ಮದಿಸಿದ ಆನೆಯಂತೆ, **ಸಂಚರಿಸುತಿರು** = ಓಡಾಡುತ್ತಿರು. **ಮತ್ತೇನು ಬೇಡದೆ**

= ಜ್ಞಾನ, ಭಕ್ತಿ, ವೈರಾಗ್ಯ ಸಂಪತ್ತುಗಳನ್ನು ಬಿಟ್ಟು ಇತರ ಐಹಿಕ ವಿಷಯಗಳನ್ನು ಯಾವುದನ್ನೂ ಪರಮಾತ್ಮನಲ್ಲಿ ಪ್ರಾರ್ಥಿಸದೆ, **ಅವನಂಘ್ರಿ ಕಮಲಗಳ** = ಅವನ ಚರಣಾರವಿಂದಗಳನ್ನು **ಭಜಿಸುತಿರು** = ಕೊಂಡಾಡುತ್ತಿರು. ॥ ೨೬ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಶ್ರೀಪರಮಾತ್ಮನನ್ನು ನಿಷ್ಕಾಮನಾಗಿ ಐಹಿಕ ವಿಷಯಗಳ ಅಪೇಕ್ಷಿಸದೆ ಭಜಿಸುತಿರು–ಎಂತ ಹೇಳತಾರೆ.

ಅಪರೋಕ್ಷಿಗಳಾದ ತನ್ನ ಭಕ್ತರನ್ನ ಶ್ರೀದೇವರಿಂದ ಅಭಿಮನ್ಯಮಾನವಾದ ವೈಕುಂಠಾಖ್ಯ ಮನಿಯಲ್ಲಿ ಲಿಂಗಭಂಗಾ ನಂತರದಲ್ಲಿಟ್ಟು, ಸದಾ ಸರ್ವಕಾಲದಲ್ಲಿ ಅವರವರ ಸ್ವರೂಪ ಯೋಗ್ಯತಾನುಸಾರ ಸ್ವರೂಪಾನಂದಗಳ ಉಣಿಸತಾ, ಮುಕ್ತರಾದವರು ತಮ್ಮ ತಮ್ಮ ಯೋಗ್ಯತಾನುಸಾರ ಕಾಮನಾ ಮಾಡಿದ್ದು, ಸ್ಥಿತಿಕಾಲದ ಕಾಮನಾವ್ಯರ್ಥ ಮಾಡಿದಂತೆ ಮಾಡದೆ, ಕಾಮಿತಗಳ ಕೊಡತಾ, ವ್ಯವಧಾನಸಾಂಕೇತದಿಂದ ವಿಯೋಗರಹಿತನಾಗಿ, ಬಿಂಬನಾಗಿ ಆವಾಸ ನಾಗಿದ್ದು ಮತ್ತು ಅವ್ಯವಧಾನದಲ್ಲಿ ಸಾವಕಾಶವಿಲ್ಲದೇನೇ ಕಾಮಿತಗಳ ಕೊಡತಾ, ತನ್ನ ಭಕ್ತರ ಸ್ಥಿತಿಕಾಲದಲ್ಲಿ ದೇಹಾನುಬಂಧಿಗಳಾದ ತತ್ವಾಭಿಮಾನೀದೇವತಾರೂಪಗಳಿಂದ ದೇಹೇಂದ್ರಿಯಾದಿಗಳ ರಕ್ಷಿಸಿರ ತಾನೆ. ಪ್ರಾಕೃತದೇಹಾನು ಬಂಧಿಗಳೆಂತಲೂ ತಾತ್ಪರ್ಯವೇ. ಇಂಥಾ ಪರಮಾತ್ಮ ಸುಖವೋ ದುಃಖವೋ–ಏನು ಕೊಡತಾನೋ, ಅದರನ್ನ ಜ್ಞಾನ ಭಕ್ತಿ ವೈರಾಗ್ಯಪೂರ್ವಕ ಭುಂಜಿಸತಾ, ತದ್ವ್ಯತಿರಿಕ್ತ ಮತ್ತೇನೂ ಬೇಡದೆ, ಜ್ಞಾನ ಭಕ್ತಿ ವೈರಾಗ್ಯಗಳ ಮಾತ್ರ ಬೇಡತಾ, ಶ್ರೀಪರಮಾತ್ಮನ ಪಾದಕಲಮದ್ವಂದ್ವಗಳ ಭಜನಿಮಾಡತಾ ಇರು. ನಿರ್ಲಿಪ್ತನಾಗಿ ಮದಹಿಡಿದ ಆನೆಯೋಪಾದಿಯಲ್ಲಿ ನಿರ್ಭಯದಿ ಸಂಚರಿಸು. ಪರಮಾತ್ಮ ರಕ್ಷಿಸತಾನೆಂತ ತಾತ್ಪರ್ಯ. ॥ ೨೬ ॥

**೨. ಭಾವಪ್ರಕಾಶಿಕೆ**

ಶ್ರೀಪರಮಾತ್ಮನು ತನ್ನ ಭಕ್ತರನ್ನು ದೇಹಾನುಬಂಧಿಗಳಂತೆ ಸಮೀಪದಲ್ಲೇ ಇದ್ದು ಅವರವರ ಮನೋಭೀಷ್ಟವನ್ನು ಪೂರೈಸುತ್ತಿರುವನು. ಈಶ್ವರಸಂಕಲ್ಪದಿಂದ ಏನು ಬಂದರೂ, ಅಷ್ಟಕ್ಕೆ ಸಂತೋಷಪಡುತ್ತಾ, ಕಾಮ್ಯಫಲವನ್ನು ಬೇಡದೆ, ಅವನ ಪಾದಕಮಲವನ್ನು ಭಜಿಸುತ್ತಾ, ಮತ್ತಾರನ್ನೂ ಅಪೇಕ್ಷಿಸದೆ, ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಮದಗಡದಂತೆ ಸಂಚರಿಸು. ॥ ೨೬ ॥

**೩. ಭಾವದರ್ಪಣ**

"ಶ್ರೀನಿಕೇತನೇತಿ"-॥ ನಿಷ್ಕಾಮೋಪಾಸನೆಯಿಂದ ಭಗವತ್ಪ್ರೀತಿ ಪಡಿಸುತ್ತ, ಸಾಧನಮಾಡೆಂಬ ತಾತ್ಪರ್ಯ. ॥ ೨೬॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ಶ್ರೀನಿಕೇತನ"-ಇತಿ ॥ ಕಾಮದ (ಪ್ರದ)-ಓಂ ಯಜ್ಞಂ ಚ ನಸ್ತನ್ವಂ ಚ ಪ್ರಜಾಂ ಚಾದಿತ್ಯೈರಿಂದ್ರಃ ಸಹ ಸಗಣೋ ಮರುದ್ಭಿರಸ್ಮಾಕಂ ಭೂತು ॥ ಓಂ ॥ ಕಾಮಂ ಕಾಮಿತಂ ತನು ಪ್ರಜಾಧಿಕಂ, ದದಾತಿಕಲ್ಪಯತಿ-ಇತಿ ತಥೋಕ್ತಃ ॥ ೨೬ ॥

**ಕನ್ನಡಾರ್ಥ**

"ಶ್ರೀಹರಿಯು ಕಾಮಪ್ರದನು. ಅವನು ಪರಮಾನುಗ್ರಹಮಾಡಿ, ಭಕ್ತರಿಗೆ ಏನು ಕೊಡುತ್ತಾನೋ, ಅದನ್ನು ಪ್ರಸಾದಭಾವನೆಯಿಂದ ಸ್ವೀಕರಿಸಬೇಕು. ನಿರಂತರ ಅವನ ಪಾದಪದ್ಮಗಳನ್ನು ಭಜಿಸುತ್ತಿರಬೇಕು. ಅಂತಹವರಿಗೆ ಯಾವಭಯವೂ ಇಲ್ಲ - ಎಂದು ತಿಳಿಸುತ್ತಾರೆ"- "ಶ್ರೀನಿಕೇತನ"-ಎಂಬ ಪದ್ಯದಿಂದ.

ಕಾಮಪ್ರದ-ಎಂದರೆ, ಅಪೇಕ್ಷಿತವಾದ ಪತ್ನೀ-ಸುತರು-ವಿತ್ತಾದಿ ಸಕಲಾಭೀಷ್ಟಗಳನ್ನೂ ಒದಗಿಸಿಕೊಡುವವನು - ಎಂದರ್ಥ. ಇದು ಬೃಹತೀಮಂತ್ರದ ಅರ್ಥ.

**೫. ಶ್ರೀಗುರುಹೃದಯಪ್ರಕಾಶಿಕೆ**

ಆದರೂ ನಿಷ್ಕಾಮಭಜನೆ ಇರಬೇಕೆಂದು ತಿಳಿಸುತ್ತಾರೆ. ಶ್ರೀನಿಕೇತನೆಂದು ಲಕ್ಷ್ಮೀನಿಲಯನಾದ ದೇವರು ತನ್ನ ಭಕ್ತರನ್ನು ದೇಹಾನುಬಂಧಿಗಳು ಒಳಗೂ ಹೊರಗೂ ಕೂಡ ಸಾಕುವಂತೆ ಅವ್ಯವಧಾನದಲಿ–ಅಂದರೆ, ಭುಂಜಿಸುತ ಎಂದರೆ, ಕಾಲಕರ್ಮಾನುಸಾರ ದೇವರು ಕೊಟ್ಟ ಕಷ್ಟ ಸುಖ ಏನು ಬಂದಾಗ್ಯೂ, ಅನುಭವಿಸುತ್ತಾ ಮದ್ದಾನೆ ಹೇಗೆ ಅಲಕ್ಷ್ಯವಾಗಿರುವುದೋ, ಹಾಗೆ ಸುಖ ದುಃಖ ಲೇಪ ಮಗ್ನನಾಗದೆ, ದೇವರನ್ನೇ ಸ್ಮರಿಸುತ್ತಾ ಸಂಚರಿಸು. ಮತ್ತೇನು–ಎಂದರೆ, ಇತರ ಪುರುಷಾರ್ಥ ಫಲವನ್ನೇನೂ ಕೇಳದೇ ಆವನ ಪಾದಸ್ಮರಣೆ ಭಜನೆ ಮಾಡುವುದು.

**ಯಸ್ಯ ಯದ್ದೈವ ವಿಹಿತಂ ಸ ತೇನ ಸುಖದುಃಖಯೋಃ ।**

**ಆತ್ಮಾನಂ ತೋಷಯನ್ ದೇಹಿ, ತಮಸಃ ಪಾರಮೃಚ ತಿ ॥**–ಎಂಬ ಭಾಗವತಾರ್ಥ ವಿವರಿಸಿತು. ॥ ೨೬ ॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಶ್ರೀನಿಕೇತನ :**

ಶ್ರೀ–ಎಂದರೆ, ಪರಮಮಂಗಳ ಸ್ವರೂಪಿಣಿಯಾದ ಶ್ರೀಲಕ್ಷ್ಮೀದೇವಿ. (ಸತ್ತ್ವಾಭಿಮಾನಿರೂಪ) ನಿಕೇತನ – ಎಂದರೆ, ಮಂದಿರ. ಶ್ರೀಲಕ್ಷ್ಮೀದೇವಿಯು ಶ್ರೀಹರಿಯ ನಿತ್ಯಾವಿಯೋಗಿನಿಯು. ಶ್ರೀಹರಿಯು ಶ್ರೀವತ್ಸರೂಪದಲ್ಲಿ ತನ್ನ ವಕ್ಷಸ್ಥಳದಲ್ಲಿ ನಿರಂತರ ಲಕ್ಷ್ಮೀದೇವಿಯನ್ನು ಧರಿಸಿದ್ದಾನೆ. ಅಂದರೆ, ಶ್ರೀಹರಿಯು ಲಕ್ಷ್ಮಿಗೆ ಆಶ್ರಯದಾತನು. ಶ್ರೀಗೆಮಂದಿರನಾಗಿರುವುದರಿಂದ, ಶ್ರೀನಿಕೇತನನಾಮಕನು.

೨. ನಮ್ಮ ದೇಹಾನುಬಂಧಿಗಳು ನಮಗೆ ಆಪ್ತರಾಗಿ ಹ್ಯಾಗೆ ಸದಾ ಹೊಂದಿಕೊಂಡಿರುವರೋ, ಅಂತೆಯೇ, ಪರಮಾಪ್ತ ಬಂಧುವಿನಂತೆ ಶ್ರೀಹರಿಯು ಜೀವನ ಅಂತಸ್ಥಿತನಾಗಿದ್ದು, ಬಂಬನಾಗಿದ್ದಾನೆ. ಜೀವರ

ಅಸ್ತಿತ್ವವು ಭಗವದಧೀನವು. ಇದರಿಂದ ಜೀವರಿಗೆ ನಿತ್ಯ ಅವಿಯೋಗಿಯಾಗಿ ಜೀವಾಂತರ್ಯಾಮಿಯಾಗಿ ಬಿಂಬರೂಪದಿಂದ ವಿದ್ಯಮಾನನಾಗಿದ್ದಾನೆ. ಅವ್ಯವಧಾನದಲಿ–ಎಂದರೆ, ಒಂದರಕ್ಷಣವೂ ಎಡಬಿಡದೆ – ನಿತ್ಯಾವಿಯೋಗಿಯಾಗಿ – ಎಂದರ್ಥ. ಈ ನಿಕಟ ಸಂಬಂಧವೇ ಈಶ–ಜೀವರಿಗಿರುವ ಬಿಂಬ–ಪ್ರತಿಬಿಂಬ ಸಂಬಂಧವು.

೩. ಅಂತಹ ಪರಮಾಪ್ತಬಂಧುವಾದ ಪರಮಾತ್ಮನು ಸರ್ವಕಾಲಗಳಲ್ಲಿ ತನ್ನ ಭಕ್ತರ ಸಮಸ್ತಮನೋಭೀಷ್ಟಗಳನ್ನು ಸಲ್ಲಿಸುವನು. ಇದರಿಂದ ಜೀವರಿಗೆ ಸರ್ವದ **ಸಕಲಕಾಮದನು.**

೪. ಸರ್ವದಾ ಸಕಲ ಕಾಮದನಾದ ಸತ್ಯಸಂಲ್ಪನು ತನ್ನ ಚಿತ್ತಾನುಸಾರ, ನಮಗೆ ಯಾವ ಕಾಲದಲ್ಲಿ ಏನು ಕೊಡುತ್ತಾನೋ, ಯಾವ ಸ್ಥಿತಿಯಲ್ಲಿ ಇಟ್ಟಿರುತ್ತಾನೋ, ಅದೇ ನಮ್ಮ ಪಾಲಿನ ಭಾಗ್ಯ. ಅವನ ಚಿತ್ತ ನಮ್ಮ ಪಾಲಿನ ಭಾಗ್ಯ–ಎಂಬ ಉತ್ತಮನುಸಂಧಾನ ಜ್ಞಾನದಿಂದ, ಶ್ರೀಹರಿಯು ಇತ್ತುದೇ ಪರಮಪ್ರಸಾದವೆಂದರಿತು, ನಿರ್ಭೀತನಾಗಿ, ನಿಶ್ಚಂಚಲನಾಗಿ ಮದಿಸಿದ ಆನೆಯು ತನ್ನ ಪಾಡಿಗೆ ತಾನೇ ಸಂಚರಿಸುವಂತೆ, ಸಂಚರಿಸುತ್ತಿರು–ಎಂದಿದ್ದಾರೆ ದಾಸವರ್ಯರು. ಇದೇ ಜಗತ್ತಿಗೆ ದಾಸವರೇಣ್ಯರು ನೀಡಿರುವ ದಿವ್ಯಸಂದೇಶ.

೫. ಪ್ರಾಪಂಚಿಕವಿಷಯ ಭೋಗಲಲಾಸೆಗಳಿಗೆ ಮನಸ್ಸು ಹೋಗದಂತೆ, ಶ್ರೀಪರಮಾತ್ಮನ ಪಾದಪದ್ಮಗಳಲ್ಲಿ ಚಿತ್ತವನ್ನು ನೆಲೆಗೊಳಿಸಿ, ಅವನ ಮಹಿಮಾವಿಷಯಗಳನ್ನು ನಿರಂತರವೂ ಅವನನ್ನು ಭಜಿಸುತ್ತಿರಬೇಕೆಂದು ದಿವ್ಯಮಾರ್ಗದರ್ಶನ ತೋರಿದ್ದಾರೆ–ಜ್ಞಾನವರೇಣ್ಯರಾದ ದಾಸವರ್ಯರು. ಐಹಿಕಸೌಖ್ಯಗಳನ್ನು ಬೇಡದೆ, ನಿಷ್ಕಾಮನಮನದಿಂದ ಆ ನಿರಂಜನ ಮೂರ್ತಿಯನ್ನು ನಿರಂತರ ನೆನೆಸುತ್ತಿರಸಬೇಕೆಂದು ತಾತ್ಪರ್ಯ. ॥ ೨೬ ॥

## ಪದ್ಯ-೨೭

ಮೂಲ :

**ಬೇಡದಲೆ ಕೊಡುತಿಪ್ಪ ಸುರರಿಗೆ ।**
**ಬೇಡಿದರೆ ಕೊಡುತಿಹನು ನರರಿಗೆ ।**
**ಬೇಡಿ ಬಳಲುವ ದೈತ್ಯರಿಗೆ ಕೊಡನೊಮ್ಮೆ ಪುರುಷಾರ್ಥ ॥**
**ಮೂಢರನುದಿನ ಧರ್ಮ ಕರ್ಮವ ।**
**ಮಾಡಿದರು ಸರಿ ಐಹಿಕಫಲಗಳ ।**
**ನೀಡಿ ಉನ್ನತರನು ಮಾಡಿ ಮಹಾನಿರಯನೀವ ॥ ೨೭ ॥**

**ಅವತರಣಿಕೆ :**

ಜೀವರ ಸ್ವರೂಪಾನುಸಾರ ಅವರವರ ಫಲಗಳನ್ನು ನೀಡುವ ಶ್ರೀ ಪರಮಾತ್ಮನ ಮಹಾತ್ಮ್ಯವನ್ನು ತಿಳಿಸುತ್ತಾರೆ. ॥ ೨೭ ॥

**ಪ್ರತಿಪದಾರ್ಥ :**

**ಸುರರಿಗೆ** = ಬ್ರಹ್ಮಾದಿ ದೇವಗಂಧರ್ವಾಂತ ದೇವತಾವರ್ಗಕ್ಕೆ **ಬೇಡದಲೆ ಕೊಡುತಿಪ್ಪ** = ಅವರಿಂದ ಪ್ರಾರ್ಥಿತನಾಗದೇ, ಅವರಿಗೆ ಅಪೇಕ್ಷಿತಗಳಾದ ಸಕಲವಸ್ತುಗಳನ್ನು ನೀಡುತ್ತಾನೆ. (ಅವರು ನಿಷ್ಕಾಮನ ಮನಸ್ಸಿನಿಂದ ದೇವಸೇವಾ ಮಾಡುತ್ತಾರೆ). **ನರರಿಗೆ**= ಮುಕ್ತಿಯೋಗ್ಯರಾದ ನರರಿಗೆ (ಮಾನುಷೋತ್ತಮರಿಗೆ), **ಬೇಡಿದರೆ ಕೊಡುತಿಹನು** = ಯಜ್ಞಯಾಗಾದಿ ಕರ್ಮಗಳ ದ್ವಾರಾ, ಬೇಡಿದಾಗ ಅಭೀಷ್ಟಗಳನ್ನು ಕೊಡುವನು. **ಬೇಡಿ ಬಳಲುವ** = ಸ್ವರ್ಗಸುಖಾದಿಗಳನ್ನು ಬಯಸಿ, ತದ್ದುಶ್ಯೇಷಾರ್ಥವಾಗಿ ಜ್ಯೋತಿಷ್ಟೋಮಾದಿ ಯಜ್ಞಗಳನ್ನು ಪ್ರಯಾಸ ದಿಂದ ಬಳಲಿಬೇಡುವಂಥ, **ದೈತ್ಯರಿಗೆ**= ಸ್ವರೂಪತಃ ಭಗವದ್ವೇಷಿಗಳಾದ ಅಸುರರಿಗೆ, **ಕೊಡ ಒಮ್ಮೆ ಪುರುಷಾರ್ಥ**= ಪರಮಪುರುಷಾರ್ಥರೂಪವನ್ನು ಮುಕ್ತಿಯನ್ನು ಎಂದೆಂದಿಗೂ ನೀಡನು. **ಮೂಢರು** = ಮಿಶ್ರಜ್ಞಾನಿಗಳಾದ

ನಿತ್ಯಸಂಸಾರಿಗಳು, **ಅನುದಿನ** = ಪ್ರತಿದಿನದಲ್ಲೂ, **ಧರ್ಮ ಕರ್ಮವ ಮಾಡಿದರು ಸಿರಿ** = ಸ್ವರ್ಗಸುಖವನ್ನು ಬಯಸಿ, ವರ್ಣಾಶ್ರಮೋಚಿತ ಧರ್ಮಗಳನ್ನು, ಕರ್ಮಗಳನ್ನು ಮಾಡಿದ್ದಾಗ್ಯೂ, **ಐಹಿಕಫಲಗಳ ನೀಡಿ** = ಪ್ರಾಪಂಚಿಕಫಲಗಳನ್ನು ಕೊಟ್ಟು, **ಉನ್ಮತ್ತರನು ಮಾಡಿ** = ಐಹಿಕಫಲಗಳ ಪರಿಣಾಮವಾಗಿ, ಅವರನ್ನು ಮದೋನ್ಮತ್ತರನ್ನಾಗಿ ಮಾಡಿ, ತದ್ದ್ವಾರಾ ಪಾಪಾಭಿವೃದ್ಧಿ ಮಾಡಿಸಿ, **ಮಹಾನಿರಯವ** = ನರಕಾದ್ಯನರ್ಥಗಳನ್ನು, **ಈವ** = ಕೊಡುವವನಾಗುತ್ತಾನೆ. ॥ ೨೭ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಮಾತ್ಮನ ಮಾಹಾತ್ಮ್ಯ ಹೇಳತಾರೆ.

ಕ್ಷರಪುರುಷರಾದ ಮುಕ್ತಿಯೋಗ್ಯ, ತಮೋಯೋಗ್ಯ, ನಿತ್ಯಸಂಸಾರಿಗಳೆಂತ ತ್ರಿವಿಧ ಪುರುಷರು–ಇವರಲ್ಲಿ ಮುಕ್ತಿಯೋಗ್ಯರಲ್ಲಿ ದೇವತೆಗಳು ಸಾಂಶರು, ಮಾನುಷರು, ನಿರಂಶರ–ಎಂತ ನಾಲ್ಕು ವಿಧ. ಈ ನಾಲ್ಕು ವಿಧಪುರುಷರಿಗೆ ಸುಖಪ್ರಯೋಜನವಾದ ಸ್ವರ್ಗಸುಖವೆಂತ ತಾತ್ಪರ್ಯ. ಈ ಸ್ವರ್ಗಸುಖವೆಂಬುದು ಬ್ರಹ್ಮಾದಿದೇವಗಂಧರ್ವಾಂತ ದೇವತೆಗಳಿಗೆ ಅವರವರ ಯೋಗ್ಯತಾನುಸಾರ, ಪ್ರಯತ್ನ ಮಾಡಿ ಬೇಡಿಸಿಕೊಳ್ಳದೇನೆ ಕೊಡುವ–ಅಂದರೆ, ಪರಮಾತ್ಮ ಕೊಡತಾ ಇರತಾನೆ. ಹ್ಯಾಂಗೆಂದರೆ– ಸ್ವರ್ಗಲೋಕ ದೇವತಾಭೋಗಾರ್ಥ ದೇವತೆಗಳ ಪ್ರಾರ್ಥನಾ ಇಲ್ಲದೇನೇ ಭೋಗಸಾಧನಗಳಾದ ಕಾಮಧೇನ್ವಾದಿಗಳ ಸಹಿತ ಆದಿಯಲ್ಲೇ ಸೃಷ್ಟಿ ಮಾಡೋವನಾಗಿ, ದೇವತೆಗಳಿಗೆ ಆಲಯವನ್ನಾಗಿ ಮಾಡಿ, ಅಲ್ಲಿ ಆವಾಸರನ್ನಾಗಿ ಮಾಡಿ ಭೋಗಪಡಸತಾ ಇದ್ದಾನೆ. ಅತಏವ ಸ್ವರ್ಗ ಸುಖ ಸುರರಿಗೆ ಬೇಡಿಸಿಕೊಳ್ಳದೇನೇ ಕೊಡತಾ ಇರತಾನೆ. ದಾವ ಕಾಲದಲ್ಲಿ ದಾವದು ತಮಗೆಯೋಗ್ಯತಾನುಸಾರ ಇಚ್ಛಾ ಮಾಡತಾರೋದರನ್ನ ಕಾಮಧೇನ್ವಾದಿಗಳ ದ್ವಾರಾ ಕೊಡತಾ ಇರತಾನೆ. ಮುಕ್ತಿಯೋಗ್ಯರಾದ

ನರರಿಗೆ, ಜ್ಯೋತಿಷ್ಟೋಮಾದಿ ಯಜ್ಞಗಳ ಮಾಡಿ ಪ್ರಯಾಸಪಡುವಂಥ ಭಗವದ್ವ್ವೇಷಿಗಳಾದ ಅಸುರರಿಗೆ ಕದಾಚಿತ್ ಒಂದು ಕಾಲದಲ್ಲಿ ಆದರೂ ಕೊಡೋದಲ್ಲ. ಮೂಢಜ್ಞಾನಿಗಳಾದ, ಮಿಶ್ರಜ್ಞಾನಿಗಳಾದ ನಿತ್ಯ ಸಂಸಾರಿಗಳು ಪ್ರತಿ ದಿನದಲ್ಲೂ ಸ್ವರ್ಗಸುಖಕ್ಕಾಗಿ ಧರ್ಮವೇನು, ಕರ್ಮವೇನು, ಮಾಡಿದ ಕಾಲಕ್ಕೂ, ಆಕರ್ಮಕ್ಕೆ ಐಹಿಕಫಲಗಳ ಕೊಟ್ಟು, ಸ್ವರ್ಗಫಲ ಕೊಡದೇನೇ, ಐಹಿಕ ಫಲಗಳಿಂದ ಉನ್ಮತ್ತರನ್ನಾಗಿ ಮಾಡಿ, ತದ್ವಾರಾ ಪಾಪಾಭಿವೃದ್ಧಿ ಮಾಡಿ, ದೊಡ್ಡದಾದ ನರಕ ಕೊಡೋವನಾಗತಾನೆ. ಇದರಿಂದ, ಸ್ವರ್ಗಸುಖ ಮತ್ತು ಯೋಗ್ಯರಿಗೆ ಮಾತ್ರವೆಂತ ತಾತ್ಪರ್ಯ. ॥ ೨೭ ॥

**೨. ಭಾವಪ್ರಕಾಶಿಕೆ**

ಉತ್ತಮ, ಮಧ್ಯಮ, ಅಧಮ, ಅಧಮಾಧಮ ಭಕ್ತರುಗಳ ಸಾಧನೆಯ ಫಲಗಳನ್ನು ಹೇಳುತ್ತಾ, ಉತ್ತಮಭಕ್ತರಿಗೆ ಅವರು ಕೇಳಿಕೊಳ್ಳದೆ ಇದ್ದರೂ, ಉತ್ತಮಗತಿಯನ್ನು ಕೊಡುತ್ತಾನೆ. ಮಧ್ಯಮ ಭಕ್ತರು ಬೇಡಿಕೊಂಡರೆ, ಅವರಿಗೆ ಕೊಡುತ್ತಾನೆ. ಅಧಮಭಕ್ತರು ಬೇಡಿಕೊಂಡರೂ ಕೊಡುವುದಿಲ್ಲ. ಅಧಮಾಧಮರು ಪುಣ್ಯಕರ್ಮಗಳನ್ನು ಮಾಡಿದರೂ, ಅವುಗಳ ಫಲರೂಪವಾದ ಉತ್ತಮಗತಿಯನ್ನು ಕೊಡದೆ, ನಶ್ವರವಾದ ಐಹಿಕಫಲಗಳನ್ನು ಕೊಟ್ಟು, ಅವರನ್ನು ಅಹಂಕಾರಕ್ಕೆ ಗುರಿಮಾಡಿ, ತನ್ಮೂಲಕ ನರಕಕ್ಕೆ ಗುರಿ ಮಾಡುವನು. ॥ ೨೭ ॥

**೩. ಭಾವದರ್ಪಣ**

ದೇವ ಮಾನವ ದಾನವರಿಗೆ ಶ್ರೀಹರಿ ಫಲಕೊಡತಕ್ಕ ವಿಧಾನ ಹೇಳುತ್ತಾರೆ–ಬೇಡದಲೆ–ಇತಿ ॥ ೨೭ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

"ಬೇಡದಲೆ"–ಇತಿ ॥ "ಮುಭ್ಯೇಷ್ಟಂ" "ವಾ"–ಇತ್ಯುಕ್ತೇಃ ॥೨೭॥

### ಕನ್ನಡಾರ್ಥ

ತ್ರಿವಿಧಚೇತನರಾದ ದೇವ–ಮಾನವ–ದಾನವ – ಎಂಬ ಜೀವರಾಶಿಗಳಲ್ಲಿ ಶ್ರೀಹರಿಯು ಅವರವರ ಸ್ವಭಾವಯೋಗ್ಯತೆ ಗಳಿಗನುಸಾರ, ಅದನ್ನು ನಿಮಿತ್ತೀಕರಿಸಿ, ಫಲಪ್ರದನೆಂದು ತಿಳಿಸುತ್ತಾರೆ–"ಬೇಡದೆಲೆ"–ಎಂಬ ಪದ್ಯದಿಂದ.

ಶ್ರೀಮದಾಚಾರ್ಯರು **ಅನುವ್ಯಾಖ್ಯಾನದಲ್ಲಿ**, ದೇವತೆಗಳಿಗೆ ಮುಖ್ಯ ಇಷ್ಟವಸ್ತುವೇ "ಶ್ರೀ ಪರಮಾತ್ಮನು"–ಎಂದು ಶ್ರುತಿ ಸ್ಮೃತಿವಾಕ್ಯಗಳಿಂದ ಸಮರ್ಥಿಸುತ್ತಾರೆ. ದೇವತೆಗಳಿಗೆ ಶ್ರೀಹರಿಯೇ ಪರಮಇಷ್ಟವಾದ್ದರಿಂದ, ಅವನನ್ನು ಏನೂ ಬೇಡುವುದಿಲ್ಲ–ಎಂದು ತಾತ್ಪರ್ಯ. ॥ ೨೭ ॥

**ಸ. ಶ್ರೀಗುರುಹೃದಯಪ್ರಕಾಶಿಕೆ**

ತ್ರಿವಿಧಸ್ವಭಾವ ವ್ಯಕ್ತಿಮಾಡಿ ಕೊಡುವುದರಿಂದ, ದೇವರು ನಿರ್ದೋಷನೆಂದು ಸ್ಮರಿಸೆಂದು ತಿಳಿಸುತ್ತಾರೆ–ಬೇಡದೆ–ಎಂದು.

ದೇವತೆಗಳಿಗೆ, ಪ್ರಾರ್ಥಿಸದೇ ಇದ್ದಾಗ್ಯೂ, ಪ್ರಹ್ಲಾದನಿಗೆ ಕೊಟ್ಟಂತೆ, ಪದವಿ ಮೊದಲಾದ ಸುಖಗಳನ್ನು ದೇವರು ಕೊಡುವನು. ಮನುಷ್ಯರಿಗೆ ಪ್ರಾರ್ಥಿಸಿಕೊಂಡು, ತದ್ಯೋಗ್ಯ ಸುಖಾದಿಗಳನ್ನು ಕೊಡುವನು. ಅಸುರರು ನಿತ್ಯಸುಖವನ್ನು ಕೇಳಿ, ತಪಸ್ಸು ಮಾಡಿದಾಗ್ಯೂ ಅವರ ಸ್ವಭಾವ ವ್ಯತ್ಯಾಸ ಮಾಡಿದರೆ ನಾಶವೇ ಮಾಡಿದ ಹಾಗೆ ಆದೀತೆಂದು ನಿತ್ಯ ಸುಖ ಪುರುಷಾರ್ಥ ಕೊಡುವುದಿಲ್ಲ. ಮೂಢರೆಂಬ ನಿಜವಾದ ಜ್ಞಾನಶೂನ್ಯ ರಾದ ಆ ಅಯೋಗ್ಯರು ಧರ್ಮಕರ್ಮವನ್ನು ದೇವರ ಲೀಲಾ ಪ್ರೇರಣೆಯಿಂದ ಮಾಡಿದಾಗ್ಯೂ, ಇಹಲೋಕದ ತಾಮಸ ಸುಖಗಳನ್ನು ಕೊಟ್ಟು,ಅವರ ಸ್ವಭಾವ ಮದವನ್ನೇ ವ್ಯಕ್ತಿಮಾಡಿ ಮಹಾನಿರಯವೆಂಬ ತಮಸ್ಸನ್ನು ಕೊಡುವನು.

**ಸತ್ಯಂ ದಿಶತ್ಯರ್ಥಿತಮರ್ಥಿತೋನೃಣಾಂ ನೈವಾರ್ಥಿತಂ ಯತ್ಪುನರರ್ಥಿನೋಯತಃ ।**

**ಸ್ವಯಂವಿಧತ್ತೇ ಭಜತಾಮನಿಚ್ಛತಾಮಿಚ್ಛಾ ನಿಧಾನಂ ನಿಜಪಾದ ಪಲ್ಲವಂ ॥** – ಎಂಬ ಭಾಗವತಾರ್ಥ ವಿವರಿಸಿತು. ॥ ೨೭ ॥

**ಸರ್ವವ್ಯಾಖ್ಯಾನಸಾರಸಂಗ್ರಹ**

೧. ತ್ರಿವಿಧ ಜೀವರ ವಿಚಾರ ಮತ್ತು ಅವರ ಸ್ವರೂಪ ಯೋಗ್ಯತೆ, ಅದಕ್ಕನುಸಾರವಾಗಿ ಫಲಪ್ರದತ್ವ–ಈ ವಿವರಗಳನ್ನು ತಿಳಿಸುತ್ತಾರೆ.

೨. ಬ್ರಹ್ಮಾದಿ ದೇವಗಂಧರ್ವಾಂತ ದೇವತಾವರ್ಗಕ್ಕೆ ಅವರು ಪ್ರಾರ್ಥನೆ ಮಾಡದಿದ್ದರೂ ಸಹ ಅವರ ಅಭಿಲಾಷೆಗಳನ್ನು ಸಲ್ಲಿಸುತ್ತಾನೆ.

ಇವರು ಉತ್ತಮಾಧಿಕಾರಿಗಳು. ನಿಷ್ಕಾಮಕಾಮನಿರತರಾದ ಈ ದೇವತಾವರ್ಗವು ಕೇವಲ ವಿಷ್ಣು ಪ್ರೇರಣೆ ಮಾ ಮತ್ತು ವಿಷ್ಣುಪ್ರೀತ್ಯರ್ಥಂ–ಎಂಬ ಉತ್ತಮ ಜ್ಞಾನಾನುಸಂಧಾನದಿಂದ ಭಗವಂತನನ್ನು ಉಪಾಸಿಸುವರು. ಅವರ ನಿಷ್ಕಾಮ ಹಾಗೂ ನಿಷ್ಕಲ್ಮಶ ಭಕ್ತಿಭಾವಕ್ಕೆ ಮೆಚ್ಚಿ, ಶ್ರೀ ಪರಮಾತ್ಮನು ಅವರು ಬೇಡದಿದ್ದರೂ ಸಹ ಅವರಿಗೆ ಪರಮಾನುಗ್ರಹ ಮಾಡುವನು. ಇದರಿಂದ–"ಬೇಡದೆಲೆ ಕೊಡುತಿಪ್ಪ ಸುರರಿಗೆ"–ಎಂದಿದ್ದಾರೆ ದಾಸರಾಯರು.

**೩. ಬೇಡಿದರೆ ಕೊಡುತಿಹನು ನರರಿಗೆ :**

ಮಧ್ಯಮಾಧಿಕಾರಿಗಳಾದ ಮಾನುಷೋತ್ತಮರಿಗೆ ಬೇಡಿದರೆ ಮಾತ್ರ ಅಪೇಕ್ಷಿತಾರ್ಥಗಳನ್ನು ಕೊಡುತ್ತಾನೆ.

ಅಂತಹ ಮಧ್ಯಮಾಧಿಕಾರಿಗಳು ಜ್ಯೋತಿಷ್ಟೋಮಾದಿ ಯಜ್ಞಗಳನ್ನು ಮನೋಭೀಷ್ಟಗಳಿಗಾಗಿ ಮಾಡುವರು.

೪. ಭಗವದ್ದ್ವೇಷಿಗಳಾದ ಅಸುರರು ತಮೋಯೋಗ್ಯಜೀವರು. ಅಂತಹ ದೈತ್ಯರು ಸ್ವಾರ್ಥಸಾಧನೆಗಾಗಿ ಬೇಡಿ ಬಳಲುವರು. ಅವರಿಗೆ ಎಂದೆಂದಿಗೂ ಪರಮಪುರುಷಾರ್ಥರೂಪವಾದ ಮೋಕ್ಷವನ್ನು ನೀಡುವುದಿಲ್ಲ. ನಿತ್ಯಾನಂದರೂಪವಾದ ಮುಕ್ತಿಭಾಗ್ಯವು ಅವರ ಸ್ವರೂಪ ಸ್ವಭಾವಕ್ಕೆ

ವಿರೋಧವಾದದ್ದು. ಈ ಕಾರಣದಿಂದ, ಸತ್ಯಸಂಕಲ್ಪನಾದ ಸರ್ವೇಶ್ವರನು ಅಂತಹ ದೈತ್ಯರಿಗೆ ಕೊಡನೊಮ್ಮೆ ಪುರುಷಾರ್ಥ.

೫. ಅಧಮಾಧಿಕಾರಿಗಳಾದ ನಿತ್ಯಸಂಸಾರಿಗಳಿಗೆ "ಮೂಢ"ರೆಂದು ಕರೆದಿದ್ದಾರೆ ದಾಸರಾಯರು. ಅವರು ಮಾಡುವ ಧರ್ಮ ಕರ್ಮಗಳಿ ಫಲರೂಪವಾಗಿ ಐಹಿಕಭೋಗಭಾಗ್ಯಗಳನ್ನು ಮಾತ್ರ ನೀಡುವನು. ವಿಷಯಾಪೇಕ್ಷಿತರಾಗಿ ಕರ್ಮಗಳನ್ನು ಆಚರಿಸುವರು. ಅವರಿಗೆ ಪ್ರಾಪಂಚಿಕ ಸುಖೋಪಭೋಗಗಳನ್ನು ಒದಗಿಸಿ, ತದ್ವಾರಾ ಅವರನ್ನು ಮದೋನ್ಮತ್ತರನ್ನಾಗಿ ಮಾಡುವನು. ಅದರ ಫಲ–ನರಕಾದ್ಯನರ್ಥ ಭೋಗ.

ಹೀಗೆ, ರಾಜಸಗುಣೋಪೇತರಾದ ನಿತ್ಯಸಂಸಾರಿಗಳಿಗೆ ಸ್ವರ್ಗಭೋಗ. ಆ ಪುಣ್ಯ ಕ್ಷೀಣವಾಗುತ್ತಿರಲು, ಪುನಃ ಭೂಮಿಯಲ್ಲಿ ಜನ್ಮ ದುಷ್ಕರ್ಮದಿಂದ ನರಕಾದ್ಯನರ್ಥಗಳು–ಹೀಗೆ ಮಿಶ್ರರೂಪವಾದ ಫಲವನ್ನ ಅನುಭೋಗಿಸುತ್ತಿರುವರು. ॥ ೨೭ ॥

## ಪದ್ಯ-೨೮

**ಮೂಲ :**

**ತರಣಿ ಸರ್ವತ್ರದಲಿ ಕಿರಣವ ।**
**ಹರಹಿ ತತ್ತದ್ವಸ್ತುಗಳನನು ।**
**ಸರಿಸಿ ಅದರದರಂತೆ ಛಾಯವ ಕಂಗೊಳಿಪ ತೆರದಿ ॥**
**ಅರಿಧರಾಜಾನೇಜ ಜಗದೊಳ ।**
**ಗಿರುವ ಛಾಯಾತಪನೆನಿಸಿ ಸಂ**
**ಕರುಷಣಾಹ್ವಯ ಅವರವರ ಯೋಗ್ಯತೆಗಳಂತಿಪ್ಪ ॥ ೨೮ ॥**

**ಅವತರಣಿಕೆ :**

ಅವರವರ ಸ್ವರೂಪಯೋಗ್ಯತಾನುಸಾರ ಫಲಭೋಗವನ್ನು ಕೊಡುವ ಶ್ರೀಪರಮಾತ್ಮನಿಗೆ ವೈಷಮ್ಯದೋಷವಿಲ್ಲವೆಂದು ಸದೃಷ್ಟವಂತವಾಗಿ ತಿಳಿಸುತ್ತಾರೆ. ॥ ೨೮ ॥

**ಪ್ರತಿಪದಾರ್ಥ :**

**ತರಣಿ** = ಸೂರ್ಯನು, **ಕಿರಣವ** = ತನ್ನ ಕಿರಣಗಳನ್ನು, **ಸರ್ವತ್ರದಲಿ** = ಸರ್ವಪ್ರದೇಶಗಳಲ್ಲಿ, **ಹರಹಿ** = ಹರಡಿದವನಾಗಿ, **ತತ್ತದ್ವಸ್ತುಗಳನ್ನುಸರಿಸಿ** = ಆಯಾಯಾ ವಸ್ತುಗತ ತೇಜಸ್ಸನ್ನು ಅನುಸರಿಸಿ, **ಅದರದರಂತೆ** = ಆಯಾ ವಸ್ತುಗಳ ಸ್ವಾಭಾವಿಕವಾದ ತೇಜಸ್ಸಿನಂತೆ, **ಛಾಯವ** = ಭಿನ್ನಭಿನ್ನವಾಗಿ ಛಾಯಾರೂಪವಾದ ಪ್ರತಿಬಿಂಬಗಳನ್ನು, **ಕಂಗೊಳಿಪ ತೆರದಿ** = ಕಣ್ಣಿಗೆ ಕಾಣಿಸುವೋಪಾದಿಯಲ್ಲಿ, **ಅರಿಧರಾ** = ಚಕ್ರಾಯುಧವನ್ನು ಧರಿಸಿದ ಚಕ್ರಪಾಣಿಯಾದ, **ಅಜ** = ಉತ್ಪತ್ತಿ ಶೂನ್ಯವಾದ (ಜನನ ಮರಣ ವಿದೂರನಾದ), **ಅನೇಜ** = ದುರ್ಬಲದಿಂದ ಪ್ರಾಪ್ತಾವಾಗುವ ಕಂಪನಾದಿ ದೋಷಗಳಿಂದ ದೂರನಾದಂಥ ಶ್ರೀಪರಮಾತ್ಮನು, **ಜಗದೊಳಗಿರುವ** = ತ್ರಿವಿಧ ಜೀವವರ್ಗಗಳಲ್ಲಿರುವ, **ಛಾಯ ಆತಪನೆನಿಸಿ** = ನೆರಳು-ಬಿಸಿಲು

ಎಂಬ ಉಭಯನಾಮಗಳಿಂದ ಕರೆಸುವವನಾಗಿ, **ಸಂಕರುಷಣಾಹ್ವಯ** = ಸಂಕರ್ಷಣನಾಮಕನಾದ ಶ್ರೀಪರಮಾತ್ಮನು, **ಅವರವರ** = ಆಯಾಯಾ ಜೀವರುಗಳ ಭಿನ್ನಭಿನ್ನವಾದ, ಸ್ವರೂಪ ಯೋಗ್ಯತೆಗಳಿಗನುಸಾರವಾಗಿ, **ಇಪ್ಪ** = ಅವರಲ್ಲಿ ಅಂತರ್ಯಾಮಿಯಾಗಿದ್ದು, ತದನುಸಾರವಾದ ಫಲಗಳನ್ನು ಕೊಡುವನು. ॥ ೨೮ ॥

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತಪ್ರಕಾರ ಸ್ವರ್ಗಸುಖ ಕೆಲವರಿಗೆ ಕೊಟ್ಟು, ಕೆಲವರಿಗೆ ಕೊಡದೇ ಇರೋಣದರಿಂದ, ದೇವರಿಗೆ ವೈಷಮ್ಯ ಇಲ್ಲೆಂದು ಹೇಳತಾರೆ.

ಸೂರ್ಯನು ತನ್ನ ಕಿರಣಗಳ ಸರ್ವಪ್ರದೇಶದಲ್ಲಿ ಹರವಿದವನಾಗಿ, ಅದರಲ್ಲಿ ವಜ್ರ ಕೆಂಪು ನೀಲಿ ಇವುಗಳಲ್ಲಿ ಹರವಿದ ಕಿರಣಗಳು ಆಯಾ ವಸ್ತುಗಳಾದ ವಜ್ರಾದಿಗಳಲ್ಲಿ ಸ್ವಾಭಾವಿಕವಾಗಿ ಭಿನ್ನಭಿನ್ನಗಳಾಗಿ ಇರತಕ್ಕ ತೇಜಸ್ಸನ್ನ ಅನುಸರಿಸಿ, ಅದರದರ ತೇಜಸ್ಸಿನಂತೆ ಛಾಯಗಳು ಬಹಿಃಅಭಿವ್ಯಕ್ತಿಯಾಗಿ, ಭಿನ್ನಭಿನ್ನವಾಗಿ ಕಣ್ಣಿಗೆ ಕಾಣೋದಾಗತದೆ. ಸೂರ್ಯನ ಕಿರಣದಲ್ಲಿ ದೋಷವಿಲ್ಲ. ಆಯಾ ವಸ್ತುಗಳಲ್ಲಿ ಪೂರ್ವೋಕ್ತಪ್ರಕಾರ ತ್ರಿವಿಧ ಪ್ರಕಾರ ಇರೋದಾಗಿ ಅದೆ. ಇದರೋಪಾದಿಯಲ್ಲಿ ಚಕ್ರಾಯುಧವನ್ನು ಧರಿಸಿದಂಥಾ ಉತ್ಪತ್ತಿ ಶೂನ್ಯನಾದಂಥಾ, ದುರ್ಬಲರಿಂದ ಪ್ರಾಪ್ತವಾಗತಕ್ಕ ಕಂಪನಾದಿ ದೋಷದಿಂದ ದೂರನಾದಂಥಾ ಪರಮಾತ್ಮ, ಆಯಾ ಜೀವರುಗಳ ಸ್ವರೂಪಗಳೆಂಬೋ ತ್ರಿವಿಧವಾದ ವಜ್ರಾದಿಗಳಲ್ಲಿ ಸೂರ್ಯ ಸದೃಶನಾಗಿದ್ದು, ಆಯಾ ಜೀವರ ಅನಾದಿಸ್ವಭಾವವನ್ನನುಸರಿಸಿ, ಅವರವರಿಗೆ ಭೋಗಕ್ಕೆ ಯೋಗ್ಯವಾದ ಫಲಗಳ ಅನಾದಿ ಸ್ವಭಾವವನ್ನನುಸರಿಸಿ ಅವರವರಿಗೆ ಭೋಗಕ್ಕೆ ಯೋಗ್ಯವಾದ ಫಲಗಳ ವ್ಯಕ್ತಮಾಡಿ ಕೊಡತಾನಾದ್ದರಿಂದ, ಸೂರ್ಯ ಹ್ಯಾಂಗೆ

ವೈಷಮ್ಯರಹಿತನೋತದ್ವತ್ ಪರಮಾತ್ಮ ವೈಷಮ್ಯರಹಿತನು. ತ್ರಿವಿಧ ಜೀವರೊಳಗೆ ಇರುವ, ನೆರಳು ಬಿಸಿಲು, ಛಾಯಾತಪನೆಂತ–ಎರಡು ನಾಮದಿಂದ ಕರಸಿ ಬಂಟನಾಗಿದ್ದಾನೆ. ಸಂಸಾರವೆಂಬೋ ಬಿಸಿಲಿನ ತಾಪದಿಂದ ಸಹಿಸಲಾರದವರು, ಛಾಯಾ ಸಾಂಕೇತನಾದ ಪರಮಾತ್ಮನ ಆಶ್ರಯ ಮಾಡಿದರೆ ಪೂರ್ವೋಕ್ತ ತಾಪ ಪರಿಹಾರವಾಗತದೆ. ಹಾಂಗಲ್ಲದೆ ಪೂರ್ವೋಕ್ತತಾಪದಿಂದ ಯುಕ್ತನಾದವನು ತನ್ನ ದೇಹ ಛಾಯಾವನ್ನೇ ತಾನು ಆಶ್ರಯ ಮಾಡಿ, ತಾಪ ಪರಿಹಾರಮಾಡಿಕೋತೇನೆಂದು ಪ್ರಯತ್ನ ಮಾಡಿದವಗೆ, ಛಾಯಾ ಅನುಕೂಲಿಸದೆ, ಬಿಸಿಲಿನಿಂದ ದುಃಖಿತನಾಗತಾನೆ. ಭಗವದ್ಭಕ್ತರು ಪರಮಾತ್ಮನ್ನ ಆಶ್ರಯ ಮಾಡಿದವರು. ತದನ್ಯರು ಅಲ್ಲವಾದ್ದರಿಂದ ಭಗವದ್ಭಕ್ತರಿಗೆ ಛಾಯಾರೂಪನಾಗಿಯೂ, ತದನ್ಯರಿಗೆ ಆಪ್ತನಾಗಿಯೂ ಇದ್ದಾನೆ. ಇದು ಅಧಿಕಾರಿಗಳ ಅನಾದಿಸ್ವರೂಪ ಸ್ವಭಾವದೋಷ. ಈಶ್ವರಂದು ಅಲ್ಲ. ಸಂಕರ್ಷಣರೂಪೀಪರಮಾತ್ಮ ಆಯಾಜೀವರುಗಳ, ಈಶ್ವರನಿಂದ ರಚಿತವಲ್ಲದ ಅನಾದಿಯಾದ ಭಿನ್ನ ಭಿನ್ನ ಯೋಗ್ಯತೆಗಳೋಪಾದಿಯಲ್ಲಿ ಫಲಗಳ ಕೊಡೋವನಾಗತಾನೆ. ॥ ೨೮ ॥

**೨. ಭಾವಪ್ರಕಾಶಿಕೆ**

ಸೂರ್ಯನ ಕಿರಣವು, ಭೂಮಿಯಲ್ಲಿ ಮನುಷ್ಯ ಪಶು ವೃಕ್ಷಾದಿಗಳ ಮೇಲೆ ಬೀಳಲು, ಅವುಗಳಂತೆಯೇ ಛಾಯದ ಆಕಾರವು ಕಾಣುವುದು. ಗಿಡದ ನೆಳಲು ಗಿಡದ ಆಕಾರವಾಗಿಯೂ, ಮನುಷ್ಯಾದಿಗಳ ನೆಳಲು ತದಾಕಾರವಾಗಿಯೂ ಕಾಣುವುದು. ಅದರಂತೆ, ಚಕ್ರಪಾಣಿಯಾದ ಶ್ರೀ ಸಂಕರ್ಷಣನು, ಸ್ಥಾವರಜಂಗಮಾತ್ಮಕ ಪ್ರಪಂಚದಲ್ಲಿ ತತ್ತದಾಕಾರನಾಗಿ ಅಲ್ಲಲ್ಲಿದ್ದು, ಭೂಮಿಯಲ್ಲಿ ಹೇಗೆ ಕೆಲವೆಡೆಯಲ್ಲಿ ನೆಳಲು, ಕೆಲವು ಕಡೆಯಲ್ಲಿ ಬಿಸಿಲು ಇರುವುದೋ ಹಾಗೆಯೇ, ತಾನೂ ಭಕ್ತಜನರಿಗೆ ನೆಳಲಂತೆಯೂ, ದೈತ್ಯಾದಿಗಳಿಗೆ ಬಿಸಿಲಂತೆಯೂ, ಅವರವರ ಯೋಗ್ಯತಾನುಸಾರವಾಗಿ ಇರುತ್ತಿರುವನು. ॥ ೨೮ ॥

೩. ಭಾವದರ್ಪಣ

ಧಾರಧ್ಯಾರ್ಥ ಹಿಂದೆ ಹೇಳಿದ ಮಾತೇ ಪುನಃ ಹೇಳುತ್ತಾರೆ । ತರಣೇತಿ॥ ಅರಿಧರೇಜಾನೇಜ – ಅರಿಧರ – ಏಜ – ಅನೇಜ – ಎಂತಪದ । ಅರಿಧರ – ಚಕ್ರಧಾರಿಯಾದಂಥ – ಸಂಕರ್ಷಣನು – ಏಜ –"ಏಜತ್ವಂಕನೇ" ಈಶಾವಾಸ್ಯಭಾಷ್ಯೇ ಉಕ್ತತ್ವಾತ್ । ಈ ಧಾತು ಪರ್ಯಾಲೋಚನೆಯಿಂದ ಬ್ರಹ್ಮಾದಿ ಜೀವರು–ಎಂಬರ್ಥ । ಈ ಜೀವಜಡಾತ್ಮಕ. ಜಗದೊಳು–ಜಗತ್ತಿಲ್ಲಿ । ಛಾಯಾತಪ – ಎಂದರೆ, ಸಜ್ಜನರಿಗೆ ನೆರಳಿನ ಹಾಗೆ. ದುರ್ಜನರಿಗೆ ಬಿಸಿಲಿನ ಹಾಗೆ । ಯೋಗ್ಯತೆಗಳಂತಿಪ್ಪ । ಅವರವರ ಯೋಗ್ಯತಾನುಗುಣವಾಗಿ ಇರುವವನೆಂದು ತಾತ್ಪರ್ಯ । ಇದಕ್ಕೆ ಪ್ರಮಾಣ:– ಛಾಯೇವ ವಿದುಷಾಂ ಪ್ರಭುಃ । ಆತಪಃ ಪಾಪಿನಾಂ ಶಾಸ್ತೀತಿ–ವಚನಾತ್. ॥ ೨೮ ॥

೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ

"ತರಣಿ"–ಇತಿ ॥ "ತರಣಿ"–ಸೂರ್ಯ ॥ ಅರಿ–ಚಕ್ರ ॥ "ಏಜಾನೇದ"– ಚೇತನಾಚೇತನ ॥ "ತದೇಜತಿ"–ಇತ್ಯಾದ್ಯುಕ್ತೇಃ ॥ "ಛಾಯಾ ತಪೌ ಬ್ರಹ್ಮವಿದೋಃ"– ಇತ್ಯುಕ್ತೇಃ ॥ ತದ್ಭಾಷ್ಯೇ – "ಛಾಯೇನವಿದುಷಾಂ ಪ್ರಭುಃ ॥ ಆತಪಃ ಪಾಪಿನಾಮ್"–ಇತಿಚ. ॥೨೮॥

## ಕನ್ನಡಾರ್ಥ

ದೇವ ದಾನವರ ಫಲವ್ಯತ್ಯಾಸಗಳಲ್ಲಿ ಸೂರ್ಯನ ಕಿರಣದ ಛಾಯಾ ಆತಪಗಳ ದೃಷ್ಟಾಂತಗಳನ್ನು ಹೇಳುತ್ತಾರೆ.

"ಏಜಾನಜ"–ಎಂದರೆ, ಚೇತನಾಚೇತನಗಳು. ಸಮಸ್ತವಿಶ್ವವೂ ಪರಮಾತ್ಮನಿಂದಲೇ ಭಯಗೊಳ್ಳುವುದು. ಚೇತನವರ್ಗವು ಭಯ ಹೊಂದುವುದರಿಂದ, "ಏಜ" ಶಬ್ದಕ್ಕೆ "ಚೇತನ" ಎಂದರ್ಥವಾಗುವುದು. ಪರಮಾತ್ಮನು ಬ್ರಹ್ಮಜ್ಞಾನಿಗಳ ಪಾಲಿಗೆ ಆಶ್ರಯನೀಡುವ ಛಾಯಾ ಸದೃಶನು. ಪಾಪಿಗಳ ಪಾಲಿಗೆ ಬಿಸಿಲಿನಂತೆ (ಆತಪ) ಫಲದಾಯಕ ನಾಗಿದ್ದಾನೆ. ಈ ಅಭಿಪ್ರಾಯವು "ಛಾಯಾತಪೌ"–ಎಂಬ ಉಪನಿಷತ್ತಿನ

ಭಾಷ್ಯಗಳಲ್ಲಿ ನಿರೂಪಿತವಾಗಿರುವುದು. ಇದರಿಂದ ಪ್ರಸಕ್ತ ದೃಷ್ಟಾಂತವು ಯುಕ್ತವಾಗಿದೆ. ॥ ೨೮ ॥

**ಶ್ರೀ.ಶ್ರೀಗುರುಹೃದಯಪ್ರಕಾಶಿಕೆ**

ದೇವರಿಗೆ ವೈಷಮ್ಯವಿಲ್ಲವೆಂಬರ್ಥವನ್ನೇ ಸದೃಷ್ಟಾಂತವಾಗಿ ದೃಢಪಡಿಸುತ್ತಾರೆ–ತರಣಿ ಎಂದು. ತರಣಿ–ಎಂಬ ಸೂರ್ಯನು ಸರ್ವತ್ರದಲ್ಲೂ ಕಿರಣವನ್ನು ಹರಹಿ, ತತ್ತದ್ವಸ್ತುಸ್ವಭಾವ ವ್ಯತ್ಯಾಸ ಮಾಡದೆ, ಛಾಯಾವನ್ನು ಆದರದರಂತೆ, ಕಾಣಪಡಿಸುವ ಹಾಗೆ, ಅರಿಧರವೆಂಬ ಚಕ್ರಪಾಣಿಹರಿಯು, ಎಜಾನೇಜ–ಎಂದರೆ, ಚಲಾಚಲವಾದ ಜಡಚೇತನಾತ್ಮಕ ಪ್ರಪಂಚದಲ್ಲಿ, ಛಾಯಾ ಎಂದರೆ, ನೆರಳಿನಂತೆ ಸಜ್ಜನರಿಗೆ ಇಷ್ಟಪ್ರದನೆಂದೂ, ಆತಪ–ಎಂದರೆ ಬಿಸಲಿನಂತೆ ಅಯೋಗ್ಯರಿಗೆ ದುಃಖಪ್ರದನೆಂತಲೂ ಕರೆಸಿಕೊಳ್ಳುತ್ತಾನೆ. ಸಂಕರ್ಷಣನೆಂದು ಹೆಸರುಳ್ಳ ಸ್ವಾಮಿ ಅವರವರ ಯೋಗ್ಯತೆಗಳನ್ನು ವ್ಯಕ್ತಿಮಾಡಿ ರಕ್ಷಿಸುವುದರಿಂದ, ನಿರ್ದೋಷನೆಂದರ್ಥ.

**ಛಾಯಾತಪೌ ಬ್ರಹಮವಿದೋ ವದಂತಿ ಪಂಚಾಗ್ನಯೋ ಯೇಚ ತ್ರಿನಾಚಕೇತಾಃ ॥ ಆತಪಃ ಪಾಪಿನಾಂ ನಿತ್ಯಂಛಾಯೇವ ವಿದುಷಾಂ ಪ್ರಭುಃ ॥**–ಎಂಬ **ಕಾಠಕೋಪನಿಷದ್ಭಾಷ್ಯ** ವಿವರಿಸಿತು. ॥ ೨೮ ॥

**ಸರ್ವವ್ಯಾಖ್ಯಾನಸಾರಸಂಗ್ರಹ**

೧. **"ತರಣಿ"**–ಎಂದರೆ ಸೂರ್ಯನು. ತೇಜೋರಾಶಿಯಾದ ಸೂರ್ಯನು ಆಕಾಶದಲ್ಲಿ ಸಂಚರಿಸುತ್ತಾ, ತನ್ನ ತೇಜೋಮಯವಾದ ಸಹಸ್ರಕಿರಣಗಳನ್ನು ಎಲ್ಲಾ ಕಡೆಗಳಲ್ಲಿಯೂ ಹರಡಿ, ಸ್ವಪ್ರಕಾಶದಿಂದ ಬೆಳಗುತ್ತಿರುವನು.

೨. ಸೂರ್ಯನ ಬೆಳಕು ವಸ್ತುಗಳ ಮೇಲೆ ಬದ್ದಾಗ, ಆ ವಸ್ತುಗಳು ಚೆನ್ನಾಗಿ ದೃಶ್ಯಕ್ಕೆ ಗೋಚರವಾಗುವುವು. ಆಗ ಆಯಾಯಾ ವಸ್ತುಗಳ ಛಾಯಾ (ನೆರಳು) ಮೂಡುವುದು. ಅವುಗಳ ಛಾಯಾವು ಆ ವಸ್ತುಗಳ ಆಕಾರದಂತೆಯೇ ಇರುವುದು. ಇದು ನಿತ್ಯಾನುಭವ ಸಿದ್ಧವಾದ ವಿಷಯ.

೩. ಅದರಂತೆ, ಅರಿ–ಎಂದರೆ ಅರಗಳನ್ನುಳ್ಳ ಸುದರ್ಶನವೆಂಬ ಚಕ್ರ. **ಚಕ್ರಪಾಣಿಯಾದ** ಶ್ರೀಪರಮಾತ್ಮನು–**ಅರಿಧರನು.**

**ವಿಜಾನಜ**–ಎಂದರೆ, ಚೇತನಾಚೇತನವರ್ಗ. ಅರಿಧರನಾದ ಅಪ್ರಮೇಯನು ಚೇತನಾಚೇತನವರ್ಗವನ್ನು ಸಂರಕ್ಷಿಸುತ್ತಿರುವನು. ಚೇತನವರ್ಗವು ಶ್ರೀಪರಮಾತ್ಮನಿಂದ ಭಯಗೊಳ್ಳುವುದು. ಈ ಕಾರಣ ದಿಂದ **ವಿಜ** ಶಬ್ದಕ್ಕೆ–ಚೇತನ ಎಂದರ್ಥ.

೪. ವೃಕ್ಷಗಳ ನೆರಳು (ಛಾಯಾ) ತಂಪಾಗಿರುವುದರಿಂದ, ಅದರಲ್ಲಿ ವಿಶ್ರಮಿಸಿಕೊಳ್ಳುವ ಜನರಿಗೆ ಸಂತಾಪವನ್ನುಪರಿಹರಿಸಿ, ಸುಖವನ್ನೀಯು ವುದು.

ಅದರಂತೆ ಸಂಕರ್ಷಣನಾಮಕನಾದ ಶ್ರೀಹರಿಯು ಬ್ರಹ್ಮಜ್ಞಾನಿ ಗಳಾದ ತನ್ನ ಭಕ್ತರ ಪಾಲಿಗೆ ಛಾಯಾಸದೃಶನು. ಅವರಿಗೆ ಆಶ್ರಯ ಪ್ರದನಾಗಿದ್ದು, ಅವರ ಹೃತ್ಸಂತಾಪಾದಿಗಳನ್ನು ಪರಿಹರಿಸುವನು.

ಅದೇ ಸಂಕರ್ಷಣನು ಪಾಪಿಗಳಾದ ಭಗವದ್ವೇಷಿಗಳ ಪಾಲಿಗೆ **ಆತಪ**–ಅಂದರೆ, ಸುಡುತ್ತಿರುವ ಬಿಸಿಲಿನ ಸದೃಶನು. ಶ್ರೀ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗದೇ, ಬಿಸಿಲಿನಲ್ಲಿ ಸುಡುವ ವಸ್ತುಗಳಂತೆ ಪರಿತಪಿಸುವರು. ಈ ಕಾರಣದಿಂದ **ಛಾಯಾತಪ (ಛಾಯತಪ । ಆತಪ)** ನೆಂದು ಶಬ್ದಪ್ರಯೋಗಮಾಡಿದ್ದಾರೆ–ದಾಸವರ್ಯರು.

ಸಜ್ಜನರಿಗೆ ಇಷ್ಟಪ್ರದನು, ದುರ್ಜನರಿಗೆ ದುಃಖಪ್ರದನು.

ಜೀವರ ಅನಾದಿಸ್ವರೂಪಯೋಗ್ಯತೆ, ಸ್ವಭಾವಗಳಿಗನುಸಾರವಾಗಿ ಫಲನೀಡುವವನು. ಇದರಿಂದ ಶ್ರೀ ಪರಮಾತ್ಮನಿಗೆ ವೈಷಮ್ಯ, ನೈರ್ಘಣ್ಯತೆ–ಇತ್ಯಾದಿ ದೋಷಗಳಿಲ್ಲ

**ಪ್ರಮಾಣ :**

**"ಛಾಯಾತಪೌ ಬ್ರಹ್ಮವಿದೋ ವದಂತಿ ಪಂಚಾಗ್ನಯೋ ಯೇಚ ತ್ರಿಣಾಚಿಕೇತಾಃ ॥ ಆತಪಃ ಪಾಪಿನಾಂ ನಿತ್ಯಂ ಛಾಯೇವ ವಿದುಷಾಂ ಪ್ರಭುಃ॥**

–ಇತಿ **ಕಾಠಕೋಪನಿಷದ್ಭಾಷ್ಯ** ವಚನ ॥ ೨೮ ॥

## ಪದ್ಯ-೨೯

**ಮೂಲ :**

**ಈ ವಿಧದಿ ಸರ್ವತ್ರ ಲಕುಮೀ ।**
**ಭೂ ವನಿತೆಯರ ಕೂಡಿ ತನ್ನ ಕ**
**ಳಾವಿಶೇಷಗಳೆಲ್ಲ ಕಡೆಯಲಿ ತುಂಬ ಸೇವ್ಯತಮ ॥**
**ಸೇವಕನು ತಾನೆನಿಸಿ ಮಾಯಾ ।**
**ದೇವಿರಮಣ ಪ್ರವಿಷ್ಟರೂಪಕ ।**
**ಸೇವೆ ಮಾಳ್ಪ ಶರಣ್ಯ ಸಾತ್ವತಕರುಣ ಕಮಲಾಕ್ಷ ॥ ೨೯ ॥**

**ಅವತರಣಿಕೆ :**

ಸರ್ವತ್ರ ವ್ಯಾಪ್ತನಾದ ಶ್ರೀ ಪರಮಾತ್ಮನು ಶ್ರೀ ಭೂದೇವಿಯರ ಸಹಿತನಾಗಿ, ಆ ಕಮಲಾಕ್ಷನು ತನ್ನ ಭಕ್ತಜನರುಗಳನ್ನು ಸದಾ ಸಂರಕ್ಷಿಸುವನೆಂದು ತಿಳಿಸುತ್ತಾರೆ. ॥ ೨೯ ।

**ಪ್ರತಿಪದಾರ್ಥ**

**ಈ ವಿಧದಿ** = ಈ ರೀತಿಯಲ್ಲಿ ಇರತಕ್ಕ, **ಸರ್ವತ್ರ** = ಸರ್ವಕಾಲದೇಶಾದಿಗಳಲ್ಲಿ ಇರುವ ಚೇತನಾಚೇತನರಲ್ಲಿ, **ಲಕುಮೀ** = ಶ್ರೀ ಲಕ್ಷ್ಮೀದೇವಿ, **ಭೂ** = ಭೂದೇವಿ, **ವನಿತೆಯರ ಕೂಡಿ** = ತನ್ನ ಪತ್ನಿಯರನ್ನು ಕೂಡಿಕೊಂಡು, **ತನ್ನ ಕಳಾವಿಶೇಷಗಳೆಲ್ಲ** = ತನ್ನ ಅಂಶರೂಪಗಳನ್ನು, **ಕಡೆಯಲಿ ತುಂಬ** = ಅಂಡದ ಹೊರಗೆ, ಒಳಗೆ, ಸಕಲ ಠಾವಿನಲ್ಲಿ ಪೂರ್ಣಮಾಡಿ, **ಸೇವ್ಯತಮ** = ಸೇವಾಮಾಡಿಸಿಕೊಳ್ಳುವುದರಲ್ಲಿ ಅತ್ಯಂತ ಶ್ರೇಷ್ಠನಾದ, ಶ್ರೀ ಪರಮಾತ್ಮನು, **ಸೇವಕನು ತಾನೆನಿಸಿ** = ಸೇವೆ ಮಾಡುವ ಜೀವರಲ್ಲಿ ಅಂತರ್ಗತನಾಗಿದ್ದು, ಸೇವಕನಾಮಕನಾಗಿ, **ಮಾಯಾದೇವಿ ರಮಣ** = ಮಾಯಾಪತಿಯಾದ ಶ್ರೀವಾಸುದೇವನು, **ಪ್ರವಿಷ್ಟರೂಪಕ** = ಜೀವರಲ್ಲಿ ಅಂತರ್ಯಾಮಿರೂಪದಿಂದ ಬಿಂಬನಾಗಿ ಪ್ರವಿಷ್ಟನಾಗಿದ್ದು,

**ಶರಣ್ಯ** = ರಮಾಬ್ರಹ್ಮಾದಿ ಸಕಲಸಜ್ಜನರಿಂದ ಶರಣ್ಯ ನಾಗಿ, **ಸೇವಕಮಾಳ್ಪ** = ಸೇವಕರಲ್ಲಿ ತಾನಿದ್ದು, ಸೇವಕರೂಪದಿಂದ ಸೇವೆಯನ್ನು ಮಾಡುವನು, **ಶಾಶ್ವತಕರುಣ** = ತನ್ನ ಭೃತರ ಮೇಲೆ ನಿತ್ಯವಾದ ದಯೆಉಳ್ಳವನು. (ಅವನ ಕರುಣೆಗೆ ನ್ಯೂನಾತಿರೇಕಗಳಿಲ್ಲ). **ಕಮಲಾಕ್ಷ** = ಕಮಲಪುಷ್ಪದ ದಳದಂತೆ ವಿಶಾಲನೇತ್ರವುಳ್ಳ ಶ್ರೀಪರಮಾತ್ಮನು. ॥ ೨೯ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಪೂರ್ವೋಕ್ತ ಮುಕ್ತಿಯೋಗ್ಯಾದಿ ತ್ರಿವಿಧರಿಂದ ಇರತಕ್ಕ, ಸೃಜ್ಯ, ಅಸೃಜ್ಯ, ಮುಕ್ತ–ಈ ಸರ್ವತ್ರದಲ್ಲಿ ಇರತಕ್ಕ ಪ್ರಾಣಿಗಳಲ್ಲಿ ಶ್ರೀದೇವರು ಭೂದೇವರು ಉಭಯರಾದ ತನ್ನ ಪತ್ನೇರ **ಕೂಡಿಕೊಂಡು**, ಜೀವಾಂತರ್ಗತನಾಗಿ ಬಿಂಬನಾಗಿ ಇದ್ದು, ಸೇವಾ ಮಾಡಿಸಿ **ಕೊಂಬೋವರ** ಒಳಗೆ ಸರ್ವೋತ್ತಮನೆನಿಸಿಕೊಂಬ, ಮಾಯಾದೇವೇರ ಪತಿಯಾದ ವಾಸುದೇವ ತನ್ನ ಅಂಶರೂಪಗಳ ಅಂದರೆ, ಸೃಷ್ಟಿ ಪ್ರಾರಂಭದಲ್ಲಿ ಆಯಾ ಜೀವರ ಸ್ವರೂಪದ ಆಕಾರದಂತೆ, ಅಂಶರೂಪಗಳ–ಧರಿಸಿ, ಆಯಾ ಜೀವರಲ್ಲಿ ಪ್ರವಿಷ್ಟನಾಗೋವನಾಗಿದ್ದಾನೆ. ಅತ ಏವ ಪ್ರವಿಷ್ಟನಾಮಕನೆಂದು ಕರಸಿದ. ಈ ಪ್ರಕಾರ ತನ್ನ ಕಳಾವಿಶೇಷಗಳ ಅಂಡದ ಹೊರಗೆ, ಅಂಡದ ಒಳಗೆ, ವೈಕುಂಠಾದಿಗಳಲ್ಲಿ, ಈ ಎಲ್ಲ ಕಡಿಯಲ್ಲಿ ವಿದ್ಯಮಾನರಾದ ಜೀವರಲ್ಲಿ ಪೂರ್ಣಮಾಡಿ, ನಿತ್ಯಬಿಂಬನಾದ ಜೀವಾಂತರ್ಗತನಾದ ತನ್ನ ರೂಪಕ್ಕೆ ತಾನೇ ಸೇವಕನೆನಿಸಿ, ಸೇವಾಮಾಡೋವನಾಗತಾನೆ. ಬಿಂಬರೂಪವೇನು, ಪ್ರವಿಷ್ಟವಾದ ವಾಸುದೇವ ರೂಪವೇನು–ಎರಡೂ ಪರಸ್ಪರ ಅಭೇದಗಳು. ರಮಾಬ್ರಹ್ಮಾದಿಗಳಿಂದ ಶರಣ್ಯರೂಪಗಳು. ಕಮಲ ದಳದೋಪಾದಿಯಲ್ಲಿ ನೇತ್ರಗಳುಳ್ಳ ಬಿಂಬನ್ನ ಈ ಪ್ರಕಾರ ತಿಳಿದು, ಧ್ಯಾನೋಪಾಸನಾದಿಗಳು ಮಾಡಿದರೆ, ಅವರಲ್ಲಿ ಶಾಶ್ವತವಾದ

ಕರುಣಾಮಾಡೋವನಾಗತಾನೆ. ಇದರಂತೆ, ಸ್ಥೂಲದೇಹದಲ್ಲಿ ಸಹ ಸಮನ್ವಯ ಮಾಡಿಕೊಳ್ಳಬೇಕೆಂತ ತಾತ್ಪರ್ಯ. ॥ ೨೯ ॥

**೨. ಭಾವಪ್ರಕಾಶಿಕೆ**

ಈ ಪ್ರಕಾರವಾಗಿ ಮಾಯಾರಮಣನಾದ ವಾಸುದೇವನು ಶ್ರೀ ಭೂಸಮೇತನಾಗಿ ಸರ್ವತ್ರ ವ್ಯಾಪ್ತನಾಗಿದ್ದು, ತಾನು ವಾಸುದೇವಾದಿ ರೂಪಗಳಿಂದ ಸೇವೆಯನ್ನು ಕೈಗೊಳ್ಳುವನು. ಬ್ರಹ್ಮಾದಿಗಳಲ್ಲಿ ಪ್ರವಿಷ್ಟ ರೂಪದಿಂದ ತನ್ನ ಸೇವೆಯನ್ನು ತಾನೇ ಸೇವಕನಾಗಿ ಮಾಡುತ್ತಿರುವನು. ॥ ೨೯ ॥

**೩. ಭಾವದರ್ಪಣ**

ಪೂಜ್ಯ ಪೂಜಕಭಾವದಿಂದ ಈ ಜಗತ್ಕಾರ್ಯ ಶ್ರೀ ಹರಿಯು ನಡೆಸುತ್ತಾನೆಂದು ಹೇಳುತ್ತಾರೆ-॥ ಈ ವಿಧ ರೀತಿ।

ತನ್ನ ಕಳೆಗೂ ತನಗೂ ಅಭೇಧವಾದ್ದರಿಂದ, ತಾನೇ ನಿಂತು ಮಾಡುತ್ತಾನೆಂಬೋ ಭಾವ. ಸೇವ್ಯತಮ ಅಥಿಶಯೇನ ಸೇವಿಸೋದಕ್ಕೆ ಯೋಗ್ಯನಾದವ-ಎಂಬರ್ಥ. ॥ ೨೯ ॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ**

"ಈ ವಿಧ"-ಇತಿ ॥ ಸ್ವಸತ್ಕೃತ ಮಿತ್ಯುಕ್ತೇಃ ॥ ಸ್ವಕೃತಿಮಿತಿ ಚ ॥ ೨೯ ॥

## ಕನ್ನಡಾರ್ಥ

ಶ್ರೀಹರಿಯೇ ಸೇವಕರಲ್ಲಿದ್ದು, ಸೇವಕವಾಚ್ಯನಾಗಿ, ಸೇವ್ಯರಲ್ಲಿದ್ದು, ಸೇವ್ಯನಾಮಕನಾಗಿ, ತನ್ನ ರೂಪಗಳಿಂದಲೇ ಸೇವ್ಯ ಸೇವಕನೆನಿಸಿ ಕೊಳ್ಳುವನು-ಎಂದು ಹೇಳುತ್ತಾರೆ-"ಈ ವಿಧದಿ"-ಎಂಬ ಪ್ರಸಕ್ತ ಪದ್ಯದಿಂದ.

**ಶ್ರುತಿಗೀತೆಯಲ್ಲಿ**-"ಪರಮಾತ್ಮನು ತನ್ನನ್ನು ತಾನೇ ಪೂಜಿಸಿ ಕೊಳ್ಳುವನು"-ಎಂದು ಉಕ್ತವಾಗಿದೆ. ಅದೇ ಅಭಿಪ್ರಾಯವನ್ನೇ ಈ ಪದ್ಯದಲ್ಲಿ ನಿರೂಪಿಸಲಾಗಿದೆ. ॥ ೨೯ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ದೇವರು ತನಗೆ ತಾನೇ ಲೀಲೆಯಿಂದ ಸೇವ್ಯ ಸೇವಕನಾಗಿ ಸರ್ವರಲ್ಲಿದ್ದು, ತನ್ನಾನಂದ ತಾನುಭವಿಸುವುದರಿಂದ, ಅವರವರ ಯೋಗ್ಯತಾ ವ್ಯಕ್ತಿಯಾಗುತ್ತಾದ್ದರಿಂದಲೂ, ವೈಷಮಯರಹಿತನೆಂದು ತಿಳಿಸುತ್ತಾರೆ–ಈ ವಿಧದಿ–ಎಂದು.

ಹಿಂದೆ ಹೇಳಿದ ರೀತಿಯಿಂದ ಮಾಯಾದೇವೀಪತಿಯಾದ ಶ್ರೀವಾಸುದೇವನು ಸರ್ವತ್ರ–ಅಂದರೆ, ಜಡಚೇತನಗಳಲ್ಲಿ ಸಹ, ಲಕ್ಷ್ಮೀಭೂದೇವಿಯರಿಂದ ಸಹಿತನಾಗಿ, ತನ್ನ ಕಲಾವಿಶೇಷವೆಂಬ ರೂಪವಿಶೇಷಗಳನ್ನು ಎಲ್ಲಾ ಕಡೆಯಲ್ಲಿಯೂ ವಿಸ್ತರಿಸಿ, ಸೇವ್ಯ ಸೇವಕರಲ್ಲಿ ತದ್ಭಕ್ತಿವ್ಯಕ್ತಿಮಾಡುವುದರಿಂದ, ಸೇವ್ಯ ಸೇವಕನೆಂದು ತಾನೇ ಕರೆಸಿಕೊಳ್ಳುತ್ತಾ, ಸೇವ್ಯರಲ್ಲಿ ಪ್ರವಿಷ್ಟವಾದ ತನ್ನ ರೂಪವನ್ನೇ ತಾನು ಸೇವೆ ಮಾಡಿ, ಇತರರ ತತ್ತದ್ಯೋಗ್ಯತೆವ್ಯಕ್ತಿ ಮಾಡುವನು. ಆದ್ದರಿಂದ, ಶಾಶ್ವತನೆಂಬ ಏಕರೀತಿಯಾದ ದೇವರು ಶರಣ್ಯ–ಎಂದರೆ, ಆಶ್ರಯಿಸುವುದಕ್ಕೆ ಮುಖ್ಯನು, ದಯಾಶಾಲಿಯು, ಕಮಲನೇತ್ರನು.

**ನಿರ್ಗುಣೋಽಪಿ ಹ್ಯಜೋಽವ್ಯಕ್ತೋ ಭಗವಾನ್ ಪ್ರಕೃತೇಃ ಪರಃ ।**
**ಸ್ವಮಾಯಯಾ ಗುಣಮಾವಿಶ್ಯಬಾಧ್ಯ ಬಾಧಕತಾಂ ಗತಃ ॥** ಎಂಬ ಭಾಗವತಾರ್ಥ ವಿವರಿಸಿತು ॥ ೨೯ ॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಈ ವಿಧದಿ :**

ಹಿಂದಿನ ಪದ್ಯಗಳಲ್ಲಿ ಶ್ರೀಪರಮಾತ್ಮನ ಅಪಾರಮಹಿಮೆಗಳನ್ನೂ ಮತ್ತು ಆತನ ಚಿತ್ರವಿಚಿತ್ರ ವ್ಯಾಪಾರಗಳನ್ನು ವಿವರಿಸಿರುತ್ತಾರೆ.

೨. ಶ್ರೀಪರಮಾತ್ಮನು ಶ್ರೀಲಕ್ಷ್ಮೀದೇವಿ (ಲಕುಮೀ) ಮತ್ತು ಭೂದೇವಿ–ಇವರುಗಳ ಸಹಿತ; ಕೂಡಿಕೊಂಡವನಾಗಿ, ಸರ್ವ ದೇಶ, ಕಾಲಾದಿಗಳಲ್ಲಿ (ಸರ್ವತ್ರ) ಅಣುರೇಣು ತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ.

ತನ್ನಿಂದ ಅಭಿನ್ನವಾದ ಅಂಶರೂಪಗಳಿಂದ (ಕಳಾವಿಶೇಷಗಳಿಂದ) ಸರ್ವತ್ರ ಹರಡಿ ತುಂಬಿಕೊಂಡಿದ್ದಾನೆ.

೩. ಅಂತಹ ಸರ್ವತ್ರವ್ಯಾಪಕನಾದ ಸರ್ವೇಶ್ವರನು ಸೇವೆಯನ್ನು ಕೈಗೊಳ್ಳುವ ಶ್ರೇಷ್ಠರಾದ ಜೀವರಲ್ಲಿ (ಸೇವ್ಯತಮ), ಬಿಂಬರೂಪನಾಗಿದ್ದು, ಸೇವ್ಯಶಬ್ದವಾಚ್ಯನಾಗಿದ್ದಾನೆ.

೪. ಸೇವೆ ಮಾಡುವ ಜನರಲ್ಲಿ ಬಿಂಬರೂಪದಿಂದ "ಸೇವಕ" ನಾಮಕನಾಗಿದ್ದಾನೆ. ಈ ರೀತಿಯಲ್ಲಿ ಏಕಮೇವ ಅದ್ವಿತೀಯನಾದ ಶ್ರೀಪರಮಾತ್ಮನು ಸೇವ್ಯ-ಸೇವಕ ಭಾವದಿಂದ ತತ್ತನ್ನಾಮಕನಾಗಿ, (ತಾನೆನಿಸಿ) ಸೇವಕರಲ್ಲಿ ಸೇವಕನೆಂತಲೂ ಮತ್ತು ಸೇವ್ಯರಲ್ಲಿ ಸೇವ್ಯನೆಂತಲೂ ಕರೆಯಿಸುವನು.

೫. ಸೇವ್ಯ-ಸೇವಕ ಶಬ್ದವಾಚ್ಯನಾದ ರಮಾಬ್ರಹ್ಮಾದಿವಂದ್ಯನಾದ ಮಾಯಾಪತಿಯಾದ ವಾಸುದೇವರೂಪೀ ಪರಮಾತ್ಮನು (ಮಾಯಾದೇವಿರಮಣ) ಸೇವ್ಯಸೇವಕ ಜೀವರಲ್ಲಿ ಪ್ರವೇಶಿಸಿ, ಅಂತರ್ಯಾಮಿಯಾಗಿದ್ದು, (ಪ್ರವಿಷ್ಠರೂಪಕ) ಸೇವೆ ಮಾಡುವನು ಮತ್ತು ಸೇವೆಯನ್ನು ಸ್ವೀಕರಿಸುವನು.

೬. ತನಗೆ ಶರಣುಹೊಕ್ಕ ಜನರ ಪಾಲಿಗೆ ಶರಣ್ಯನು.

೭. ಭಕ್ತರ ಮೇಲಿನ ಅವನ ಕಾರುಣ್ಯವಿಶೇಷವು ನಿತ್ಯ ಹಾಗೂ ಶಾಶ್ವತ. ತನ್ನ ದಯೆಯಲ್ಲಿ ನ್ಯೂನಾತಿರೇಕಗಳನ್ನು ಎಂದೆಂದಿಗೂ ತೋರಿಸುವುದಿಲ್ಲ. ಇದರಿಂದ ಶಾಶ್ವತಕರುಣಿ-ಎಂದಿದ್ದಾರೆ ದಾಸರಾಯರು.

೮. ಕಮಲಪುಷ್ಪದ ದಳದಂತೆ ವಿಶಾಲನೇತ್ರವುಳ್ಳವನು. ಇದರಿಂದ ಕಮಲಾಕ್ಷನು. (ಕಮಲ-ಕಮಲದಳದಂತೆ, ಅಕ್ಷ-ನೇತ್ರ) ॥ ೨೯ ॥

**ಮೂಲ :**

**ಪ್ರಣವಕಾರಣ ಕಾರ್ಯ ಪ್ರತಿಪಾ ।**
**ದ್ಯನು ಪರಾತ್ಪರ ಚೇತನಾಚೇ ।**
**ತನ ವಿಲಕ್ಷಣನಂತಸತ್ಕಲ್ಯಾಣ ಗುಣಪೂರ್ಣ ॥**
**ಅನುಪಮನುಪಾಸಿತ ಗುಣೋದಧಿ ।**
**ಅನಘ ಅಜಿತಾನಂತ ನಿಷ್ಕಿಂ ।**
**ಚನಪ್ರಿಯ ನಿರ್ವಿಕಾರ ನಿರಾಯಶ್ರಯಾವ್ಯಕ್ತ ॥ ೨೦ ॥**

**ಅವತರಣಿಕೆ :**

ಅನಂತಕಲ್ಯಾಣಗುಣಧಾಮನಾದ ಶ್ರೀಪರಮಾತ್ಮನ ಮಹಾತ್ಮೆಯನ್ನು ತಿಳಿಸುತ್ತಾರೆ. ॥ ೨೦ ॥

**ಪ್ರತಿಪದಾರ್ಥ :**

**ಪ್ರಣವಕಾರಣ** = ಅ-ಕಾರ, ಉ-ಕಾರ, ಮ-ಕಾರಯುಕ್ತ ಪ್ರಣವಮಂತ್ರಗಳ ಉತ್ಪತ್ತಿ ಮತ್ತು ವರ್ಣೋತ್ಪತ್ತಿಗೂ ಕಾರಣವಾದ ಓಂಕಾರ, **ಕಾರ್ಯ** = ಕಾರ್ಯಭಿವ್ಯಕ್ತಿಗೂ, **ಪ್ರತಿಪಾದ್ಯನು** = ಓಂ-ಕಾರ ಪ್ರತಿಪಾದ್ಯನಾದ ಶ್ರೀಹರಿಯು, **ಪರಾತ್ಪರ** = ಶ್ರೀ ಲಕ್ಷ್ಮೀದೇವಿಗಿಂತಲೂ (ಪರಾ) ಉತ್ತಮೋತ್ತಮನಾದ, **ಚೇತನಾಚೇತನ ವಿಲಕ್ಷಣ** = ರಮಾ ಬ್ರಹ್ಮಾದಿ ಚೇತನರಿಗಿಂತಲೂ, ಅಚೇತನಗಳಾದ ಜಡವಸ್ತುಗಳಿಗಿಂತಲೂ ಅತ್ಯಂತ ಭಿನ್ನನಾದ, **ಅನಂತಸತ್ಕಲ್ಯಾಣಗುಣಪೂರ್ಣ** = ಅಪರಿಚ್ಛಿನ್ನಗಳಾದ, ಅನಂತಸಂಖ್ಯಾತವಾದ ಮಂಗಳಗುಣಗಳಿಂದ ಪರಿಪೂರ್ಣನಾದ, **ಅನುಪಮನು**=ಅಸದೃಶಮಹಿಮಾಸಂಪನ್ನನಾದ (ಉಪಮಾನರಹಿತನು), **ಉಪಾಸಿತ** = ರಮಾಬ್ರಹ್ಮಾದಿಗಳಿಂದ ಉಪಾಸ್ಯನಾದ, **ಗುಣೋದಧಿ** = ಅಪಾರವಾದ ಗುಣಸಾಗರನಾದ, **ಅನಘ** = ಅಸ್ವಂತ್ರಾದಿ ಸಕಲದೋಷ

ವಿವರ್ಜಿತನಾದ, **ಅಜಿತ**= ಅನ್ಯದಾರಿಂದಲೂ ಅಜೇಯನಾದ, **ಅನಂತ**= ಅಂತರಹಿತನಾದ, **ನಿಷ್ಕಿಂಚನಪ್ರಿಯ** = ದೇವತೆಗಳಿಗೆ ಪ್ರಿಯನಾದವನು, **ನಿರ್ವಿಕಾರ**= ಸರ್ವತ್ರವ್ಯಾಪ್ತನಾಗಿದ್ದರೂ, ತದ್ವಿಕಾರಶೂನ್ಯನು, **ನಿರಾಶ್ರಯ**= ಪರಾಧೀನನಲ್ಲದವನು, **ಅವ್ಯಕ್ತ** = ಸಾಕಲ್ಯೇನ ಯಾರಿಂದಲೂ ವ್ಯಕ್ತನಲ್ಲದವನು. ॥ ೩೦ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನ ಮಹಿಮಾ ಹೇಳತಾರೆ.

ಅಕಾರಾದಿ ವರ್ಣೋತ್ಪತ್ತಿಗೂ, ಮಹಾಮಂತ್ರಗಳ ಉತ್ಪತ್ತಿಗೂ, ಪೌರುಷೇಯಗಳಾದ ಇತಿಹಾಸ ಪುರಾಣಾದಿಗಳ ಉತ್ಪತ್ತಿಗೂ, ಗಾಯತ್ರೀ, ವೇದಗಳ ಅಭಿವ್ಯಕ್ತಿಗೂ, ಪ್ರಣವ–ಎನತಕ್ಕ ಓಂಕಾರ ಮಾತ್ರಸ್ಥಾನವಾಗಿ ಮೂಲಕಾರಣವಾದುದು. ಪೂರ್ವೋಕ್ತಗಳೆಲ್ಲಾ ಪ್ರಣವ ಕಾರಣದಿಂದ ಕಾರ್ಯರೂಪವಾಗಿ, ನಿಮಿತ್ತಕಾರಣನಾದ ಶ್ರೀಪರಮಾತ್ಮನಿಂದ ಪರಿಣಮಿಸಿದ್ದು. ಈ ಕಾರ್ಯಕಾರಣಗಳಿಂದ ಗುಣಪೂರ್ಣನಾದ ಪರಮಾತ್ಮ, ಅನ್ಯರಾದ ಲಕ್ಷ್ಮೀದೇವೇರ ವ್ಯಾಪ್ತಿಗಿಂತಲೂ, ಅದರ ಆಚೇಲಿ ಕೂಡ ಅಪರಿಚ್ಛಿನ್ನ ವ್ಯಾಪ್ತಿ ಉಳ್ಳವನು. ಸ್ವರಮಣನು. ರಮಾಬ್ರಹ್ಮಾದಿ ಚೇತನರಿಗಿಂತಲೂ, ಅಚೇತನಗಳಾದ ಜಡಗಳಿಂದಲೂ, ವಿಲಕ್ಷಣನಾದವ, ಅನಿರ್ವಾಚ್ಯನು. ಅಪರಿಚ್ಛಿನ್ನಗಳಾದ, ನಿರ್ದುಷ್ಟಗಳಾದ, ಮಂಗಳಕರಗಳಾದ ಗುಣಗಳಿಂದ ಪರಿಪೂರ್ಣನು. ಉಪಮಾನರಹಿತನಾದವನು. ರಮಾಬ್ರಹ್ಮಾದಿಗಳಿಂದ ಉಪಸನಾ ಮಾಡಿಸಿಕೊಳ್ಳತಕ್ಕವನು. ಇವರುಗಳು ಪಾರಗಾಣದೇ ಈಜತಾ ಇರತಕ್ಕ ಗುಣಸಮುದ್ರ ಉಳ್ಳವನು. ಅಸ್ವತಂತ್ರಾದಿ ದೋಷವರ್ಜಿತನಾದವನು. ಅನ್ಯರಿಂದ ಜಯಿಸೋದಕ್ಕೆ ಅಶಕ್ಯನಾದವನು. ಅಂತರಹಿತನಾದವನು. ದ್ರವ್ಯ–ಎಂದರೆ, ದೇವನಾವಿತ್ತ ಜ್ಞಾನ, ದೈತ್ಯವಿತ್ತ ಅಜ್ಞಾನ, ಮಾನುಷವಿತ್ತ ಪ್ರಾಕೃತವಿತ್ತ. ದೈತ್ಯವಿತ್ತ

ಸಾಂಕೇತವಾದ ಪಾಪಾಖ್ಯವಿತ್ತದಿಂದ ನಿಷ್ಕಿಂಚನವಾದ ಸ್ವರೂಪಸ್ವಭಾವ ವುಳ್ಳವರಾದ ಮುಕ್ತಿಯೋಗ್ಯಜನರಿಗೆ ಪ್ರಿಯನಾದವನು. ಸರ್ವತ್ರವ್ಯಾಪ್ತ ನಾಗಿದ್ದ ಕಾಲಕ್ಕೂ ತದ್ವಿಕಾರಶೂನ್ಯನು. ಪರಾಧೀನನಲ್ಲದವನು. ಸಾಕಲ್ಯೇನ ದಾರಿಂದಲೂ ವ್ಯಕ್ತನಲ್ಲದವನು. ಸರ್ವರಿಗೂ ಸಕಲಕ್ಕೂ ಯಜಮಾನನು– ಎಂತ–ತಾತ್ಪರ್ಯ. ॥ ೩೦ ॥

**೩. ಭಾವದರ್ಪಣ**

"ಪ್ರಣವೇತಿ" ॥ ಪ್ರಣವ ಕಾರಣ–ಓಂ–ಕಾರವೇ ವ್ಯಕ್ತಿಕಾರಣವಾಗಿ ಉಳ್ಳವ । ಕಾರ್ಯಪ್ರತಿಪಾದ್ಯ–ಓಂ–ಕಾರದಿಂದ ವ್ಯಕ್ತವಾದ ವೇದ ಪ್ರತಿಪಾದ್ಯನು । ಅನುಪಮ–ಅಸದೃಶನು ॥ ಉಪಾಸಿತಗುಣೋದಧಿ– ರಮಾದಿಗಳಿಂದ ಉಪಾಸನಾ ಮಾಡಲ್ಪಟ್ಟ ಗುಣಸಮುದ್ರನು. ॥ ಪರಾತ್ಪರೇತಿ–ಪರಾ–ಲಕ್ಷ್ಮೀ. ಆಕೆಗೆ ಉತ್ತಮನಾದಂಥವ ಅಂದರೆ, ಸರ್ವೋತ್ತಮ ಎಂದು ತಾತ್ಪರ್ಯ. ॥ ೩೦ ॥

**೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ**

"ಪ್ರಣವ"–ಇತಿ ॥ ಅನುಪಾಸಿತ ಸಾಕಲ್ಯೇನ । ವರ್ಣೋತ್ಪತ್ತಿಶ್ಚ ವಿಸ್ತೃತಾ । **ಪ್ರಕಾಶಸಂಹಿತಾಯಾಂ**–ಪ್ರಥಮಪರಿಚ್ಛೇಧೇ ॥ ೩೦ ॥

**ಕನ್ನಡಾರ್ಥ**

ಹರಿಯ ಅಪಾರಗುಣ ಸ್ತೋಮಗಳನ್ನು ಭಕ್ತ್ಯುದ್ರೇಕದಿಂದ **ಹೊಗಳುತ್ತಾರೆ**–"ಪ್ರಣವ"–ಎಂಬ ಪದ್ಯದಿಂದ.

"ಅನುಪಾಸಿತ"–ಎಂಬ ಶಬ್ದಕ್ಕೆ–ಸಮಗ್ರವಾಗಿ ಯಾರಿಂದಲೂ ಉಪಾಸಿಸಲ್ಪಡದ ಗುಣರೂಪವುಳ್ಳವನು – ಎಂದರ್ಥ. ಪ್ರಣವ–ಮುಂತಾದ ವರ್ಣಗಳು ಹೇಗೆ ಪರಮಾತ್ಮನಿಂದ ಅಭಿವ್ಯಕ್ತವಾದುವು ? **ಈ** ವಿವರಗಳನ್ನು **ಪ್ರಕಾಶಸಂಹಿತೆ**–ಎಂಬ ಗ್ರಂಥದ ಪ್ರಥಮಪರಿಚ್ಛೇದದಲ್ಲಿ ನೋಡಬಹುದು. ॥ ೩೦ ॥

**ಸ. ಶ್ರೀಗುರುಹೃದಯಪ್ರಕಾಶಿಕೆ**

ಹೇಳಿದ ಅಭಿಪ್ರಾಯ ಒಟ್ಟುಗೂಡಿಸಿ ತಿಳಿಸುತ್ತಾರೆ–ಪ್ರಣವ–ಎಂದು.

ದೇವರು ಪ್ರಣವ–ಎಂದರೆ, ಓಂಕಾರದಲ್ಲಿದ್ದು, ತಚ್ಛಬ್ದವಾಚ್ಯ ಕಾರಣವಾದ ಪ್ರಕೃತ್ಯಾದಿಗಳಲ್ಲಿ ಕಾರಣನೆಂದು ಹೇಳಿಸಿಕೊಳ್ಳುವನು. ಕಾರ್ಯವೆಂಬ ಮಹದಾದಿತತ್ತ್ವಗಳಲ್ಲಿ ಕಾರ್ಯನೆಂದು ವರ್ಣಿಸಿಕೊಳ್ಳುವನು. ಪರಾತ್ಪರನೆಂಬ ಮುಕ್ತಾಮುಕ್ತ ಪ್ರಪಂಚದ ಸ್ವಾಮಿ. ಜಡಚೇತನಗಳಿಗೆ ಪೃಥಕ್ಕಾಗಿರುವನು. ಅನಂತ ಅಪ್ರಾಕೃತ ಜ್ಞಾನಾಗಂಧಾದಿ ನಿರ್ದೋಷ ಮಂಗಳಕರ ಪರಿಪೂರ್ಣನು. ಸಮಾನರಹಿತನು, ಉಪಾಸಿತ ಗುಣೋದಧಿ–ಅಂದರೆ, ಶ್ರೀಬ್ರಹ್ಮಾದಿಗಳಿಂದ ಯಥಾಯೋಗ್ಯ ಉಪಾಸನೆ ಮಾಡಿಸಿಕೊಳ್ಳುವ ಗುಣನಿಧಿ, ಪಾಪರಹಿತ ಅಜಿತಾದ್ಯನಂತ ರೂಪನು. ನಿಷ್ಕಿಂಚನರೆಂಬ ವಿರಕ್ತ ಜ್ಞಾನಿಗಳ ಪ್ರಿಯ, ವಿಕಾರವರ್ಜಿತ, ಇತರಾಶ್ರಯರಹಿತ ತನ್ನನುಗ್ರಹ ಇಲ್ಲದವರಿಗೆ ಅಗೋಚರನು ಎಂದು ಭಾವಿಸಬೇಕೆಂದರ್ಥ. ॥ ೩೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಪ್ರಣವಕಾರಣ :**

ಅ–ಕಾರ, ಉ–ಕಾರ, ಮ–ಕಾರ ವರ್ಣಾತ್ಮಕವಾದ ಓಂಕಾರಮಂತ್ರಕ್ಕೆ "ಪ್ರಣವ"–ಎನ್ನುವರು. ಸರ್ವವರ್ಣೋತ್ಪತ್ತಿಗಳಿಗೆ ಮೂಲವು ಓಂ–ಕಾರವು. ಅಂತಹ ಓಂಕಾರ ಪ್ರತಿಪಾದ್ಯನೇ ಪ್ರಣವ ಸ್ವರೂಪಿಯಾದ ಪರಮಾತ್ಮನು. ಸಕಲವರ್ಣೋತ್ಪತ್ತಿಗೆ ಪ್ರಣವ ಪ್ರತಿಪಾದ್ಯನೇ ಮೂಲಕಾರಣನು. ವರ್ಣೋತ್ಪತ್ತಿ–ವರ್ಣಗಳಲ್ಲಿ ಪ್ರವೇಶಿಸಿ, ಅವುಗಳಿಗೆ ಅಭಿವ್ಯಂಜಕಶಕ್ತಿಪ್ರದನು. ಇದರಿಂದ ವರ್ಣಗಳ ಉಚ್ಚಾರಣೆ. ಅದರಿಂದ ಅರ್ಥೋತ್ಪತ್ತಿ–ಇತ್ಯಾದಿ ವಾಗ್ರೂಪ ವ್ಯಾಪಾರಗಳಿಗೆಲ್ಲಾ ಮೂಲಕಾರಣನು.

ಓಂ–ಕಾರವು ಅಕಾರಾದಿ ಸಕಲವರ್ಣಗಳ ಉತ್ಪತ್ತಿ, ಮಹಾಮಂತ್ರಗಳ ಉತ್ಪತ್ತಿ, ಪೌರುಷೇಯಗಳಾದ ಪುರಾಣ ಇತಿಹಾಸಗಳ ಉತ್ಪತ್ತಿ, ಗಾಯತ್ರೀಮಂತ್ರಾಭಿವ್ಯಕ್ತಿ, ವೇದಗಳ ಅಭಿವ್ಯಕ್ತಿಗೂ ಮಾತೃಸ್ಥಾನವಾಗಿದೆ. ಅಂತಹ ಪ್ರಣವಪ್ರತಿಪಾದ್ಯನು ಸಕಲ ವಾಙ್ಮಯಗಳಿಗೂ ಮೂಲಕಾರಣನು.

೨. ಕಾರಣವು ಪ್ರಣವ. ಕಾರ್ಯರೂಪವು ವೇದಗಳು. ಪರಮಾತ್ಮನು ಕಾರಣರೂಪಿಯಾಗಿ ಪ್ರಣವಪ್ರತಿಪಾದ್ಯನಾಗಿದ್ದಾನೆ. ತದ್ವಾರಾ, ಕಾರ್ಯರೂಪವಾದ ಸಕಲವೇದಗಳಿಂದಲೂ ಪ್ರತಿಪಾದ್ಯನು. ಇದರಿಂದ–**ಕಾರಣಕಾರ್ಯ ಪ್ರತಿಪಾದ್ಯನು**.

೩. ಪ್ರಣವ ಕಾರಣ ಕಾರ್ಯ ಪ್ರತಿಪಾದ್ಯನಾದ ಶ್ರೀಪರಮಾತ್ಮನು **"ಪರ"** ನಾಮಕನಾದ ಶ್ರೀಲಕ್ಷ್ಮೀದೇವಿಗಿಂತಲೂ ಅನಂತಾನಂತ ಕೋಟಿ ಗುಣಗಳಿಂದ ಉತ್ತಮೋತ್ತಮನು. ಅಕ್ಷರನಾಮಕಳಾದ ಶ್ರೀಲಕ್ಷ್ಮೀಗೆ ಪರ –ಎಂತ ನಾಮ. **ಪರಾತ್ಪರ** – ಎಂದು – ಶ್ರೀ ಲಕ್ಷ್ಮಿಗಿಂತ ಉತ್ತಮೋತ್ತಮನೆಂದರ್ಥ. ಶ್ರೀಪರಮಾತ್ಮನು ಅನಂತವೇದಗಳಿಂದ ಪ್ರತಿಪಾದ್ಯನು. ಪರನಾಮಕಳಾದ ಶ್ರೀ ಲಕ್ಷ್ಮಿಯು ವೇದಾಭಿಮಾನಿಯು. (ಪ್ರಕೃತಿ–ಪುರುಷರಸಂಬಂಧ).

೪. ತನ್ನಿಂದ ಸೃಷ್ಟವಾದ ಬ್ರಹ್ಮಾಂಡಗತ ಸಕಲಚೇತನ ವಸ್ತುಗಳು (ಜೀವರಾಶಿ) ಮತ್ತು ಅಚೇತನಪದಾರ್ಥಗಳು (ಜಡಗಳು) ಇವುಗಳಿಂದ ಅತ್ಯಂತ ಭಿನ್ನನು. ಅಂದರೆ, ಅವುಗಳಿಂದ ಪರಮ ವಿಲಕ್ಷಣನು. ಇದರಿಂದ **ಚೇತನಾಚೇತನ ವಿಲಕ್ಷಣನು**. ಶ್ರೀ ಪರಮಾತ್ಮನು ಜಡಾತ್ಮಕನೂ ಅಲ್ಲ. ಲಕ್ಷ್ಮೀಬ್ರಹ್ಮಾದಿ ಚೇತನ ಸ್ವರೂಪಿಯೂ ಅಲ್ಲ. ಇದರಿಂದ, ಜೀವಜಡದಿಂದ ಭಿನ್ನನು. (ಜೀವೇಶ ಬೇಧ, ಜೀವ ಜಡ ಬೇಧ).

೫. ಸಕಲ ಜೀವಜಡಗಳಿಂದ ಅತ್ಯಂತ ಭಿನ್ನನಾಗಿದ್ದು, ನಿರ್ದುಷ್ಟಗಳಾದ, ಅಪರಿಚ್ಛಿನ್ನಗಳಾದ, ಅಪ್ರಾಕೃತವಾದ, ನಿರ್ದೋಷ

ಗಳಾದ ಜ್ಞಾನಾನಂದಾದಿ ಮಂಗಳರೂಪವಾದ ಗುಣಗಳಿಂದ ಪರಿಪೂರ್ಣನು. ಇದನ್ನು **ಅನಂತಸತ್ಕಲ್ಯಾಣಗುಣಪೂರ್ಣ**ನೆಂದಿದ್ದಾರೆ- ದಾಸರಾಯರು. ಅವನ ಗುಣಸ್ತೋಮಗಳು ಅಪರಿಮಿತವಾಗಿವೆ ಸಾಕಲ್ಯೇನ ಯಾರಿಂದಲೂ ಅರಿಯಲಸಾಧ್ಯವಾದ ಗುಣಪೂರ್ಣನು.

೬. ಅಸದೃಶಮಹಿಮಾಸಂಪನ್ನನು. ಸಮಾಭ್ಯಧಿಕಶೂನ್ಯನು. ಇದರಿಂದ **ಅನುಪಮನು**. ಅನುಪಮನಾದ ಅಪ್ರಮೇಯನು ರಮಾಬ್ರಹ್ಮಾದಿಗಳ ಉಪಾಸನೆಗೆ ವಿಷಯನು. ಆದರೆ ಆತನ ಅನುಪಮ ಗುಣಸಮುದ್ರದ ಆಳವನ್ನು ಸಾಕಲ್ಯೇನ ಯಾರೂ ಅನಾದ್ಯನಂತ ಕಾಲದಲ್ಲೂ ಅರಿಯರು. ರಮಾಬ್ರಹ್ಮಾದಿ ಸಕಲ ಸಜ್ಜನಭಕ್ತವೃಂದದಿಂದ **ಉಪಾಸಿತ ಗುಣೋದಧಿಯು.**

೭. ಸಕಲದೋಷವಿದೂರನಾದ್ದರಿಂದ, **ಅನಘನು**. ಅಘ-ವೆಂದರೆ ಪಾಪ ಅಥವಾ ಅದಕ್ಕೆ ಕಾರಣವಾದ ದೋಷ. ಅನಾದ್ಯಂತಕಾಲದಿಂದಲೂ ಶ್ರೀ ಪರಮಾತ್ಮನು ನಿರ್ದೋಷನು.

೮. ಯಾರಿಂದಲೂ ಜಯಸಲ್ಪಡದ ಅನುಪಮ ಪರಾಕ್ರಮವಂತನು. ಅನ್ಯರಿಂದ ಅಜೇಯನಾದ್ದರಿಂದ, **ಅಜಿತನು**.

೯. ಅನಘಜಿತನು ಅನಂತಾನಂತ ರೂಪ, ಗುಣವಿಶಿಷ್ಟನು. ಆದ್ಯಂತರಹಿತನು. ಇದರಿಂದ, **ಅನಂತನಾಮಕನು.**

**೧೦. ನಿಷ್ಕಿಂಚನಪ್ರಿಯ :**

ಪರಮವೈರಾಗ್ಯಶಾಲಿಗಳಾದ ಭಗವದ್ಭಕ್ತರ ಪಾಲಿಗೆ ಜ್ಞಾನ-ಭಕ್ತಿ- ವೈರಾಗ್ಯಗಳೇ ದೈವೀರೂಪದ ಸಂಪತ್ತು. ಅಂತಹವರು ನಿಷ್ಕಿಂಚನರು. ದೇವತೆಗಳಿಗೆ ನಿಷ್ಕಿಂಚನರೆಂದು ಹೆಸರು. ಅಂತಹ ಭಗವದ್ಭಕ್ತರ ಪ್ರೀತಿಗೆ ಮುಖ್ಯವಿಷಯನು. ಇದರಿಂದ, **ನಿಷ್ಕಿಂಚನಪ್ರಿಯನು.**

**೧೧. ನಿರ್ವಿಕಾರ**

ಅನಾದ್ಯಂತಕಾಲದಲ್ಲೂ ಯಾವ ವಿಕಾರ, ಪರಿಣಾಮಗಳಿಂದ ರಹಿತನು. ವಿಕಾರಶೂನ್ಯನು ಶಶ್ವದೇಕಪ್ರಕಾರನು. ನಿತ್ಯನು ಮತ್ತು

ಶಾಶ್ವತಸ್ವರೂಪಿಯು. ಸರ್ವತ್ರವ್ಯಾಪ್ತನು. ಆದರೂ ತದ್ವಿಕಾರಶೂನ್ಯನು. ಇದು ಶ್ರೀ ಪರಮಾತ್ಮನ ವಿಶಿಷ್ಟವಾದ ಗುಣಲಕ್ಷಣವು.

**೧೧. ನಿರಾಶ್ರಯ :**

ಅನ್ಯರ ಆಶ್ರಯ ಅವನಿಗೆ ಬೇಕಿಲ್ಲ. ಸರ್ವತಂತ್ರಸ್ವತಂತ್ರನು. ರಮಾಬ್ರಹ್ಮಾದಿ ಸಕಲಚೇತನರಾಶಿಗಳಿಗೆ ಆಶ್ರಯಪ್ರದನು. ಸರ್ವರಿಗೆ ಅವನ ಆಶ್ರಯ ಪರಾಧೀನ ಆತನಿಗಿಲ್ಲ.

**೧೨. ಅವ್ಯಕ್ತ :**

ಅಗೋಚರನು. ಆದರೆ, ಧ್ಯಾನಕ್ಕೆ ಮಾತ್ರ, ಆಯಾಯಾ ಜೀವರ ಯೋಗ್ಯತಾನುಸಾರವ್ಯಕ್ತನು. ಸಾಕಲ್ಯೇನ ಯಾರೂ ಆತನನ್ನು ಸಂಪೂರ್ಣವಾಗಿ ಅರಿಯರು. ॥ ೨೦ ॥

## ಪದ್ಯ-೩೧

**ಮೂಲ :**

**ಗೋಪ ಭೀಯ ಭವಾಂಧಕಾರಕೆ ।**
**ದೀಪವೊದಗೆ ಸಕಲ ಸುಖಸದ ।**
**ನೋಪರಿಗ್ರಹವೆನಿಸುತಿಪ್ಪುದು ಹರಿಕಥಾಮೃತವು ॥**
**ಗೋಪತಿ ಜಗನ್ನಾಥವಿಠ್ಠಲ ಸ ।**
**ಮೀಪದಲಿ ನೆಲಸಿದ್ದು ಭಕ್ತರ ।**
**ಪಾಪವರ್ಗರ ಮಾಡುವನು ಮಹದುಃಖಭವದಿಂದ ॥ ೩೧ ॥**

**ಅವತರಣಿಕೆ :**

ಶ್ರೀಪರಮಾತ್ಮನ ಮಾಹಾಮಹಿಮೆಗಳನ್ನು ಮುಕ್ತಕಂಠದಿಂದ ಹೊಗಳುತ್ತಾ, ೩೧ನೆಯ ಈ ಅಂತ್ಯಪದ್ಯದಿಂದ ಪ್ರಸಕ್ತಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ. ॥ ೩೧ ॥

**ಪ್ರತಿಪದಾರ್ಥ :**

**ಗೋ** = ವೇದಗಳು ಹಾಗೂ **ಗೋವುಗಳನ್ನು**, **ಪ** = ಪಾಲನ ಮಾಡತಕ್ಕ ಶ್ರೀಕೃಷ್ಣನು, **ಭೀಯ** = ಭೀಕರವಾದ, **ಭವಾಂಧಕಾರಕೆ** = ಸಂಸಾರರೂಪವಾದ ಮಹಾಕತ್ತಲೆ (ಅಜ್ಞಾನಕ್ಕೆ), **ದೀಪ** = ಪ್ರಕಾಶಮಾನವಾದ ದೀಪವೆಂಬ ಶ್ರೀಪರಮಾತ್ಮನು (ಜಗಜ್ಜ್ಯೋತಿ ಸ್ವರೂಪನು), **ಒದಗೆ** = ಪ್ರತ್ಯಕ್ಷರೂಪದಲ್ಲಿ ಒದಗಿ ಬರುತ್ತಿರಲಾಗಿ (ಕತ್ತಲೆಯಲ್ಲಿ ದಾರಿನಡೆಯುತ್ತಿರುವವನಿಗೆ ದೀಪದ ಮಾರ್ಗದರ್ಶನವಿದ್ದಂತೆ). **ಸಕಲಸುಖಸದನ** = ಸಮಸ್ತಸುಖಗಳಿಗೆ ಆಶ್ರಯಭೂತವಾದ ಮಂದಿರದಂತಿರುವ ಶ್ರೀಪರಮಾತ್ಮನು, **ಉಪರಿಗ್ರಹ** = ಏಳಂತಸ್ತಿನ ಮೇಲುಪ್ಪರಿಗೆಯಂತಿರುವ, ಸತ್ಯಲೋಕದ ಮೇಲೆ ಇರುವ ಶಾಶ್ವತ ಆನಂದ ಸದನರೂಪದಲ್ಲಿರುವ ವೈಕುಂಠಲೋಕವು.

**ಹರಿಕಥಾಮೃತವು** = ಹರಿಯಕಥೆಯೆಂಬ ಅಮೃತವಚನಗಳು, **ಎನಿಸುತಿಪ್ಪುದು** = ಎಂದು ಕರೆಯಿಸುವುದು (ಹರಿಕಥಾಮೃತಸಾರಗ್ರಂಥಸ್ಥ ವಿಷಯದ ಶ್ರವಣ–ಮನನ–ಅಧ್ಯಯನಾದಿಗಳು ಮೋಕ್ಷಧಾಮವಾದ ವೈಕುಂಠಸದನಪ್ರಾಪ್ತಿಗೆ ಕಾರಣವಾಗಿವೆ–ಎಂದು ತಾತ್ಪರ್ಯ. ಪ್ರಸಕ್ತಗ್ರಂಥವು ಮೋಕ್ಷಕ್ಕೆ ಸಾಧನ). ಗೋಪತಿ = ವೇದಪ್ರತಿಪಾದ್ಯನಾದ, **ಜಗನ್ನಾಥವಿಠ್ಠಲ** = ಜಗತ್ತಿಗೇ ಸ್ವಾಮಿಯಾದ ದಾಸರ ಅಂಕಿತನಾಮ ಸಾಂಕೇತನಾದ ಶ್ರೀಜಗನ್ನಾಥವಿಠ್ಠಲಸ್ವಾಮಿಯು, **ಸಮೀಪದಲಿ** = ಜೀವರ ಅಂತರ್ಯಾಮಿ ಯಾಗಿ, ಜೀವರ ಬಿಂಬನಾಗಿ, **ನೆಲೆಸಿದ್ದು** = ವಿದ್ಯಮಾನನಾಗಿದ್ದು, **ಭಕ್ತರನ** = ಈ ಗ್ರಂಥಸ್ಥವಿಷಯಗಳನ್ನು ಅಧ್ಯಯನ ಮಾಡಿ, ತದನುಸಾರ ಅನುಷ್ಠಾನ ಮಾಡತಕ್ಕ ಭಕ್ತರನ್ನು (ಅಧಿಕಾರಿಗಳನ್ನು) **ಮಹಾದುಃಖಭಾವದಿಂದ** = ಮಹಾದುಃಖರೂಪವಾದ ಸಂಸಾರದ ಬಂಧನಕ್ಕೆ ಕಾರಣವಾದ ಲಿಂಗದೇಹದಿಂದ ಬಿಡಿಸಿ, **ಅಪವರ್ಗದ ಮಾಡುವನು** = ನಿತ್ಯ ನಿಜಾನಂದರೂಪವಾದ ಮುಕ್ತಿ ಸುಖವನ್ನು ಕೊಡುವನು. ॥ ३೧ ॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ಪರಮಾತ್ಮನ ಮಹಿಮೆ ಹೇಳತಾರೆ.

ವೇದಗಳು, ವೇದೋಕ್ತಾನುಸಾರ ಪರಮಾತ್ಮ ಸರ್ವೋತ್ತಮ ತದ್ವ್ಯತಿರಿಕ್ತವಾಗಿ ತಿಳಿದವರಿಗೆ ನಾನಾ ವಿಧವಾದ ನರಕಭಯದಿಂದ ದುಃಖಗಳ ಐದಿಸತಕ್ಕವನು. ಸಂಸಾರರೂಪವಾದ ಅಂಧಕಾರಕ್ಕೆ ಧೀಪಸದೃಶನಾದವನು. ಅಂದರೆ, ಜನನಮರಣಾಖ್ಯ ಅಂಧಕಾರಕ್ಕೆ ತನ್ನ ಅಪರೋಕ್ಷಾಖ್ಯದೀಪದಿಂದ ಅಂಧಕಾರ ಪರಿಹಾರಕನು. ಏತಾದೃಶನಾದ ಶ್ರೀ ಪರಮಾತ್ಮ ಪ್ರತ್ಯಕ್ಷನಾಗಿ ಒದಗಿದರೆ, ಸಮಸ್ತವಾದ ಸುಖಗಳಿಗೆ ಗೃಹರೂಪವಾದ ಸತ್ಯಲೋಕದ ಮೇಲೆ ಇರತಕ್ಕ ಗೃಹಸಾಂಕೇತವಾದ

ವೈಕುಂಠಲೋಕ, ಭೂಲೋಕದಲ್ಲಿ ವಿದ್ಯಮಾನ ವಾದ ಭರತಖಂಡವೇ ತದ್ವತ್ ಎನಿಸುತಿಪ್ಪುದು. ವೈಕುಂಠಲೋಕದಲ್ಲಾದರೂ, ಹರಿಕಥಾಮೃತ ಪಾನಸುಖವೇ ಹೊರ್ತು, ಬ್ಯಾರೆ ಸುಖವಿಲ್ಲ. ಆ ಸುಖ ಭೂಲೋಕದಲ್ಲಿ ಆದರೆ, ಅದೇ ವೈಕುಂಠ ಎನಿಸೋದಾಗತದೆ. ವೇದಪ್ರತಿಪಾದ್ಯನಾದ ಶ್ರೀಪರಮಾತ್ಮ ಜಗತ್ತಿಗೇ ಸ್ವಾಮಿಯಾದ ಶ್ರೀ ನಾರಾಯಣದೇವರು ಮನೋಇಂದ್ರಿಯಕ್ಕೆ ಸಮೀಪದಲ್ಲಿ ಪ್ರತ್ಯಕ್ಷನಾಗಿದ್ದು, ಈ ಗ್ರಂಥಾನುಸಾರ ಅನುಷ್ಠಾನ ಮಾಡತಕ್ಕ ಭಕ್ತರ ಅತಿಶಯವಾದ ದುಃಖಕರವಾದ ಭವವೆಂಬ ಸಂಸಾರದಿಂದ ದೂರಮಾಡಿ ಮೋಹ ಹೊಂದದವರನ್ನಾಗಿ ಮಾಡುವನು. ಅಂಥಾ ಆನಂದವನ್ನೂ, ಲಿಂಗಭಂಗಾತ್ಪೂರ್ವದಲ್ಲೇ ತನ್ನ ಅಪರೋಕ್ಷವನ್ನೂ ಐದಿಸತಾನೆ ಎಂತ ತಾತ್ಪರ್ಯ ॥ ೩೧ ॥

**॥ಶ್ರೀಮತ್ಸತ್ಯಪರಾಯಣತೀರ್ಥಕರಕಮಲಸಂಜಾತಶ್ರೀಮತ್ಸಂಕರ್ಷಣ ತೀರ್ಥ ವಿರಚಿತಾಯಾಂ ಶ್ರೀಮದ್ಧರಿಕಥಾಮೃತಸಾರ ಕನ್ನಡಭಾಷಾ ಟೀಕಾಯಾಂ ಬಿಂಬಪ್ರತಿಬಿಂಬಸಂಧಿ ವ್ಯಾಖ್ಯಾನಂ ಸಂಪೂರ್ಣಂ ॥**

॥ ಶ್ರೀಕೃಷ್ಣಾರ್ಪಣಮಸ್ತು ॥

**೨. ಭಾವಪ್ರಕಾಶಿಕೆ**

ಸಂಸಾರದದಲ್ಲಿ ಹೆಂಡಿರು, ಮಕ್ಕಳು, ನಾನು, ನನ್ನದು–ಎಂಬ ಅಭಿಮಾನದಿಂದ ಪರಮಾತ್ಮನನ್ನು ಮರೆತುಬಿಡುವರು. ಆದರಿಂದ, ಪರಮಾತ್ಮನು ನಮ್ಮನ್ನು ನರಕದಲ್ಲಿ ಹಾಕಿ ಕಷ್ಟಪಡಿಸುವನೆಂಬ ಭಯಕ್ಕೆ ಕಾರಣವಾಗುವುದು. ಆದುದರಿಂದ, ದಾಸಾರ್ಯರು ಸಂಸಾರವನ್ನು ಗೋಪಭೀಯವೆಂದರು; ವೇದಾಭಿಮಾನಿಯು ರಮಾದೇವಿ. ಆಕೆಗೆ ಪತಿಯಾದುದರಿಂದ, "ಗಾಂಪಾತೀತಿಗೋಪಃ"–ಎಂಬ ವ್ಯುತ್ಪತ್ತಿಯಿಂದ ಗೋಪನೆಂದು ಪರಮಾತ್ಮನಿಗೆ ಹೆಸರು. ಸಂಸಾರದಲ್ಲಿ ಅವನ ಭಯವುಂಟೇ ಉಂಟು. ಇಂತಹಾ ಸಂಸಾರವೆಂಬ ಘೋರವಾದ ಅಂಧಕಾರಕ್ಕೆ ಹರಿಕಥೆಯು ದೀವಟಿಗೆಯಂತೆ ಇರುವದು. ಅಂದರೆ,

ಅಜ್ಞಾನಾಂಧಕಾರವನ್ನು ಪರಿಹರಿಸಿ, ಜ್ಞಾನೋದಯವನ್ನು ಮಾಡಿಸುವ ದೆಂದರ್ಥ ಮತ್ತು ಸಮಸ್ತ ಸುಖಗಳು, ವಾಸಿಸುವುದಕ್ಕೆ ಯೋಗ್ಯವಾದ ಮನೆಯ ಮೇಲುಪ್ಪರಿಗೆಯಂತೆ ಇರುವುದು ಈ ಹರಿಕಥಾಮೃತವು. ಸ್ವರೂಪಾನಂದವನ್ನು ಕೊಡುವ ಯೋಗ್ಯತೆಯುಳ್ಳದೆಂದರ್ಥ. ಇಂತಹಾ ಹರಿಕಥಾಮೃತವನ್ನು ಪಾನಮಾಡುವ ಭಕ್ತರ ಸಮೀಪದಲ್ಲೇ ಶ್ರೀ ಜಗನ್ನಾಥವಿಠ್ಠಲಾತ್ಮಕ ಶ್ರೀಹರಿಯು ನೆಲಸಿದ್ದು, ಬಹುದುಃಖಕರವಾದ ಸಂಸಾರದಿಂದ ಬಿಡಿಸಿ, ಮುಕ್ತರನ್ನಾಗಿ ಮಾಡುವನು. ॥ ೩೧ ॥

**೩. ಭಾವದರ್ಪಣ**

ಈ ಗ್ರಂಥದ ಶ್ರವಣಮನನಾದಿಗಳು ಮಾಡತಕ್ಕ ಪುರುಷರಿಗೇ ಅತ್ಯಂತ ದುಃಖಭಯ ತೋರಿಸತಕ್ಕಂಥ ಸಂಸಾರದಿಂದ ಶ್ರೀಹರಿಯ ಮುಕ್ತರನು ಮಾಡುತ್ತಾನೆಂದು ದಾಸರಾಯರು ಹೇಳುತ್ತಾರೆ ॥ **ಗೋಪಭೀಯೇತಿ** ॥

ಶ್ರೀ ಹರಿಕಥಾಮೃತಸಾರಯಂಥಾದೆಂದರೆ–ಭೀಮಭವಾಂಧಕಾರಕ್ಕೆ ದೀವಟಿಗೆ ಭೀಃ :– ಭಯ ಎಂಬರ್ಥ । "ಭೀತಿರ್ಭೀಸ್ಸಾಧ್ವಸಂ ಭ್ಯಮಿತ್ಯಮರಃ" । ಇದನ್ನು ಯಾ ಪ್ರಾಣಗೆ ಯಂಬೋ ಧಾತುರೀತ್ಯಾ ಹೋಂದಸತಕ್ಕಂಥ ಭವಸಂಸಾರಾಖ್ಯ ಅಂಧಕಾರಕ್ಕೆ ದೀವಟಿಗೆ । ಸಾಲದೀಪವು–ಅಂದರೆ, ಒಂದೇ ದೀಪದಿಂದಲೇ ಅಂಧಕಾರ ಪರಿಹಾರವಾಗತಿರಲಿಕ್ಕೆ ಬಹುದೀಪಗಳ ದೃಷ್ಟಾಂತಕೊಡಲಿಕ್ಕೆ, ಹೇತು ಏನೆಂದು ಆಕ್ಷೇಪಿಸಿದರೆ, ಸಮಾಧಾನ – ನಿಶ್ಶೇಷಾಂಧಕಾರ ಹೋಗಬೇಕೆಂಬೋ ತಾತ್ಪರ್ಯ । ಸಕಲ ಸುಖಸದನೋಪರಿಗ್ರಹ। ಸಕಲ–ಸಮಸ್ತವಾದಂಥ ಸುಖಗಳೆಂಬೋ, ಸದನ–ಮನೆಗೆ, ಉಪರಿಗ್ರಹ–ಮೇಲುಪ್ಪರಿಗೆ, ಎಂದರೆ, ನಶ್ವರಸುಖಗಳು ಬಹಳ ಇರುತ್ತವೆ. ಅಂಥ ಸುಖಗಳಿಗೆ ಮೌಲಿಸ್ಥಾನೀಯವಾದ ನಿತ್ಯ ವೈಕುಂಠಸುಖಾಖ್ಯ ಉಪರಿಗ್ರಹವೆಂಬೋತಾತ್ಪರ್ಯ । ಎನಿಸುತಿಪ್ಪುದು–ಅನಸತಕ್ಕದ್ದು–

ಎಂಬೋ ಕ್ರಿಯಾಪದ ಮೇಲಕಂಡ–ಉಭಯ ವಿಶೇಷಣಕ್ಕೂ ಅನ್ವಯಿಸಿಕೊಬೇಕು. ಏತಾದೃಶ ಈ ಹರಿಕಥಾಮೃತ ಸಾರದಲ್ಲಿ ವಿದ್ಯಮಾನವಾದ ಶ್ರವಣ ಮನನದಿಂದ ಧಾರ್ಢ್ಯಮಾಡಿ, ಉಪಾಸನೆ ಮಾಡತಕ್ಕ ಪುರುಷರನ್ನ ಗೋಪ–ವೇದವಾಕ್ಯಗಳನ್ನು ಪರಿಪಾಲನೆ ಮಾಡತಕ್ಕಂಥ ಗೋಪತಿ–ಗೋಕುಲಕ್ಕೆ ಸ್ವಾಮಿಯಾದಂಥ ಜಗನ್ನಾಥ ವಿಠ್ಠಲನು–ಪರಮಸಂತೋಷದಿಂದ ಪ್ರಸಾದರೂಪಕನಾಗಿ ಅಪವರ್ಗ–ಮುಕ್ತರ ಮಾಡುವನೆಂದು ಪದ್ಯಾರ್ಥ ।

ಇಂಥ ತತ್ತ್ವಜ್ಞಾನಪೂರ್ವಕ ಉಪಾಸನೆ ವ್ಯತಿರಿಕ್ತ ಸದ್ಗತಿ ಇಲ್ಲೆಂದು ವಕ್ತ್ಯಾಶಯವು. ಈ ವಿಷಯದಲ್ಲಿ ಪ್ರಮಾಣ : "ಯಸ್ಯ ಪ್ರಸಾದಾತ್ಪರಮೂರ್ತಿರೂಪಾದಸ್ಮಾತ್ಸಂಸಾರಾನ್ಮುಚ್ಯತೇನಾಪರೇಣ" – ಇತಿ ಶ್ರುತೇಃ ॥

**॥ ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥದಾಸರಾಜವಿರಚಿತ ಶ್ರೀಮದ್ಧರಿಕಥಾಮೃತಸಾರಸ್ಯಭಾವದರ್ಪಣಟೀಕಾಯಾಂ ಕಮಲಾಪತಿದಾಸ ಹೃದ್ಗತೇನ ಶ್ರೀಹರಿಣಾ ಕೃತಾಯಾಂ ಬಿಂಬಪ್ರಕರಣ ಸಂಧಿಃಪರ್ಯವಸಿತಃ ॥**

**॥ ಶ್ರೀಕೃಷ್ಣಾರ್ಪಣಮಸ್ತು ॥**

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ**

ಉಪಸಂಹರತಿ "ಗೋಪ"–ಇತಿ ॥ ಎಂ ಪಾವಕ ಪಣಾಃ ಶುಚಯೋವಿಪಶ್ಚಿತೋ ಭಸ್ತೋಮೈರನೂಷತಅಯಂ ಸಹಸ್ರ ಮೃಷಭಃ ಸಹಸ್ಕೃತಃ ಸಮುದ್ರ ಇವನ ಪ್ರಥೇ ॥ ಓಂ ಋಷೀಣಾಂ ಗೋಪ್ತಾ ।

**ಗೋಪತಿ**–ಓಂ ಯಥಾ ಮನೌ ವಿವಸ್ವತಿ ಸೋಮಂ ಶಕ್ರಾಪಿಬಃ ಸುತಂ ಯಥಾ ತ್ರಿತೇ ಛಂದ ಇಂದ್ರ ಜಮೋಷಸ್ಯಾಯೌ ಮಾದಯಸೇಸಚಾ ॥ ಓಂ ॥–ಇತಿ ಸ್ತುತಿಶ್ರೋತಾ ।

**ಗೋಪ್ತ**–ಓಂ ಪೃಷದ್ರೇ ಮಧ್ಯೇ ಮಾತರಿಶ್ವನೀಂದ್ರ ಸುವಾಸಿ । ಅಮಂದಧಾಃ ಯಥಾ ಸೋಮಂ ದಶಶೀಪ್ರೇದಶೋಣ್ಯೇ ಸ್ಯೂಮ ರಶ್ಮಾವ್ಯಜೂನಸೀ ॥ ಓಂ ॥–ಗೋಪನಾತ್ ಗೋಪ್ತಾ ॥

ಗೋಪನೀ ಯೇತಿ ಪಾಠೇ ಜೀವಸ್ವರೂಪಗೂಹತಃ – ಇತ್ಯರ್ಥಃ ॥ ಯದ್ವಾಗ್ರಂಥ ವಿಶೇಷಣಮ್ ॥ ಭೀಮಭಯಂಕರ ॥ ವಟ್ಟಿಗೆ–ಸ್ತಂಭ ॥ ೩೧ ॥

**॥ ಇತಿ ಶ್ರೀಹರಿಕಥಾಮೃತಸಾರ ವ್ಯಾಖ್ಯಾಯಾಂ "ವ್ಯಾಸದಾಸಸಿದ್ಧಾಂತಕೌಮುದ್ಯಾಂ"–ಬಿಂಬೋಪಾಸನ ಸಂಧಿಃ ಸಮಾಪ್ತಃ ॥ ೩೧ ॥**

**ಶ. ಶ್ರೀಗುರುಹೃದಯಪ್ರಕಾಶಿಕೆ** :

ಈ ಗ್ರಂಥವು ಮುಮುಕ್ಷುಗಳಿಗೆ ಅಪೇಕ್ಷಣೀಯವೆಂದು ತಿಳಿಸುತ್ತಾರೆ–ಗೋಪನೀಯವೆಂದು.

ಈ ಹರಿಕಥಾಮೃತವೆಂಬ ಕಾವ್ಯವು ಭವಾಂಧಕಾರವೆಂಬ ಸಂಸಾರ ಕಾರಣ ಅಜ್ಞಾನವೆಂಬ ಕತ್ತಲೆಗೆ ದೀವಟ್ಟಿಗೆಯಂತೆ–ಅಂದರೆ, ಸಾಲುದೀಪದಂತೆ ಪರಿಹಾರಕರವಾದ್ದು. ಸಕಲಸುಖವೆಂಬ ಸರ್ವ ಪುರುಷಾರ್ಥಪ್ರಾಪ್ತಿಗೆ ಸದನೋಪರಿಗ್ರಹವೆಂದರೆ, ಉಪ್ಪರಿಗೆಯ ಮನೆಯಂತೆ, ಆಲಯವಾದದ್ದು. ಆದ್ದರಿಂದ, ಗೋಪನೀಯ–ಅಂದರೆ, ವ್ಯರ್ಥಮಾಡದೆ ರಕ್ಷಿಸಲ್ಪಡಬೇಕು. ಅಂದರೆ, ಬಾಯಾರಿಕೆ ಇಲ್ಲದವರಿಗೆ ಒಳ್ಳೆಯ ಅಮೃತೋದಕ ಕೊಟ್ಟು, ವ್ಯರ್ಥಮಾಡುವ ಹಾಗೆ ಮಾಡದೆ, ಭಕ್ತ್ಯತಿಶಯದಿಂದ ಕೂಡಿದವರಿಗೆ ಮಾತ್ರತಿಳಿಸತಕ್ಕದ್ದು. ಭಕ್ತರ–ಅಂದರೆ, ಈ ಗ್ರಂಥಾರ್ಥ ತಿಳಿದು, ಭಜಿಸಿದ ಸದ್ಭಕ್ತರನ್ನು, ಅಂತರ್ಬಹಿಶ್ಚ ಅಂದರೆ, ಸಮೀಪದಲ್ಲೇ ಇದ್ದು, ಗೋಪತಿ–ಎಂಬ ವೇದಸ್ವಾಮಿ ಜಗನ್ನಾಥವಿಠಲ ದೇವರು ಮಹಾದುಃಖವೆಂಬ ಸಂಸಾರಬಂಧದಿಂದ ಅಪವರ್ಗರ ಮಾಡುವನು. ಅಂದರೆ, ಮುಕ್ತರನ್ನು ಮಾಡುವನೆಂದರ್ಥ. ॥ ೩೧ ॥

ಇಂತು, **ಗುರುಹೃದಯಪ್ರಕಾಶಿಕಾ** ಎಂಬ ವ್ಯಾಖ್ಯಾನಸಹಿತ ಶ್ರೀಹರಿಕಥಾಮೃತಸಾರದಲ್ಲಿ ಬಂಬೋಪಾಸನಸಂಧಿಸಂಪೂರ್ಣಂ ॥ ಶ್ರೀ ಕೃಷ್ಣಾರ್ಪಣಮಸ್ತು ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

**೧. ಗೋಪ :**

ಗೋ–ವೇದಗಳ ಸಮೂಹ, ಪ–ಪಾಲಿಸುವವನು, "ಗಾಂ ಪಾತೀತಿ–ಗೋಪಃ"–ಎಂಬ ವ್ಯುತ್ಪತ್ತಿಯಿಂದ, ವೇದಪರಿಪಾಲಕನಾದ, ಹಾಗೂ ಸಕಲವೇದಪ್ರತಿಪಾದ್ಯನಾದ ಶ್ರೀಪರಮಾತ್ಮನಿಗೆ **ಗೋಪ**–ಎಂದು ಹೆಸರು. ಶ್ರೀಲಕ್ಷ್ಮೀದೇವಿಯು ವೇದಾಭಿಮಾನಿಯು. ಲಕ್ಷ್ಮಿಗೆ ಪತಿಯಾಗಿ ನಿಯಾಮಕವಾಗಿರುವುದರಿಂದ, "ಗೋಪ"–ಎಂತ ನಾಮಸಾಂಕೇತ.

ಗೋ–ಎಂದರೆ, ಗೋವುಗಳು ಎಂದು ಇನ್ನೊಂದರ್ಥ. ಗೋಪಾಲಕನಾದ ಶ್ರೀಕೃಷ್ಣನೇ ಗೋಪನಾಮಕನು. ಗೋ–ಎಂದರೆ, ವಿಪ್ರರು–ಎಂದರ್ಥ. ಬ್ರಾಹ್ಮಣಪ್ರಿಯವಾದ ಬ್ರಹ್ಮಣ್ಯ ದೇವನು ಗೋಪನಾಮಕನು.

**೨. ಭೀಯ ಭವಾಂಧಕಾರಕೆ :**

ಭೀಯ–ಅಂದರೆ, ಅತ್ಯಂತ ಭೀಕರವಾದ, ಭವ–ಸಂಸಾರ, ಅಂಧಕಾರ–ಕಗ್ಗತ್ತಲೆ, ಕರ್ಮಬಂಧನರೂಪದಲ್ಲಿರುವ ಸಂಸಾರವು ದುಸ್ತರವಾದ ಸಾಗರವು. ಜೀವರ ಪಾಲಿಗೆ ಅತ್ಯಂತ ಭೀಕರವು. ಭವವೆಂಬ ಕಗ್ಗತ್ತಲೆಯಲ್ಲಿ ಜೀವರು ಸಿಲುಕಿ, ದಾರಿಗಾಣದೆ ಪರಿತಪಿಸುತ್ತಿದ್ದಾರೆ. ಮುಕ್ತಿಮಾರ್ಗ ಅವರಿಗೆ ತೋರದು.

**೩. ದೀಪವೊದಗೆ :**

ಕತ್ತಲಿನಲ್ಲಿ ನಡೆಯುತ್ತಿರುವ ಮನುಷ್ಯನಿಗೆ ಜ್ಯೋತಿರೂಪವಾದ ದೀಪವು ಸಿಕ್ಕಿದರೆ, ಅದರ ಪ್ರಕಾಶದಲ್ಲಿ ಅವನಿಗೆ ದಾರಿಯು ಚೆನ್ನಾಗಿ ಕಾಣಿಸುವುದು. ಅವನ ಪ್ರಯಾಣ ಸುಗಮವಾಗುವುದು.

ಅಂತೆಯೇ, ಜ್ಯೋತಿರ್ಮಯರೂಪನಾದ ಗೋಪನಾಮಕ ಶ್ರೀಪರಮಾತ್ಮನು ಭೀಯ ಭವಾಂಧಕಾರದಲ್ಲಿ ಸಿಲುಕಿ, ಸುಮಾರ್ಗ ಕಾಣದೆ, ಪರಿತಪಿಸುತ್ತಿರುವ ಜೀವರಿಗೆ ದೀಪಸದೃಶನು. ಜ್ಞಾನಾನಂದ ಮಯನಾದ ಜ್ಞಾನಸ್ವರೂಪಿಯು ತನ್ನ ಪರಮಾನುಗ್ರಹದಿಂದ ಜೀವರನ್ನು ಭವಾಂಧಕಾರದಿಂದ ಪಾರುಮಾಡಿ, ಮುಕ್ತಿಮಾರ್ಗದಲ್ಲಿ ಕರೆದೊಯ್ದು, ಸದ್ಗತಿಯನ್ನು ಪಾಲಿಸುವನು.

ದೀಪ–ಎಂದರೆ, ದೀಪಗಳ ಸಾಲು. ಒಂದೇ ದೀಪವಿದ್ದರೆ, ಅಂಧಕಾರವನ್ನು ಪೂರ್ತಿಯಾಗಿ ಪರಿಹರಿಸಲಾರದು. ಅದರಿಂದ, ಮಾರ್ಗದ ಪೂರ್ಣದರ್ಶನಕ್ಕೆ ದೀಪಗಳ ಸಾಲು ಅಗತ್ಯ. ಜ್ಯೋತಿರ್ಮಯ ಸ್ವರೂಪನಾದ ಶ್ರೀಪರಮಾತ್ಮನು ದೀಪಗಳ ಮಾಲಿಕೆಯ ಸದೃಶನು.

**೪. ಸಕಲ ಸುಖಸದನ :**

ಸುಖಸದನ–ಎಂದರೆ, ನಿತ್ಯಶಾಶ್ವತವಾದ ಆನಂದಪ್ರದವೆಂಬ ಮೋಕ್ಷಧಾಮ ಎಂದರ್ಥ. ಶ್ವೇತದ್ವೀಪ–ಅನಂತಾಸನ–ವೈಕುಂಠಗಳೆಂಬ ನಿತ್ಯಾನಂದಪ್ರದವಾದ ಮುಕ್ತಿಧಾಮಗಳು. ಶ್ರೀಪರಮಾತ್ಮನ ಪ್ರಸಾದ ರೂಪವಾದ ಪ್ರಕಾಶವು ಸುಖಸದನಕ್ಕೆ ತೋರುವ ಕೈದೀವಟಿಗೆಯು.

**ಉಪರಿಗ್ರಹವೆನಿಸುತಿಪ್ಪುದು :**

ಉಪರಿ–ಎಂದರೆ ಮೇಲಿರತಕ್ಕ, ಅಂದರೆ, ಮನೆಯ ಮೇಲಿರುವ ಮೇಲುಪ್ಪರಿಗೆ ಎಂದರ್ಥ. ಊರ್ಧ್ವಲೋಕಗಳು ಏಳು ಇವೆ. ಆ ಸಪ್ತಲೋಕಗಳಲ್ಲಿ ಅತ್ಯಂತ ಮೇಲಿರುವ ಸದನವು ಸತ್ಯಲೋಕವು. ಅದರ ಮೇಲೆ ಇರುವ ಉಪ್ಪರಿಗೆಯೇ ಆನಂದಸದನರೂಪದಲ್ಲಿರುವ ವೈಕುಂಠಲೋಕವು.

೬. ಪ್ರಸಕ್ತ ಗ್ರಂಥಸ್ಥವಿಷಯವೇ – ಹರಿಕಥಾಮೃತಸಾರವು. ಮಹಾಮಹಿಮ ಸಂಪನ್ನನಾದ ಶ್ರೀಹರಿಯ ವಿಷಯಗಳನ್ನು ನಿರೂಪಿಸುವ ಈ ಹರಿಕಥಾಮೃತವೇ ಮೇಲುಪ್ಪರಿಗೆ ಎನಿಸುವ ವೈಕುಂಠ ಲೋಕಪ್ರಾಪ್ತಿಗೆ ಕಾರಣವು. ಗ್ರಂಥಸ್ಥ ವಿಷಯವು ಮೋಕ್ಷಪ್ರಾಪ್ತಿಗೆ ಕಾರಣ.

**೭. ಗೋಪತಿ :**

ವೇದಪ್ರತಿಪಾದ್ಯನಾದ ಶ್ರೀಜಗನ್ನಾಥವಿಠ್ಠಲಸ್ವಾಮಿಯು, ಭಕ್ತರ ಸಮೀಪದಲ್ಲಿದ್ದು, ಅನವರತ ಭಕ್ತರಿಂದ ಅವಿಯೋಗಿಯಾಗಿದ್ದು, ಬಿಂಬರೂಪದಿಂದ ವಿದ್ಯಮಾನನಾಗಿದ್ದು, ಭಕ್ತರನ್ನು ಸಂರಕ್ಷಿಸುತ್ತಿರುವನು.

**೮. ಭಕ್ತರನ ಅಪವರ್ಗರ ಮಾಡುವನು :**

ಅಪವರ್ಗ–ಎಂದರೆ ಮೋಕ್ಷಸ್ಥಾನ. ಭಕ್ತರ ಸಮೀಪದಲ್ಲಿ ನೆಲೆಸಿದ್ದು, ಶ್ರೀಪರಮಾತ್ಮನು ಭಕ್ತರನ್ನು ಅನುಗ್ರಹಿಸಿ, ಮುಕ್ತಪ್ರದನಾಗಿದ್ದಾನೆ.

೯. ಮಹದುಃಖಭವದಿಂದ–ಮಹತ್ವದ ದುಃಖಕ್ಲೇಶಗಳೆಂಬ ಭಯದಿಂದ ಕೂಡಿದ ಸಂಸಾರದಿಂದ ಬಿಡುಗಡೆ ಮಾಡುವನು ॥ ೩೧ ॥